PEER - REVIEWED JOURNAL
ISSN: 2320-9941

ಸಂಪುಟ - 09, ಸಂಚಿಕೆ- 03

VOLUME: 09, ISSUE: 03

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಭಾಗ - 2 PART - 2

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

literature, culture - Research Quarterly Peer - Reviewed journal

ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 02 PART - 02

ಸಂಪುಟ: 09, ಸಂಚಿಕೆ 03, ಸೆಪ್ಟಂಬರ್ 2025

VOLUME: 09, ISSUE: 03, SEPTEMBER 2025

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispanda@gmail.com

wibsite : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti Deemed to be University,
K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಅಭಿನಂದನೆಗಳು

ಪೃಥ್ವಿ ಸೂರಿಯವರು ಇದುವರೆಗೂ ನಮ್ಮ ಪತ್ರಿಕೆಯನ್ನು ತಾಂತ್ರಿಕವಾಗಿ ನಿರ್ವಹಿಸಿದವರು. ಇವರಿಗೆ ಪತ್ರಿಕೆಯ ಕಡೆಯಿಂದ ಧನ್ಯವಾದಗಳನ್ನು ಸಲ್ಲಿಸುತ್ತಾ, ಈ ಪತ್ರಿಕೆಯಲ್ಲಿ ಕಾನೂನು ಸಲಹೆಗಾರರಾಗಿ ಮುಂದುವರೆಯುತ್ತಾರೆಂದು ತಿಳಿಸುತ್ತಾ ಶ್ರೀಯುತರಿಗೆ ಗೌರವ ಪೂರ್ವಕ ಅಭಿನಂದನೆಗಳನ್ನು ಪತ್ರಿಕೆಯ ವತಿಯಿಂದ ಸಲ್ಲಿಸಲಾಗುತ್ತಿದೆ.

ಸಂಪಾದಕೀಯ...

ಭಾಷೆಯು ಭಾವನೆ, ಅಭಿಪ್ರಾಯ, ಮಾಹಿತಿ ಮತ್ತು ಜ್ಞಾನವನ್ನು ಪಸರಿಸುವ ವಾಹಕ. ಈ ವಾಹನಕ್ಕೆ ಸೀಮಿತವಾದ ಅವಕಾಶಗಳಿರುತ್ತವೆ. ಅತಾರ್ಕಿಕವಾದ ಸಂವೇದನೆಗಳೊಡನೆ ವ್ಯವಹರಿಸಲು ಭಾಷೆಗೆ ಮಿತಿಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ಭಾಷೆ ಮೌನದೆದುರಿಗೆ ಮಂಡಿಯೂರುತ್ತದೆ.

ಆದರೆ ಭಾಷೆ ಸಾಹಿತ್ಯವನ್ನು ತನ್ನ ಹೆಗಲ ಮೇಲೆ ಹೊತ್ತು ನಡೆದರೆ ತನ್ನ ತೂಕವನ್ನು ಹೆಚ್ಚಿಸಿಕೊಳ್ಳುತ್ತದೆ. ಅದರ ವಿಸ್ತಾರವು ಬಹುಮುಖವಾಗುತ್ತದೆ. ಅಸಾಧ್ಯವನ್ನು ದಾಟುತ್ತದೆ. ಜೀವ ವಿಸ್ಮಯವನ್ನು ಅರಳಿಸುತ್ತದೆ.

ಹೆಣ್ಣಿನ ದೇಹದ ಮೇಲೆ ಆಗುತ್ತಿರುವ ದಬ್ಬಾಳಿಕೆಗಳ ಬಗ್ಗೆ, ಮಾಹಿತಿಗಳನ್ನಾದರಿಸಿದ, ವಿವರವಾದ, ಅಂಕಿ–ಸಂಖ್ಯೆಗಳ ಸಮರ್ಥನೆಯೊಂದಿಗೆ ಬರೆದಿರುವ ಅನೇಕ ಲೇಖನಗಳನ್ನು, ಭಾಷಣಗಳನ್ನು ನಾವೆಲ್ಲ ಓದಿರುತ್ತೇವೆ ಅಥವಾ ವರದಿಗಳನ್ನು ಮಾಧ್ಯಮಗಳಲ್ಲಿ ನೋಡಿರುತ್ತೇವೆ. ಇಂತಹ ಮಾಹಿತಿಗಳನ್ನು ತಿಳಿಯುತ್ತಲೇ ಮನಸ್ಸು ಖಿನ್ನವಾಗುತ್ತದೆ, ಮರುಗುತ್ತದೆ, ನಿರಾಶೆ ಕವಿಯುತ್ತದೆ.

ಇಂತಹ ಸೂಕ್ಷ್ಮ ಆದರೆ ಕ್ಲಿಷ್ಟವಾದ ವಿಚಾರಗಳನ್ನು ಸಂವಹಿಸುವಾಗ ಭಾಷೆ ತನ್ನೊಂದಿಗೆ ಕಠೋರತೆಯನ್ನು ತಳುಕು ಹಾಕಿಕೊಂಡಿರುತ್ತದೆ. ಆದರೆ ಸು ಫ್ರಮ್ ಸೋ ಅಂತಹ ಚಲನಚಿತ್ರವೊಂದು ಮನೆಯೆಂಬ ಸುರಕ್ಷಿತ ವಲಯವು ಎಷ್ಟೊಂದು ಭೀಕರವಾಗಿರುತ್ತದೆ, ಕತ್ತಲೆಯಲ್ಲಿರುತ್ತದೆ ಎಂಬ ಭೀಕರ ಸತ್ಯವನ್ನು ನಗೆಯ ಲೇಪನದೊಂದಿಗೆ ತೆರೆದಿಡುತ್ತದೆ ಎಂಬುದನ್ನು ಗಮನಿಸಿ. ಇದು ಸಾಹಿತ್ಯದ ಗೆಲವು. ಅದರಿಂದಾಗಿಯೇ ಕನ್ನಡ ಭಾಷೆಗೆ ಹಿರಿಮೆ. ಭಾಷೆ, ಸಾಹಿತ್ಯವನ್ನು ತಲುಪಿಸುವ

ಗಮ್ಯ. ಬದುಕಿನ ವಿವಿಧ ಆಯಾಮಗಳನ್ನು ಸಾಂದರ್ಭಿಕಗೊಳಿಸಿ ಪಥ್ಯದ ಕಠೋರತೆಯನ್ನು ದೂರವಿಡುವ ಮಾಂತ್ರಿಕತೆ ಸಾಹಿತ್ಯಕ್ಕಿದೆ.

ಸಾಹಿತ್ಯಕ್ಕಿರುವ ಈ ಅನನ್ಯತೆಯನ್ನು ದಕ್ಕಿಸಿಕೊಳ್ಳದೆ, ಭಾಷೆಗೆ ಭವಿಷ್ಯವಿರುವುದಿಲ್ಲ. ಅದು ಪೇಲವವಾಗುತ್ತದೆ, ಕೊರಗುತ್ತದೆ. ಸಾಹಿತ್ಯಕ್ಕಿರುವ ಸೃಜನಶೀಲತೆ ಬದುಕಿನ contextನಿಂದ ಬರುವಂತಹದ್ದು. ಸಮಯ–ಸನ್ನಿವೇಶ– ಸಂದರ್ಭಗಳ ಹದದಲ್ಲಿ ಅಗತ್ಯತೆಗೆ ಅನುಗುಣವಾಗಿ ರೂಪಗೊಳ್ಳುವ ಪ್ರಕ್ರಿಯೆ, ಸಾಹಿತ್ಯದ ನಾವೀನ್ಯತೆಯನ್ನು, ಸೊಬಗನ್ನು ಹೆಚ್ಚಿಸುತ್ತದೆ. ಹಾಗಾಗಿಯೇ ಸಾಹಿತ್ಯವು ಬದುಕಿನ ಜಂಜಡವೆಂಬ ಕಡುಗೋಲಿಂದ ಕಡೆಯಲ್ಪಡುವ ನವನೀತ. ಕೆಸರಿನಲ್ಲಿ ಅರಳುವ ಕಮಲ. ಕೆಸರು ಹೆಚ್ಚಿದ್ದಷ್ಟೂ ಹೂವಿನ ಸೊಬಗು ಅಧಿಕ. ಕವಿಗೆ ಸಾಹಿತ್ಯದ ಈ ಸೊಬಗನ್ನು ಭಾಷೆಯ ಮೂಲಕ ಹಿಡಿದಿಡುವ ಸವಾಲಿರುತ್ತದೆ. ಆ ಎತ್ತರಕ್ಕೆ ಏರುವ ಕನಸು ಸದಾ ಹಸಿರಾಗಿರಲಿ ಎಂಬುದು ಆಶಯ.

– ಡಾ. ಸರಸ್ವತಿ ಕೆ. ಬಿ

ISSN : 2320-9941

Linking ISSN (ISSN-L): 2320-9941

Key-title: Prathispandha

Title proper: Prathispandha.

Country: India

Medium: Print

Last modification date: 01/09/2014

Type of record: Confirmed

ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ತಜ್ಞ ಪರಿಶೀಲನ ಸಮಿತಿಯ ವರದಿ :

'ಪ್ರತಿಸ್ಪಂದ' ಪತ್ರಿಕೆಯ ಸಂಚಿಕೆಯು ವೈವಿಧ್ಯಮಯ ಲೇಖನಗಳೊಂದಿಗೆ ಮೂಡಿ ಬಂದಿದೆ. ಸಂಶೋಧನಾರ್ಥಿಗಳು, ಅಧ್ಯಾಪಕರು ಹಾಗೂ ಸಾಹಿತ್ಯ ಅಭಿರುಚಿಯ ಸೃಜನಶೀಲ ಲೇಖಕರು ತಮ್ಮ ಆಯ್ಕೆಯ ವಿಷಯಗಳಲ್ಲಿ ಆಸಕ್ತಿ ಮತ್ತು ಶ್ರದ್ಧೆಯಿಂದ ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಯತ್ನ ಮಾಡಿದ್ದಾರೆ. ಶಾಸನಗಳು, ಯುದ್ಧ ಶಾಪದ ಪರಿಕಲ್ಪನೆ, ಜಾನಪದ ಸಾಹಿತ್ಯ, ಕಥೆ, ನಾಟಕ, ಕಾದಂಬರಿ, ಸಂಸ್ಕೃತಿ, ಭಾಷಾ ಕೌಶಲಗಳ ಕಲಿಕೆ ಮುಂತಾದ ವಿಷಯ ಪ್ರಕಾರಗಳಲ್ಲಿ ಲೇಖನಗಳನ್ನು ಬರೆಯುವ ಮೂಲಕ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಸಾಹಿತ್ಯ, ಭಾಷೆಯ ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನಾ ಕ್ಷೇತ್ರವು ವೈಜ್ಞಾನಿಕ, ವೈಚಾರಿಕ ತಳಹದಿಯ ಮೇಲೆ ನಿಂತಾಗ ಓದುಗರ ದೃಷ್ಟಿಕೋನ ಮತ್ತು ಆಲೋಚನಾ ಕ್ರಮವನ್ನು ವಿಭಿನ್ನತೆಯ ಕಡೆಗೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತದೆ. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ಏಕ ಮಾದರಿಯ ಕಡೆಗೆ ಹೋಗದೆ, ಬಹುತ್ವದ ಕಡೆಗೆ ಹೊರಟಾಗ ವೈವಿಧ್ಯತೆಗೆ ಅವಕಾಶ ಸಿಗುತ್ತದೆ. ಹಾಗೆಯೇ ಆಲೋಚನಾಕ್ರಮ ಮತ್ತು ವೈಜ್ಞಾನಿಕ ಮನೋಭಾವದ ತಳಹದಿಯ ಮೇಲೆ ನಿಂತಾಗ ಮಾತ್ರ ಸಾಹಿತ್ಯ ವೈಚಾರಿಕ ತಳಹದಿಯ ಮೇಲೆ ನಿಲ್ಲಲು ಸಾಧ್ಯವಾಗುತ್ತದೆ. ಸಂಶೋಧನಾ ಕ್ಷೇತ್ರ ಕನ್ನಡ ಸಾಹಿತ್ಯದಲ್ಲಿ ಬಹುತ್ವದ ನೆಲೆಯಾಗಿ ರೂಪುಗೊಳ್ಳಲಿ ಎಂದು ಆಶಿಸುತ್ತೇನೆ. ಎಲ್ಲಾ ಲೇಖಕರಿಗೂ ಮತ್ತು ಸಂಪಾದಕ ಮಂಡಳಿಯ ಇತರರಿಗೂ ಧನ್ಯವಾದಗಳು.

– ಡಾ. ಗೋವಿಂದರಾಯ ಎಂ.

ಈ ಸಂಚಿಕೆಯ ವಿಶೇಷವೇ ಕನ್ನಡ ಸಾಹಿತ್ಯ ಬೆಳೆದ ಎಲ್ಲಾ ಕಾಲಘಟ್ಟದ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಿದ ಮರುಚಿಂತನೆಯ ಲೇಖನಗಳು ಬಂದಿರುವುದು. ಗುರುತಿಸದೇ ಕಣ್ಮರೆಯಲ್ಲಿದ್ದ ಶಾಸನ ಕವಿಗಳು ಪರಿಚಯ, ವಚನಕಾರರು, ಅನೇಕ ಬರಹಗಾರರು ಬರಹಗಳಲ್ಲಿ ಸಮ ಸಮಾಜ ನಿರ್ಮಾಣದ ಆಶಯಗಳು, ಕರ್ನಾಟಕ ಇತಿಹಾಸದ ಮಹತ್ವದ ಶೋಧನೆ, ಐತಿಹಾಸಿಕ ಸ್ಥಳಗಳ ಸಾಂಸ್ಕೃತಿಕ ಮಹತ್ವದ ಶೋಧ, ಪ್ರಕೃತಿ ನಾಶ ಮತ್ತು ಹೆಣ್ಣಿನ ಶೋಷಣೆಯನ್ನು ಹೊಸ ಪರಿಕಲ್ಪನೆಯ ನೆಲೆಯಲ್ಲಿ ಅಧ್ಯಯನ, ವೈಜ್ಞಾನಿಕ ಮತ್ತು ಮನೋವೈಜ್ಞಾನಿಕ ನೆಲೆಯಲ್ಲಿ ವಿಭಿನ್ನ ದೃಷ್ಟಿಕೋನದ ಸಾಹಿತ್ಯಿಕ ಚಿಂತನೆಗಳು ನಡೆದಿರುವುದು, ಈ

ಎಲ್ಲ ರೀತಿಯ ಕೃಷಿಯಿಂದ ಸಂಶೋಧನಾ ಕಾರ್ಯದ ಮೌಲ್ಯವನ್ನು ಹೆಚ್ಚಿಸಿದೆ.

– ಅನಿತ ಕೆ. ವಿ.

ಈ ಬಾರಿಯ ಪ್ರತಿಸ್ಪಂದ ಸಂಚಿಕೆಯ ವೈವಿಧ್ಯಮಯ ಬರಹಗಳಿಂದ ಕೂಡಿದ್ದು ಒಂದೊಂದು ಲೇಖನವೂ ವಿಭಿನ್ನ ದೃಷ್ಟಿಕೋನದಲ್ಲಿ ಮಾನವ ಜೀವನ, ಚರಿತ್ರೆ ಸಮಾಜ, ಪರಿಸರ, ಧರ್ಮ, ರಾಜಕೀಯ, ಮಹಿಳೆ, ಆಧ್ಯಾತ್ಮ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಬಿಂಬಿಸುವ ಪ್ರಯತ್ನವನ್ನು ಮಾಡಿದೆ.

ತಾತ್ವಿಕ ನೆಲೆಗಟ್ಟಿನಲ್ಲಿ ರೂಪುಗೊಂಡಿರುವ ಲೇಖನಗಳು (ಕನಕದಾಸರು, ಸರ್ವಜ್ಞ, ಹರಿಹರ, ಅಂಬಿಗರ ಚೌಡಯ್ಯ, ಸಿದ್ಧಲಿಂಗಯ್ಯ ಕುರಿತಾದವು) ಇಂದು ನಾವು ಪಾಲಿಸಲೇಬೇಕಾದ ಹಲವು ಜೀವನ ಮಾರ್ಗಗಳಿಗೆ ಬೆಳಕು ಚೆಲ್ಲುತ್ತವೆ. ಇನ್ನು ಯುದ್ಧಕ್ಕೆ ಸಂಬಂಧಿಸಿದ ವಿನಯ ಕುಮಾರ್ ಅವರ ಲೇಖನ ಹಾಗೂ ಶಾಂತಿ ತುಂಬುವ ಪ್ರಯತ್ನ ಮಾಡುವ ರಂಜಾನ್ ದರ್ಗಾ ಅವರ 'ಪ್ರಣಾಳಿಕೆ' ಕವಿತೆ ಕುರಿತ ಲೇಖನಗಳು ತಮ್ಮ ಕಣ್ಣೆದುರಿನ ವಾಸ್ತವ ದುಸ್ಥಿತಿಯನ್ನು ಬಿಚ್ಚಿಡುತ್ತವೆ. ಒಟ್ಟಾರೆಯಾಗಿ, ಬಹುತೇಕ ಲೇಖನಗಳು ನಮ್ಮ ಎದುರಿನ ಆಯ್ಕೆಗಳನ್ನು ಸರಿಯಾದ ರೀತಿಯಲ್ಲಿ ಆರಿಸಿಕೊಳ್ಳುವ ಕುರಿತು ನಮಗೆ ಮಾರ್ಗದರ್ಶನ ಮಾಡುತ್ತವೆ.

– ಸಿದ್ಧರಾಮಯ್ಯ ಡಿ. ಎಂ

ಪ್ರಸ್ತುತ ಪ್ರತಿಸ್ಪಂದ ಸಂಚಿಕೆಯಲ್ಲಿ ಮುದ್ರಣಕ್ಕೆ ಸಿದ್ಧವಾಗಿರುವ ಲೇಖನಗಳೆಲ್ಲವೂ ವಿವಿಧ ಆಯಾಮಗಳಿಂದ ಕೂಡಿದ್ದು ಓದುಗರನ್ನು ಪ್ರಚೋದಿಸುತ್ತವೆ, ಚಿಂತನನೆಗೊಡ್ಡುತ್ತವೆ. ಮಾತ್ರವಲ್ಲದೆ, ಸಂಶೋಧನಾತ್ಮಕವಾಗಿಯೂ ವಿಶ್ಲೇಷಣಾತ್ಮಕವಾಗಿಯೂ ಮೂಡಿಬಂದಿವೆ. ಹಾಗಾಗಿ ಇವುಗಳನ್ನು ಪ್ರಕಟಿಸಬಹುದಾಗಿದೆ.

ಡಾ. ಎಂ. ರಂಗಸ್ವಾಮಿ

ಪರಿವಿಡಿ

ದಲಿತ ಸಾಹಿತ್ಯ ಚಳುವಳಿ ಮತ್ತು ಸಿದ್ಧಲಿಂಗಯ್ಯ

ಪ್ರೊ. ರೇಣುಕಮ್ಮ ಜೆ.
ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು
ಯಲಹಂಕ ಉಪನಗರ, ಬೆಂಗಳೂರು–64
renukamanju1@gmail.com

ದಲಿತ ಸಾಹಿತ್ಯವು ಶೋಷಿತರ ದುಸ್ಥಿತಿ, ಅಸಹಾಯಕತೆ, ಅವರು ಅನುಭವಿಸಿದ ನೋವು, ಅನ್ಯಾಯದ ವಿರುದ್ಧ ಧ್ವನಿಎತ್ತಿವ ಕಾರಣದಿಂದ ಹುಟ್ಟಿಕೊಂಡಿದೆ. ದಲಿತ ಸಾಹಿತ್ಯ ಚಳುವಳಿ ಎಂದರೆ ಸಮಾಜದಲ್ಲಿ ಶತ ಶತಮಾನಗಳಿಂದ ಶೋಷಿತ, ಹಿಂದುಳಿದ ವರ್ಗದ ಜನರ ಹಕ್ಕು, ಸ್ವಾಭಿಮಾನ, ಸಮಾನತೆ ಮತ್ತು ಮಾನವೀಯ ಬದುಕಿಗಾಗಿ ನಡೆದ ಸಾಹಿತ್ಯ ಹಾಗೂ ಸಾಮಾಜಿಕ ಹೋರಾಟ ಎಂದು ಹೇಳಬಹುದು. ಅಂಬೇಡ್ಕರ್ ಚಿಂತನೆ ಮತ್ತು ಬುದ್ಧನ ಮಾನತಾವಾದ ದಲಿತ ಚಳುವಳಿಯ ಬುನಾದಿ. ಶಿಕ್ಷಣ, ಚಳುವಳಿಯಿಂದ ಪ್ರತಿಭಟನೆಯ ಸಾಹಿತ್ಯ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳುತ್ತಾ ಸಾಮಾನ್ಯರಿಗೆ ಅರಿವು ಮೂಡಿದಂತೆ ಸಾಹಿತ್ಯದಲ್ಲಿ ಹೊಸ ಶಕ್ತಿ ಸಂಚಯನಗೊಳ್ಳುತ್ತ ಹೋಗುತ್ತದೆ. ಉದ್ಯೋಗ, ಸಾಮಾಜಿಕ ಗೌರವ ಮತ್ತು ಜಾತಿ ವ್ಯವಸ್ಥೆಯ ನಿರಾಕರಣೆಯ ಹಿನ್ನಲೆಯಲ್ಲಿ ಸಮಾನ ಹಕ್ಕುಗಳನ್ನು ಪಡೆದುಕೊಳ್ಳುವ ಸಲುವಾಗಿ ದಲಿತ ಚಳುವಳಿ ಮತ್ತು ದಲಿತ ಪ್ರತಿಭಟನಾ ಸಾಹಿತ್ಯಗಳು ಒಂದರೊಡನೊಂದು ಬೆರೆತು ತೀವ್ರ ಪ್ರತಿಭಟನೆ ಮಾಡುವುದರ ಮೂಲಕ ಶೋಷಿತ ಜನರಿಗೆ ಧ್ವನಿಯಾಗಿವೆ. ಈ ಹಿನ್ನಲೆಯಲ್ಲಿ ಸಾಹಿತ್ಯ ಚಳುವಳಿ ಮತ್ತು ಸಿದ್ದಲಿಂಗಯ್ಯನವರ ಹೊರಾಟ ಕುರಿತು ಅಧ್ಯಯನ ಮಾಡುವುದೇ ಈ ಲೇಖನದ ಉದ್ದೇಶ.

ನಾಡಿನದ್ಯಂತ ಅಸಮಾನತೆ ಮತ್ತು ಜಾತಿ ಶ್ರೇಣೀಕರಣದಿಂದ ಕೂಡಿದೆ. ಆಗಾಗಿ ಸಾವಾಜಿಕ ನೆಲೆಯಲ್ಲಿ ಶೋಷಣೆ ವಾಡುವವರು, ಶೋಷಣೆ

ಅನುಭವಿಸುವವರು ಇದ್ದಾರೆ. ಅಸಮಾನತೆ ಮತ್ತು ಅಪಮಾನಕ್ಕೆ ಜಾತಿಯೇ ಸಮಸ್ಯೆಯ ಕೇಂದ್ರ. ದಲಿತ ಬಂಡಾಯ ಸಾಹಿತ್ಯವು ಸಾಮಾಜಿಕ ಪಿಡುಗುಗಳಾದ ಜಾತಿ ಭೇದ, ಲಿಂಗ ಭೇದ, ವರ್ಗ ಭೇದ ಇವುಗಳನ್ನು ಹೋಗಲಾಡಿಸಿ ಸಮಸಮಾಜ ನಿರ್ಮಿಸುವ ಸಲುವಾಗಿ ಚಳುವಳಿಯ ಜೊತೆ ಜೊತೆಯಲ್ಲಿಯೇ ಬೆಳೆಯಿತು. ಹಾಗಾಗಿ ಜಾತಿ ಸಮಸ್ಯೆಯ ವಿಶ್ಲೇಷಣೆಯನ್ನು ಇದು ಗಂಭೀರವಾಗಿಯೇ ತೆಗೆದುಕೊಂಡಿತು. ದಲಿತ ಸಾಹಿತ್ಯ ಚಳುವಳಿ ಮುಖ್ಯವಾಗಿ ಜಾತಿ ಸಮಸ್ಯೆಯನ್ನು ಕುರಿತು ವಿಚಾರಮಾಡಿ ಸಾಮಾಜಿಕ ನ್ಯಾಯ ಕೊಡಿಸುವಲ್ಲಿ ಅದರ ಹೋರಾಟ ದೊಡ್ಡದು.

ಮಾನವ ಕುಲ ಒಂದೇ ಆದರೂ ವೃತ್ತಿ ಉದ್ಯೋಗಗಳ ಭಿನ್ನತೆಯಿಂದಾಗಿ, ಜೀವನ ವಿಧಾನ ಮತ್ತು ಸಂಸ್ಕೃತಿಯಲ್ಲಿ ವೈವಿಧ್ಯತೆಗಳು ಕಂಡುಬಂದು ಮೇಲು, ಕೀಳು ಎಂಬ ಹಲವಾರು ಜಾತಿ ಹುಟ್ಟಿಕೊಂಡವು. ಈ ಜಾತಿಯಿಂದಾಗಿ ವ್ಯಕ್ತಿಯ ಸ್ಥಾನಮಾನ ಆತನು ಹುಟ್ಟುವ ಕುಟುಂಬದ ಜಾತಿಯಿಂದಲೇ ನಿರ್ಧರಿತವಾಯಿತು. ಮೇಲ್ವರ್ಗದ ಜನ ಎಲ್ಲಾ ಸವಲತ್ತುಗಳನ್ನು ಪಡೆದು ಕೆಳವರ್ಗದ ಜನ ಅವುಗಳಿಂದ ವಂಚಿತರಾದರು. ಹಾಗಾಗಿ ಇವರು ಮೇಲ್ವರ್ಗದವರ ಮತ್ತು ಜಮೀನ್ದಾರರ ಮನೆಯಲ್ಲಿ ಜೀತದಾಳುಗಳಾಗಿ ದುಡಿಯುವ ಪರಿಸ್ಥಿತಿ ಉಂಟಾಯಿತು. ಈ ಅಸಮಾನತೆ ಮತ್ತು ಅನ್ಯಾಯದಿಂದ ಕೂಡಿದ ವ್ಯವಸ್ಥೆಯೇ ಅಕ್ಷರದ ಮೂಲಕ ದಲಿತ ಸಾಹಿತ್ಯವನ್ನೂ, ಸ್ವಾಭಿಮಾನ ಮತ್ತು ಪ್ರತಿರೋಧದ ಮೂಲಕ ಶೋಷಿತ ವರ್ಗದ ಪರ ಸಂಘಟನೆಗೊಂಡು ಹೋರಾಟವನ್ನೂ ಹುಟ್ಟುಹಾಕಿತು.

ಶತಮಾನಗಳಿಂದ ಅಕ್ಷರ ವಂಚಿತರಾಗಿದ್ದ ಜನ ಅಕ್ಷರವನ್ನು ಕಲಿತು ಆ ಅಕ್ಷರ ಜ್ಞಾನವನ್ನು ಬಳಸಿಕೊಂಡದ್ದು ನಮ್ಮ ಇತಿಹಾಸದ ಪ್ರಮುಖ ಘಟ್ಟ. ಅಕ್ಷರಸ್ಥ ಸಮುದಾಯದ ಎದೆಯಾಳದಲ್ಲಿ ಹುಟ್ಟಿದ ಹೋರಾಟ ಹಾಗೂ ಸಾಹಿತ್ಯಗಳು ಇಡೀ ಚರಿತ್ರೆ ಹಾಗೂ ಪರಂಪರೆಯನ್ನು ಮತ್ತು ವರ್ತಮಾನದ ಬದುಕಿನ ಕರಾಳತೆಯನ್ನು ಶೋಧಿಸಿದವು. ಅಕ್ಷರ ಕಲಿತ ಯುವ ಶಕ್ತಿ ಹಲವು ಹೋರಾಟಗಳ ಮೂಲಕ ತಮ್ಮನ್ನು ತಾವೇ ಗುರುತಿಸಿಕೊಳ್ಳತೊಡಗಿದಾಗ ಅವರ ಸಿಟ್ಟು ಆಕ್ರೋಶ ಹಾಗೂ ನೋವು ದಲಿತ ಚಳುವಳಿಯ ರೂಪ ಪಡೆದವು. ಇಂಥ ಚಾರಿತ್ರಿಕ ಚಳುವಳಿಯ ಒಂದು ಮಜಲಾಗಿ ಹೊಸ ಸಾಹಿತ್ಯ ಚಳುವಳಿ ಹುಟ್ಟಿತು.

ದಲಿತ ಸಾಹಿತ್ಯ ಚಳುವಳಿಯ ಗಟ್ಟಿ ಧ್ವನಿ, 'ದಲಿತ ಕವಿ' ಎಂದೇ ಹೆಸರಾದ ಡಾ. ಸಿದ್ಧಲಿಂಗಯ್ಯನವರು ನೊಂದವರನ್ನು ಸಾಹಿತ್ಯದ ವಸ್ತುವಾಗಿಸುವ ಜನಪರ ಆಶಯದಿಂದ ತಮ್ಮ ಸಾಹಿತ್ಯದ ಮೂಲಕ ಶೋಷಿತರ ಪರವಾಗಿ ತಮ್ಮ ಆಕ್ರೋಶವನ್ನು ಹೊರ ಹಾಕಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ವಚನಕಾರರು ಹನ್ನೆರಡನೆಯ ಶತಮಾನದಲ್ಲೇ

ಸಾಮಾಜಿಕ ಪಿಡುಗುಗಳ ವಿರುದ್ಧ ಚಳುವಳಿಸಾರಿದ್ದರು. ಅಲ್ಲಿಂದ ಹೋರಾಟಗಳು ನಡೆಯುತ್ತಲೇ ಇವೆ ಆದರೂ ಸಮುದಾಯದಲ್ಲಿ ಸಮತೆಯ ಹೂವು ಅರಳಲಿಲ್ಲವೇಕೆ ಎಂಬ ಜಿಜ್ಞಾಸೆ, ಬಡವರ ಬಾಳಿಗೆ ಬೆಳಕು ತರುವ ದಾರಿಯನ್ನು ಅನ್ವೇಶಿಸುವ ಹೆಬ್ಬಯಕೆ ಸಿದ್ದಲಿಂಗಯ್ಯನವರಲ್ಲಿತ್ತು. ಈ ಮೂಲಕ ವಿದ್ಯಾರ್ಥಿ ದೆಸೆಯಲ್ಲಿಯೇ ಚಳುವಳಿಗೆ ದುಮುಕಿದ ಸಿದ್ಧಲಿಂಗಯ್ಯನವರು ಕನ್ನಡ ಸಾಹಿತ್ಯಲೋಕದಲ್ಲಿ ಸಂಚಲನ ಉಂಟುಮಾಡಿದರು. ಅವರ ಹೋರಾಟದ ಹಾಡುಗಳು ಚಳುವಳಿಯ ಭಾಗವಾಗಿ ಬೆಳೆದವು. ಮೊದಲು ನೊಂದವರಿಗೆ ಅರಿವು ಮೂಡಿಸಲು ತಾನು ಅನುಭವಿಸಿದ ನೋವಿನ ಅಭಿವ್ಯಕ್ತಿ ಸಾಹಿತ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿತು. ಅಲ್ಲಿಂದ ಸಿದ್ದಲಿಂಗಯ್ಯನವರು ಸಂಘಟನೆಯ ಒಂದು ಶಕ್ತಿಯಾಗಿನಿಂತರು.

ಅಂಬೇಡ್ಕರ್, ಬಸವಣ್ಣ, ಕುವೆಂಪು ಮುಂತಾದ ದಾರ್ಶನಿಕರ ತತ್ವ ಚಿಂತನೆಗಳಿಂದ ಆಕರ್ಷಿತರಾಗಿದ್ದ ಸಿದ್ಧಲಿಂಗಯ್ಯನವರ ಹಾಡುಗಳು ಕರ್ನಾಟಕದ ಬಹುದೊಡ್ಡ ಆಂದೋಲನದ ಗೀತೆಗಳಾಗಿ ಮೂಡಿಬಂದವು. ಆ ಹಾಡುಗಳ ಹಿಂದೆ ಇರುವಂತಹ ಕೆಚ್ಚು, ವ್ಯಂಗ್ಯ, ಆಕ್ರೋಶಗಳೆಲ್ಲಾ ಈ ರೀತಿ ಮೈತಳೆದು "ಧಿಕ್ಕಾರ ಧಿಕ್ಕಾರ ಅಸಮಾನತೆಗೆ, ಎಂದೆಂದಿಗೂ ದಿಕ್ಕಾರ ಶ್ರೀಮಂತರ ಸೊಕ್ಕಿಗೆ" ಎಂಬ ಮಾತು ದಲಿತ ಕಾವ್ಯದ ಪ್ರಮುಖ ರೂಪವೇ ಘೋಷಣೆ ಎಂಬಂತಾದರೂ ಇದು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ನೊಂದು ಬೆಂದ ಜನರ ಹೃದಯದಿಂದ ಬಂದು ಮದ್ದಿನಂತೆ ಸಿಡಿಯುವ ಮೂಲಕ ಸದ್ದುಮಾಡಿತು. ಶತಮಾನಗಳಿಂದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಯಾರು ಶೋಷಣೆಗೆ ಒಳಗಾಗಿದ್ದಾರೋ ಅವರೆಲ್ಲ ನನ್ನ ಜನಗಳು ಅವರಿಗೆ ಶೋಷಣೆಯಿಂದ ಮುಕ್ತಿ ಕೊಡಿಸುವ ಸಲುವಾಗಿಯೇ ಈ ಹೋರಾಟ ಎಂದಿದ್ದಾರೆ ಸಿದ್ದಲಿಂಗಯ್ಯನವರು. ಇರುವೆಯ ಶಿಸ್ತು ಮತ್ತು ಹುಲಿ, ಸಿಂಹದ ಗರ್ಜನೆಯನ್ನು ತಮ್ಮದಾಗಿಸಿಕೊಂಡಿರುವ ಈ ಜನರು ಶ್ರೀಮಂತರ ಸೊಕ್ಕು ಮತ್ತು ಅಸಮಾನತೆಯ ವಿರುದ್ದ ಧಿಕ್ಕಾರ ಕೂಗುತ್ತಾರೆ. ಕವನವು ಈ ಹಂತದಲ್ಲಿ ಕ್ರಾಂತಿಕಾರಿಗಳ ತೀವ್ರ ಪ್ರತಿಭಟನೆಯನ್ನು ಮುನ್ನೆಲೆಗೆ ತರುತ್ತದೆ.

ಒಗ್ಗಟ್ಟು ಮತ್ತು ಶಿಸ್ತಿನಲ್ಲಿ ಬಲವಿದೆ ಎಂದು ಅರಿತ ಜನಸಮುದಾಯ ಪ್ರತಿಯೊಬ್ಬರ ಹೃದಯದಲ್ಲಿ ಅವಮಾನದ ಕಿಚ್ಚು ಹೊಗೆಯಾಡಿತು. ಆಗ ಪ್ರತಿಯೊಬ್ಬರಿಗೂ ತಮಗಾದ ಅನ್ಯಾಯದ ಅರಿವಾಗಿ "ತೇಲಿ ತೇಲಿ ಹರಿದವು ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು" ಎಂಬ ಕವನದ ಸಾಲುಗಳಲ್ಲಿ ಕ್ರಾಂತಿ ಆರಂಭವಾಗುವುದೇ ಜನಸಾಮಾನ್ಯರಿಂದ. ಶೋಷಕರ ಶೋಷಣೆಯ ವಿರುದ್ದ

ಸಿಡಿದೆದ್ದ ಜನ ಸಮುದಾಯದಲ್ಲಿ ಒಟ್ಟಾಗಿ ಒಗ್ಗಟ್ಟಿನಿಂದ ಅಸಮಾನತೆಯನ್ನು ಖಂಡಿಸಿ ಪ್ರತಿರೋಧ ತೋರಿದ್ದಾರೆ.

ಬಡವನಿಂದ ದುಡಿಸಿಕೊಂಡು ಸರಿಯಾದ ಕೂಲಿಯೂ ಕೊಡದೆ ಅರೆಹೊಟ್ಟೆಯಲ್ಲಿ ಕೆಲಸ ಮಾಡಿ ಅಸ್ತಿಪಂಜರದಂತ ದೇಹ ಹೊಂದಿದ ಜನಗಳ ದುಡಿಮೆ ಉಳ್ಳವರ ಭೋಗಜೀವನಕ್ಕೆ ಹೇಗೆ ಬಲಿಪಶುಗಳಾಗುತ್ತಿದ್ದರು ಎಂಬುದಕ್ಕೆ 'ದೊಡ್ಡ ಗೌಡರ ಬಾಗಿಲಿಗೆ ನಮ್ಮ ಮೂಳೆಯ ತ್ವಾರಣ ನಮ್ಮ ಜನಗಳ ಕಾಲು ಕೈಯಿ ಕಂಬ ಅವರ ಹಟ್ಟಿಗೆ' ಎಂಬ ಹಾಡುನಲ್ಲಿ ತಲ ತಲಾಂತರಗಳಿಂದ ಭೂಮಾಲಿಕರ ದರ್ಪ, ದೌರ್ಜನ್ಯಗಳಿಗೆ ಕ್ರೂರವಾಗಿ ಬಲಿಯಾಗಿರುವ ಜನರ ದುರಂತ ಮತ್ತು ನೋವಿನ ಬದುಕನ್ನು ಕಾಣಬಹುದು.

ಹಸಿವು ಬಡತನದಿಂದ ಬಳಲುತ್ತಿದ್ದ ತನ್ನ ಜನಗಳ ನೋವನ್ನರಿತ ಸಿದ್ಧಲಿಂಗಯ್ಯನವರು ತನ್ನ ಸಮುದಾಯ ಅನುಭವಿಸಿದ ನೋವುಗಳನ್ನು ಕವನದಲ್ಲಿ ಅಭಿವ್ಯಕ್ತಿಸುವುದರ ಮೂಲಕ ಸಮುದಾಯದ ಮೇರು ಧ್ವನಿಯಾಗಿದ್ದಾರೆ. "ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು" ಎಂದು ಬಡಜನರ ನೋವನ್ನರಿತ ಅವರು ಸಮತಾ ಸಮಾಜವನ್ನು ಬಯಸಿ ಅಸಮಾನತೆಯ ವಿರುದ್ಧ ಸಾಹಿತ್ಯಿಕ ಕ್ರಾಂತಿಯನ್ನು ಸಾರಿದವರು. ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದೆ ಹಸಿವಿನಿಂದ ಜೀವ ಕಳೆದುಕೊಳ್ಳುತ್ತಿದ್ದ ಜನ ಹೊತ್ತಿನ ಊಟಕ್ಕಾಗಿ ಶ್ರೀಮಂತರ ಮನೆಯಲ್ಲಿ ಸೈಜುಗಲ್ಲು ಹೊತ್ತು ಶ್ರಮದಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಸ್ತಿತಿ ಮರುಕ ಹುಟ್ಟಿಸುವ ರೀತಿಯಲ್ಲಿದೆ. ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಪಿಡುಗುಗಳಾದ ಮೂಡನಂಬಿಕೆ, ಜಾತಿಪದ್ದತಿಯಂತಹ ಸಾಮಾಜಿಕ ಅನಿಷ್ಟಗಳನ್ನು ತೋಲಗಿಸಿ ಮಾನವೀಯ ಮತ್ತು ಸಮ ಸಮಾಜ ನಿರ್ಮಾಣವಾಗಬೇಕೆಂದರೆ ಕ್ರಾಂತಿ ನಡೆಯಲೇಬೇಕೆಂದು ಬಯಸಿದವರು.

ಸಾಮಾಜಿಕವಾದ ಹಾಗೂ ಆರ್ಥಿಕವಾದ ಈ ಗುಲಾಮಗಿರಿ ಮತ್ತು ಅಪಮಾನಗಳ ವಿರುದ್ಧ ಬಗೆ ಬಗೆಯ ವಿಧಾನಗಳಲ್ಲಿ ಅರಿವು ಮೂಡಿಸಿದ್ದು ಹಾಗೂ ಅರಿವು ಪಡೆದದ್ದು ಅಷ್ಟೆ ಮುಖ್ಯವಾದ ಚಾರಿತ್ರಿಕ ನೆಲೆ. ಈ ಬಗೆಯ ಸ್ವಾಭಿಮಾನದ ಅರಿವೇ ಇವುಗಳ ವಿರುದ್ಧ ಧ್ವನಿ ಎತ್ತಿ ಹೋರಾಡುವಂತೆ ಪ್ರಚೋದಿಸಿತು ಪ್ರಭಾವಿಸಿತು. ಆ ಕಾರಣ ಗಟ್ಟಿ ಧ್ವನಿಯಲ್ಲಿ "ಇಕ್ರಲಾ ಒದಿರ್ಲಾ ಈ ನನ್ನ ಮಕ್ಕಳ ಚರ್ಮ ಎಬ್ರಲಾ" ಎಂಬ ಆಕ್ರೋಶ ಭರಿತ ಮಾತುಗಳ ಮೂಲಕ ಶೋಷಿತ ಸಮುದಾಯದ ಧ್ವನಿಯಾಗಿ ಹೋರಾಟ ಸಾರಿದ್ದಾರೆ. ಈ ರೀತಿಯ ಸಾಹಿತ್ಯ ಚಳುವಳಿಯಿಂದ ಜಗತ್ತಿಗೆ ಹೊಸ ಹಾದಿಯನ್ನು ತೋರಿಸಿದ್ದಾರೆ.

"ಯಾರಿಗೆ ಬಂತು ಎಲ್ಲಿಗೆ ಬಂತು 47 ರ ಸ್ವಾತಂತ್ರ್ಯ" ಎಂಬ ಗೀತೆಯ ಮೂಲಕ ತಮ್ಮಲ್ಲಿರುವ ನೋವನ್ನು ಹೊರಹಾಕಿದ್ದಾರೆ. ಬಡವರ ಮನೆಗೆ ಬರಲ್ಲಿಲ್ಲ, ಬೆಳಕಿನ ಕಿರಣ ತರಲಿಲ್ಲ, ಗೋಳಿನ ಕಡಲನ್ನು ಬತ್ತಿಸಲಿಲ್ಲ ಈ 47ರ ಸ್ವಾತಂತ್ರ್ಯ ಎನ್ನುತ್ತ ಸೋತ ರಟ್ಟೆಗಳಿಗೆ ಬಲನೀಡಲಿಲ್ಲ ಬಡವರ ಬದುಕು ಬದಲಾಗಲಿಲ್ಲ ನಿಜವಾದ ಸ್ವಾತಂತ್ರ್ಯ ಎಲ್ಲರಿಗೂ ತಲುಪಬೇಕು ಎಂದು ತನ್ನ ಕವನಗಳ ಮೂಲಕ ಶೋಷಿತ ವರ್ಗದ ಜನರಲ್ಲಿ ಹೋರಾಟದ ಕಿಚ್ಚು ಹಚ್ಚಿದ್ದಾರೆ.

ದಲಿತರು ಇಂದು ಸಮಾಜದ ಮೇಲೆ ಅನೇಕ ಒತ್ತಡ ಹೇರುವುದರ ಮೂಲಕ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಹಕ್ಕು ಪಡೆಯುವಲ್ಲಿ ಜಾಗೃತಿ ಹೆಜ್ಜೆ ಇಡುತ್ತಿದ್ದಾರೆ. ಅವರ ಹೋರಾಟದ ಕೂಗು "ದಲಿತರು ಬರುವರು ದಾರಿಬಿಡಿ ದಲಿತರ ಕೈಗೆ ರಾಜ್ಯ ಕೊಡಿ" ಎಂಬ ಪದ್ಯದ ಸಾಲು ಚಳುವಳಿಗೆ ಹೊಸ ವೇಗ, ಹೊಸ ಸ್ಪರ್ಶ ತಂದುಕೊಟ್ಟಿದೆ. ಆಕ್ರೋಶವನ್ನು ಅಕ್ಷರಗಳಲ್ಲಿ ಹಿಡಿದಿಟ್ಟಿರುವ ಗೀತೆಯಿದು. ಹನ್ನೆರಡನೇ ಶತಮಾನದ ವಚನ ಚಳುವಳಿಯಲ್ಲಿಯೇ ಸಾವಿರಾರು ವರ್ಷಗಳಿಂದ ಅಸ್ಪೃಶ್ಯ ಸಮುದಾಯಗಳನ್ನು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ವಂಚಿಸಲಾಗಿದ್ದ ವ್ಯವಸ್ಥೆಯ ಹುನ್ನಾರಗಳನ್ನು ಬಯಲುಮಾಡಿತ್ತು. ಹೀಗೆ ಚಳುವಳಿ ರೂಪುಗೊಂಡು ಸಾವಿರಾರು ವರ್ಷಗಳಿಂದ ಕ್ರೂರ ದಬ್ಬಾಳಿಕೆ ಮತ್ತು ನೋವುಂಡ ಅಸ್ಪೃಶ್ಯ ಸಮುದಾಯಗಳ ಆಕ್ರೋಶ ದಲಿತ ಬಂಡಾಯ ಚಳುವಳಿಯಲ್ಲಿ ಸ್ಫೋಟವಾಯಿತು.

ಶೋಷಿತರು ಸಾರ್ವಜನಿಕರು ಸೇರುವ ಯಾವುದೇ ಸ್ಥಳಗಳಿಗೂ ಹೋಗುವ ಹಾಗಿರಲಿಲ್ಲ. ಈ ಅಸಮಾನತೆಯನ್ನು ಕುರಿತ ಸಿದ್ದಲಿಂಗಯ್ಯನವರ ಒಂದು ಧ್ವನಿ "ಹೋಟ್ಲು, ಬಾವಿ, ಮನೆ ಯಾವುದಕ್ಕೂ ಸೇರ್ಸಲ್ವಲ್ರೊ/ ನಮ್ ಹೇಲ್ ತಿನ್ನೋ ನಾಯ್ನ ಕ್ವಾಣೆವಳೀಕ್ ಬುಟಕತ್ತಾರೆ/ ನಾವ್ ಬೆಳದಿದ್ ತಿಂತಾರೆ, ನಾವು ದುಡಿದಿದ್ ತಗತಾರೆ/ ನಾವ್ ಮಾತ್ರ ಬ್ಯಾಡ" ಇಲ್ಲಿ ಸಿದ್ದಲಿಂಗಯ್ಯನವರು ಮೇಲ್ವರ್ಗದವರು ಜಾತಿಯ ಆಧಾರದ ಮೇಲೆ ಹೇರಿರುವ ನಿರ್ಭಂದಗಳನ್ನು ಈ ಮಾತುಗಳ ಮೂಲಕ ಪ್ರಶ್ನೆ ಮಾಡುತ್ತಿದ್ದಾರೆ. ದಲಿತರು ಕೆರೆ ಕಟ್ಟೆಗಳ ನೀರನ್ನು ಮುಟ್ಟುವ ಹಾಗಿರಲಿಲ್ಲ. ಹಂದಿ, ನಾಯಿ, ಕತ್ತೆಗಳು ಮುಟ್ಟಬಹುದು, ಆದರೆ ದಲಿತರು ಮುಟ್ಟಿದರೆ ಶುದ್ದೀಕರಣ ನಡೆಯುತ್ತಿತ್ತು. ಹಂದಿನಾಯಿಗಳಿಗಿಂತ ಕಡೆಯಾಗಿ ಕಾಣುತ್ತಿದ್ದ ಜನರು, ದಲಿತರ ದುಡಿತದಿಂದ ಬಂದ ಪ್ರತಿಫಲವನ್ನು ತೆಗೆದುಕೊಳ್ಳುತ್ತಾರೆ. ದಲಿತರು ಬೆಳೆದಿದ್ದನ್ನು ಉಣ್ಣುತ್ತಾರೆ ಆದರೆ ದಲಿತರನ್ನು ಮನುಷ್ಯರಂತೆ ಕಾಣಲಾಗದ ಸ್ಥಿತಿಯನ್ನು ಕಂಡು ಈ ಮೂಲಕ ವಿಷಾದ ವ್ಯಕ್ತಪಡಿಸಿದ್ದಾರೆ.

ಸಿದ್ದಲಿಂಗಯ್ಯನವರ ಹೋರಾಟದ ಗೀತೆಗಳು ಒಂದು ವರ್ಗಕ್ಕೆ

ಸೀಮಿತವಾಗದೇ ಎಲ್ಲಾ ಶೋಷಿತ ವರ್ಗದವರ ಪರವಾಗಿ ನಿಲ್ಲುತ್ತವೆ. ಸೃಷ್ಟಿಯಲ್ಲಿ ಎಲ್ಲರೂ ಸಮಾನರು. ಸಮಾಜದಲ್ಲಿ ಅಸಮಾನತೆಯ ಕಂದರ ಸೃಷ್ಟಿಸಿದ್ದು ಮಾನವರೇ. ಈ ಮಾನವರ ಮನಸ್ಸಿನಲ್ಲಿ ತುಂಬಿದ ಮೌಢ್ಯ ತೊರೆದು ಸಮತಾ ಸಮಾಜ ಸೃಷ್ಟಿಸುವ ಸಲುವಾಗಿಯೇ ನಡೆದ ಚಳುವಳಿ ಇದಾಗಿದೆ. ಸಮಾಜದಲ್ಲಿನ ಅಸಮಾನತೆಗಳ ಬಗ್ಗೆ ತಮ್ಮೊಳಗೆ ಮೊಳೆಯುತ್ತಿದ್ದ ಸಿಟ್ಟು ಆಕ್ರೋಶಗಳನ್ನೂ ವ್ಯಕ್ತಪಡಿಸಲು ಸಿದ್ದಲಿಂಗಯ್ಯನವರು ಆಯ್ದುಕೊಂಡದ್ದು ಕಾವ್ಯ ಮಾಧ್ಯಮ. ಅವರ ಕಾವ್ಯ ಸಿಡಿಮದ್ದಿನ ಸ್ಫೋಟ. ದಬ್ಬಾಳಿಕೆ ಮತ್ತು ಸಾಮಾಜಿಕ ದುಷ್ಕೃತ್ಯಗಳಿಗೆ ಪ್ರತೀಕಾರವಾಗಿ ಭೂಹೀನರಿಗೆ ಭೂಮಿಯನ್ನು ಒದಗಿಸುವುದು, ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧ ಮಾತನಾಡುವುದು ಮತ್ತು ನಿಷ್ಕ್ರಿಯವಾಗಿರುವ ದಲಿತ ಸಮಾಜದ ಸ್ವಾಭಿಮಾನವನ್ನು ಜಾಗೃತಗೋಳಿಸುವುದು ಇದರ ಉದ್ದೇಶವಾಗಿತ್ತು. ದಮನಿತ ವರ್ಗಕ್ಕೆ ಇವರು ಸಹಜವಾಗಿ ಚೈತನ್ಯದಂತೆ ಕಂಡರು. ಅದರ ಜೊತೆ ಕವಿಗಳ ಕಾವ್ಯದಂತೆ ಸಾಮಾನ್ಯರಿಗೂ ಕೈಗೆಟುಕಬಲ್ಲ ಅವರ ವ್ಯಕ್ತಿತ್ವ ಅವರಿಗೆ ತಳಸಮುದಾಯಗಳ ದಮನಿತರ ಸಾಮಾಜಿಕ ಸಾಂಸ್ಕೃತಿಕ ನಾಯಕತ್ವವನ್ನು ಸಹಜವಾಗಿ ದೊರಕುವಂತೆ ಮಾಡಿತು. ಹೊಲೆಮಾದಿಗರ ಹಾಡು ಕವಿತೆಯಿಂದ ಸಿದ್ದಲಿಂಗಯ್ಯನವರ ಹೋರಾಟ ನಡೆದೇ ಇತ್ತು.

ಸಮಸಮಾಜದ ನಿರ್ಮಾಣವಾಗಬೇಕೆಂಬ ಹಂಬಲಕ್ಕಾಗಿ ತಮ್ಮನ್ನು ಸಮರ್ಪಸಿಕೊಂಡಿದ್ದ ಸಿದ್ದಲಿಂಗಯ್ಯನವರು ತಮ್ಮ ಸಾಹಿತ್ಯದ ಮೂಲಕ ಕ್ರಾಂತಿಯನ್ನು ಸಾರಿದರು. ಬುದ್ದನ ಕಾಲದಿಂದಲು ವೈಚಾರಿಕ ಚಿಂತನೆ ನಡೆದರೂ ಭಾರತೀಯರಾದ ನಾವು ಜಾತಿ ವಿನಾಶದ ಅಸ್ತ್ರವಾಗಿದ್ದ ಅಂತರ್ ಜಾತಿ ವಿವಾಹವನ್ನು ‘ಮರ್ಯಾದ ಹತ್ಯೆಯ’ ಹೆಸರಿನಲ್ಲಿ ಹತ್ತಿಕ್ಕಲಾಗುತ್ತಿದೆ.

ಮನುಷ್ಯ ಜ್ಞಾನವಂತನಾದಂತೆ ವೈಜ್ಞಾನಿಕ ಹಾಗೂ ವೈಚಾರಿಕವಾಗಿ ರೂಪುಗೊಳ್ಳಬೇಕು. ಆದರೆ ಹೆಚ್ಚು ಹೆಚ್ಚು ತಿಳಿದುಕೊಂಡವರಲ್ಲಿ ತಮಗೇ ತಿಳಿಯದಂತೆ. ಮೌಢ್ಯತೆಯ ಒಳಗೆ ಸಿಲುಕಿಕೊಳ್ಳಲು ತಾವೇ ಕಾರಣರಾಗುತ್ತಾರೆ. ಸಾಮಾಜಿಕ ನ್ಯಾಯವೆನ್ನುವುದು ಹಕ್ಕಿನ ಸಂಗತಿಯೇ ಹೊರತು ಹಂಗಿನ ಸಂಗತಿಯಲ್ಲ! ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಇರುತ್ತದೋ ಅಲ್ಲಿ ನ್ಯಾಯವನ್ನು ಆಧರಿಸಿದ ಸಮಾಜವನ್ನು ಕಟ್ಟುವುದು ಅನಿವಾರ್ಯ.

ಒಟ್ಟಾರೆ ಸಿದ್ದಲಿಂಗಯ್ಯನವರು ಕ್ರಾಂತಿ ಗೀತೆಗಳ ಮೂಲಕ ಶೋಷಿತರ ಧ್ವನಿಯಾದರು. ದಮನಿತರ ಬದುಕಿಗೆ ಜಾಗೃತಿ ಮೂಡಿಸಿ ಆತ್ಮಸ್ಥೈರ್ಯವನ್ನು ಮೂಡಿಸುವಲ್ಲಿ ಬಂಡಾಯ ಮನೋಧರ್ಮದ ಕವಿತೆಗಳು ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿವೆ. ಹಾಗೆ ನೊಂದ ಜನರ ಸಾಮಾಜಿಕ ಬದುಕಿನ ಬದಲಾವಣೆಗೆ ಕಾರಣಕರ್ತರಾಗಿದ್ದಾರೆ.

ಪರಾಮರ್ಶನ ಗ್ರಂಥಗಳು :

1. ಡಾ. ಸಿದ್ದಲಿಂಗಯ್ಯ, 'ಮೆರವಣಿಗೆ' ಅಂಕಿತ ಪುಸ್ತಕ ಬೆಂಗಳೂರು,2012
2. ಸಾವಿರಾರು ನದಿಗಳು– ಡಾ.ಸಿದ್ದಲಿಂಗಯ್ಯ
3. ಹೊಲೆಯರು ಮಾದಿಗರು ಮಹಾರಾಜರು– ಡಾ.ಮಾಳವ ದೊರೆ ನಂಜುಂಡಸ್ವಾಮಿ
4. ಚಿದಾನಂದ ಎಂ ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಷ್ಯತೆ ಧಾರವಾಡ ಪ್ರಸಾರಾಂಗ ಕನ್ನಡ ವಿ.ವಿ
5. ಸಿದ್ದಲಿಂಗಯ್ಯನವರ – ಹೊಲೆಮಾದಿಗರ ಹಾಡು ಕವನ ಸಂಕಲನ

***

ಅಲಮೇಲಮ್ಮನ ಶಾಪ: ದಂತಕಥೆಯ ಹಿಂದಿರುವ ವೈಜ್ಞಾನಿಕ ಮತ್ತು ಐತಿಹಾಸಿಕ ಸತ್ಯಗಳ ವಿಶ್ಲೇಷಣೆ

ಮೈಸೂರು ರಾಜಮನೆತನದ ಶಾಪದ ಮರುಪರಿಶೀಲನೆ

ಮನೋಜ್.ಎಂ [1]

ಸಂಶೋಧನಾ ವಿದ್ಯಾರ್ಥಿ, ಸಾಮಾಜಿಕ ಮತ್ತು ಮಾನವಿಕ ವಿಭಾಗ ಶ್ರೀನಿವಾಸ ವಿಶ್ವವಿದ್ಯಾಲಯ, ಮಂಗಳೂರು

ಸಹಾಯಕ ಪ್ರಾಧ್ಯಾಪಕರು, ಸಂತ ಫ್ರಾನ್ಸಿಸ್ ಕಾಲೇಜು, ಕೋರಮಂಗಲ, ಬೆಂಗಳೂರು–34

manojm.cssh@srinivasuniversity.edu.in

ಡಾ. ರಾಜೇಶ್ ಬೆಜ್ಜಂಗಳ [2]

ಸಂಶೋಧನಾ ಮಾರ್ಗದರ್ಶಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು

rbejja@gmail.com

ಪ್ರಸ್ತಾವನೆ :

ಡಾ.ಕೆ.ಎನ್ ಗಣೇಶಯ್ಯನವರ "ಪದ್ಮಪಾಣಿ" ಕೃತಿಯಲ್ಲಿನ "ಮರಳ ತೆರೆಯೊಳಗೆ" ಕಥೆಯ ಆಧಾರಿತವಾಗಿ ಈ ಲೇಖನವನ್ನು ಚಿತ್ರಿಸಲಾಗಿದೆ. ಮಾನವ ಸಂಸ್ಕೃತಿಯಲ್ಲಿ ಐತಿಹ್ಯಗಳು, ದಂತಕಥೆಗಳು ಮತ್ತು ಪವಾಡಗಳು ಸದಾಕಾಲ ಜನಮನದಲ್ಲಿ ಉಳಿದುಕೊಳ್ಳುವ ಅಂಶಗಳು. ಇಂತಹ ಅನೇಕ ಕಥೆಗಳಲ್ಲಿ, ಮೈಸೂರು ರಾಜವಂಶದ ಕುರಿತಾದ ಅಲಮೇಲಮ್ಮನ ಶಾಪವು ಒಂದು ಪ್ರಮುಖ ಉದಾಹರಣೆ. ಈ ಶಾಪವು ಮೂರು ವಿಶಿಷ್ಟ ಘಟನೆಗಳ ಮೇಲೆ ಕೇಂದ್ರೀಕೃತವಾಗಿದೆ. ತಲಕಾಡು ಮರಳಿನಿಂದ ಆವರಿಸುವುದು, ಮಾಲಂಗಿ ಒಂದು ಮಡುವಾಗುವುದು ಮತ್ತು ಮೈಸೂರು

ರಾಜರಿಗೆ ಸಂತಾನ ಭಾಗ್ಯವಿಲ್ಲದಿರುವುದು. ಈ ಪ್ರಬಂಧವು ಈ ಮೂರು ನಂಬಿಕೆಗಳ ಹಿಂದಿರುವ ವಾಸ್ತವ ಸಂಗತಿಗಳನ್ನು ಮತ್ತು ಅವು ಕಾಲಕ್ರಮೇಣ ಜನಪದ ನಂಬಿಕೆಗಳಾಗಿ ಹೇಗೆ ರೂಪುಗೊಂಡವು ಎಂಬುದನ್ನು ವೈಜ್ಞಾನಿಕ ಮತ್ತು ಐತಿಹಾಸಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಇದು ಕೇವಲ ಕಥೆಯ ವಿಶ್ಲೇಷಣೆಯಲ್ಲ, ಬದಲಾಗಿ ಈ ಪ್ರಬಂಧವು ಶಾಪದ ನಂಬಿಕೆಗೆ ಇರಬಹುದಾದ ವೈಜ್ಞಾನಿಕ ಕಾರಣಗಳನ್ನು ಮತ್ತು ಜನಪದ ಕಥೆಯಾಗಿ ಅದರ ರೂಪಾಂತರವನ್ನು ಅನ್ವೇಷಿಸುತ್ತದೆ.

ಪೀಠಿಕೆ :

ಕನ್ನಡ ಸಾಹಿತ್ಯದಲ್ಲಿ ಪಾವಾಡ ಆಧಾರಿತ ಸಾಹಿತ್ಯವು ವಿಶಿಷ್ಟ ಸ್ಥಾನ ಪಡೆದಿದೆ. ಇದು ಉತ್ತರ ಕರ್ನಾಟಕದ ಜನಪದ ಸಾಹಿತ್ಯ ಪ್ರಕಾರವಾಗಿದ್ದು, ವೀರ ಪುರುಷರು ಮತ್ತು ಸ್ತ್ರೀಯರ ಸಾಹಸ, ತ್ಯಾಗ, ಮತ್ತು ಸಾಧನೆಗಳನ್ನು ಕಾವ್ಯ ರೂಪದಲ್ಲಿ ಹೇಳುತ್ತದೆ. ಪಾವಾಡಗಳು ಮೌಖಿಕ ಪರಂಪರೆಯಿಂದ ಬಂದಿದ್ದು, ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದು ಬಂದಿದೆ. ಇವು ಸಾಮಾನ್ಯವಾಗಿ ಗೀತೆ ಅಥವಾ ಹಾಡಿನ ರೂಪದಲ್ಲಿದ್ದು, ಜನಪದ ಕಲಾವಿದರು ತಮ್ಮನ್ನು ತಾವು 'ಪಾವಾಡ ಹೇಳುವವರು' ಎಂದು ಕರೆದುಕೊಳ್ಳುತ್ತಾರೆ. ಬದುಕಿದ ಜನರ ಕಥೆಗಳನ್ನು, ವೀರ ಮರಣವನ್ನು ಹೊಂದಿದವರ ಚರಿತ್ರೆಯನ್ನು, ಸ್ಥಳೀಯ ದೇವತೆಗಳ ಮತ್ತು ಪುಣ್ಯ ಪುರುಷರ ಮಹತ್ವವನ್ನು ಈ ಪಾವಾಡಗಳಲ್ಲಿ ಕಾಣಬಹುದು. ಈ ಸಾಹಿತ್ಯ ಪ್ರಕಾರವು ಆಯಾ ಪ್ರದೇಶದ ಸಂಸ್ಕೃತಿ, ಇತಿಹಾಸ ಮತ್ತು ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಇವು ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಸೇರಿಸಿದೆ. ಅನೇಕ ಆಧುನಿಕ ಕವಿಗಳು ಮತ್ತು ಸಂಶೋಧಕರು ಈ ಪಾವಾಡಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಒಟ್ಟಾರೆ, ಪಾವಾಡಗಳು ಕನ್ನಡ ಸಾಹಿತ್ಯದ ಒಂದು ಅಮೂಲ್ಯ ಭಾಗವಾಗಿವೆ.

ಅಲಮೇಲಮ್ಮನ ಶಾಪವು ಮೂರು ಪ್ರಮುಖ ಘಟನೆಗಳ ಮೇಲೆ ಕೇಂದ್ರೀಕೃತವಾಗಿದೆ: 1. ತಲಕಾಡು ಮರಳಿನಿಂದ ಆವರಿಸುವುದು, 2. ಮಾಲಂಗಿ ಒಂದು ಮಡುವಾಗಿ ಪರಿವರ್ತನೆಯಾಗುವುದು, ಮತ್ತು 3. ಮೈಸೂರು ರಾಜವಂಶಕ್ಕೆ ಸಂತಾನ ಭಾಗ್ಯವಿಲ್ಲದಿರುವುದು. ಈ ಮೂರು ಘಟನೆಗಳು ಶಾಪದ ಪರಿಣಾಮವೆಂದು ನಂಬಲಾಗಿದೆ. ಈ ಸಂಶೋಧನೆಯು ಈ ನಂಬಿಕೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಪ್ರಯತ್ನಿಸುತ್ತದೆ ಮತ್ತು ಈ ಮೂರು ಘಟನೆಗಳಿಗೆ ವೈಜ್ಞಾನಿಕ ಮತ್ತು ಐತಿಹಾಸಿಕ ವಿವರಣೆಯಾಗಿದೆ.

ಅಲಮೇಲಮ್ಮನ ಶಾಪದ ಜನಪದ ಕಥೆ ಮತ್ತು ಅದರ ವೈಜ್ಞಾನಿಕ ವಿಶ್ಲೇಷಣೆ

ಪ್ರಚಲಿತ ಕಥೆಯ ಪ್ರಕಾರ, ಶ್ರೀರಂಗಪಟ್ಟಣದ ಅಧಿಕಾರಿಯಾಗಿದ್ದ ರಂಗರಾಯನ ಪತ್ನಿ ಅಲಮೇಲಮ್ಮ. ಅವರು ತಮ್ಮ ಒಡವೆಗಳನ್ನು ರಂಗನಾಯಕಿ ದೇವತೆಗೆ ಧರಿಸುತ್ತಿದ್ದರು. ಈ ಒಡವೆಗಳನ್ನು ಮೈಸೂರಿನ ರಾಜರು ವಶಪಡಿಸಿಕೊಳ್ಳಲು ಯತ್ನಿಸಿದಾಗ, ಅವಳು ಒಡವೆಗಳೊಂದಿಗೆ ಕಾವೇರಿ ನದಿಯ ಮಡುವಿಗೆ ಹಾರಿಕೊಂಡು, ಮೇಲೆ ತಿಳಿಸಿದಂತೆ ಮೂರು ಶಾಪಗಳನ್ನು ನೀಡಿದಳು. ಈ ಶಾಪದ ಪರಿಣಾಮವಾಗಿಯೇ ಇಂದಿಗೂ ಆ ಮೂರು ಘಟನೆಗಳು ನಡೆದಿವೆ ಎಂದು ನಂಬಲಾಗಿದೆ. ಆದರೆ, ಕಥೆಯಲ್ಲಿ ಬರುವ ಪರಂಪರೆ ವಿಭಾಗದ ಉಪ ನಿರ್ದೇಶಕರಾದ ಡಾ. ಗಿರಿಜ ಅವರ ವಿಶ್ಲೇಷಣೆಗಳು ಈ ನಂಬಿಕೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುತ್ತವೆ. ತಲಕಾಡು ಮರಳುಪ್ರದೇಶವಾಗಲು ಶಾಪವೇ ಕಾರಣವೇ? ಡಾ. ಗಿರಿಜ ಅವರು ಹೇಳುವಂತೆ, ತಲಕಾಡು ಮರಳುಭೂಮಿಯಾದದ್ದು ಒಂದು ನೈಸರ್ಗಿಕ ಮತ್ತು ಐತಿಹಾಸಿಕ ಪ್ರಕ್ರಿಯೆ. ಭೂತಜ್ಞರಾದ ಡಾ. ಬಿ.ಪಿ. ರಾಧಾಕೃಷ್ಣ ಅವರ ಅಧ್ಯಯನಗಳ ಪ್ರಕಾರ, ಬಿಳಿಗಿರಿರಂಗನ ಬೆಟ್ಟದ ಪ್ರದೇಶದ ಭೂಮಿಯ ಏರಿಕೆಯಿಂದಾಗಿ ಕಾವೇರಿ ನದಿಯ ಪಾತ್ರದಲ್ಲಿ ತಿರುವುಗಳು ಉಂಟಾಗಿವೆ. ಈ ತಿರುವುಗಳು ನದಿಯಲ್ಲಿ ಹರಿಯುವ ಮರಳಿನ ಹರಿವನ್ನು ನಿರ್ಬಂಧಿಸಿ ತಲಕಾಡಿನ ಬಳಿ ಮರಳಿನ ರಾಶಿಗಳು ಸಂಗ್ರಹಗೊಳ್ಳಲು ಕಾರಣವಾಗಿವೆ. ಇದಲ್ಲದೆ, ಮಾಧವ ಮಂತ್ರಿ ಎಂಬ ವಿಜಯನಗರದ ಅಧಿಕಾರಿಯು ಸುಮಾರು 1360ರಲ್ಲಿ ಕಾವೇರಿ ನದಿಗೆ ಒಂದು ಅಣೆಕಟ್ಟನ್ನು ನಿರ್ಮಿಸಿದ್ದನು. ಇದರಿಂದಾಗಿ ಅಣೆಕಟ್ಟಿನ ಕೆಳಭಾಗದಲ್ಲಿ, ಅಂದರೆ ತಲಕಾಡಿನ ಬಳಿ ನದಿಯ ಹರಿವು ಕಡಿಮೆಯಾಯಿತು. ಈ ಕಾರಣದಿಂದ ನದಿಯ ತಳದ ಮರಳು ಪದರಗಳು ತೆರೆದುಕೊಂಡವು. ದಕ್ಷಿಣ–ಪಶ್ಚಿಮದಿಂದ ಬೀಸುವ ಬಲವಾದ ಗಾಳಿ ಈ ಮರಳನ್ನು ತಲಕಾಡಿನ ನಗರದತ್ತ ತಳ್ಳಿತು. ಹೀಗಾಗಿ, ತಲಕಾಡು ಕ್ರಮೇಣ ಮರಳಿನಿಂದ ಆವೃತವಾಗತೊಡಗಿತು. ಡಾ. ಡಿ.ವಿ. ದೇವರಾಜ್ ಮತ್ತು ನರಸಿಂಹ ಮೂರ್ತಿಯವರ ಉತ್ಖನನಗಳು ಈ ಮರಳಿನ ಶೇಖರಣೆಯು ವಿಜಯನಗರದ ಅರಸರ ಆಳ್ವಿಕೆಯ ಕೊನೆಯ ಹಂತಗಳಲ್ಲಿ, ಅಂದರೆ 16ನೇ ಶತಮಾನದ ಅಂತ್ಯದಲ್ಲಿಯೇ ಪ್ರಾರಂಭವಾಗಿತ್ತು ಎಂಬುದಕ್ಕೆ ಸಾಕ್ಷಿ ಒದಗಿಸಿವೆ. ಅಲಮೇಲಮ್ಮನ ಕಾಲ 17ನೇ ಶತಮಾನ. ಅಂದರೆ, ಶಾಪ ಕೊಡುವ ವೇಳೆಗೆ ತಲಕಾಡು ಮರಳು ಪ್ರದೇಶವಾಗುವ ಪ್ರಕ್ರಿಯೆ ಈಗಾಗಲೇ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಆದ್ದರಿಂದ, ತಲಕಾಡಿನಲ್ಲಿ ಮರಳು ಶೇಖರವಾದದ್ದು ಶಾಪದ ಪರಿಣಾಮಕ್ಕಿಂತ ಹೆಚ್ಚಾಗಿ, ನೈಸರ್ಗಿಕ ಹಾಗೂ ಮಾನವನ ಹಸ್ತಕ್ಷೇಪದಿಂದ ಉಂಟಾದ ಪರಿಸರ ದುರಂತವಾಗಿದೆ.

ಮಾಲಂಗಿ ಮಡುವಾಗಲು ಶಾಪವೇ ಕಾರಣವೇ? ಅಲಮೇಲಮ್ಮ ನದಿಗೆ

ಹಾರಿಕೊಂಡ ಸ್ಥಳವಾದ ಮಾಲಂಗಿಯಲ್ಲಿ ಆಳವಾದ ಮಡು ಇರುವುದು ಸಹಜ ನೈಸರ್ಗಿಕ ಪ್ರಕ್ರಿಯೆ. ಕಾವೇರಿ ನದಿಯು ಹರಿಯುವಾಗ ಮಾಲಂಗಿಯ ಕಡೆಯ ದಂಡೆಯನ್ನು ಸವೆಸಿ ಆಳವಾದ ಮಡುವನ್ನು ಸೃಷ್ಟಿಸಿದೆ. ಅಲ್ಲಿನ ಗ್ರಾಮಸ್ಥರು ಹೇಳುವ ಪ್ರಕಾರ, ನದಿಯು ಹಳ್ಳಿಯನ್ನು ಕೊರೆಯುತ್ತಲೇ ಇದೆ. ಇದು ಸಾವಿರಾರು ವರ್ಷಗಳಿಂದ ನದಿ ಪಾತ್ರದಲ್ಲಿ ನಡೆಯುವ ಸಾಮಾನ್ಯ ಪ್ರಕ್ರಿಯೆ. ಆದ್ದರಿಂದ, ಮಾಲಂಗಿಯ ಮಡುವೂ ಶಾಪದ ಪರಿಣಾಮವಲ್ಲ.

ಮೈಸೂರು ರಾಜವಂಶಕ್ಕೆ ಸಂತಾನ ಭಾಗ್ಯವಿಲ್ಲದಿರುವುದು ಶಾಪವೇ? ಮೈಸೂರು ರಾಜರ ವಂಶಾವಳಿಯನ್ನು ಪರಿಶೀಲಿಸಿದಾಗ, ಹಲವು ರಾಜರಿಗೆ ಮಕ್ಕಳು ಹುಟ್ಟಿದ್ದಾರೆ. ಶಾಪದ ನಂತರ ಆಳ್ವಿಕೆ ಮಾಡಿದ ೧೮–೧೯ ರಾಜರಲ್ಲಿ ಸುಮಾರು ಅರ್ಧದಷ್ಟು ರಾಜರಿಗೆ ಸಂತಾನ ಪ್ರಾಪ್ತಿಯಾಗಿದೆ. ಇದು ಶಾಪ ಸಂಪೂರ್ಣವಾಗಿ ನಿಜವಲ್ಲ ಎಂಬುದನ್ನು ಸೂಚಿಸುತ್ತದೆ. ಆದಾಗ್ಯೂ, ಸಂತಾನ ಪ್ರಾಪ್ತಿಯಲ್ಲಿ ತೊಂದರೆಗಳು ಇರುವುದು ನಿಜ. ಡಾ. ಗಿರಿಜ ಅವರ ಪ್ರಕಾರ, ಇದಕ್ಕೆ ವೈಜ್ಞಾನಿಕ ಕಾರಣ in-breeding depression (ಒಳ–ಕುಲೀಯ ವಿವಾಹಗಳಿಂದ ಉಂಟಾಗುವ ಅನುವಂಶಿಕ ತೊಂದರೆ) ಇರಬಹುದು. ಬ್ರಿಟನ್ನಿನ ರಾಜಮನೆತನದಲ್ಲಿ 'ಹಿಮೋಫಿಲಿಯಾ' ರೋಗವು ಹೇಗೆ ಒಳ–ಕುಲೀಯ ವಿವಾಹದಿಂದ ಉಂಟಾಯಿತೋ, ಅದೇ ರೀತಿ ಮೈಸೂರು ರಾಜರ ಕುಟುಂಬದಲ್ಲೂ ಸಂತಾನಕ್ಕೆ ಸಂಬಂಧಿಸಿದ ಅನುವಂಶಿಕ ಗುಣಗಳು ಕೇಂದ್ರೀಕೃತವಾಗಿರಬಹುದು. ದತ್ತು ಪಡೆದ ಮಕ್ಕಳೂ ಕೂಡ ರಾಜರ ವಂಶಕ್ಕೆ ಸೇರಿದವರೇ ಆಗಿದ್ದರಿಂದ, ಈ ಅನುವಂಶಿಕ ತೊಂದರೆ ಮುಂದುವರಿಯುವ ಸಾಧ್ಯತೆ ಇದೆ. ಇದು ಶಾಪಕ್ಕಿಂತ ವೈಜ್ಞಾನಿಕ ಕಾರಣಕ್ಕೆ ಹೆಚ್ಚು ಹತ್ತಿರವಾಗಿದೆ.

ಕನಕಜ್ಜಿ ಹೇಳಿದ ಜಾನಪದ ಆಯಾಮ : ಕಥೆಯಲ್ಲಿ ಬರುವ ಕನಕಜ್ಜಿ ಹೇಳುವ ಹೊಸ ಕಥೆಯು ಶಾಪದ ನೈಜ ಮೂಲವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಕನಕಜ್ಜಿಯ ಪ್ರಕಾರ, ರಂಗರಾಯನು ವಿಜಯನಗರದ ಒಡವೆಗಳನ್ನು ತಲಕಾಡಿನಲ್ಲಿ ಒಬ್ಬ ಶೆಟ್ಟಿಯ ಬಳಿ ಅಡ ಇಟ್ಟಿದ್ದನು. ಮೈಸೂರಿನ ರಾಜರು ಆ ಒಡವೆಗಳನ್ನು ಕೇಳಿದಾಗ, ಅಲಮೇಲಮ್ಮನು ತಾನು ಪತ್ತೆಹಚ್ಚಿ ಹಿಂತಿರುಗಿಸಲು ಯತ್ನಿಸುತ್ತಾಳೆ, ಆದರೆ ಅದಕ್ಕೆ ಸಾಧ್ಯವಾಗುವುದಿಲ್ಲ. ಆಗ, ಗಂಡನ ಗೌರವ ಉಳಿಸಲು ಹಾಗೂ ತನ್ನ ಅಸಹಾಯಕತೆಯಿಂದ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸುತ್ತಾಳೆ. ಈ ಸಂದರ್ಭದಲ್ಲಿ ಅವಳು ಬರೆದ ಪತ್ರದಲ್ಲಿ ಈ ಸಾಲುಗಳಿದ್ದವು:

"ತಲಕಾಡು ಮರಳಾಯಿತೆ ನನ್ನ ದೊರೆಗೆ ಮಾಲಂಗಿ ಮಡುವಾಯಿತೆ ನನಗೆ ದೇವರೆ,

ಮಕ್ಕಳಿಲ್ಲದಾಯಿತಲ್ಲ ರಾಯರಿಗೆ"

ಅವಳು ಈ ಸಾಲುಗಳನ್ನು ಬರೆದು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಅಂಬಿಗನೊಬ್ಬನ ಸಲಹೆಯ ಮೇರೆಗೆ ತನ್ನ ಆತ್ಮಹತ್ಯೆಯ ನಿರ್ಧಾರವನ್ನು ಬದಲಾಯಿಸಿ ಶೆಟ್ಟಿಗೆ ಪತ್ರವನ್ನು ಕಳುಹಿಸುತ್ತಾಳೆ. ಆದರೆ, ಪತ್ರ ಪಡೆದ ಶೆಟ್ಟಿ, ರಾಜನಿಗೆ ಅನುಮಾನ ಬಾರದಿರಲಿ ಎಂದು, ಅಲಮೇಲಮ್ಮ ಒಡವೆಗಳೊಂದಿಗೆ ನದಿಗೆ ಹಾರಿಕೊಂಡಳು ಎಂದು ಸುಳ್ಳು ಸುದ್ದಿ ಹರಡುತ್ತಾನೆ. ಈ ವಾಕ್ಯಗಳು ಕಾಲಾನಂತರ ಜನಪದ ಹಾಡುಗಳ ಮೂಲಕ ಪ್ರಚಲಿತವಾಗಿ, ಅವುಗಳ ಅರ್ಥವು ತಿರುಚಲ್ಪಟ್ಟಿತು. ಅವನ ಮಗ ಒಡವೆಗಳ ಆಸೆಗೆ ಬಿದ್ದು ನೀರಿನಲ್ಲಿ ಮುಳುಗಿ ಸತ್ತಾಗ, ಶೆಟ್ಟಿ ಇದನ್ನು ಅಲಮೇಲಮ್ಮನ ಶಾಪವೆಂದು ನಂಬಿ, 'ಆಕೆ ಶಾಪ ಕೊಟ್ಟವರಿಗೆ ತೊಂದರೆ ತಪ್ಪಿದ್ದಲ್ಲ' ಎಂದು ಗೊಂದಲದಿಂದ ಮಾತನಾಡಿದ. ಈ ಗೊಂದಲದ ಮಾತುಗಳು ಮತ್ತು ಹಳೆಯ ಜಾನಪದ ಹಾಡಿನ ತುಣುಕುಗಳು ಜನರ ಬಾಯಲ್ಲಿ ಬದಲಾಗಿ, ಈಗಿರುವ ಶಾಪದ ರೂಪವನ್ನು ಪಡೆದವು. ಹೀಗೆ, ಅಲಮೇಲಮ್ಮನ ಶಾಪವು ಸತ್ಯ ಸಂಗತಿಗಳ, ವೈಜ್ಞಾನಿಕ ಪ್ರಕ್ರಿಯೆಗಳ ಮತ್ತು ಮಾನವನ ದುರ್ಬಲತೆಗಳ ಮಿಶ್ರಣದಿಂದ ಹುಟ್ಟಿಕೊಂಡ ಒಂದು ಜನಪದ ನಂಬಿಕೆಯಾಗಿದೆ. ಆಕೆಗೆ ಎದುರಾದ ಜೀವನದ ದುರಂತಗಳು ಮತ್ತು ಶೆಟ್ಟಿಯ ಲಾಭದ ಆಸೆಯು ಈ ಕಥೆಯ ಮೂಲ. ಇದರ ಹಿಂದೆ ಇತಿಹಾಸಿಕ ಘಟನೆಗಳು ಮತ್ತು ವೈಜ್ಞಾನಿಕ ಕಾರಣಗಳಿದ್ದರೂ, ಅದು ಒಂದು ದೈವಲೀಲೆಯೆಂದು ಜನಜನಿತವಾಯಿತು.

ತೀರ್ಮಾನ ಮತ್ತು ಸತ್ಯಶೋಧನೆಯ ಮಹತ್ವ : ಅಲಮೇಲಮ್ಮನ ಶಾಪವು ಒಂದು ಪವಾಡವೆಂಬುದಕ್ಕಿಂತ ಹೆಚ್ಚಾಗಿ, ಮಾನವನ ಬದುಕು, ಇತಿಹಾಸ ಮತ್ತು ಪ್ರಕೃತಿಯ ಸಹಜ ಪ್ರಕ್ರಿಯೆಗಳ ಕುರಿತಾದ ಒಂದು ಕಥೆ. ಇದು, ವಿಜ್ಞಾನವು ಎಲ್ಲಿ ಕೊನೆಗೊಳ್ಳುತ್ತದೆಯೋ ಅಲ್ಲಿ ಧರ್ಮ ಪ್ರಾರಂಭವಾಗುತ್ತದೆ ಎಂಬ ವಾದಕ್ಕೆ ಒಂದು ಉತ್ತಮ ಉದಾಹರಣೆ. ಈ ಪ್ರಬಂಧವು ಅಲಮೇಲಮ್ಮನ ಶಾಪವೆಂದು ನಂಬಲಾದ ಮೂರು ಘಟನೆಗಳು ಹೇಗೆ ವೈಜ್ಞಾನಿಕ, ಐತಿಹಾಸಿಕ ಮತ್ತು ಜಾನಪದ ಅಂಶಗಳ ಸಂಯೋಜನೆಯಿಂದ ಸೃಷ್ಟಿಯಾಗಿವೆ ಎಂಬುದನ್ನು ತೋರಿಸುತ್ತದೆ. ಈ ಪ್ರತಿಯೊಂದು "ಶಾಪ"ಕ್ಕೂ ನೈಜವಾದ ಕಾರಣಗಳಿವೆ. ತಲಕಾಡು ಮರಳು ಪ್ರದೇಶವಾದದ್ದು ಮಾನವನ ಹಸ್ತಕ್ಷೇಪ ಮತ್ತು ನೈಸರ್ಗಿಕ ಭೂವೈಜ್ಞಾನಿಕ ಪ್ರಕ್ರಿಯೆಯಿಂದ. ಮಾಲಂಗಿಯ ಮಡು ನದಿಯ ಸಾಮಾನ್ಯ ಕೊರೆತದ ಪರಿಣಾಮ. ಮೈಸೂರು ರಾಜವಂಶದಲ್ಲಿ ಸಂತಾನ ಸಮಸ್ಯೆಗಳು ವೈಜ್ಞಾನಿಕವಾಗಿ inbreeding depression ಕಾರಣದಿಂದಿರಬಹುದು.

ಈ ಅಧ್ಯಯನವು ಧರ್ಮ ಮತ್ತು ವಿಜ್ಞಾನಗಳು ಸತ್ಯ ಶೋಧನೆಯ ಎರಡು

ಮುಖಗಳಾಗಿವೆ ಎಂಬುದನ್ನು ತೋರಿಸುತ್ತದೆ. ಈ ಎರಡರ ಮಿಲನವು ಮಾನವನ ನಂಬಿಕೆಗಳನ್ನು ಹೆಚ್ಚು ಅರ್ಥಪೂರ್ಣವಾಗಿಸಬಹುದು. ಕಥೆಯು ಕೇವಲ ಒಂದು ಐತಿಹಾಸಿಕ ಘಟನೆಯಲ್ಲ. ಇದು ಧರ್ಮ ಮತ್ತು ವಿಜ್ಞಾನಗಳು ಒಂದನ್ನೊಂದು ವಿರೋಧಿಸದೆ, ಸತ್ಯವನ್ನು ಕಂಡುಕೊಳ್ಳುವ ಒಂದೇ ನಾಣ್ಯದ ಎರಡು ಮುಖಗಳಾಗಿವೆ ಎಂಬುದನ್ನು ಸೂಚಿಸುತ್ತದೆ. ಈ ಕಥೆಯ ವಿಶ್ಲೇಷಣೆಯ ಮೂಲಕ, ಪವಾಡಗಳು ಮತ್ತು ದೈವಲೀಲೆಗಳ ಹಿಂದಿರುವ ಸತ್ಯವನ್ನು ಶೋಧಿಸುವುದರ ಮಹತ್ವವನ್ನು ಅರ್ಥಮಾಡಿಕೊಳ್ಳಬಹುದು. ಇಂತಹ ಪ್ರಯತ್ನಗಳು, ಧರ್ಮದ ಹೆಸರಿನಲ್ಲಿ ಹುಟ್ಟಿಕೊಳ್ಳುವ ಮೂಢನಂಬಿಕೆಗಳನ್ನು ದೂರ ಮಾಡಿ, ವೈಜ್ಞಾನಿಕ ಮತ್ತು ತಾರ್ಕಿಕ ಮನೋಭಾವವನ್ನು ಸಮಾಜದಲ್ಲಿ ಬೆಳೆಸಲು ಸಹಾಯ ಮಾಡುತ್ತದೆ. ಸತ್ಯದ ಅನ್ವೇಷಣೆಯೇ ನಿಜವಾದ ಧರ್ಮ.

ಪ್ರಬಂಧವು ಜಾನಪದ ಕಥೆಗಳ ಆಳವನ್ನು ಮತ್ತು ಅವುಗಳ ಸತ್ಯಾಸತ್ಯತೆಯನ್ನು ಅನ್ವೇಷಿಸುವುದರ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಭವಿಷ್ಯದಲ್ಲಿ, ಇಂತಹ ಇನ್ನಷ್ಟು ಕಥೆಗಳ ಹಿಂದಿನ ಸತ್ಯಾಂಶವನ್ನು ಹುಡುಕಿ ತೆಗೆಯುವುದರಿಂದ, ಧರ್ಮದ ಹೆಸರಿನಲ್ಲಿ ಹರಡಬಹುದಾದ ಮೂಢನಂಬಿಕೆಗಳನ್ನು ಕಡಿಮೆ ಮಾಡಬಹುದು ಮತ್ತು ವೈಜ್ಞಾನಿಕ ಮನೋಭಾವವನ್ನು ಬೆಳೆಸಬಹುದು.

ಗ್ರಂಥಋಣ :

1. ಪದ್ಮಪಾಣಿ ಕೃತಿ– ಡಾ.ಕೆ.ಎನ್ ಗಣೇಶಯ್ಯ– ಅಂಕಿತ ಪ್ರಕಾಶನ
2. ನರಸಿಂಹ ರಂಗನ್, ಎಸ್. (2006). ಸ್ಥಳ ಮಹಾತ್ಮ: ಗೌತಮಕ್ಷೇತ್ರವಾದ ಶ್ರೀರಂಗಪಟ್ಟಣದ ಶ್ರೀ ಪಶ್ಚಿಮ ರಂಗನಾಥಸ್ವಾಮಿಯವರ ದೇವಾಲಯದ ಚರಿತ್ರೆ. ಶ್ರೀರಂಗಪಟ್ಟಣ: ಎಸ್. ನರಸಿಂಹ ರಂಗನ್.
3. ಗುರುರಾಜ. (2006). ತಲಕಾಡು ಕೈಪಿಡಿ. ಹಳೇಬೀದಿ, ತಲಕಾಡು: ತಲ್ನಾಡು ಪ್ರಕಾಶನ.
4. ಮೈಸೂರು ಅರಮನೆ ಆವರಣ. (ಲಭ್ಯತೆ). ಮೈಸೂರು ಶ್ರೀ ಮನ್ಮಹಾರಾಜರವರ ವಂಶಾವಳಿ. ಮೈಸೂರು: ಪರಂಪರೆ ವಿಭಾಗ.
5. Devaraj, D.V., Narasimhamurthy, A.V., Krishnamurthy, M.S., & Sriswamy. (1996). Excavations at Talakad - 1992-93, Vol-1. Published by Directorate of Archeology and Museum of Karnataka.

6. Directorate of Archeology and Museums in Karnataka. (1932). Annual Report.
7. Radhakrishna, B.P. (1992). Evolution of Cauvery: A point of view. Current Science, 63, 348-353.
8. Valdiya, K.S. (1997). Recent tectonic movements in the Cauvery catchment, Southern India. J. Indian Inst. Sci., 77, 267-273.

***

ಯುದ್ಧವೆಂಬುದು ಅತೀಕ್ರೂರ ಗ್ರಹದಂತೆ: ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ಯುದ್ಧ ನಿರಸನ

ವಿನಯ ಕುಮಾರ್
ಸಂಶೋಧಕರು
ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
vinayakumar550@gmail.com

ಈ ಭೂಮಿಯ ಮೇಲೆ ಮಾನವನ ಇತಿಹಾಸ ಅದೆಷ್ಟೋ ವರ್ಷಗಳದ್ದು. ಜೈವಿಕವಾಗಿ ಬದುಕುತ್ತಾ ಇದ್ದವನಿಗೆ ಯಾವುದೇ ಗೊಂದಲವಾಗಲಿ, ತುಮುಲಗಳಾಗಲಿ ಇರಲಿಲ್ಲ. ಪ್ರಕೃತಿ ನೀಡಿದ ಆಹಾರದಲ್ಲೇ ಸಂತೋಷದಿಂದ ಜೀವಿಸಿದ್ದ. ಸಮೂಹ ಜೀವಿಯಾದ ಮನುಷ್ಯ ಕೂಡಿ ಬಾಳಲು ಪ್ರಾರಂಭಿಸಿದಂದಿನಿಂದಲೇ ಗುಂಪುಗಳು ಹುಟ್ಟಿಕೊಂಡವು. ಗುಂಪುಗಳಿಗೆ ಹಿರಿತನದ ಮೇಲಿಂದ ಮುಖ್ಯಸ್ಥರೂ ಕಾಣಿಸಿಕೊಂಡುವು. ಹೀಗೆ ಮನುಷ್ಯ ಸಮೂಹ ಒಂದು ವ್ಯವಸ್ಥಿತ ನಾಗರಿಕತೆಯ ಕಡೆಗೆ ಸಾಗಿ, ಜೀವನ ಸಂಸ್ಕೃತಿಯನ್ನು ರೂಪಿಸಿಕೊಂಡು ಬಂದುವು. ಬರಬರುತ್ತಾ ಗುಂಪು ಬದುಕು ಕುಟುಂಬದ ಬದುಕಿಗೂ ಆಸ್ತಿಯ ಕಲ್ಪನೆಗಳಿಗೂ ಎಡೆ ಮಾಡಿಕೊಟ್ಟು ಅಂದಂದಿಗೆ ಸೀಮಿತಗೊಂಡಿದ್ದ ಬದುಕು ಮುಂದಿನ ಯೋಚನೆಯನ್ನೂ ಮಾಡತೊಡಗಿತು. ಹೆಣ್ಣನ್ನೂ, ಮಣ್ಣನ್ನೂ, ಸಂಪತ್ತನ್ನೂ ಆಳುವ ಆಲೋಚನೆಗಳು ಬಲಗೊಂಡವು. ಹೀಗೆ ಸಮೂಹದ ಮೇಲೆ ಹಿಡಿತ ಸಾಧಿಸಿ ಸಂಪತ್ತೆಂಬಂತೆ ಗ್ರಹಿಸಲ್ಪಟ್ಟ ಭೌತಿಕ ಆಸ್ತಿಯ ಮೇಲೆ ಯಜಮಾನಿಕೆ ಸಾಧಿಸುವ ಪ್ರಯತ್ನಗಳ ಜೊತೆ ಜೊತೆಗೇ ಯುದ್ಧವೆಂಬ ವಿನಾಶಕ ಪ್ರವೃತ್ತಿಯೂ ಹುಟ್ಟಿಕೊಂಡಿತ್ತು. ಹೀಗೆ ದೀರ್ಘಕಾಲೀನ ಪರಿಣಾಮ ಬೀರುವ ಪ್ರಕೃತಿಧರ್ಮಕ್ಕೆ ವಿರುದ್ಧವಾದ ಯುದ್ಧವೆಂಬ ಮಾನವ ವಿಕೃತಿಯು ಕ್ಲಾಸ್‌ವಿಜ್ಡ್ ಹೇಳುವಂತೆ "ರಾಜಕೀಯದ ಹಿಂಸಾತ್ಮಕ ಮುಂದುವರಿಕೆಯೇ ಯುದ್ಧ" (ಸಾಹಿತ್ಯ

ಸಂವಾದ–1,2007, ಪು.135) ಇದು ಸಾಮ್ರಾಜ್ಯಶಾಹಿ ಮನಸ್ಥಿತಿಯ ಕೂಸಾಗಿಯೇ ಹುಟ್ಟಿಕೊಂಡಿತು. ಅಷ್ಟೇ ಅಲ್ಲ ಅದರ ಮುಂದುವರಿಕೆಗೆ ಬೇಕಾಗಿ ಯುದ್ಧ, ಹೋರಾಟ, ಸಾವು–ನೋವುಗಳನ್ನು ರಮ್ಯಾದ್ಭುತಗೊಳಿಸಿ ಅದಕ್ಕೆ ಬೇಕಾದ ಸ್ವರ್ಗವೆಂಬ ಕಲ್ಪನೆಯನ್ನೂ, ತ್ಯಾಗ, ವೀರರೆನ್ನುವ ಮೌಲ್ಯಗಳನ್ನೂ ಬಿತ್ತಿ ಬೆಳೆಯಲಾಯಿತು.

ಸ್ಪರ್ಧೆ ನಿಸರ್ಗದ ಪ್ರತೀ ಜೀವಕುಲದಲ್ಲೂ ಈ ಇದ್ದೇ ಇದೆ. ಆದರೆ ಅದನ್ನು ಯುದ್ಧದ ಜೊತೆಗೆ ಸಮೀಕರಿಸಲಾಗದು. ಜೀವಜಗತ್ತಿನ ಸ್ಪರ್ಧೆ ಮುಖಾಮುಖಿ ರೂಪದಲ್ಲಿರುವುದು ಮತ್ತು ದೇಹಬಲ, ದೇಹ ಅಂಗಗಳನ್ನೇ ಬಳಸಿಕೊಂಡು ನಡೆಯುವ ಸಂಘರ್ಷವಾಗಿರುವುದು. ಅಂತಹ ಕಾದಾಡುವಿಕೆ ನಿಸರ್ಗದಲ್ಲಿ ಪ್ರತಿಕ್ಷಣಕ್ಕೂ ಇದೆ. ಅದು ಅಪರಿಹಾರ್ಯ. ಆದರೆ ಮಾನವ ಜಗತ್ತು ಹೀಗಲ್ಲ. ಬುದ್ಧಿಜೀವಿಯಾದ ಮನುಷ್ಯ ಮಾನವನ ಇತಿಹಾಸದಲ್ಲಿ ತನ್ನ ದಿನ ನಿತ್ಯದ ಅಗತ್ಯಗಳಿಗಾಗಿ ಆಯುಧವನ್ನು ಕಂಡುಕೊಂಡ. ಆದರೆ ಈ ಆಯುಧಗಳು ಆಹಾರ ಸಂಗ್ರಹಣೆಗಷ್ಟೇ ಸೀಮಿತಗೊಳ್ಳದೆ ಎದುರಾಳಿಗಳನ್ನು ನಿವಾರಿಸಿಕೊಳ್ಳಲೂ ಬಳಕೆಗೊಳ್ಳುತ್ತಾ ಬಂತು. ಅವು ಅತಿ ಹೆಚ್ಚು ಬಳಕೆಗೊಂಡದ್ದು ಕಾದಾಡಲು. ಆಯುಧದ ಶೋಧನೆಯ ನಂತರ ಸ್ಪರ್ಧೆ ಇದ್ದದು ಯುದ್ಧವಾಗಿ ಪರಿವರ್ತನೆ ಹೊಂದಿತು. ಇದು ಮಾನವ ಇತಿಹಾಸದ ದಿಕ್ಕನ್ನೇ ಬದಲಾಯಿಸಿತು. ಅಂಧಕಾರದ ಯುಗವನ್ನೇ ಪ್ರಾರಂಭಿಸಿತು. ಅಧಿಕಾರ ಸ್ಥಾಪನೆಯ ಹಿಂದಿನಿಂದಲೂ ಯುದ್ಧಗಳು ಹೆಣ್ಣಿಗಾಗಿ, ಹೊನ್ನಿಗಾಗಿ, ಮಣ್ಣಿಗಾಗಿ ನಡೆಯುತ್ತಲೇ ಬಂದಿದೆ. ಅಂತಹ ಯಜಮಾನ್ಯದ ಕಾರಣಗಳು ಇಂದು ಧರ್ಮ, ದೇವರು, ಜಾತಿ, ಭಾಷೆಗಳೂ ಆಗುತ್ತಿವೆ. ಆಧುನಿಕ ಯುಗ ಯುದ್ಧದ ಕಾರಣಗಳಲ್ಲೂ, ಸ್ವರೂಪದಲ್ಲೂ ವಿಸ್ತರಣೆಗೊಳ್ಳುತ್ತಲೇ ಇದೆ. ಜಾತಿಗಾಗಿ, ನೀರಿಗಾಗಿ, ಭಾಷೆಗಾಗಿ ಯುದ್ಧಗಳು ನಡೆಯುತ್ತಿವೆ. ಯುದ್ಧದ ಮೂಲ ಕಾರಣ ಮಾನವನ ಅಹಮಿಕೆ. ಅಸ್ಥಿತ್ವ ಸ್ಥಾಪನೆಯ ಹಪಾಹಪಿ. ಇದಕ್ಕೆ ಸಾಮೂಹಿಕತೆಯ ಚಹರೆಯನ್ನು ಕೊಡಲು ಯಶಸ್ವಿಯಾದಾಗ, ಸಮೂಹ ಅಸ್ಮಿತೆಯಾಗಿ ಪರಿವರ್ತಿಸಲು ಸಾಧ್ಯವಾದಾಗ ಅಲ್ಲಿ ನಡೆಯುವ ಯುದ್ಧಗಳ ಭೌಗೋಳಿಕ ಮತ್ತು ಮಾನಸಿಕ ಪರಿಧಿಗಳು ವ್ಯಾಪಕವಾಗಿಯೇ ರೂಪಗೊಳ್ಳುತ್ತವೆ. ಹೀಗೆ ಅಧಿಕಾರ ಸ್ಥಾಪನೆ ಅಥವಾ ಹಿಡಿತ ಸಾಧನೆಯ ಹಪಾಹಪಿ ಮತ್ತು ಇದಕ್ಕೆ ದೊರೆಯುವ ಸಮೂಹ ಸಮ್ಮತಿಯಲ್ಲಿ ಮನಸ್ಸುಗಳೇ ಯುದ್ಧದ ಮೂಲ ಬೇರುಗಳು.

ಯುದ್ಧಗಳು ಪ್ರಭುತ್ವದ ಮುಖ್ಯ ಅಂಶವಾಗಿದೆ. ಪ್ರಭುತ್ವ ಇರುವಲ್ಲಿಯ ತನಕ ಯುದ್ಧವೂ ಇರುತ್ತದೆ. ಯಾಕೆಂದರೆ ಪ್ರಭುತ್ವವು ತನ್ನ ರಕ್ಷಣೆಗೆ, ಸಾಮ್ರಾಜ್ಯ ವಿಸ್ತರಣೆಗೆ ಸದಾ ಚಿಂತಿಸುತ್ತದೆ. ಅದಕ್ಕಾಗಿ ಸೈನ್ಯವನ್ನು ಬಲವನ್ನು ಬಲಪಡಿಸಬೇಕು ಮತ್ತು ಸೈನ್ಯದಲ್ಲಿರುವ ವೀರರನ್ನು ಪ್ರೋತ್ಸಾಹಿಸಬೇಕು ಅಥವಾ ಪ್ರಚೋದಿಸಬೇಕು.

ಹಾಗಾಗಿ ಕ್ಷಾತ್ರ ಅದರ ಅಗತ್ಯದ ಸರಕು. 'ಯುದ್ಧ ಇನ್ನೊಬ್ಬರನ್ನು ಗುಲಾಮರನ್ನಾಗಿ ಮಾಡಿಸುವ ಪಾಳೆಗಾರಿ ಮನಸ್ಸಿನ ಅಭಿವ್ಯಕ್ತ ರೂಪ.' ಇಲ್ಲಿ ಸೈನಿಕರೇ ಸಾಧನಗಳಾಗಿ ಇನ್ನೊಬ್ಬರನ್ನು ಗುಲಾಮರನ್ನಾಗಿ ಮಾಡಲು ಹೋರಾಡುತ್ತಾರೆ. ಸೈನ್ಯ ಇರುವುದೇ ಕೊಲ್ಲಲು ಮತ್ತು ಸಾಯಲು. ಯಾವ ಸೈನ್ಯವೂ ಏನನ್ನೂ ಉತ್ಪಾದಿಸದು. ಸೃಷ್ಟಿಸುವ ಶಕ್ತಿಯುಲ್ಲದ, ಉತ್ಪಾದಕ ಗುಣವಿಲ್ಲದ ಸೈನ್ಯ ಮತ್ತು ಅದರ ಪ್ರದರ್ಶನ ರಂಗಭೂಮಿಯಾದ ಯುದ್ಧ ಮೂಲತಃ ಮನುಕುಲದ ವೈರಿ. ಸೈನಿಕರ ಬದುಕಲ್ಲಿ ಇರುವುದು ಕೊಲ್ಲುವ ಮತ್ತು ಕೊಲ್ಲಿಸಿಕೊಳ್ಳುವ ಎರಡೇ ಆಯ್ಕೆಗಳು. ಈ ದಾರುಣ ಸ್ಥಿತಿಗೆ ಯುದ್ಧವೇ ಕಾರಣ. ಯುದ್ಧ ಉತ್ಪಾದಿಸುವ ಹಿಂಸೆಗೆ ಬಲಿಯಾಗುವವರು ಸೈನಿಕರು ಮಾತ್ರವಲ್ಲ ಸೈನಿಕರ ಕುಟುಂಬಗಳು ನೆಲೆ ಕಳೆದುಕೊಳ್ಳುತ್ತದೆ, ಅಲ್ಲದೆ ಜನಸಾಮಾನ್ಯರಿಗೆ ಅತಂತ್ರವಾದ ಸ್ಥಿತಿಯನ್ನು ಉಂಟುಮಾಡುತ್ತದೆ. ಹೀಗಾಗಿ ಸೈನ್ಯ ಮತ್ತು ಕ್ಷಾತ್ರವು ನಿಜಕ್ಕೂ ಹಿಂಸೆಯನ್ನಲ್ಲದೆ ಎಂದಿಗೂ ಜೀವಕುಲಕ್ಕೆ ಬೇಕಾದ ಶಾಂತಿ, ನೆಮ್ಮದಿಯನ್ನು ಉತ್ಪಾದಿಸಲಾರವು. ಭದ್ರತೆಯ ಕಾರಣಕ್ಕಾಗಿ ಇದೆಯೆಂಬ ಸೈನ್ಯ ಮತ್ತು ಯುದ್ಧಗಳು ಮನುಕುಲದ ಪಾಲಿಗೆ ಸದಾ ಅಭದ್ರತೆಯ ಕಾರಣಗಳೇ ಆಗಿವೆ. ಇಂತಹ ದಾರುಣತೆಯನ್ನು ನಿಗ್ರಹಿಸಲು ಪ್ರೀತಿಯ ವಸಂತವೊಂದೇ ದಾರಿ. ಬುದ್ಧ ಚಲ್ಲಿದ ಬೆಳಕು ಈ ಮಾದರಿಯದು. ಅದು ಬಂದೂಕಿನ ನಳಿಕೆಯಲ್ಲಿ ಗುಬ್ಬಿ ಗೂಡು ಕಟ್ಟಲಿ ಎಂದು ಹಾರೈಸಿದ ರಂಮ್ಜಾನ್ ದರ್ಗಾ ಅವರ ಕಾವ್ಯದ ಕನಸಂತೆ. ಇದು ಇಂದು ಕೇವಲ ಕನಸಾಗಿ ಬಿಟ್ಟಿದೆ. ಆಧುನಿಕ ಜಗತ್ತಿನ ಸಂದರ್ಭದಲ್ಲಿ ಯುದ್ಧ ಒಂದು ಉದ್ಯಮವಾಗಿದೆ, ಮಾತ್ರವಲ್ಲ ಬಂಡವಾಳಶಾಹಿ ರಾಷ್ಟ್ರಗಳಿಗೆ ಆದಾಯದ ದೊಡ್ಡ ಮೂಲ ಆಗಿರುವುದು ಯುದ್ಧೋತ್ಪನ್ನಗಳ ಕೈಗಾರಿಕೆಗಳೇ ಎನ್ನುವುದು ತಿಳಿದಿರುವ ಸಂಗತಿ. ಕೆಲವು ಜಾಗತಿಕ ಸಮಸ್ಯೆಗಳನ್ನು ಸೃಷ್ಟಿಸಿ, ಮೊದಲೇ ಇದ್ದ ಕೆಲವು ಸಮಸ್ಯೆಗಳನ್ನು ದೊಡ್ಡದು ಮಾಡಿ ತಮ್ಮ ಉದ್ಯಮವನ್ನು ಉತ್ತಮಗೊಳಿಸಿವ ಕಡೆಗೆ ಹೆಚ್ಚು ಗಮನ ನೀಡಿದವು. ಈ ಯುದ್ಧ ಅಥವಾ ಯುದ್ಧದ ಭೀತಿ ಮುಂದುವರಿದ ರಾಷ್ಟ್ರಗಳಿಗೆ ಅಂತಹ ದೊಡ್ಡ ಸಮಸ್ಯೆಗಳಲ್ಲ. ಆದರೆ ಬಡರಾಷ್ಟ್ರಗಳಿಗೆ ಯುದ್ಧವೊಂದು ಸವಾಲು. ಅವುಗಳಿಗೆ ಯುದ್ಧ ಕೇವಲ ಸಾವು ನೋವಿನ ನೇರ ಪರಿಣಾಮ ಮಾತ್ರವೇ ಅಲ್ಲ. ಅದರೊಂದಿಗೆ ನಾಗರಿಕರ ದೈನಂದಿನ ಬದುಕನ್ನು ದುಬಾರಿಗೊಳಿಸುವ ಕಾರಣವೂ ಆಗಿ ಆರ್ಥಿಕತೆಯನ್ನೇ ಅಲ್ಲೋಲ ಕಲ್ಲೋಲಗೊಳಿಸುವ ಅನಿಷ್ಟವಾಗುತ್ತದೆ. ಇದಕ್ಕೆ ಈಗಾಗಲೇ ನಡೆದು ಹೋದ ಕೊಲ್ಲಿಯುದ್ಧ ಹಾಗೂ ಸಿರಿಯಾ ಯುದ್ಧಗಳು ಜಾಗತಿಕವಾಗಿ ಉಂಟುಮಾಡಿದ ತಲ್ಲಣಗಳನ್ನು ಗಮನಿಸಬಹುದು. ಸಿರಿಯಾ ಹತ್ಯಾಕಾಂಡ ಅಪಾರ ಜನಸಾಮಾನ್ಯರನ್ನು ಅಕಾರಣವಾಗಿ ಸಾಯಿಸಿ

ಮೂಲಭೂತವಾದಿಗಳು ಅಟ್ಟಹಾಸ ಮೆರೆದಿದ್ದಾರೆ. ಜಾಗತಿಕ ತೈಲಬೆಲೆಯ ಹೆಚ್ಚಳದ ಆತಂಕ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಮನೆಮಾಡಿದೆ. ಇಚೆಗೆ ರಷ್ಯಾ ಉಕ್ರೇನ್ ಯುದ್ಧ ಜಾಗತಿಕ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಅಲ್ಲಾಡಿಸಿತು. ಇನ್ನು ಆಧುನಿಕ ಕಾಲದ ಯುದ್ಧಗಳ ಸ್ವರೂಪವೂ ಹೆಚ್ಚು ಸಂಕೀರ್ಣಗೊಳ್ಳುತ್ತಿದೆ. ಜಗತ್ತನ್ನೇ ನೂರಾರು ಬಾರಿ ಸುಟ್ಟುರುಹಬಲ್ಲ ಅಣುಬಾಂಬುಗಳು ಯುದ್ಧದಾಹಿಗಳ ಬತ್ತಳಿಕೆಗೆ ಸೇರಿವೆ. ವಿಚಿತ್ರವೆಂದರೆ ಈಗಾಗಲೇ ಜಪಾನಿನ ಮೇಲೆ ಇಂತಹ ಎರಡು ಅಣುಬಾಂಬುಗಳನ್ನೇ ಎಸೆದು ಮಾನವನರಕವನ್ನು ನಿರ್ಮಾಣ ಮಾಡಿದ ಜಗತ್ತಿನ ಅತ್ಯಂತ ಕ್ರೂರ ಯುದ್ಧದಾಹಿ ದೇಶವಾದ ಅಮೆರಿಕಾ ಲೋಕಕ್ಕೆ ಶಾಂತಿಯ ಪಾಠ ಹೇಳುತ್ತಿದೆ! ಇಷ್ಟೇ ಅಲ್ಲ ಜಾಗತೀಕರಣದ ಯುಗ ಬಾಂಬುಗಳನ್ನು ಮೀರಿದ ಯುದ್ಧಗಳಿಗೂ ಸಾಕ್ಷಿಯಾಗುತ್ತಿವೆ. ತೃತೀಯ ಜಗತ್ತಿನ ರಾಷ್ಟ್ರಗಳ ಮೂಲಕಸುಬುಗಳು, ಕೃಷಿ ಇತ್ಯಾದಿಗಳನ್ನು ಶಕ್ತರಾಷ್ಟ್ರಗಳು ತಮ್ಮ ಕೈಯಲ್ಲಿರುವ 'ಅಂತರರಾಷ್ಟ್ರೀಯ ಹಣಕಾಸು ನಿಧಿ' ಎಂಬ ಆಯುಧವನ್ನು ಬಳಸಿ ಹೊಸಕಿ ಹಾಕುತ್ತಿವೆ. ಉತ್ಪಾದಿಸುವ ಕೈಗಳನ್ನು ಕೊಳ್ಳುವ ಕೈಗಳಾಗಿ, ದುಡಿಯುವ ಕೈಗಳನ್ನು ತಿನ್ನುವ ಹೊಟ್ಟೆಗಳಾಗಿ ಬದಲಾಯಿಸುತ್ತಿವೆ. ಕೊಳ್ಳುಬಾಕತನ ನಿರ್ಮಿಸುವ ಸಲುವಾದ ಆಕ್ರಮಣಕಾರಿ ಮಾರುಕಟ್ಟೆಯ ದಾಳಿಗಳು ನಡೆಯುತ್ತಿವೆ. ಹಾಗಾಗಿ ಯುದ್ಧವನ್ನು ಯಾರು ಮಾಡುತ್ತಿದ್ದಾರೆ? ಯಾರು ಶಾಂತಿಗಾಗಿ ಹೋರಾಡುತ್ತಿದ್ದಾರೆ? ಯುದ್ಧ ಮತ್ತು ಶಾಂತಿಯ ನಡುವೆ ಜಗತ್ತನ್ನು ಯಾವ ಕಡೆಗೆ ಒಯ್ಯಲಾಗುತ್ತಿದೆ ಎಂಬುದೇ ಅಸ್ಪಷ್ಟವಾಗಿ ಕುಳಿತ ಆತಂಕದ ಘಳಿಗೆಯಲ್ಲಿ ನಾವಿದ್ದೇವೆ. ಆದರೆ ಜಗತ್ತಿಗೆ ಬೇಕಿರುವುದು ಯುದ್ಧವಲ್ಲ. ಶಾಂತಿಯ ಸಹಬಾಳ್ವೆ ಬೇಕಾಗಿದೆ. ಇದು ಆಗುಗೊಳ್ಳಬೇಕಾದರೆ ಜಗತ್ತು ಯುದ್ಧಗಳನ್ನು ವಿರೋಧಿಸಿ ನಿಲ್ಲಬೇಕಿದೆ. ಅಂತಹ ದನಿ ಅನಾದಿಯಿಂದಲೇ ಮುನ್ನಡೆದು ಬಂದಿದೆ. ಈ ಕೈಗಳು ನಿಸರ್ಗಸಹಜ ಅಹಿಂಸೆಯ ಗೋಡೆಯ ಮೇಲಿನ ಹಿಂಸೆಯ ಚಿತ್ರವನ್ನು ಅಳಿಸುತ್ತಲೇ ಬಂದಿವೆ.

ಈಗಾಗಲೇ ಗುರುತಿಸಲಾದಂತೆ ಯುದ್ಧ ಮತ್ತು ಹಿಂಸೆಯ ವಾರಸುದಾರನಾದ ಪ್ರಭುತ್ವವು ಯುದ್ಧಕ್ಕೆ ನೀರೆರೆದು ಪೋಷಿಸುತ್ತಲೇ ಬಂದಿದೆ. ಕನ್ನಡ ಸಾಹಿತ್ಯದ ಮೊದಲ ಉಪಲಬ್ಧ ಅಕ್ಷರ ದಾಖಲೆಯಾದ ಹಲ್ಮಿಡಿ ಶಾಸನ ಪ್ರಭುತ್ವದ ಇಂತಹ ಪೋಷಣೆಯ ದಾಖಲೆಯೇ ಆಗಿದೆ. ಅದು ವೀರನಿಗೆ ವೀರದತ್ತಿ ನೀಡಿದ್ದನ್ನು ವಿವರಿಸುವ ಶಾಸನ. ಯುದ್ಧದ ಕುರಿತ ವಿಚಾರಗಳೇ ಇಲ್ಲಿ ತುಂಬಿದೆ. ವಿಜ ಅರಸನ ಸಾಧನೆ ವರ್ಣಿಸುವ ಜೊತೆಗೆ ಅವನಿಗೆ ಕೊಟ್ಟ ಬಾಳ್ಗಟ್ಟು (ವೀರದತ್ತಿ) ಕುರಿತು ಮಾಹಿತಿ ಕೊಡುತ್ತದೆ. ಮುಂದೆ ಮಹತ್ವದ ಶಾಸನ ಕ್ರಿ. ಶ. 700ರ ಕಪ್ಪೆ ಅರಭಟ್ಟನ ಶಾಸನ. ಇಲ್ಲಿ ಕಪ್ಪೆ ಅರಭಟ್ಟನೆಂಬ ವೀರನ ಸಾಹಸಗಾಥೆಯ ವಿವರಗಳಿವೆ. (ಆದರೆ

ಇದು ಬ್ರಾಹ್ಮಣ ವೀರನನ್ನು ಕುರಿತದ್ದೆಂಬ ಬಗೆಗೆ ಆಕ್ಷೇಪವೂ ಇದೆ). ಆರಂಭದ ಈ ಶಾಸನಗಳಲ್ಲದೆ ಕರ್ನಾಟಕದಲ್ಲಿ ಅದೆಷ್ಟೋ ವೀರಗಲ್ಲುಗಳು, ಮಾಸ್ತಿಗಲ್ಲುಗಳು, ದಾನಶಾಸನಗಳು ಯುದ್ಧ ಸಂಬಂಧಿಯಾಗಿಯೇ ದೊರೆಯುತ್ತವೆ. ವೀರತತ್ವವನ್ನು ಪ್ರತಿಪಾದಿಸುತ್ತವೆ. ಆ ಮೂಲಕ ಸೈನ್ಯ, ಕ್ಷಾತ್ರ ಹಾಗೂ ಯುದ್ಧವನ್ನೇ ಉತ್ತೇಜಿಸಿಕೊಂಡು ಬಂದುದನ್ನೇ ಸಾಕ್ಷಿ ಹೇಳುತ್ತವೆ. ಅಲ್ಲಿ ಬಳಕೆಯಾಗುವ ಪ್ರೇಮಾಲಯಸುತನ್, ಕೀಳ್ಗುಂಟೆ, ವೇಳೆವಾಳಿ, ಲೆಂಕವಾಳಿ, ಗರುಡ ಇತ್ಯಾದಿಗಳೆಲ್ಲವೂ ಪ್ರಭುತ್ವಪರ ಸೈನಿಕ ಮನಸ್ಥಿತಿಯನ್ನು ಸಿದ್ಧಪಡಿಸುವ ಸಾಧನಗಳೇ ಆಗಿವೆ. ಶಾಸನ ಹಾಕಿಸುವ ಹಿಂದೆ ಸ್ಥಾಪಿತ ಮೌಲ್ಯ ಕೀರ್ತನದ ಉದ್ದೇಶವಿದೆ. ವೀರನೊಬ್ಬನ ಮರಣವನ್ನು ವಿಷದೀಕರಿಸುವುದರ ಜೊತೆಗೆ ಅವನ ಸಾವು ಕೇವಲ ಸಾವಲ್ಲ ಅದೊಂದು ತ್ಯಾಗ ಬಲಿದಾನ, ವೀರತನ ಎಂಬ ಅಮೂರ್ತ ಪರಿಭಾಷೆಗಳಲ್ಲಿಟ್ಟು ವಿವರಿಸುತ್ತವೆ. ಸತ್ತವನನ್ನು ಸ್ವರ್ಗವೆಂಬ ಕಲ್ಪಿತದಲ್ಲಿ ನೆಲೆಸಿದ ಧೀಮಂತನಾಗಿ ನೆಲೆಗೊಳಿಸುತ್ತವೆ. ಆದರೆ ಅವೇ ಶಾಸನಗಳಿಗೆ ಅಂದರೆ ಯುದ್ಧವನ್ನು ಪ್ರಭುತ್ವ ಪರವಾಗಿ ನಿರೂಪಿಸುವ ಶಾಸನಗಳಿಗೆ ನಿಗದಿತ ಘಟನೆಯನ್ನು ವೈಭವೀಕರಿಸಿ ಸಮೂಹ ಸಮ್ಮತಿಯನ್ನು ಉತ್ಪಾದಿಸುವುದರ ಆಚೆಗೆ ಯುದ್ಧದ ನಂತರದ ಪರಿಣಾಮಗಳನ್ನು ಚಿತ್ರಿಸುವುದು ಅಮುಖ್ಯವಾಗಿದೆ. ಯುದ್ಧವನ್ನು ಪಾಲ್ಗೊಳ್ಳಬೇಕಾದ ಬದುಕಿನ ಎತ್ತರಗಳಲ್ಲಿ ಒಂದೆಂಬಂತೆ ಕೀರ್ತಿಸುವುದಲ್ಲದೆ ಅದರ ವಿನಾಶದ ಮುಖವನ್ನು ಮುಚ್ಚಿಡುತ್ತವೆ.

ಕನ್ನಡ ಪ್ರಾಚೀನ ಕಾವ್ಯಗಳನ್ನು ಗಮನಿಸಿದರೆ ಪಂಪ ಪೂರ್ವದಲ್ಲಿ ಅನೇಕ ಕವಿಗಳು ಜೀವಿಸಿದ್ದರು. ಅದರಲ್ಲಿ ದುರ್ವಿನೀತ ಭಾರವಿಯ ಕಿರಾತಾರ್ಜುನೀಯಕ್ಕೆ ಟೀಕೆ ಬರೆದನು. ಇದು ಯುದ್ಧ ಸಂಬಂಧಿ ಕಥಾಭಿತ್ತಿಯನ್ನು ಹೊಂದಿದೆ. ಪಂಪಭಾರತಕ್ಕೆ ಪೂರ್ವದಲ್ಲಿ ಮಹಾಭಾರತದ ಕಥೆಯನ್ನು ಆಧಾರವಾಗಿಟ್ಟು ಕೊಂಡು ಕೃತಿ ರಚನೆಯಾಗಿದೆ. ಅವುಗಳ ಉಲ್ಲೇಖ ಮಾತ್ರ ದೊರೆಯುತ್ತವೆ. ಅವು ಉಪಲಬ್ಧವಿಲ್ಲ. ಆ ಕೃತಿಗಳ ಬಿಡಿ ಪದ್ಯಗಳು ದೊರೆತಿದ್ದು ಅವುಗಳು ಯುದ್ಧವನ್ನು ವರ್ಣಿಸುವ ಸಾಲುಗಳೆಂದು ತಿಳಿಯುತ್ತವೆ. ಪಂಪ ಪೂರ್ವದ ಮಹತ್ವದ ಗ್ರಂಥವೆಂದರೆ ಕವಿರಾಜಮಾರ್ಗ. ಇದೊಂದು ಲಕ್ಷಣಗ್ರಂಥ, ಅಲಂಕಾರಶಾಸ್ತ್ರವೆಂದು ಕೆಲವರು ಕರೆದಿದ್ದಾರೆ. ಈ ಕೃತಿಯಲ್ಲಿ ಯುದ್ಧದ ವಿಚಾರ ತೀರಾ ಕಡಿಮೆಯಾಗಿದೆ. ಭಾಷೆಯ ನಿರ್ಮಾಣ ಮಾಡುವುದರ ಮೂಲಕ ನೃಪತುಂಗನ ಕನ್ನಡದ ಆಳ್ವಿಕೆಯನ್ನು ಸುಭದ್ರ ಮಾಡುವುದಾಗಿದೆ. ನೃಪತುಂಗನ ಆಳ್ವಿಕೆಯ ಕಾಲದಲ್ಲಿ ತಕ್ಕಮಟ್ಟಿನ ಶಾಂತಿ ನೆಲೆಸಿತ್ತು ಆದ ಕಾರಣ ಕವಿರಾಜಮಾರ್ಗಕಾರ ಯುದ್ಧದ ಕುರಿತು ಮಾತಾಡಿಲ್ಲ. ಈ ಕಾವ್ಯದ ಪ್ರಧಾನ ಕೇಂದ್ರ ಕಾವ್ಯಶಾಸ್ತ್ರ.

ಪಂಪನ ಕಾಲ ಮತ್ತು ನಂತರದ ಕಾಲದಲ್ಲಿ ಯುದ್ಧಸಂಬಂಧಿ ವಸ್ತುಗಳು ಕಾವ್ಯದಲ್ಲಿ ಸಾಗರೋಪಾದಿಯಲ್ಲಿ ಹರಿದು ಬಂದವು. ಪಂಪನ ಭಾರತದ ಮುಖ್ಯ ಕೇಂದ್ರ ಕುರುಕ್ಷೇತ್ರ ಯುದ್ಧವೇ. ಅಲ್ಲಿ ಕೃಷ್ಣ ಸಂಧಾನ ಫಲಿಸದೇ ಯುದ್ಧವೆಂದು ನಿರ್ಣಯವಾದಾಗ ಕೃಷ್ಣ ಯುದ್ಧದ ಉತ್ಪಾತ ಭವಿಷ್ಯವನ್ನು ಎಚ್ಚರಿಸುತ್ತಾನೆ.

ಸುರಿವ ಸರಲ್ ನರಲ್ವ ಭಟರೆತ್ತಮುರುಳ್ವ ದಟಿಂ ಪೊರಳ್ವ ಸಿಂ
ಧುರ ಘಟೆ ಬರ್ಪ ನೆತ್ತರ ಕಡಲ್ ಕುಣಿವಟ್ಟೆಗಳಾಜಿಯೊಳ್ ಭಯಂ ॥
ಕರತರಮಪ್ಪಿನಂ ಪಗೆವರೊಕ್ಕಲೊಳೋವೆನಲೋರ್ವರಿಲ್ಲದಂ
ತಿರೆ ತವೆ ಕೊಲ್ಲುಗುಮೆಂತರಿಕೇಸರಿಗಾಂತು ಬರ್ದುಂಕಲಕ್ಕುಮೇ ॥
(ಪಂ.ಭಾ. 9–57)

ದುರ್ಯೋಧನನನ್ನು ಉದ್ದೇಶಿಸಿ ಸಮರ ವಿಜಯವು ತಮ್ಮದೇ ಎಂದು ಸಾರುವುದಷ್ಟೇ ಕೃಷ್ಣನ ಮಾತಿನ ತಾತ್ಪರ್ಯವಲ್ಲ. ಯುದ್ಧನಿರತ ಪ್ರತೀ ಗುಂಪೂ ಎದುರಾಳಿ ಗುಂಪಿನಲ್ಲಿ ಒಬ್ಬರೂ ಇಲ್ಲದಂತೆ ನಾಶಮಾಡುವ ಹೆಬ್ಬಯಕೆಯನ್ನೇ ಹೊಂದಿರುವುದರ ಸೂಚನೆಯೂ ಇಲ್ಲಿದೆ. ಬೀಳುವ ಬಾಣಗಳು, ಉರುಳುವ ದಳಗಳು, ಬಿದ್ದು ಹೊರಳಾಡುವ ಆನೆಗಳು, ಪ್ರವಾಹದೋಪಾದಿಯಲ್ಲಿ ಉಕ್ಕಿ ಬರುವ ನೆತ್ತರ ಕಡಲು, ತಲೆಕತ್ತರಿಸಿ ಹೋದ ಅಟ್ಟೆಗಳ ವಿಕಾರ ಕುಣಿತಗಳೆಲ್ಲವೂ ಭಯಂಕರತರವಾಗಿ ಹಗೆಗಳ ಒಕ್ಕಲಿನಲ್ಲಿ (ಮನೆಯಲ್ಲಿ) 'ಓ ಎನಲೂ ಒಬ್ಬರಿಲ್ಲದಂತೆ' ನಾಶವಾಗುತ್ತದೆ ಎಚ್ಚರವಿರಲಿ ಎಂಬಂತೆ ಒಡ್ಡುವ ಈ ಬೆದರಿಕೆ ದುರ್ಯೋಧನನ ಕಡೆಯಿಂದ ಬಂದಿದ್ದರೂ ಇದುವೇ ಮಾತುಗಳಲ್ಲಿ ಇರುತ್ತಿದ್ದವು ಮತ್ತು ಯುದ್ಧದ ಫಲಿತವೂ ಹೀಗೆಯೇ ಇರುತ್ತವೆ.

ಯುದ್ಧವೆಂದರೆ ವ್ಯವಸ್ಥೆ. ಅಲ್ಲಿ ಶಿಸ್ತಿದೆ, ನಾಯಕತ್ವವಿದೆ. ಕೌರವ ಪಾಳಯದಲ್ಲಿ ಅಂತಹ ವೀರಪಟ್ಟ ಕಟ್ಟುವಲ್ಲಿ ಗೊಂದಲವಾಗಿ ಭೀಷ್ಮರ ಪಟ್ಟವನ್ನು ಕರ್ಣ ಪ್ರಶ್ನಿಸುತ್ತಾನೆ. ಯುದ್ಧಕ್ಕೆ ಬೇಕಾದ ಸಾಮರ್ಥ್ಯ ಇರುವುದು ನನ್ನಂತಹ ಜವ್ವನಿಗನಲ್ಲಿ ಎಂಬುದು ಕರ್ಣನ ವಾದ. ಒಂದರ್ಥದಲ್ಲಿ ಅದು ಸರಿಯಾದುದೇ. ಯುದ್ಧಕ್ಕೆ ಯುವಕರೇ ಬೇಕು. (ವ್ಯಸನ ಹಾಗೂ ಮಾರಣಾಂತಿಕ ಗುಹ್ಯ ರೋಗಗಳಂತೆ ಯುದ್ಧವೂ ಯುವಬಲವನ್ನೇ ಮುಕ್ಕುತ್ತದೆ). ಅಂತೆಯೇ 'ಈ ಮುದುಕರನ್ನು ಒಯ್ದು ಪಗೆವಾಡಿಯೊಳಗೆ ನಗಿಸಿಕೊಂಡಲ್ಲಿ ಏನು ಪ್ರಯೋಜನ?' ಎಂದು ಪ್ರಶ್ನಿಸಿ, 'ಪಗೆವರ ನಿಟ್ಟೆಲುವನ್ನು ಮುರಿಯಬೇಕಾದರೆ ತನಗೆ ಪಟ್ಟಕಟ್ಟು' ಎಂದು ಆಗ್ರಹಿಸುತ್ತಾನೆ. ಇದಕ್ಕೆ ಅಲ್ಲೊಂದು ಕುಲ ಘರ್ಷಣೆಯೇ ನಡೆದು ಹೋಗುತ್ತದೆ. ಈ ಕುಲಕಲಹದ ಕಾವಿನ ಉರಿಯ ನಡುವೆಯೇ, ಭೀಷ್ಮ ತನ್ನ ಪರಾಕ್ರಮದ ಭಾಗವಾಗಿ ತಾನು ಆಯುಧ

ಹಿಡಿಯದವನ ಕೈಯಲ್ಲಿ ಭಯಂಕರತರವಾಗಿ ಆಯುಧ ಹಿಡಿಸುವುದಲ್ಲದೆ, "ನಿಚ್ಚಂ ಧರಾಧೀಶರಂ ಪಡಲಿಟ್ಟಂತಿರೆ ಮಾಟ್ಪೆನೋವದೆ ಪಯಿಂಛಾಸಿರ್ವರಂ ಯುದ್ಧದೊಳ್" ಎಂದು ಘೋಷಿಸುತ್ತಾನೆ. ಇಲ್ಲಿನ ಕರ್ಣನ ಅಣಕ, ದ್ರೋಣನ ಜಾತಿವೈರದ ಮಾತು, ಕರ್ಣನ ಪ್ರತಿಮಾತು ಮತ್ತು ಶಸ್ತ್ರತ್ಯಾಗದ ಘೋಷಣೆ ಹಾಗೂ ಭೀಷ್ಮರ ಸಲಹೆ ಮತ್ತು ಪ್ರತಿಜ್ಞಾ ಘೋಷಣೆ ಎಲ್ಲದರಲ್ಲೂ ಕೊಲ್ಲುವ, ಸಾಯುವ, ಮುರಿಯುವ ಮಾತೇ ಇದೆ. ಗರಿಷ್ಠ ನಾಶವೇ ಯುದ್ಧ ಸಾಮರ್ಥ್ಯದ ಒರೆಗಲ್ಲಾಗಿದೆ.

ಪಂಪ ಸೇನೆ ಎನ್ನುವ ರಚನೆಯೊಂದರ ಬಾಹ್ಯವರ್ತನೆ, ಸೇನೆಯ ಬಿಡಿ ಆಯುಧದಂತಿರುವ ಸೈನಿಕರ ಪಿಸುಮಾತಿನ ಅಂತರಂಗದಲ್ಲಿರುವ ಸಾವಿನ ನೆರಳುಗಳನ್ನು ಒಟ್ಟೊಟ್ಟಿಗೆ ಹಿಡಿದುಕೊಡುತ್ತಾನೆ. ಎಲ್ಲ ಕಾಲದ ಸೈನ್ಯ ಅಥವಾ ಸೈನ್ಯದೊಳಗಿರುವ ಮನುಷ್ಯರೆಂಬ ಆಯುಧಗಳ ಬಯಲು ಮತ್ತು ಅಂತರಂಗಗಳೆರಡನ್ನೂ ಬೆಳಕಿಗೆ ಹಿಡಿಯುತ್ತಾನೆ. ಕರ್ನಾಟಕದಲ್ಲಿ ಸಿಗುವ ಅಸಂಖ್ಯ ವೀರಗಲ್ಲುಗಳು, ವೀರದತ್ತಿಗಳು, ಸತಿಹೋದ ಕುರುಹಾದ ಮಾಸ್ತಿಗಲ್ಲುಗಳೆಂಬ ಅರಸು ಚರಿತ್ರೆಯ ಅಂಕಣಗಳು ಏನನ್ನು ಹೇಳುತ್ತವೆಯೋ ಅವೇ ಮಾತುಗಳು ಪಂಪನ ಈ ಸೇನಾಶಿಬಿರದ ಬಹಿರಂಗದ ಮಾತುಗಳಾಗಿಯೇ ಬಂದಿವೆ. 'ಜಿತೇನಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ ಕ್ಷಣವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇ ರಣೇ?' ಎಂಬ ಪ್ರಶ್ನೆ ಮತ್ತು ಅನುಮೋದನೆಗಳು ಇಲ್ಲಿಯೂ ಇವೆ. 'ಜೋಳದಪಾಟಿಯಂ ನೆರಪಿದವಂ ಗಂಡಂ ಪೆಱಂ ಗಂಡನೇ?' ಎಂಬ ಪ್ರಶ್ನಾರೂಪದ ಪ್ರಭುತ್ವ ಪರವಾದ ಸಮ್ಮತಿಗಳೂ ಸಿಗುತ್ತವೆ. ಆಳ್ದನ ಕರುಣೆ, ದಯೆಗಿಂತ ತಾನು ಯುದ್ಧದಲ್ಲಿ ತೋರುವ ಸಾಹಸವೇನೂ ಹಿರಿದಲ್ಲ ಎಂಬ ಅರ್ಪಣಾ ಭಾವವೂ, ಸ್ವಾಮಿಭಕ್ತಿ ಅರಸನ ದಯೆಗಳಲ್ಲಿ ಯಾವುದು ಹೆಚ್ಚೆಂಬುದನ್ನು 'ದಂತಿದಂತದ ತೊಲೆಯಲ್ಲಿ' ತೂಗಿನೋಡುವ ಉರುಬಿನ ಮಾತುಗಳೂ ಬರುತ್ತವೆ.

ಹೀಗೆ ಇಲ್ಲಿ ಬರುವ ಎಲ್ಲ ಮಾತುಗಳು ಬಾಳುವುದಕ್ಕಿಂತ ಆಳುವವನಿಗಾಗಿ ಸಾಯುವ ಹುರುಪು ತೋರುತ್ತವೆ. ಅನ್ನದ ಋಣ ಅಥವಾ ಜೋಳದ ಪಾಟಿಗೆ ಬದ್ಧರಾಗುವ ಉತ್ಪಾದಿತ ಸಮ್ಮತಿಗೆ ಮತ್ತಷ್ಟು ನೆಲೆಯೊದಗಿಸುತ್ತವೆ. ಅರಸನ ಎದುರಿಗೆ ನುಡಿದ ಮಾತುಗಳನ್ನು ಸೈನಿಕರು ಡೇರೆಗಳ ಒಳಹೊಕ್ಕು ತಮ್ಮದೇ ಸಂಸಾರಗಳೆದುರು ಬೇರೊಂದು ರೀತಿಯಲ್ಲಿ ಆಡುತ್ತಾರೆ. ಅಲ್ಲಿ ಬಾಹ್ಯದ ಹುಂಬತನಕ್ಕಿಂತ ಜವಾಬ್ದಾರಿಯುತವಾದ, ಸಾವಿನಸತ್ಯದ ಅಸಹಾಯಕತೆಯನ್ನೇ ಬೇರೊಂದು ಬಗೆಯಲ್ಲಿ ಎದುರಿಡುವ ಗಂಡಂದಿರು ಮತ್ತು ಆ ಅಸಹಾಯಕತೆಗೆ ಉತ್ತರವಾಗಿ ಮತ್ತದೇ ಸತ್ಯವನು ಉಸಿರಾಡುವ ಹೆಂಡಂದಿರುಗಳು ಸೇನೆಯ ಒಳಮಾತುಗಳಾಗಿ

ದಾಖಲಾಗುತ್ತಾರೆ. ಒಡೆಯನೆದುರು ಅಬ್ಬರದ ಮಾತಾಡಿ ಡೇರೆಯ ಒಳಬಂದ ಸೈನಿಕನೊಬ್ಬ ತನ್ನ ಕೈಹಿಡಿದವಳನ್ನು ಉದ್ದೇಶಿಸಿ, 'ಈ ಪೊೞ್ತೆ ಪೊೞ್ತು ನಾಳೆ ದೇವಲೋಕದ ಕನ್ಯಕೆಯರ ಓಲಗದೊಳಿರ್ಪೆನ್' ಎನ್ನಲು ಆಕೆ 'ನೀನೆಂದಂತು ಪೋಗಲ್ ತೀರದು ನಾಳೆ ಮಗುೞ್ದು ಬಂದು ಎನ್ನೊಳ್ ನೆರೆವೆ' ಎನ್ನುತ್ತಾಳೆ. ಅದಕ್ಕಾತ 'ನಿನಗಱಿವುಂಟೆ?' ಎಂದು ಯುದ್ಧಸತ್ಯವನ್ನು ಸೂಚ್ಯವಾಗಿ ನೆನಪಿಸುತ್ತಾನೆ. ಅದಕ್ಕಾಕೆ 'ಎನ್ನೋಲೆವಾಗ್ಯಮುಂಟು' ಎಂದು ಉತ್ತರಿಸುತ್ತಾಳೆ. ಈ ಪ್ರಸ್ತಾಪ, ಪ್ರತಿಕ್ರಿಯೆ, ಪ್ರಶ್ನೆ, ಉತ್ತರಗಳಲ್ಲಿ ಎಲ್ಲ ಕಾಲದ ಸೈನಿಕ ದಾಂಪತ್ಯದ ಒಳಜಗುಲಿಯ ಮಾತುಗಳೇ ಇವೆ. ಪ್ರಾಯಶಃ ಇದು ಇಂದು ಸೈನಿಕ ದಂಪತಿಗಳ ಒಳಜಗುಲಿಯ ಮಾತಾಗಿರುತ್ತದೆ. ಈ ಪಿಸುಮಾತಿನ ಅಂತರಂಗದ ಉಲಿ ಬಾಹ್ಯದ ಕೂಗಿಗಿಂತ ಮುಖ್ಯವಾದುದು. ಏಕೆಂದರೆ ಇದು ಹೆಣ್ಣು ಗಂಡುಗಳ ಮುಖಾಮುಖಿಯಲ್ಲಿ ಬರುವ ಮಾತುಗಳೂ ಆಗಿವೆ. ಇದನ್ನು ಗಮನಿಸದೆ ಪಂಪಕಾವ್ಯವನ್ನು ವೀರದ ಉನ್ಮಾದದಲ್ಲಿ ಯುದ್ಧಕಾವ್ಯವೆಂದು ನಿರ್ಧರಿಸುವುದು ತರವಲ್ಲ. ಇನ್ನೊಂದು ಯುದ್ಧದ ಭಯಾನಕ ಚಿತ್ರಣವನ್ನು ಹೀಗೆ ನೀಡುತ್ತಾನೆ.

"ಒಡನೆ ನಭಂಬರಂ ಸಿಡಿಲ್ವ ಪಂದಲೆ ಸೂಸುವ ಕಂಡದಿಂಡೆಗಳ್.... ರಂಗಭೂಮಿಯೊಳ್"(ಪಂ.ಭಾ.11–58)

ಹೀಗೆ ಆಗಸದೆತ್ತರಕ್ಕೆ ಸಿಡಿಯುವ ಹರಿದ ತಲೆ, ಸೂಸುವ ಮಾಂಸದ ತುಂಡುಗಳು, ಮಡುಗಟ್ಟಿದ ನೆತ್ತರಕಡಲು ಮತ್ತದರೊಳಗೆ ಸಾಂದ್ರಗೊಂಡ ನೆಣದ ಕೆಸರು ಹಾಗೂ ಎಲ್ಲೆಲ್ಲೂ ಹೊಳೆಯುತ್ತಿರುವ ತುಂಡಾದ ಕತ್ತಿಗಳ ಚೂರುಗಳು ಹೊಸ ಗಾಯಗಳಿಂದ ಹೊಮ್ಮುವ ನಿಟ್ಟುಸಿರ ಸುಯ್ಲುಗಳಿಂದ ಆ ಆಹವರಂಗವೆಂಬುದು ಭಯಾನಕ ಆಹವ ರಂಗವಾಯಿತು. ಈ ವರ್ಣನೆ ಪಂಪ ನಿರ್ದಿಷ್ಟವಾದ ಯಾವುದೋ ಒಂದು ಯುದ್ಧವನ್ನು ವಿವರಿಸುತ್ತಾ ಹೇಳಿದ್ದರೂ ಇದು ಇಡಿಯಾಗಿ ಆ ಯುದ್ಧಗಳೆಲ್ಲಕ್ಕೂ ಅನ್ವಯವಾಗುವ ಮಾತು. ಮುರಿಯುವ, ಹರಿಯುವ, ಉಡಿಯುವ, ಸುಲಿಯುವ ಮಾತಲ್ಲದೆ ಕಟ್ಟುವ, ಕೂಡುವ ಮಾತಾಗದ ಯುದ್ಧವದು ನಿಟ್ಟುಸಿರ ಸುಯ್ಲನ್ನಲ್ಲದೆ ತಂಗಾಳಿಯನ್ನು ತಂದೀತೆ? ಇಂತಹ ಚಿತ್ರಗಳನ್ನೇ ಹುಡುಕಿಕೊಂಡು ಹೋದರೆ ಪಂಪ ಆಯುಧದ ಯುದ್ಧವನ್ನು ಹೇಗೆ ಮಾಲೆಗಟ್ಟಿದ್ದಾನೆ ಎಂಬುದು ಅರ್ಥವಾಗುತ್ತದೆ.

ಇಷ್ಟು ಮಾತ್ರವಲ್ಲದೇ ಪ್ರಭುತ್ವಗಳು ಯುದ್ಧವೀರರನ್ನು ಹೇಗೆ ವಿಜೃಂಬಿಸುತ್ತದೆ ಎನ್ನುವುದಕ್ಕೆ ಪಂಪನಲ್ಲಿ ಹಲವಾರು ಮಾದರಿಗಳಿವೆ. ಅಭಿಮನ್ಯು ಸತ್ತಾಗ ಹೇಳುವ ಮಾತು ಹೀಗಿದೆ.

ಅನಿತಣ್ಮೆ ಸತ್ತ ನರನಂ

ದನಂ ಕಣ್ ಸೋಲ್ತು ಬಗೆಯದಮರೇಂದ್ರನನಿ ।
ನ್ಮೆನಗೆ ತನಗೆಂಬ ದೇವಾಂ
ಗನೆಯರ ಕಳಕಳಮೆ ಪಿರಿದುಮಾಯ್ತುಂಬರದೊಳ್॥(ವಿ.ವಿ. 11–105)

ಅಂದರೆ ಇಂದ್ರನನ್ನೂ ನಿರ್ಲಕ್ಷಿಸಿ ಸತ್ತ ಅಭಿಮನ್ಯುವಿನ ಶವಕ್ಕಾಗಿ ಕಚ್ಚಾಡಿದರಂತೆ! ಯುದ್ಧದಲ್ಲಿ ಸತ್ತರೆ ವೀರಸ್ವರ್ಗ, ಸ್ವರ್ಗದ ಅಪ್ಸರೆಯರು ಸಿಗುತ್ತಾರೆ ಎಂಬ ಶಾಸನದ ಮಾತುಗಳನ್ನೇ ಪಂಪ ಇಲ್ಲಿ ಅಭಿಮನ್ಯುವಿನ ಸಾವಿನೊಂದಿಗೆ ಹೆಣೆದಿದ್ದಾನೆ. ಇದನ್ನು ಬಿಟ್ಟರೆ ವೃಷಷೇಣನ ಸಂದರ್ಭದಲ್ಲಿ ಮಾತ್ರ ಸುರಾಂಗನೆಯರು ಬರುತ್ತಾರೆ. ಈ ಇಬ್ಬರು ತರುಣರಿಗೆ ಅಮರಾಂಗನೆಯರ ಈ ಬೇಡಿಕೆ ತೋರಿದ ಪಂಪ ಕರ್ಣನು ಸತ್ತಾಗ ಪ್ರೌಢಾವಸ್ಥೆಗೆ ತಕ್ಕುದಾದ ಇನ್ನೊಂದು ಬಗೆಯ ಚಿತ್ರ ಕೊಡುತ್ತಾನೆ. ಇಲ್ಲಿ ದೇವ ಕನ್ನಿಕೆಯರ ಪ್ರಸ್ತಾಪವಿಲ್ಲ. ಅರ್ಜುನನ ಬಾಣದಿಂದ ಮಡಿಯುತ್ತಲೇ ಕರ್ಣನ ಒಡಲಿಂದ ಕುಡಿಮಿಂಚಿನ ಸಿಡಿಲುರುಳಿಯೊಂದು ನೋಡ ನೋಡುತ್ತಿದ್ದಂತೆಯೇ ಸೂರ್ಯನ ಜೊತೆಗೆ ಸೇರಿತಂತೆ!

ಕುಡುಮಿಂಚಿನ ಸಿಡಿಲುರುಳಿಯೊ
ಳೊಡಂಬಡಂ ಪಡೆಯೆ ಕರ್ಣನೊಡಲಿಂದಾಗಳ್ ।
ನಡೆ ನೋಡೆ ನೋಡೆ ದಿನಪನೊ
ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ॥(ವಿ.ವಿ. 12–215)

ಕರ್ಣ ತನ್ನ ತಂದೆಯಲ್ಲಿಗೆ ಹೋದನೆಂದು ವಾಚ್ಯಾರ್ಥಗೊಳಿಸದೇ ವೀರ ಸ್ವರ್ಗಕ್ಕೆ ಎರಿದವರು ಸೂರ್ಯಮಂಡಲದ ಮಾರ್ಗವಾಗಿ ಹೋಗುತ್ತಾರೆಂಬ ಪ್ರಭುತ್ವ ಪ್ರಣೀತವಾದ ವೀರಸ್ವರ್ಗದ ಕಲ್ಪನೆಯನ್ನೇ ತರುತ್ತಾನೆ. ಕರ್ಣನ ಸಾವಿನ ಈ ಚಿತ್ರಣದ ಔಚಿತ್ಯದ ಕುರಿತು ಚರ್ಚಿಸುತ್ತಾ ವಿದ್ವಾಂಸರೊಬ್ಬರು, "ಕರ್ಣ ಮೂಲತಃ ಜೋಳವಾಳಿಯಾಗಿರುವುದರಿಂದ ಆ ಕಾಲದ ಜೋಳವಾಳಿಗಳಿಗೆ ಆದರ್ಶವಾಗುವಂತೆ ಕರ್ಣನ ಔನ್ನತ್ಯ ಇನ್ನೂ ಎದ್ದು ಕಾಣುವಂತೆ ಈ ಸನ್ನಿವೇಶವನ್ನು ಕಂಡರಿಸಲಾಗಿದೆ." ಎನ್ನುತ್ತಾರೆ. (ಪ್ರೊ.ಎಂ.ಎಂ. ಕಲ್ಬುರ್ಗಿ,2006, ಪುಟ.201) ಆ ಕಾಲದ ರಾಜರುಗಳು ಹಾಕಿದ ಶಾಸನಗಳು, ವೀರಗಲ್ಲುಗಳು ಹೇಳುವ ವೀರರ ಮರಣದ ಚಿತ್ರಣಗಳಲ್ಲಿ ಈ ಅಂಶ ಕಾಣುತ್ತದೆಯಾದ್ದರಿಂದ ಮುಖ್ಯವಾಗಿ ವಿದ್ವಾಂಸರುಗಳು ಪಂಪನ ಈ ಚಿತ್ರಣವನ್ನು ಅತ್ಯಂತ ಸಹಜವಾದ ಕಾಲಮೌಲ್ಯದ ನೆಲೆಯಲ್ಲಿ, ವೀರಮೌಲ್ಯದ ನೆಲೆಯಲ್ಲಿ ಸ್ವೀಕರಿಸುತ್ತಾರೆ. ಆದರೆ ಕಾವ್ಯ ಯುದ್ಧದ ಭಯಾನಕ ವಾಸ್ತವವನ್ನೂ, ಸಾವಿನ ನಂತರದ ಲೋಕದಲ್ಲಿ ಏನಾಯಿತು ಎಂಬ ಅಮೂರ್ತ ವಿವರಗಳೆರಡನ್ನೂ ಒಟ್ಟೊಟ್ಟಿಗೆ ತರುತ್ತಿದೆ. ಹಾಗೆಯೇ ಯುದ್ಧದ ಹೊತ್ತಲ್ಲೇ ಶರತ್ಕಾಲದ ವನವಿಹಾರ ಹಾಗೂ ಬೆಳದಿಂಗಳ

ಕೌಮುದಿ ಮಹೋತ್ಸವದ ಸಂಭ್ರಮವುಳ್ಳ ಕಾವ್ಯ ಹಾಗೂ ಹೆಣ, ರಣ, ನೆತ್ತರು ನೆಣದ ಕೆಸರುಳ್ಳ ಕಾಳಗದ ಕತೆಯ ಕಾವ್ಯಗಳೆರಡನ್ನೂ ಅಕ್ಕಪಕ್ಕದಲ್ಲಿಡುತ್ತದೆ.

ಪಂಪ ತನ್ನ ಯುದ್ಧವಿರೋಧಿ ನಿಲುವನ್ನು ಅತ್ಯಂತ ಗಟ್ಟಿಯಾಗಿ ತರ್ಕಬದ್ಧವಾಗಿಯೇ ಕಾವ್ಯದುದ್ದಕ್ಕೂ ಕಟ್ಟಿಕೊಂಡು ಬಂದುದಕ್ಕೆ ಒಂದು ಅಂತಿಮ ಸ್ಪರ್ಷ ಕೊಡುವಂತೆ ಕಡೆದ ಆತನ ಹದಿನಾಲ್ಕನೆಯ ಆಶ್ವಾಸ ಯುದ್ಧ ನಿಂತ ಮೇಲಿನ ಅವಲೋಕನದ ಆಶ್ವಾಸದಂತಿದೆ. ಯುದ್ಧ ಹೇಗೆ ನಿಸರ್ಗ ದುರಂತಕ್ಕೆ ಸಮವಾದ ಮಾನವ ದುರಂತ ಎಂಬುದನ್ನು ವಿವರಿಸಿಕೊಳ್ಳಲು ಒತ್ತಾಯಿಸುತ್ತದೆ. ಈ ಆಶ್ವಾಸದ ಆರಂಭಕ್ಕೆ ಇರಿದು ಗೆದ್ದ ಕೊಳುಗುಳವನ್ನು ನೋಡಲೆಂದು ಬಂದ ಧರ್ಮರಾಯನಿಗೆ ಭಣಗುಟ್ಟುತ್ತಿರುವ 'ರಕ್ತಜಳಾಸವ ಮತ್ತ ಯೋಗಿನೀ ವ್ರಾತ ಪರೀತ ಭೂತ ಸದನ'ವಾದ 'ನರಾಧಿಪ ರಕ್ತಧುನೀ ಪ್ರವಾಹ ಪಿಂಜರಿತ' ಕದನ ಕಣವನ್ನು ತೋರುತ್ತದೆ. ಅದನ್ನು ನೋಡಿ ಒಳಗೇ ನೊಂದ ಧರ್ಮರಾಯನಿಗೆ ಕೃಷ್ಣ ಮತ್ತೊಮ್ಮೆ ಅದನ್ನು ಪರಾಕ್ರಮದ ಪರಿಭಾಷೆಯಲ್ಲಿಯೇ ವಿವರಿಸಿ ಅದೆಲ್ಲವನ್ನೂ ಜಯದ ಗುರುತಾಗಿಸಿ ವಿವರಿಸುತ್ತಾನೆ. ಆದರೆ ಅಷ್ಟು ಹೊತ್ತಿಗೆ ಯಾವುದನ್ನು ಜಯವೆನ್ನಲಾಗಿತ್ತೋ ಆ ವಿಜಯಭೂಮಿಯಲ್ಲಿ ಬರುತ್ತಿರುವ ಗಾಂಧಾರಿ, ಧೃತರಾಷ್ಟ್ರ ಜೊತೆಯಲ್ಲಿ ದುರ್ಯೋಧನ, ದುಶ್ಶಾಸನಾದಿಗಳ ಹೆಂಡಂದಿರೂ ಸೇರಿದಂತೆ ಅತಿರಥ ಮಹಾರಥರ ಹೆಂಡಂದಿರುಗಳು ತಮ್ಮವರ ಕಳೇಬರವನ್ನು ಅರಸಿ ಕಾಣಲಾರದೆ ಬಾಯಳಿಯುತ್ತಾ ಬರುತ್ತಾರೆ. ಸ್ವರ್ಗವನ್ನು ಕಾಣುತ್ತೇವೆ ಎಂದವರು ಸ್ವರ್ಗ ಕಂಡರೋ ಇಲ್ಲವೋ ಕಾಣೆ. ಆದರೆ ಅವರನ್ನು ಕಟ್ಟಿಕೊಂಡವರು ಅವರ ಹೆಣಕಾಣದೆ ಪರಿತಪಿಸುತ್ತಾ ಬರುತ್ತಿರುವ ಪಾಡಾದರೋ ಪಂಪನ ಲೇಖನಿಯಲ್ಲಿ ಹೀಗೆ ಬಯಲಾಗಿದೆ. ಯುದ್ಧದ ಎಲ್ಲಾ ನಷ್ಟ–ನೋವನ್ನು ಎದುರಿಸುವುದು ಹೆಂಗಳೆಯರು ಎಂಬುದು ಇಲ್ಲಿನ ತಾತ್ಪರ್ಯ.

ಆದರೆ ಅದಕ್ಕೆ ಪೂರ್ವದಲ್ಲಿ ಬಂದ ಆದಿಪುರಾಣದಲ್ಲೂ ಯುದ್ಧವಿದೆ. ಆದರೆ ಆ ಯುದ್ಧದ ಮಾದರಿಯೇ ಬೇರೆ ತೆರನಾದುದು. ಯುದ್ಧವಿದ್ದರೂ ಅಲ್ಲಿ ಮಾನವ ಪರವಾದ ಚಿಂತನೆಗಳು ಹೆಪ್ಪುಗಟ್ಟಿದೆ. ಆದಿಪುರಾಣದಲ್ಲಿ ವಿಜಯಕ್ಕಾಗಿ ನಡೆಸುವ ದಿಗ್ವಿಯಜವೆಂಬ ಯುದ್ಧದ ನಡೆ ಜೈತ್ರಯಾತ್ರೆಯಾಗದೆ ಚೈತ್ರಯಾತ್ರೆಯಾಗುತ್ತದೆ. ಶರದ್‌ಕಾಲದ ಬಾನು, ಬೆಳದಿಂಗಳಲ್ಲಿ ತೊಯ್ದಿಕೊಂಡ ಪ್ರಮದೆಯರ ಉಲ್ಲಾಸವೇ ಅಲ್ಲಿ ಉಕ್ಕಿ ಮೆರೆಯುತ್ತದೆ. ಅರಳಿದ ನಿಸರ್ಗದ ಒಳಹೊಕ್ಕು ಸೊಕ್ಕಿ ನಲಿಯುವ ಹಾಗೂ ಮಾವಿನ ಚಿಗುರು ಕಿತ್ತು ಸಂಭ್ರಮಿಸುತ್ತಲೇ ಸೋನೆ ಸುರಿಸುವ ಸಹಕಾರವೃಕ್ಷದ ಕ್ಷಮೆಕೋರುವ ರಾಣಿಯರಿದ್ದಾರೆ. ಒಳಗಣ್ಣು ತೆರದು ಹಿಂಸೆಯ ಅರಿವಲ್ಲಿ ಚೂತರಾಜನಲ್ಲಿ ಕ್ಷಮೆಯನ್ನು ಕೇಳುವ ಆ ಪ್ರಸಂಗ ಹೀಗೆ ಸುಂದರವಾಗಿ

ನಿರೂಪಿತವಾಗಿದೆ.

ನೆನೆಗಳ ಗೊಂಚಲಂ ತಳಿರ ತೊಂಗಲನಾಡುವ ಬೆಳ್ವಳಪ್ಪ ಕೊಂ
ಬಿನ ಮಿಡಿಯಂ ತೆರಳ್ಚಿ ತೆಗೆದೋವದೆ ಕಾಯದೆ ಕೂರಕಮ್ಮದಿಂ ।
ಸೊನೆ ಸುರಿವನ್ನೆಗಂ ಪಱಿದು ನೋಯಿಸಿ ಕಾಡಿದೆಮಿನ್ನದೊಂದುಮಂ
ನೆನೆಯದೆ ನೀನುಮಾಮುಮೊಡನಿರ್ದಿರವಂ ನೆನೆ ಬಾಳಚೂತಮೇ ॥
(ಆ.ಪು. 11–126)

ನಮ್ಮ ಈ ಕರ್ಮವನ್ನು ಮನ್ನಿಸು, ಪುಷ್ಪಗಳನ್ನು ಹರಿದೆವು, ಚಿಗುರುಗಳನ್ನು ಕಿತ್ತೆವೆಂದು ಪ್ರದಕ್ಷಿಣೆ ಹಾಕಿ ಬೇಡಿಕೊಳ್ಳುವ ಸಂದರ್ಭ ಹಾಗೂ ಒಡನಿದ್ದುದನ್ನು ನೆನಪಿಸುವ ಬಗೆ ಗಮನಿಸಿದರೆ ಜೈನಧರ್ಮದ ಅಹಿಂಸೆ ಮತ್ತು ಸಹನೆಯ ತತ್ವಗಳು ಇಲ್ಲಿ ಮುಖ್ಯವಾಗಿ ಬಳಕೆಗೊಂಡಿದೆ. ಮುಂದುವರೆದು ಶರದ್ ಹುಣ್ಣಿಮೆಯ ಬೆಳ್ದಿಂಗಳ ರಾತ್ರಿಯಲ್ಲಿ ಮತ್ತೇರಿಸಿಕೊಂಡು ಮೈಮರೆತು ಸಂತೋಷದಿಂದ ಕುಣಿದು ಕುಪ್ಪಳಿಸುವ ಪ್ರಮದೆಯರ ಪ್ರೇಮ ಕಾಮದ ಕೌಮುದಿಮಹೋತ್ಸವ ಇದೆ.

ಮೃಗಮದದಕಣ್ಪು ಜಾದಿಯ ಬಟಿಲ್ಮುಡಿ ನೆಯ್ದಿಲ ಕರ್ಣಪೂರಮು
ತ್ತಗಲದೆ ಕಟ್ಟಿದೈಸರಮದೊಂದು ಬೆಡಂಗಿನ ಸೇತುಮಾಲೆ ಪ ।
ಟ್ಟೆಗೆ ಕಟಿಸೂತ್ರಮೆಂಬಿವು ಮನಂಗೊಳೆ ಮನ್ಮಥಚಕ್ರವರ್ತಿಗೀ
ಕೆಗಳೆ ವಿನೋದದಾಕೆಗಳೆನಲ್ ನೆಱೆದತ್ತು ವಿಳಾಸಿನೀಜನಂ ॥
(ಆ. ಪು. 12–12)

ಕಸ್ತೂರಿಯ ಲೇಪನವೂ, ಜಾಜಿ ಪುಷ್ಪದ ಮಾಲೆಯನ್ನು ಮುಡಿದ ಮುಡಿಯೂ, ನೆಯ್ದಿಲೆಯ ಕರ್ಣಪೂರವೂ ಉಟ್ಟಬಟ್ಟೆಯಗಲಕ್ಕೂ ಕಟ್ಟಿದ ಐದಳೆಯ ಸರವೂ, ಬೆಡಗಿನ ಶುಭ್ರಮಾಲೆಯೂ, ರೇಷ್ಮೆ ವಸ್ತ್ರವೂ, ಕಟಿಸೂತ್ರವೂ ಮನಸ್ಸನ್ನು ಸೆರೆಹಿಡಿದವು. ಮನ್ಮಥ ಚಕ್ರವರ್ತಿಗೆ ಇವರೇ ವಿನೋದವನ್ನುಂಟುಮಾಡುವ ಸ್ತ್ರೀಯರೆನ್ನುವಂತೆ ವಿಲಾಸಿನಿ ಜನವು ನೆರೆದಿತ್ತು. ಹೀಗೆ ಕೌಮುದಿ ಮಹೋತ್ಸವಕ್ಕಾಗಿ ನೆರೆದ ನಾರಿಯರ ಸೌಂದರ್ಯಾತಿಶಯವನ್ನು ವರ್ಣಿಸಿದ್ದಾನೆ ಪಂಪ. ಆ ಬೆಳದಿಂಗಳ ಬೆಳಕಿನಲ್ಲಿ ತಮಗೇ ಬೇಕಾದುದನ್ನು ಕುಡಿದು, ಬೇಕಾದಂತೆ ಕುಣಿದು ಕುಪ್ಪಳಿ, ಒಲಿದ ನಲ್ಲನ ಜೊತೆಗೆ ಕೂಡಿ ಅವನ ಮನಗೆಲ್ಲುವ ಬೇಟಕಾರ್ತಿಯರ ಬಗೆಬಗೆಯ ಕಸರತ್ತುಗಳಿಂದ ಆ ಇಡಿಯ ಉತ್ಸವ ಕಳೆಗಟ್ಟುತ್ತದೆ.

ಆದಿಪುರಾಣದಲ್ಲಿನ ಯುದ್ಧದ ಚಿತ್ರಣವನ್ನು ಗಮನಿಸಬೇಕು ಅದು ಆಯುಧ ಸೋಲಿನ ಕತೆಯಾಗಿದೆ. ಅಲ್ಲಿ ಭರತ ಬಾಹುಬಲಿಯರ ಸೈನ್ಯ ಎದುರು ಬದುರಾಗಿ ನಿಂತವು. ಆಗ ಎರಡೂ ಬಣದ ಮಂತ್ರಿಗಳು ಲೋಕಪರವಾದ ಮಂತ್ರಾಲೋಚನೆ

ನಡೆಸಿ ಹೇಳುವ ಮಾತು ಇಡಿಯ ಮಾನವ ಕುಲಕ್ಕೆ ಮೌಲಿಕವಾದದ್ದು 'ಯುದ್ಧಮೆಂಬುದತಿ ಕ್ರೂರ ಗ್ರಹಯುದ್ಧದಂತೆ ಸಕಳ ಪ್ರಜಾ ವಿನಾಶಕರಮಲ್ಲದೆ ಪೆಱತಲ್ತು'. ಯುದ್ಧವೆಂಬುದು ವಿನಾಶಕ್ಕೆ ಕಾರಣವಾದದ್ದು, ಪ್ರಜಾ ಸಮೂಹವನ್ನೆ ನಾಶಮಾಡುವಂಥದ್ದು. ಅಷ್ಟಕ್ಕೂ ಇವರಿಬ್ಬರು ಚರಮ ದೇಹಧಾರಿಗಳು ಇವರ ಯುದ್ಧ ಕ್ರೂರವಾಗಿರುತ್ತದೆ. ಇವರಿಬ್ಬರ ಸೋಲು ಗೆಲುವನ್ನು ಚದುರಂಗ ಬಲದ ಮೂಲಕ ಮಾಡುವ ಯುದ್ಧದಿಂದ ನಿರ್ಣಯಿಸಿದರೆ. ಅದರಿಂದ ಸಮಸ್ತ ಜನಸಂಹರಣ ನಡೆಯುತ್ತದೆ. ಇಂತಹ ಯುದ್ಧಬೇಕೆ ನಮಗೆಯೆಂದು ಎರಡು ಕಡೆಯ ಮಂತ್ರಿಗಳು ಜಲ, ದೃಷ್ಟಿ, ಮಲ್ಲಯುದ್ಧ ಎಂಬ ಮೃದುಲ ಯುದ್ಧವನ್ನು ಸೂಚಿಸುತಾರೆ. ಇಲ್ಲಿ ಆಯುಧ ಆರಂಭದಲ್ಲೇ ನಿರಾಕೃತವಾಗುತ್ತದೆ. "ಆಯುಧದ ಸೋಲು ಇಡಿ ಪ್ರಪಂಚದ ಸೌಖ್ಯದ ಸಂಕೇತವಾಗುತ್ತದೆ." ಬಾಹುಬಲಿ ಎಲ್ಲಾ ಮೂರು ಯುದ್ಧದಲ್ಲಿ ಜಯಿಸುತ್ತಾನೆ. ಶಾರೀರಿಕವಾಗಿ ಅವನು ಶಕ್ತನಾಗಿದ್ದ. ಮಲ್ಲಯುದ್ಧದ ಕೊನೆಯಲ್ಲಿ ಭರತನನ್ನು ಎತ್ತಿಹಿಡಿದ ಬಾಹುಬಲಿ ಇನ್ನೇನೂ ಭೂಮಿಗೆ ಅಪ್ಪಳಿಸ ಕೆಡಹಬೇಕೆನ್ನುವಾಗ ಅಣ್ಣನೆಂಬ ವಿವೇಕಹುಟ್ಟಿ ಕೆಳಗಿಳಿಸುತ್ತಾನೆ. ಆದರೆ ಭರತ ಸುಮ್ಮನಿರದೆ ಚಕ್ರರತ್ನವನ್ನು ಬಾಹುಬಲಿಯ ಮೇಲೆ ಪ್ರಯೋಗಿಸುತ್ತಾನೆ. ಆದರೆ ಚಕ್ರರತ್ನ ಸೋತು ಬಾಹುಬಲಿಗೆ ಪ್ರದಕ್ಷಿಣೆ ಹಾಕಿ ಬಲ ಬುಜದ ಪಕ್ಕದಲ್ಲಿ ನಿಂತು ಬಿಡುತ್ತದೆ. ಈ ಪ್ರಸಂಗವನ್ನು ಪಂಪ ಉದ್ದೇಶಪೂರ್ವಕವಾಗಿ ಬಳಸಿದ್ದಾನೆ. ಯುದ್ಧವನ್ನು ವಿರೋಧಿಸುವುದೇ ಪಂಪನ ನಿಲುವಾದ್ದರಿಂದ ಈ ಕಾವ್ಯದಲ್ಲಿ ಆಯುಧದ ವಿಜೃಂಭಣೆ ಇಲ್ಲ. ಆಯುಧವನ್ನು ಮುಂದಿಟ್ಟುಕೊಂಡು ಹೊರಟ ದಿಗ್ವಿಜಯ ಆಯುಧದ ಸೋಲಿನೊಂದಿಗೆ ಅಂತ್ಯಗೊಳ್ಳುತ್ತದೆ. ಆಯುಧದ ಸೋಲು ಮನುಷ್ಯನ ಬಾಳ್ವೆಗೆ ಸುಖಕರವಾಗಿಸಿ, ಶಾಂತಿ ನೆಲೆಸುವಂತೆ ಮಾಡುತ್ತದೆ. ಆಯುಧಗಳ ನಡುವಿನ ವೈರತ್ವವು ಮನುಷ್ಯನನ್ನು ಬಳಸಿಕೊಳ್ಳುತ್ತದೆ ಆದರೆ ನಾಶವಾಗುದು ಮನುಷ್ಯ ಮಾತ್ರ ಆಯುಧಗಳಲ್ಲ. ಅದು ಮತ್ತೆ ಮುಂದಿನ ಜನಾಂಗವನ್ನು ಕಾದಾಡಲು ಬಳಸಿಕೊಳ್ಳುತ್ತದೆ. ಅದಕ್ಕಾಗಿ ಪಂಪ ಪುಷ್ಪೋದ್ಯಾನ ವಿಹಾರ, ಕೌಮುದಿ ಮಹೋತ್ಸವದಂತಹ ರಾಗ ರಸಿಕತೆಯ ಜೀವ ಚೈತನ್ಯದ ಸನ್ನಿವೇಶಗಳನ್ನು ಚಿತ್ರಿಸಿದ್ದಾನೆ. ಆದರೆ ಪಂಪನ ವಿಕ್ರಮಾರ್ಜುನ ವಿಜಯದಲ್ಲಿ ಇದು ಸಾಧ್ಯವಾಗದು. ಅಲ್ಲಿ ಆಯುಧಗಳ ಆರ್ಭಟವಿದೆ.

ಹೀಗೆ ಈ ಪುರಾಣಕಾವ್ಯದಲ್ಲಿ ಪಂಪನ ಜಿನಧರ್ಮ ಪರವಾದ ಮನಸ್ಸು ಯುದ್ಧವನ್ನು ಜೀವಪರಗೊಳಿಸುತ್ತದೆ. ಆದರೆ ಪಂಪಭಾರತದಲ್ಲಿ ಇದಕ್ಕೆ ಭಿನ್ನವಾದ ಮಾದರಿ ಇದೆ. ಪಂಪನ ಭಾರತದಲ್ಲಿ ಆಯುಧಗಳ ಅಬ್ಬರ ಮಾತ್ರವಲ್ಲದೆ ಸಾವಿನ ಭೀಕರತೆ ಇದೆ. ಈ ಚಿತ್ರಣಗಳ ಮೂಲಕ ಪಂಪ ಸೂಕ್ಷ್ಮವಾಗಿ ಯುದ್ಧದ

ದುಷ್ಪರಿಣಾಮಗಳನ್ನು ತೋರಿಸಿ ಯುದ್ಧ ನಿರಾಕರಣೆ ಮಾಡಿದಂತಿದೆ.

ಪಂಪನ ತರುವಾಯ ಬಂದ ರನ್ನನ್ನು ಗಮನಿಸಿದರೆ ಅವನ ಗದಾಯುದ್ಧದಲ್ಲಿ ಮಾತ್ರ ಸಮರ ಚಿತ್ರಗಳು ಬಂದಿವೆ. "ವಸ್ತು ಯುದ್ಧಮೆನಿಸಲ್ ಪೇಳ್ದಂ ಗದಾಯುದ್ಧಮಂ" (ಗದಾಯುದ್ಧ ಅವತರಣಿಕೆ–ಪದ್ಯ–9) ಎಂದು ರನ್ನ ಹೇಳಿರುವುದರಿಂದ ಗದಾಯುದ್ಧದ ವಸ್ತು ಯುದ್ಧವೆಂಬುದು ದೃಢವಿದೆ. ಆದರೆ ಕಾವ್ಯಾನುಭವದ ನೆಲೆಯಲ್ಲಿ ಅದು ಯುದ್ಧ ಪರವಾಗಿದೆಯೇ ಎಂದು ಕೇಳಿದರೆ ಹೌದು ಎನ್ನಲಾಗದು. ತನ್ನವರೆಲ್ಲರನ್ನು ಕಳೆದುಕೊಂಡು ರಣರಂಗದಲ್ಲಿ ಬರುವ ದುರ್ಯೋಧನ ತನ್ನ ಛಲದ ಯುದ್ಧಾಪೇಕ್ಷೆಯ ಪರಿಣಾಮವಾಗಿ ಅಳಿದ ತನ್ನವರೆಲ್ಲರನ್ನು ನೆನೆದು ದುಃಖಿಸುವ ಭಾಗವನ್ನು ಗಮನಿಸಬಹುದು. ಈ ಕಾವ್ಯದಲ್ಲಿ ಧೃತರಾಷ್ಟ್ರ, ಧರ್ಮರಾಜ, ಗಾಂಧಾರಿ, ಸಂಜಯ, ಭೀಷ್ಮ ಹೀಗೆ ಪ್ರಮುಖರೆಲ್ಲ ಸಂಧಿ ಪರವೇ ಮಾತನಾಡುತ್ತಾರೆ. ಅವರಿಗೆ ಯುದ್ಧದ ದುಷ್ಪರಿಣಾಮದ ಅರಿವಿದೆ. ದುರ್ಯೋಧನನನ್ನು ಸಂಧಿಗೆ ಒಪ್ಪಿಸಲು ಧೃತರಾಷ್ಟ್ರನಿಗೆ ರಣರಂಗದಲ್ಲಿ ಶರಶೈಯೆಯಲ್ಲಿ ಮಲಗಿರುವ ಭೀಷ್ಮ ಪತ್ರ ಬರೆಯುವ ಸನ್ನಿವೇಶ ಧ್ವನಿ ಪೂರ್ಣವಾಗಿದೆ. ಈ ಹಿನ್ನೆಲೆಯಲ್ಲಿ ರನ್ನನ ಕಾವ್ಯದ ಸೂಕ್ಷ್ಮವಾದ ಒಳಾಂಗಣದಲ್ಲಿ ಯುದ್ಧಪರವಲ್ಲದ ಶಾಂತಿಯ ಧ್ವಜವೇ ಇದೆ.

ಶರವೊಂದಂ ತೆಗೆದು ನಿಜೋ
ದರದಿಂ ಲೆಕ್ಕಣಿಕೆ ಮಾಡಿ ಗಜಮದಮಸಿಯಂ ।
ತರಿಸಿ ಪತಾಕಾ ಪಟದೊಳ್
ಬರೆದಟ್ಟಿದನಂಧ ನೃಪತಿಗಾ ಸಿಂಧುಸುತಂ॥(ಗದಾಯುದ್ಧ–ಭೀಷ್ಮವಚನಂ–15)

ತನ್ನ ಹೊಟ್ಟೆಯಿಂದಲೇ ಒಂದು ಬಾಣವನ್ನು ತೆಗೆದು ಲೇಖನಿಯನ್ನಾಗಿ ಮಾಡಿಕೊಂಡು ತುಂಡಾಗಿ ಬಿದ್ದ ರಥದ ಪತಾಕೆಯನ್ನೇ ಪತ್ರವಾಗಿಸಿಕೊಂಡು, ಆನೆಯ ಮದೋದಕದ ಮಸಿಯಲ್ಲಿ ಸಂಧಾನವನ್ನು ಒತ್ತಾಯಿಸಿ ಆಗುಗೊಳಿಸಿ ಯುದ್ಧ ನಿಲ್ಲಿಸಲು ಕಾರ್ಯಶೀಲರಾಗುವಂತೆ ಕೋರಿ ಪತ್ರ ಬರೆದನಂತೆ! ಪತಾಕೆ, ಬಾಣ, ಆನೆ ಹೀಗೆ ಯಾವೆಲ್ಲಾ ಯುದ್ಧ ಸಂಕೇತಗಳಿವೆಯೋ ಅವುಗಳನ್ನೇ ಶಾಂತಿಯ ಸಂದೇಶ ಅಟ್ಟಲು. ಆ ಯತ್ನದಲ್ಲಿ ನಿರತವಾಗಲು ಆಗ್ರಹಿಸಿದ ಸಲಕರಣೆಯಾಗಿಸಿಕೊಳ್ಳುತ್ತಾನೆ. ಅವುಗಳೆಲ್ಲಾ ತಮ್ಮ ನಿಯೋಜಿತ ಕಾರ್ಯದ (ಯುದ್ಧ) ಬದಲಿಗೆ ಬೇರೆಯದೇ ಆದ ಮತ್ತು ವಿರುದ್ಧವಾದ ಶಾಂತಿಯನ್ನು ನೆಲೆಗೊಳಿಸಲೆಂದು ಬಳಕೆಗೊಳ್ಳುತ್ತಿವೆ. ದುರ್ಯೋಧನಾ ವಿಲಾಪದಲ್ಲಿ ಬರುವ ವಿವರಗಳನ್ನು ನೋಡಿದಾಗ ರನ್ನ ಒಬ್ಬ ಯುದ್ಧ ವಿರೋಧಿ ಕವಿ ಎಂದೆನಿಸಿಕೊಳ್ಳುತ್ತದೆ.

ಚಂಪೂ ಕಾವ್ಯವಾದ ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ' ಜೈನ

ರಾಮಾಯಣದ ಕಥೆಯಾಗಿದೆ. ಇಲ್ಲಿ ಬರುವ ಯುದ್ಧದ ವಿವರಗಳು ಜೈನ ಧರ್ಮಕ್ಕೆ ಶರಣಾಗಿರುತ್ತದೆ. ಹಾಗಾದ್ದರಿಂದ ಹಿಂಸೆಯ ವಿರುದ್ಧ ಕಾವ್ಯ ಮಾತಾಡುತ್ತಾನೆ. ಇಲ್ಲಿ ರಾವಣನು ಶ್ರೇಷ್ಠ ವ್ಯಕ್ತಿಯಾಗುತ್ತಾನೆ.

ವಚನಕಾರರ ಸಂದರ್ಭವು ಅಧಿಕಾರ ಮತ್ತು ಪ್ರಭುತ್ವಪರವಾದುದಲ್ಲ. ಹಾಗಾಗಿ ಅವರು ಯುದ್ಧವನ್ನು ಪುರಸ್ಕರಿಸಿದವರಲ್ಲ. 'ಕಳಬೇಡ, ಕೊಲಬೇಡ' ಎನ್ನುವ ವಚನಕಾರರು ಹಿಂಸೆಯನ್ನು ನಿರಾಕರಿಸಿದವರು. ನಡೆನುಡಿ ಶುದ್ಧದ ಕಾಯಕಜೀವಿಗಳಾದ ಶರಣರು 'ಅರಸನ ಮನೆಯ ಅರಸಿಯಾಗುವುದಕ್ಕಿಂತ ಶರಣರ ಮನೆಯ ತೊತ್ತಾಗುವುದೇ ಲೇಸು' ಎಂದು ಸಮೂಹದ ಕಡೆಗಿನ ಆಯ್ಕೆಯನ್ನೇ ಮಾನ್ಯ ಮಾಡಿದವರು. ವಚನಕಾರರು ತಮ್ಮ ಹಿಂದಿನ ತಲೆಮಾರಿನಲ್ಲಿದ್ದ ವೀರವೇ ಮೊದಲಾದ ಮೌಲ್ಯವನ್ನು ಖಂಡಿಸಿದರು. ಯುದ್ಧದ ಉಪ ಉತ್ಪನ್ನಗಳಂತಿದ್ದ ಸತಿ ಹೋಗುವುದು, ವೇಳೆವಾಳಿ, ಗರುಡ ಇವೇ ಮೊದಲಾದ ಆತ್ಮ ಬಲಿದಾನದ ಪದ್ಧತಿಗಳನ್ನು ಟೀಕಿಸಿದರು. ಜೊತೆಗೆ ಅದನ್ನು ಮೀರಿಕೊಳ್ಳಲು ತಮ್ಮ ಅನುಭಾವದ ಬೆಳಕನ್ನು ನೀಡಿದರು. ಈ ಯುಗದಲ್ಲಿ ಬಂದ ಕನಕದಾಸರಂಥವರು ಯುದ್ಧ ಉಂಟುಮಾಡಿದ ಪರಿಣಾಮಗಳಿಂದ ಬೇಸತ್ತು ಆಧ್ಯಾತ್ಮದ ಕಡೆಗೆ ಮುಖ ಮಾಡಿದರು. ಸಾಕಷ್ಟು ಸಾಮಾಜಿಕವಾದ, ಮಾನವೀಯ ಮೌಲ್ಯಗಳನ್ನು ಈ ನಾಡಿನ ಜನರಿಗೆ ನೀಡಿದರು. ಈ ಭಕ್ತಿ ಯುಗದ ಪ್ರಮುಖ ಕವಿ ಕುಮಾರವ್ಯಾಸ ಪಂಪನ ನಂತರ ಇಡಿಯಾದ ಭಾರತವನ್ನು ಕನ್ನಡದಲ್ಲಿ ಬರೆದ ಶ್ರೇಷ್ಠ ಕವಿ. ನಾರಣಪ್ಪ ಪಂಪನಂತೆಯೆ ಸಮಸ್ತ ಭಾರತದ ಕಥೆಯನ್ನು ಕುರುಕ್ಷೇತ್ರ ಯುದ್ಧ ಮುಗಿದು ಪಟ್ಟಾಭಿಷೇಕಕ್ಕೆ ಮುಗಿಸುತ್ತಾನೆ. ಗದುಗಿನ ಭಾರತದ ಕೊನೆಯಲ್ಲಿ ಬರುವ ಪದ್ಯಗಳನ್ನು ಗಮನಿಸಿದರೆ ಅಲ್ಲಿ ಯುದ್ಧನ್ನು ವ್ಯಂಗ್ಯವಾಡಿದ್ದಾನೆ.

ಆ ಸುಯೋಧನನರಮನೆಯನವ
ನೀಶ ಹೊಕ್ಕನು ಪವನಸುತ ದು
ಶ್ಯಾಸನನ ಸದನವನು ಪಾರ್ಥಗೆ ಕರ್ಣಭವನದಲಿ ॥
ಪಾಸವಾದುದು ಯಮಳರಿಗೆ ದು
ಶ್ಯಾಸನಾನುಜರರಮನೆಗಳುಳಿ
ದೈಸುಮನೆ ಭಂಡಾರವಾದುದು ಭೂಪ ಕೇಳೆಂದ ॥ (ಕುಮಾರವ್ಯಾಸ ಭಾರತ ಗದಾಪರ್ವ 13:10)

ಈ ಪದ್ಯದಲ್ಲಿ ವ್ಯಂಗ್ಯವಿದೆ, ಶತ್ರುಗಳಾಗಿದ್ದು ಮಾತ್ರವಲ್ಲದೆ ದುಷ್ಟ ಚತುಷ್ಟಯರು ಎನಿಸಿಕೊಂಡವರು ವಾಸಿಸಿದ್ದ ಅರಮನೆಗಳನ್ನೇ ಪಾಂಡವರು ವಾಸಕ್ಕೆಂದು ಹೊಕ್ಕುತ್ತಾರೆ. ಮುಂದಿನ ಪದ್ಯದಲ್ಲಿ 'ಮುನ್ನಿನವರೇ ಮಂತ್ರಿ ಸಚಿವರು' ಎನ್ನುವಲ್ಲಿ ಧರ್ಮ ಸ್ಥಾಪನೆಗಾಗಿ

ನಡೆದ ಯುದ್ಧ ಮುಗಿದ ಮೇಲೆ ಯಾವುದೇ ಬದಲಾವಣೆ ಇಲ್ಲದೇ ಇರುವುದನ್ನೂ ಕುಮಾರವ್ಯಾಸ ವ್ಯಂಗ್ಯದಲ್ಲಿಯೇ ಮುಂದಿಡುತ್ತಾನೆ. ಕುಮಾರವ್ಯಾಸನಿಗೆ ಯುದ್ಧಕಿಂತ ಕೃಷ್ಣಭಕ್ತಿಯೇ ಮಹತ್ವವಾದದ್ದು ಎಂಬುದನ್ನು ಗಮನಿಸಬೇಕು.

ಕನ್ನಡ ಅಕ್ಷರ ಸಾಹಿತ್ಯವನ್ನು ನೋಡಿದರೆ ಆರಂಭದಿಂದ (ನಮಗೆ ಸಿಗುವ ಕನ್ನಡದ ಮೊದಲ ಶಾಸನ ಕೂಡ ಯುದ್ಧದ ಕುರಿತಾದುದೆ) ಸಿಗುವ ಶಾಸನ ಮತ್ತು ಕಾವ್ಯಗಳು ಯುದ್ಧದ ಬಗ್ಗೆ ಯಥೇಚ್ಛವಾಗಿ ಮಾತನಾಡಿದ್ದು ನಮ್ಮ ಮುಂದಿದೆ. ಆದರೂ ಇಲ್ಲಿ ಅನೇಕ ಸಾಹಿತ್ಯ ರಚನೆಗಳು ಯುದ್ಧ ಅಥವಾ ಹಿಂಸೆಯ ಕುರಿತು ವಿಷದೀಕರಿಸುವ ಕೃತಿಗಳು ಬೇಕಾದಷ್ಟಿವೆ. ಆದರೆ ಅವುಗಳೊಳಗೆ ಮಾನವತೆ ತುಂಬುವ ಮೂಲಕ ಯುದ್ಧವನ್ನು ದೂರಮಾಡಿ ಸಾಮರಸ್ಯದ ಬಾಳ್ವೆಯನ್ನು ಅಪೇಕ್ಷಿಸುವ ಪ್ರಾಚೀನ ಮನಸ್ಸುಗಳು ಅನನ್ಯವಾದವುಗಳು. ಯುದ್ಧವನ್ನು ವಿವರಿಸಿರರೂ ಯುದ್ಧವನ್ನು ಪ್ರತಿಪಾದಿಸಿದ ಕಾವ್ಯಗಳು ಬಹಳ ವಿರಳವಾಗಿದೆ. ಜೈನ ಕಾವ್ಯಗಳು "ಕೊಲಲಾಗದೆಂಬುದೇ ಜೈನಧರ್ಮ" ಎಂಬ ತತ್ವವನ್ನು ಬಲವಾಗಿ ಪ್ರತಿಪಾದಿಸುವಾಗ ಯುದ್ಧವನ್ನು 'ಅತೀಕ್ರೂರ ಗ್ರಹದಂತೆ' ಕಂಡಿದೆ. ಅಹಿಂಸೆಯೇ ಪ್ರಧಾನವಾದ ಜೈನರಿಗೆ ಯುದ್ಧ ಎಂದಿಗೂ ಸಹ್ಯವಾಗಿರಲಿಲ್ಲ. ಅದಕ್ಕೆ ಇವರಲ್ಲಿ ಯುದ್ಧದ ಕುರಿತ ಕಲ್ಪನೆಗಳೂ ನಿರಂತವಾಗಿ ಬದಲಾಗುತ್ತಾ ಬಂತು. ಪಂಪನಲ್ಲಿ ಮೃದುಲ ಯುದ್ಧವಾಗಿ ಬದಲಾಗಿ ಭರತ–ಬಾಹುಬಲಿ ಮಾತ್ರ ಯುದ್ಧವಾಡುತ್ತಾರೆ. ಇದು ಧರ್ಮಯುದ್ಧ ಎಂದಾಗುತ್ತದೆ. ನಾಗಚಂದ್ರನಲ್ಲಿಯೂ ಕಥಾನಾಯಕ ಹಿಂಸೆಯನ್ನು ಮಾಡಲಾರನು. ಆದರೆ ರತ್ನಾಕರವರ್ಣಿಯ ಕಾಲಕ್ಕೆ ಯುದ್ಧವು ಮಾತುಕತೆಯಲ್ಲಿ ಮುಗಿಯುವುದನ್ನು ಕಾಣುತ್ತೇವೆ. ಅಂತಹ ಪ್ರೇರಣೆಯಲ್ಲಿ ನಡೆದುಬಂದ ಕನ್ನಡ ಸಾಹಿತ್ಯವು ಯುದ್ಧಕ್ಕಿಂತ ಪ್ರೀತಿಯ ಸಹಬಾಳ್ವೆಯ ಬದುಕಿಗೇ ಒಲಿದಂತೆ ಕಾಣುತ್ತದೆ.

ಪರಾಮರ್ಶನ ಗ್ರಂಥಗಳು:

1. ಬಸವರಾಜ ಕಲ್ಗುಡಿ (ಸಂ), ಸಾಹಿತ್ಯ ಸಂವಾದ–1, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ. 2007
2. ಮಾಸ್ತಿ, ಕುವೆಂಪು, "ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ", ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
3. ತೀ.ನಂ.ಶ್ರೀಕಂಠಯ್ಯ (ಸಂ) ಗದಾಯುದ್ಧ ಸಂಗ್ರಹಂ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. 1949

4. ಎಂ.ಎಂ. ಕಲಬುರ್ಗಿ, ಮಾರ್ಗ ಸಂಪುಟ–1, ಸಪ್ನ ಬುಕ್ ಹೌಸ್, ಬೆಂಗಳೂರು. 2010
5. ಎಂ.ಎಂ. ಕಲಬುರ್ಗಿ, ಸಂಸ್ಕೃತಿ–ವಿಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. 2006
6. ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ಧಾರವಾಡ. 1995
7. ಜಯಪ್ರಕಾಶ್ ಶೆಟ್ಟಿ ಹೆಚ್., ರೂಪಮಂ ಧರಿಯಿಸಿ ನಿಂದುದಲ್ತು, ರೂಪ ಪ್ರಕಾಶನ, ಮೈಸೂರು. 2015
8. ಜಿ.ಎಸ್. ಶಿವರುದ್ರಪ್ಪ (ಸಂ) ಪಂಪ ಒಂದು ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು. 2010
9. ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪಂಪ, ಕೇಂದ್ರ ಸಾಹಿತ್ಯ ಅಕಾದೆಮಿ, ನವದೆಹಲಿ.1987
10. ಡಿ.ಆರ್. ನಾಗರಾಜ್, ಸಾಹಿತ್ಯ ಕಥನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. 2011
11. ಟಿ.ವಿ. ವೆಂಕಟಾಚಲ ಶಾಸ್ತ್ರಿ (ಸಂ), ಪಂಪ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.2006
12. ಬರಗೂರು ರಾಮಚಂದ್ರಪ್ಪ (ಸಂ), ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1993
13. ಡಾ. ರಹಮತ್ ತರಿಕೆರೆ (ಸಂ), ಕುಮಾರವ್ಯಾಸ ಭಾರತ: ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.2000

***

ಲೇಖಕಿಯರ ಚಾರಿತ್ರಿಕ ಕಾದಂಬರಿಗಳಲ್ಲಿ ನೂರ್‌ಜಹಾನ್

ರೂಪೇಶ್ ಕುಮಾರ್ ಸಿ.[1]

ಸಂಶೋಧನಾ ವಿದ್ಯಾರ್ಥಿ

ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ

ದ್ರಾವಿಡ ವಿಶ್ವವಿದ್ಯಾಲಯ ಶ್ರೀನಿವಾಸವನಂ, ಕುಪ್ಪಂ,

ಚಿತ್ತೂರು ಜಿಲ್ಲೆ, ಆಂಧ್ರ ಪ್ರದೇಶ – 517426

rupeshkumarsuresh@gmail.com

ಡಾ. ಜಯಲಲಿತ[2]

ಪ್ರಾಧ್ಯಾಪಕರು

ಕನ್ನಡ ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ

ದ್ರಾವಿಡ ವಿಶ್ವವಿದ್ಯಾಲಯ ಶ್ರೀನಿವಾಸವನಂ, ಕುಪ್ಪಂ,

ಚಿತ್ತೂರು ಜಿಲ್ಲೆ, ಆಂಧ್ರ ಪ್ರದೇಶ – 517426

ಭಾರತದ ಮಧ್ಯಕಾಲೀನ ಇತಿಹಾಸವನ್ನು ಆಕ್ರಮಿಸಿಕೊಂಡಿರುವಂತಹ ಮೊಘಲ್ ಸಾಮ್ರಾಜ್ಯದ ಇತಿಹಾಸದ ಪುಟಗಳನ್ನು ತಿರುಗಿಸಿ ನೋಡಿದಾಗ ವೈಭವೋಪೇತವಾದಂತಹ ಕಲೆ, ವಾಸ್ತುಶಿಲ್ಪ, ಐಷಾರಾಮಿ ಅರಮನೆಗಳು, ಮಹತ್ವಾಕಾಂಕ್ಷೆಯುಳ್ಳ ಚಕ್ರವರ್ತಿಗಳ ನಡುವೆ ನೂರ್‌ಜಹಾನ್ ಎಂಬ ಸುಲ್ತಾನಳ ಹೆಸರೂ ಕಾಣಸಿಗುತ್ತದೆ. ಚಕ್ರವರ್ತಿ ಅಕ್ಬರನ ಮಗನಾದಂತಹ ಜಹಾಂಗೀರನ ಸುಲ್ತಾನಳೇ ಈ ನೂರ್‌ಜಹಾನ್. ನೂರ್‌ಜಹಾನ್ ಎಂದರೆ 'ಜಗತ್ತಿನ ಬೆಳಕು' ಎಂದು ಅರ್ಥ. ನೂರ್‌ಜಹಾನಳ ಮೊದಲ ಹೆಸರು ಮೆಹರುನ್ನೀಸಾ. ಮೆಹರುನ್ನೀಸಾಳಾಗಿ ಸಾಮಾನ್ಯ ಕುಟುಂಬವೊಂದರಲ್ಲಿ ಬೆಳೆದು, ಮೊಘಲ್ ಸಾಮ್ರಾಜ್ಯದ ಬೆಳಕಾಗಿ ಬೆಳಗಿದ

ನೂರ್‌ಜಹಾನಳ ಜೀವನದ ಕಥೆಯನ್ನು ವಸ್ತುವಾಗಿಟ್ಟುಕೊಂಡು ರಚನೆಯಾಗಿರುವ ಉಷಾನರಸಿಂಹನ್ ಅವರ 'ಪರ್ಷಿಯಾ ಪರಿಮಳ' ಹಾಗೂ ವಿಜಯಾ ಸುಬ್ಬರಾಜ್ ಅವರ 'ನೂರ್‌ಜಹಾನ್' ಕಾದಂಬರಿಗಳಲ್ಲಿ ನೂರ್‌ಜಹಾನಳ ಪಾತ್ರದ ಚಿತ್ರಣವನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.

ಮೆಹರುನ್ನೀಸಾ ಮತ್ತು ಸಲೀಮ್ (ಜಹಾಂಗೀರ್)ರ ನಡುವಿನ ಪ್ರೀತಿ–ಪ್ರೇಮದ ಕುರಿತು ಇತಿಹಾಸಕಾರರಲ್ಲಿ ಇಬ್ಬಗೆಯ ಅಭಿಪ್ರಾಯಗಳಿವೆ. ಮೊದಲನೆಯದು ಮೆಹರುನ್ನೀಸಾ ಮೊದಲ ಮದುವೆಯಾಗುವುದಕ್ಕೂ ಮೊದಲೇ ಆಕೆ ಮತ್ತು ಜಹಾಂಗೀರನ ನಡುವೆ ಪ್ರೇಮವಿತ್ತು ಎನ್ನುವುದಾದರೆ, ಎರಡನೆಯದು ಮೆಹರುನ್ನೀಸಾಳ ಸೌಂದರ್ಯಕ್ಕೆ ಮನಸೋತು, ಅವಳಲ್ಲಿ ಮೋಹವನ್ನು ಬೆಳೆಸಿಕೊಂಡ ಜಹಾಂಗೀರನು ಮೆಹರುನ್ನೀಸಾಳ ಗಂಡನಾದ ಅಲಿಕುಲಿ ಇಸ್ತುಜ್ಲುನನ್ನು ಕೊಲೆ ಮಾಡಿಸಿ ಮೆಹರುನ್ನೀಸಾಳನ್ನು ತನ್ನ ಸುಲ್ತಾನಳನ್ನಾಗಿ ಮಾಡಿಕೊಳ್ಳುತ್ತಾನೆ ಎಂಬುದಾಗಿದೆ. ಪ್ರಸ್ತುತ ಈ ಎರಡೂ ಕಾದಂಬರಿಗಳಲ್ಲಿ ಮೊದಲನೆಯ ಅಭಿಪ್ರಾಯವನ್ನು ಸ್ವೀಕರಿಸಿ ಅದರಂತೆ ಕಥಾ ಹಂದರವನ್ನು ಬೆಳೆಸಿಕೊಳ್ಳಲಾಗಿದೆ.

ನೂರ್‌ಜಹಾನಳನ್ನು ಕುರಿತು :

ಪರ್ಷಿಯಾದಿಂದ ಹಿಂದೂಸ್ಥಾನಕ್ಕೆ ಘಯಾಸ್ ಬೇಗ್ ಕುಟುಂಬಸಮೇತನಾಗಿ ಹೊರಡುತ್ತಾನೆ. ಆತನ ಪತ್ನಿ ಅಸ್ಮತ್ ಬೇಗಂಳು ದಾರಿಯ ನಡುವೆಯೇ ಮೆಹರುನ್ನೀಸಾಳಿಗೆ ಜನ್ಮ ನೀಡುತ್ತಾಳೆ. ಜನನದಿಂದಲೇ ಪ್ರತಿಕೂಲ ಪರಿಸ್ಥಿತಿಗೆ ಹೊಂದಿಕೊಳ್ಳುವ ಸವಾಲನ್ನು ಎದುರಿಸಿದ್ದ ಮೆಹರುನ್ನೀಸಾ ಪ್ರಕೃತಿದತ್ತ ಚೆಲುವು, ಬುದ್ಧಿವಂತಿಕೆಯಿಂದ ಅಸಾಧಾರಣ ಹೆಣ್ಣಾಗಿ ರೂಪು ತಾಳುತ್ತಾಳೆ. ಘಯಾಸ್ ಬೇಗನಿಗೆ ಅಕ್ಬರನ ಆಸ್ಥಾನದಲ್ಲಿ ಕೆಲಸ ದೊರೆತು ಅರಮನೆಯ ಸಂಪರ್ಕ ದೊರೆತಂತಾಗುತ್ತದೆ. ಈ ಸಮಯಕ್ಕಾಗಲೇ ಮೆಹರುನ್ನೀಸಾ ಮದುವೆ ವಯಸ್ಸಿಗೆ ಬಂದಿರುತ್ತಾಳೆ. ಅವಳು ತನ್ನ ತಂದೆಯಂತೆ ಮಹತ್ವಾಕಾಂಕ್ಷೆಯ ಗುಣದವಳಾಗಿದ್ದು, ಅರಸುಕುಮಾರನಾದ ಸಲೀಂ (ಜಹಾಂಗೀರ್)ನನ್ನು ಒಲಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲಳಾದರೂ ಅವನನ್ನು ವಿವಾಹವಾಗಲು ಸಾಧ್ಯವಾಗುವುದಿಲ್ಲ. ಮುಂದೆ ಮೆಹರುನ್ನೀಸಾ ಶೇರ್ ಆಫ್ಘನ್ ಎಂಬ ಬಿರುದನ್ನು ಪಡೆದಿದ್ದ ಸೈನಿಕನಾದ ಆಲಿಕುಲಿ ಇಸ್ತುಜ್ಲುನನ್ನು ಬಾದಶಹ ಅಕ್ಬರನ ಆಜ್ಞೆಯಂತೆ ಮದುವೆಯಾಗುತ್ತಾಳೆ. ಅವರಿಬ್ಬರಿಗೆ ಒಂದು ಹೆಣ್ಣು ಮಗುವೂ ಜನಿಸುತ್ತದೆ. ಇತ್ತ ಜಹಾಂಗೀರನಿಗೆ ಮೆಹರುನ್ನೀಸಾಳನ್ನು ಮರೆಯಲಾಗುವುದಿಲ್ಲ. ಈ ನಡುವೆ ಅಕ್ಬರನು ಮರಣ ಹೊಂದುತ್ತಾನೆ. ಇದರಿಂದ ಅಕ್ಬರನ ಉತ್ತರಾಧಿಕಾರಿಯಾಗಿ ಸಲೀಮನು ಜಹಾಂಗೀರನಾಗಿ ಮೊಘಲ್ ಸಾಮ್ರಾಜ್ಯದ ಗದ್ದುಗೆ

ಏರುತ್ತಾನೆ. ಅಷ್ಟರಲ್ಲೇ ಮೆಹರುನ್ನೀಸಾಳ ಗಂಡ ಅಲಿಕುಲಿ ಇಸ್ತುಜ್ಲುವಿನ ಹತ್ಯೆಯಾಗುತ್ತದೆ. ಇದಾದ ನಾಲ್ಕು ವರ್ಷಗಳ ನಂತರ ಮೆಹರುನ್ನೀಸಾ ತನ್ನ ಮಗಳಾದ ಲಾಡ್ಲಿಗೆ ಉತ್ತಮವಾದ ಭವಿಷ್ಯವನ್ನು ಕಟ್ಟಿಕೊಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಹಾಗೂ ಜಹಾಂಗೀರನ ಮೇಲೆ ತನಗಿದ್ದ ಪ್ರೀತಿಯಿಂದ ಅವನನ್ನು ವರಿಸಿ ಮೊಘಲ್ ರಾಣಿವಾಸಕ್ಕೆ ಸೇರ್ಪಡೆಯಾಗುತ್ತಾಳೆ. ಅಲ್ಲಿಂದ ಮೆಹರುನ್ನೀಸಾ 'ನೂರ್‌ಜಹಾನ್' ಎಂಬ ಅಭಿದಾನವನ್ನು ಪಡೆದುಕೊಳ್ಳುತ್ತಾಳೆ. ಕುಡಿತಕ್ಕೆ ದಾಸನಾದಂತಹ ಜಹಾಂಗೀರನ ಹಿಂದೆ ನಿಂತು ರಾಜ್ಯಾಡಳಿತದ ಚುಕ್ಕಾಣಿಯನ್ನು ಹಿಡಿಯುತ್ತಾಳೆ. ಈ ಅವಧಿಯಲ್ಲಿ ನೂರ್‌ಜಹಾನಳು ಹಲವಾರು ಜನಪರವಾದ ಸುಧಾರಣೆಯ ಕೆಲಸಗಳನ್ನು ಮಾಡುತ್ತಾಳೆ. ಅಸಹಾಯಕರಾದ ಹೆಣ್ಣು ಮಕ್ಕಳಿಗಾಗಿ ಕುಸುರಿ ಕೆಲಸ, ಕಸೂತಿ, ಸುಗಂಧ ದ್ರವ್ಯಗಳ ತಯಾರಿಕೆ ಮುಂತಾದಂತೆ ವಿವಿಧ ರೀತಿಯ ಕೆಲಸಗಳನ್ನು ಹುಟ್ಟುಹಾಕುತ್ತಾಳೆ. ಒಬ್ಬ ಹೆಣ್ಣು ಆಡಳಿತದ ಚುಕ್ಕಾಣಿ ಹಿಡಿಯುವುದು ಆಸ್ಥಾನದಲ್ಲಿದ್ದ ಮಹಬತ್‌ಖಾನ್‌ರಂತಹ ಕೆಲವರಿಗೆ ಹಿಡಿಸುವುದಿಲ್ಲ. ಹಾಗಾಗಿ ಅರಮನೆಯಲ್ಲಿರುವವರ ಒಳಸಂಚುಗಳನ್ನು ನೂರ್‌ಜಹಾನಳು ಎದುರಿಸಬೇಕಾಗುತ್ತದೆ. ಜಹಾಂಗೀರನ ಮರಣದ ನಂತರ ಷಹಜಹಾನನು ಚಕ್ರವರ್ತಿಯಾಗುತ್ತಾನೆ. ಅವನು ನೂರ್‌ಜಹಾನಳನ್ನು ಗೃಹಬಂಧನದಲ್ಲಿರಿಸುತ್ತಾನೆ. ಲಾಹೋರಿನ ಅರಮನೆಯಲ್ಲಿ ನೂರ್‌ಜಹಾನ್ ತನ್ನ ಮಗಳು ಲಾಡ್ಲಿ ಹಾಗೂ ಮೊಮ್ಮಗಳಿನೊಂದಿಗೆ ಇಪ್ಪತ್ತು ವರ್ಷಗಳ ಕಾಲ ಗೃಹಬಂಧನದಲ್ಲಿದ್ದು ಕೊನೆಯುಸಿರೆಳೆಯುವುದರೊಂದಿಗೆ ನೂರ್‌ಜಹಾನಳ ಅಂತ್ಯವಾಗುತ್ತದೆ.

ಈ ಚಾರಿತ್ರಿಕ ವಸ್ತುವನ್ನಿಟ್ಟುಕೊಂಡು ಉಷಾನರಸಿಂಹನ್ ಅವರ 'ಪರ್ಷಿಯಾ ಪರಿಮಳ' ಹಾಗೂ ವಿಜಯ ಸುಬ್ಬರಾಜ್ ಅವರ 'ನೂರ್‌ಜಹಾನ್' ಕಾದಂಬರಿಗಳು ರಚನೆಯಾಗಿವೆ. ಈ ಎರಡೂ ಕಾದಂಬರಿಗಳಲ್ಲಿಯೂ ನೂರ್‌ಜಹಾನಳ ಅಸಾಧಾರಣ ಸೌಂದರ್ಯ, ಚಾಣಾಕ್ಷತೆ, ಹಾಗೂ ಮಹತ್ವಾಕಾಂಕ್ಷೆಯ ವ್ಯಕ್ತಿತ್ವವನ್ನು ತೋರಿಸುವ ಉದ್ದೇಶವನ್ನು ಲೇಖಕಿಯರು ತಮ್ಮದೇ ಆದಂತಹ ದೃಷ್ಟಿಕೋನಗಳ ಮೂಲಕ ಸಾಕಾರಗೊಳಿಸಿಕೊಂಡಿದ್ದಾರೆ.

ಪರ್ಷಿಯಾ ಪರಿಮಳ ಕಾದಂಬರಿಯಲ್ಲಿ ನೂರ್‌ಜಹಾನಳ ವ್ಯಕ್ತಿತ್ವ ಪ್ರಮುಖವಾಗಿ ಮೂರು ಆಯಾಮಗಳಲ್ಲಿ ತೆರೆದುಕೊಳ್ಳುತ್ತಾ ಸಾಗುತ್ತದೆ. ಮೊದಲನೆಯದು ನೂರ್‌ಜಹಾನಳ ಅಸಾಧಾರಣ ಸೌಂದರ್ಯ, ಎರಡನೆಯದು ಮಹತ್ವಾಕಾಂಕ್ಷೆ ಮತ್ತು ಮೂರನೆಯದು ಸಲೀಮನ ಕುರಿತು ಆಕೆಗಿದ್ದ ಅನನ್ಯ ಪ್ರೇಮ. ನೂರ್‌ಜಹಾನಳ ಅಪ್ರತಿಮ ಸೌಂದರ್ಯ ಇತಿಹಾಸ ಪ್ರಸಿದ್ಧವಾದದ್ದು. ಪ್ರಸ್ತುತ

ಕಾದಂಬರಿಯಲ್ಲಿ ಅವಳ ಸೌಂದರ್ಯದ ಜೊತೆಗೆ ಕಲಾಚಾತುರ್ಯ, ಕವಿ ಹೃದಯ, ರಾಜಕೀಯ ಪಟುತ್ವಗಳು ಸೇರಿ ಅವಳು ಗಟ್ಟಿಯಾಗಿ ನಿಂತಿದ್ದಾಳೆ. ಹಾಗಾಗಿ ಇಲ್ಲಿ ಅವಳ ಸೌಂದರ್ಯವೇ ಅವಳ ಬೇರೆ ಬೇರೆ ಆಯಾಮಗಳಿಗೆ ಮೂಲವಾಗಿ ಪ್ರವರ್ತಿಸುತ್ತದೆ. ತಾನು ಸೌಂದರ್ಯವತಿ ಎಂಬ ಅರಿವಿನ ಮೂಲದಲ್ಲಿಯೇ ನೂರ್‌ಜಹಾನ್ ತನ್ನ ಮಹತ್ವಾಕಾಂಕ್ಷೆಯ ಗುರಿಯನ್ನು ಸಾಕಾರಗೊಳಿಸಿಕೊಳ್ಳಲು ಮುಂದಾಗುತ್ತಾಳೆ. ಹೀಗೆ ತನ್ನ ಅನುಕೂಲಕ್ಕೆ ತಕ್ಕಂತೆ ಅದನ್ನು ಬಳಸಿಕೊಂಡು ಅರಸುಕುಮಾರನಾದ ಸಲೀಮನನ್ನು ಒಲಿಸಿಕೊಳ್ಳುತ್ತಾಳೆ. ಆದರೆ ಸಲೀಮನ ಸುಲ್ತಾನರಾದ ಮನ್ಮತಿ ಮತ್ತು ಮನ್‌ಬಾಯಿಯರು ಅಕ್ಬರನ ಬಳಿ ಹೋಗಿ ಸಲೀಮ್ ಹಾಗೂ ಮೆಹರುನ್ನೀಸಾರ ನಡುವಿನ ಪ್ರೇಮ ವಿಚಾರವನ್ನು ತಿಳಿಸಿ, ಅದರಿಂದ ತಮಗೇ ತೊಂದರೆಯಾಗುತ್ತದೆಂದು ಹೇಳಿ ಬಾದಶಾಹ ಅಕ್ಬರನ ಮೂಲಕವೇ ಮೆಹರುನ್ನೀಸಾಳಿಗೆ ಸೈನಿಕನಾದ ಅಲಿಕುಲಿ ಇಸ್ತುಜ್ಲುನೊಂದಿಗೆ ವಿವಾಹವಾಗುವಂತೆ ಮಾಡುತ್ತಾರೆ. ಇದಕ್ಕೆ ಮುಖ್ಯ ಕಾರಣ ಮೆಹರುನ್ನೀಸಾಳ ಚಾಣಾಕ್ಷತೆ ಮತ್ತು ಸೌಂದರ್ಯದ ಬಗ್ಗೆ ಮನ್‌ಬಾಯಿ ಹಾಗೂ ಮನ್ಮತಿಗೆ ಇದ್ದ ಅಸೂಯೆ ಮತ್ತು ಮೆಹರುನ್ನೀಸಾಳು ರಾಣಿವಾಸಕ್ಕೆ ಬಂದರೆ ತಮ್ಮ ಅಸ್ಮಿತೆಗೆ ಧಕ್ಕೆಯಾಗುವುದೆಂಬ ಭೀತಿ.

ಮುಂದೆ ಇಸ್ತುಜ್ಲುವಿಗೂ ನೂರ್‌ಜಹಾನಳಿಗೂ ಲಾಡ್ಲಿ ಎಂಬ ಹೆಣ್ಣು ಮಗು ಜನಿಸುತ್ತದೆ. ಈ ಮಗುವಿನ ಭವಿಷ್ಯ ನಿರ್ಮಾಣವೇ ನೂರ್‌ಜಹಾನಳ ಮುಖ್ಯ ಗುರಿಯಾಗುತ್ತದೆ. ಹೀಗಿರುವಾಗ ಇಸ್ತುಜ್ಲುವಿನ ಹತ್ಯೆಯಾಗುತ್ತದೆ. ಅಕ್ಬರನ ಉತ್ತರಾಧಿಕಾರಿಯಾಗಿ ಗದ್ದುಗೆ ಏರಿದ ಜಹಾಂಗೀರನೇ ಈ ಕೊಲೆಗೆ ಕಾರಣವೆಂದು ನೂರ್‌ಜಹಾನಳಿಗೆ ಗೊತ್ತಾದರೂ ಆಕೆಗೆ ಜಹಾಂಗೀರನ ಮೇಲೆ ಇದ್ದಂತಹ ಪ್ರೀತಿಯ ಮುಂದೆ ಯಾವುದೂ ಹೆಚ್ಚೆನಿಸುವುದಿಲ್ಲ.

ಈ ಕಾದಂಬರಿಯಲ್ಲಿ ವ್ಯಕ್ತವಾಗಿರುವ ನೂರ್‌ಜಹಾನಳ ವ್ಯಕ್ತಿತ್ವದ ಮತ್ತೊಂದು ಆಯಾಮ ಆಕೆ ಸಲೀಮ್‌ನಲ್ಲಿ ಅನನ್ಯವಾಗಿ ಹೊಂದಿರುವ ಪ್ರೀತಿ. ತಾನು ಪ್ರೀತಿಸಿದ ಚಕ್ರವರ್ತಿ ತನ್ನ ಗಂಡನನ್ನು ಕೊಂದರೂ ಸಲೀಮ್‌ನ ಮೇಲೆ ಆಕೆಯ ಪ್ರೀತಿ ಕಡಿಮೆಯಾಗುವುದಿಲ್ಲ. ಆತನನ್ನು ಕುರಿತು ನೂರ್‌ಜಹಾನ್ ತೋರುವ ಪ್ರೀತಿ ಕಾದಂಬರಿಯಲ್ಲಿ ಅನನ್ಯವಾಗಿ ತೆರೆದುಕೊಳ್ಳುತ್ತದೆ. ಅವನನ್ನು ಕುರಿತಂತೆ ನೂರ್‌ಜಹಾನಳಿಗೆ ಇರುವ ಪ್ರೀತಿ ಅನಿರ್ಬಂಧಿತವಾದದ್ದು. ಹಾಗಾಗಿ ಅವನ ಎಲ್ಲಾ ದೌರ್ಬಲ್ಯಗಳನ್ನು ಆಕೆ ಒಪ್ಪಿಕೊಂಡೇ ಬದುಕುತ್ತಾಳೆ. ಸಲೀಮನೂ ಕೂಡಾ ಅಷ್ಟೇ ಅನನ್ಯವಾಗಿ ನೂರ್‌ಜಹಾನಳನ್ನು ಪ್ರೀತಿಸುತ್ತಿರುತ್ತಾನೆ. ಅವಳನ್ನು ತನ್ನ ಸುಲ್ತಾನಳನ್ನಾಗಿ

ಮಾಡಿಕೊಂಡು ಅವಳಿಗೆ 'ನೂರ್‌ಜಹಾನ್' ಎಂಬ ಬಿರುದನ್ನು ನೀಡುತ್ತಾನೆ. ಜಹಾಂಗೀರನು ಮದ್ಯ, ಆಫೀಮು ಮುಂತಾದ ವ್ಯಸನಗಳಿಗೆ ದಾಸನಾಗಿ ರಾಜ್ಯದ ಆಳ್ವಿಕೆಯನ್ನು ಮರೆತಾಗ ನೂರ್‌ಜಹಾನಳು ಆತನ ಹಿಂದೆ ನಿಂತು ಆಡಳಿತದ ಚುಕ್ಕಾಣಿಯನ್ನು ಹಿಡಿಯುತ್ತಾಳೆ. ಸಮರ್ಥವಾಗಿ ಆಳ್ವಿಕೆಯನ್ನು ಕೈಗೊಂಡು ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸುತ್ತಾಳೆ.

ಜಹಾಂಗೀರನ ಮರಣದ ನಂತರ ನೂರ್‌ಜಹಾನಳಿಗೆ ತನ್ನಲ್ಲಿದ್ದ ಮಹತ್ವಾಕಾಂಕ್ಷೆ, ರಾಜ್ಯಾಳ್ವಿಕೆಯ ಆಸೆಗಳೆಲ್ಲವೂ ಅಳಿದು ಹೋಗುತ್ತವೆ. ತನ್ನ ಮಗಳಾದ ಲಾಡ್ಲಿಯೊಂದಿಗೆ ಲಾಹೋರಿನ ಅರಮನೆಯಲ್ಲಿ ಒಂಟಿಯಾಗಿ ಜೀವನ ನಡೆಸುವುದಕ್ಕೆ ತೀರ್ಮಾನಿಸುತ್ತಾಳೆ. ಅಲ್ಲಿಯೇ ನೂರ್‌ಜಹಾನ್ ತನ್ನ ಮೊಮ್ಮಗಳಿಗೆ ಆಕೆ ತನ್ನ ತಾಯಿಯಿಂದ ಕಲಿತಿದ್ದ 'ಅತ್ತರು' ತಯಾರಿಸುವ ವಿಧಾನವನ್ನು ಹೇಳಿಕೊಡುತ್ತಾ ಕೊನೆಯುಸಿರೆಳೆಯುತ್ತಾಳೆ.

ಪರ್ಷಿಯಾ ಪರಿಮಳ ಕಾದಂಬರಿಯಲ್ಲಿ ನೂರ್‌ಜಹಾನ್ ತನ್ನ ತಂದೆಯಾದ ಘಯಾಸ್ ಭೇಗ್‌ನಿಂದ ಮಹತ್ವಾಕಾಂಕ್ಷೆ, ಧೈರ್ಯ, ಓದು, ಗಝಲ್‌ಗಳ ರಚನೆಯನ್ನು ಕಲಿತುಕೊಂಡರೆ, ತಾಯಿಯಿಂದ 'ಅತ್ತರ್' ಮಾಡುವ ವಿಧಾನವನ್ನು ಕಲಿತುಕೊಳ್ಳುತ್ತಾಳೆ. ತಂದೆಯಿಂದ ಕಲಿತಂತಹ ವಿಷಯಗಳು ಮುಂದೆ ಅವಳನ್ನು ಸುಲ್ತಾನಳನ್ನಾಗಿ ಬೆಳೆಯುವಂತೆ ಮಾಡಿದರೆ, ತಾಯಿಯಿಂದ ಕಲಿತಂತಹ 'ಅತ್ತರ'ನ್ನು ತಯಾರಿಸುವ ವಿದ್ಯೆಯು ಅವಳನ್ನು ಆರ್ಥಿಕವಾಗಿ ಸಬಲಳನ್ನಾಗಿ ಮಾಡಿ ಹಾಗೂ ಇತರ ನಿರ್ಗತಿಕ ಸ್ತ್ರೀಯರಿಗೂ ನೆಲೆಯನ್ನು ಕಲ್ಪಿಸುವಂತೆ ರೂಪಿಸುತ್ತದೆ. ನೂರ್‌ಜಹಾನಳ ತಾಯಿ ಅಸ್ಮತ್ ಬೇಗಂ ಜೀವನ ಪ್ರೀತಿಯ ವ್ಯಕ್ತಿತ್ವ ಉಳ್ಳವಳು, ಹೊಟ್ಟೆ-ಬಟ್ಟೆಗೆ ಆಗುವಷ್ಟು ಸಂಪತ್ತು ಸಾಕು, ದುರಾಸೆ ಎಂದಿಗೂ ಜೀವನಕ್ಕೆ ಒಳ್ಳೆಯದಲ್ಲ ಎಂಬ ಅಭಿಪ್ರಾಯ ಆಕೆಯದು. ಆದರೆ ಆಕೆಯ ಗಂಡನೂ, ನೂರ್‌ಜಹಾನಳ ತಂದೆಯೂ ಆದ ಘಯಾಸ್ ಭೇಗ್ ಮಹಾತ್ವಾಕಾಂಕ್ಷೆಯುಳ್ಳ ವ್ಯಕ್ತಿ. ಪದವಿ, ಅಧಿಕಾರ, ಸಮೃದ್ಧಿಗಳಿಲ್ಲದ ಬದುಕು ಬದುಕೇ ಅಲ್ಲ ಎಂಬುದು ಆತನ ಅಭಿಪ್ರಾಯ. ಇವರಿಬ್ಬರ ವ್ಯಕ್ತಿತ್ವಗಳ ಸಮ್ಮಿಲನದ ರೂಪವಾಗಿ ಲೇಖಕಿ ಇಲ್ಲಿ ನೂರ್‌ಜಹಾನಳ ಪಾತ್ರವನ್ನು ಕಟ್ಟಿಕೊಡುತ್ತಾರೆ.

ಒಟ್ಟಾರೆಯಾಗಿ ಪರ್ಷಿಯಾ ಪರಿಮಳ ಕಾದಂಬರಿಯಲ್ಲಿ ಲೇಖಕಿ ರಾಜಕೀಯ ಇತಿಹಾಸವನ್ನು ಬದಿಗಿರಿಸಿ, ಭಾವನಾತ್ಮಕ ನೆಲೆಯಲ್ಲಿ ನೂರ್‌ಜಹಾನಳ ವ್ಯಕ್ತಿತ್ವವನ್ನು ಕೇಂದ್ರೀಕರಿಸಿಕೊಂಡು ಕಾದಂಬರಿಯನ್ನು ನಿರೂಪಿಸಿದ್ದಾರೆ. ಕಾದಂಬರಿಯ ಹೆಸರಿನಲ್ಲಿ ಬಂದಿರುವ 'ಪರಿಮಳ' ಎಂಬ ರೂಪಕ ಕಾದಂಬರಿಯುದ್ದಕ್ಕೂ ಒಂದು ಮುಖ್ಯ ಅಂಶವಾಗಿಯೇ ಬೆಳೆದುಕೊಂಡು ಬರುತ್ತದೆ. ಅತ್ಯಪೂರ್ವ ಪರಿಮಳದ ತಯಾರಿಕೆಯನ್ನು

ತನ್ನ ತಾಯಿಯಿಂದ ಕಲಿತ ನೂರ್‌ಜಹಾನ್, ತನ್ನ ಬದುಕಿನಲ್ಲಿ ಅದನ್ನು ತನ್ನ ಅಸ್ಮಿತೆಯ ಒಂದು ಅಂಗವಾಗಿಯೇ ಉಳಿಸಿಕೊಳ್ಳುತ್ತಾಳೆ. ಅದು ಮುಂದಿನ ತಲೆಮಾರಿಗೂ ಹರಿದು ಬರುವುದು ಬಹಳ ಅರ್ಥಪೂರ್ಣವಾಗಿ ಮತ್ತು ಸಾಂಕೇತಿಕವಾಗಿ ಕಂಡುಬರುತ್ತದೆ.

ವಿಜಯಾ ಸುಬ್ಬರಾಜ್ ಅವರ 'ನೂರ್‌ಜಹಾನ್' ಕಾದಂಬರಿಯಲ್ಲಿ ನೂರ್‌ಜಹಾನಳ ವ್ಯಕ್ತಿತ್ವವನ್ನು ರಾಜಕೀಯ ಮತ್ತು ಭಾವನಾತ್ಮಕ ಎರಡೂ ಆಯಾಮಗಳಲ್ಲಿ ನೋಡಬಹುದಾದರೂ, ಇಲ್ಲಿ ಲೇಖಕಿ ರಾಜಕೀಯ ಅಂಶಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಇಲ್ಲಿ ನೂರ್‌ಜಹಾನಳನ್ನು ಒಬ್ಬ ಸಮರ್ಥ ರಾಜಕೀಯ ಮುತ್ಸದ್ದಿಯಾಗಿ ಚಿತ್ರಿಸಿದ್ದಾರೆ. ನಯ–ವಿನಯ, ಜಾಣ್ಮೆ, ಚಾಣಾಕ್ಷತೆ, ಗಾಂಭೀರ್ಯ, ಆತ್ಮವಿಶ್ವಾಸ, ಆತ್ಮಸ್ಥೈರ್ಯಗಳ ಜೊತೆಗೆ, ಅನಿವಾರ್ಯವಾದಾಗ ಕ್ರೂರತ್ವ, ನಿಷ್ಠುರತೆ, ನಿರ್ದಯತೆಗಳನ್ನೂ ರೂಢಿಸಿಕೊಂಡು, ದ್ವಂದ್ವ ಮನಃಸ್ಥಿತಿಗಳೊಂದಿಗೂ ಎಂತಹ ಸಂದರ್ಭ–ಸನ್ನಿವೇಶಗಳನ್ನೂ ಲೀಲಾಜಾಲವಾಗಿ ಎದುರಿಸಿ ನಿಲ್ಲಬಲ್ಲವಳಾಗಿ ನೂರ್‌ಜಹಾನ್ ಚಿತ್ರಿತವಾಗಿದ್ದಾಳೆ. ಈ ಕಾದಂಬರಿಯಲ್ಲಿ ನೂರ್‌ಜಹಾನಳ ತಂದೆ–ತಾಯಿಯ ಪಾತ್ರಗಳಿಗೆ ಅಷ್ಟು ಪ್ರಾಮುಖ್ಯತೆ ನೀಡಿಲ್ಲವಾದರೂ ನೂರ್‌ಜಹಾನಳು ಸಣ್ಣ ವಯಸ್ಸಿನಿಂದಲೂ ಇಕ್ಕಟ್ಟಿನ ಜೀವನ ಸಾಗಿಸುವ ಪರಿಸರದಲ್ಲಿ ಬೆಳೆಯುತ್ತಾ, ಧೈರ್ಯ ಮತ್ತು ಪ್ರಶ್ನಿಸುವ ಮನೋಧರ್ಮಗಳನ್ನು ತಾನಾಗಿಯೇ ಬೆಳೆಸಿಕೊಳ್ಳುತ್ತಾಳೆ.

ಈ ಕಾದಂಬರಿಯಲ್ಲಿ ಅಕ್ಬರನ ಸುಲ್ತಾನಳಾದ ರುಖಯ್ಯ ಬೇಗಂಳ ಮೂಲಕ ಮೆಹರುನ್ನೀಸಾ ಅರಮನೆಯ ಸಂಪರ್ಕವನ್ನು ಪಡೆದುಕೊಳ್ಳುತ್ತಾಳೆ. ಹೀಗೆ ಅರಮನೆಯಲ್ಲಿ ಒಮ್ಮೆ ಜಹಾಂಗೀರ್ ಹಾಗೂ ಮೆಹರುನ್ನಿಸಾ ಇಬ್ಬರೂ ಪರಸ್ಪರ ಎದುರಾದಾಗ ಒಬ್ಬರಿಗೊಬ್ಬರ ಮೇಲೆ ಪ್ರೇಮಾಂಕುರವಾಗುತ್ತದೆ. ಆದರೆ ಇವರ ಪ್ರೇಮವು ವಿವಾಹದ ಹಂತವನ್ನು ತಲುಪಲು ಸಾಧ್ಯವಾಗುವುದಿಲ್ಲ.

ಮೆಹರುನ್ನೀಸಾಳ ಗಂಡನಾದ ಇಸ್ತುಜ್ಲುವಿನ ಮರಣಕ್ಕೆ ಜಹಾಂಗೀರನ ಯಾವುದೇ ಹಸ್ತಕ್ಷೇಪವು ಇಲ್ಲವೆಂದು ಈ ಕಾದಂಬರಿಯಲ್ಲಿ ಹೇಳಲಾಗಿದೆ. ಇದಕ್ಕೆ ತನ್ನ ಗಂಡನನ್ನು ಕೊಲೆ ಮಾಡಿದ ವ್ಯಕ್ತಿಯನ್ನು ನೂರ್‌ಜಹಾನ್ ಹೇಗೆ ತಾನೇ ಒಪ್ಪಿಕೊಳ್ಳಲು ಸಾಧ್ಯ? ಎಂಬ ನೈತಿಕ ಪ್ರಶ್ನೆಯು ಲೇಖಕಿಯ ಮುಂದಿದ್ದಂತೆ ಕಾಣುತ್ತದೆ. ಇಸ್ತುಜ್ಲುವಿನ ಮರಣದ ನಾಲ್ಕು ವರ್ಷಗಳ ನಂತರ ಕೇವಲ ಮೆಹರುನ್ನೀಸಾ ಆಗಿದ್ದವಳು ಜಹಾಂಗೀರನ ಸುಲ್ತಾನಳಾಗಿ ರಾಜಪರಿವಾರದ ಭಾಗವಾದ ನಂತರ ನೂರ್‌ಜಹಾನ್ ಆಗಿ ಬದಲಾಗುತ್ತಾಳೆ.

ಜಹಾಂಗೀರನ ಮತ್ತೊಬ್ಬ ಪತ್ನಿ ಜಗತ್‌ಗೋಸಿನಿಯನ್ನು ನೂರ್‌ಜಹಾನಳ ರಾಜಕೀಯ ವಿರೋಧಿಯಾಗಿ ಇಲ್ಲಿ ಚಿತ್ರಿಸಲಾಗಿದೆ. ಇವರಿಬ್ಬರ ನಡುವೆ ಜಹಾಂಗೀರನಿಗಾಗಿ ಹಾಗೂ ರಾಜಾಳ್ವಿಕೆಗಾಗಿ ಶೀತಲ ಸಮರ ನಡೆಯುತ್ತಿರುತ್ತದೆ. ಈ ಶೀತಲ ಸಮರದಲ್ಲಿ ಜಗತ್‌ಗೋಸಿನಿಯ ಕಡೆಗೆ ಜಹಾಂಗೀರನ ಬಾಲ್ಯ ಸ್ನೇಹಿತ ಹಾಗೂ ಮನ್ಸಬ್ದಾರನಾದ ಮೆಹಬತ್‌ಖಾನ್‌ನ ಸಹಾಯವಿದ್ದರೂ ನೂರ್‌ಜಹಾನಳು ತನ್ನ ಚಾಣಾಕ್ಷತೆಯಿಂದ ಅವರಿಬ್ಬರನ್ನು ಹತ್ತಿಕ್ಕುತ್ತಾಳೆ.

ಈ ಕಾದಂಬರಿಯಲ್ಲಿ ನೂರ್‌ಜಹಾನಳಿಗೆ ಜಹಾಂಗೀರನ ಮೇಲಿನ ಪ್ರೀತಿಗಿಂತ ರಾಜ್ಯಾಳ್ವಿಕೆಯ ಹಂಬಲವೇ ಹೆಚ್ಚಾಗಿರುವಂತೆ ಚಿತ್ರಿಸಲಾಗಿದೆ. ಜಹಾಂಗೀರನು ಅನಾರೋಗ್ಯಕ್ಕೆ ತುತ್ತಾಗಿದ್ದಾಗ ನೂರ್‌ಜಹಾನಳು ಅಲ್ಲಾನಲ್ಲಿ ಈ ರೀತಿ ಬೇಡಿಕೊಳ್ಳುತ್ತಾಳೆ "ದೇವರೇ ನನ್ನ ಬಾದಶಾಹರನ್ನು ಉಳಿಸಿಕೊಡು ಅವರಿಲ್ಲದೆ ನಾನಿಲ್ಲ, ನಾನಿದ್ದರೂ ನನಗೆ ರಕ್ಷಣೆ ಇಲ್ಲ, ನನ್ನ ಸುತ್ತಲೂ ನನ್ನ ವಿನಾಶಕ್ಕಾಗಿ ಹದ್ದುಗಳಂತೆ ಕಾಯುತ್ತಿರುವ ಮಂದಿ ಇದ್ದಾರೆ". ಹೀಗೆ ಬೇಡಿಕೊಳ್ಳುವಾಗ ಜಹಾಂಗೀರನ ಮೇಲೆ ಆಕೆಯ ಪ್ರೀತಿಗಿಂತ ಅವನಿಗೇನಾದರೂ ಆದರೆ ಅವಳ ವಿನಾಶವೂ ಸಂಭವಿಸುತ್ತದೆ ಎಂಬ ಭಯ ಇರುವುದು ಎದ್ದು ಕಾಣುತ್ತದೆ. ಹಾಗೆಯೇ ಜಹಾಂಗೀರನು ಸಾಯುವಾಗ ತನ್ನ ಕೊನೆಯ ಕ್ಷಣಗಳಲ್ಲಿ ಶಹಜಹಾನನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸುವಂತೆ ನೂರ್‌ಜಹಾನಳಿಗೆ ಹೇಳಿದ್ದರೂ, ಆಕೆ ಸಮರ್ಥನಲ್ಲದಿದ್ದರೂ ತನ್ನ ಅಳಿಯನಾದ ಶಹರಿಯಾರನನ್ನೇ ಉತ್ತರಾಧಿಕಾರಿಯಾಗಿ ನೇಮಿಸುತ್ತಾಳೆ. ಶಹರಿಯಾರ್ ಅಸಮರ್ಥನಾದ ಕಾರಣ ಆಕೆ ಹೇಳಿದಂತೆ ಕೇಳುತ್ತಾನೆ ಎಂಬ ಆಲೋಚನೆ ನೂರ್‌ಜಹಾನಳಿಗೆ ಇರುವುದು ಇಲ್ಲಿ ವ್ಯಕ್ತವಾಗುತ್ತದೆ.

ಇನ್ನು ಜಹಾಂಗೀರನ ಮರಣದ ನಂತರ ನೂರ್‌ಜಹಾನ್ ಬಾದಶಾಹನಾದ ಷಹಜಹಾನನ ಬಳಿ ಹೋಗಿ ದೀನಳಾಗಿ ನಿಂತು ಬದುಕುವುದಕ್ಕೆ ಸಹಾಯವನ್ನು ಕೇಳುವುದು, ತನ್ನ ಮಗಳ ಜೀವನ ತನ್ನಿಂದಲೇ ಹಾಳಾಯಿತೆಂದು ಮರುಗುವುದು, ಮಾನಸಿಕವಾಗಿ ಕುಗ್ಗಿಹೋಗಿರುವಂತೆ ಚಿತ್ರಿಸಿರುವುದು ಈ ಎಲ್ಲಾ ವಿಚಾರಗಳು ಪ್ರಾರಂಭದಲ್ಲಿದ್ದ ಮಹತ್ವಾಕಾಂಕ್ಷಿ ವ್ಯಕ್ತಿತ್ವವುಳ್ಳ ನೂರ್‌ಜಹಾನಳನ್ನು ಅನುಮಾನಿಸುವಂತೆ ಮಾಡುತ್ತವೆ.

ಒಟ್ಟಾರೆಯಾಗಿ ನೋಡುವುದಾದರೆ ಪರ್ಷಿಯಾ ಪರಿಮಳ ಕಾದಂಬರಿಯಲ್ಲಿ ನೂರ್‌ಜಹಾನಳನ್ನು ಒಬ್ಬ ಮಹತ್ವಾಕಾಂಕ್ಷೆಯುಳ್ಳ ಹೆಣ್ಣಾಗಿ ರೂಪಿಸಲು ತನ್ನ ತಂದೆ ತಾಯಿ ಅವಳ ಮೇಲೆ ಬೀರಿದ ಪ್ರಭಾವದಿಂದ ಹಿಡಿದು, ಆಕೆಯು ಬೆಳೆಯುವ ಪರಿಸರ, ರೂಢಿಸಿಕೊಳ್ಳುವ ಹವ್ಯಾಸಗಳು, ಆಕೆಯ ಸಾಮರ್ಥ್ಯ ಇವೆಲ್ಲವೂ ಒಟ್ಟುಗೂಡಿ

ಕೆಲಸ ಮಾಡಿರುವಂತೆ ಲೇಖಕಿ ನಿರೂಪಿಸಿದ್ದಾರೆ. ಪ್ರಾರಂಭದಿಂದ ಕೊನೆಯವರೆಗೂ ನೂರ್‌ಜಹಾನಳ ವ್ಯಕ್ತಿತ್ವವು ಒಂದೊಂದೇ ಹಂತದಿಂದ ಮೇಲ್ಮುಖವಾಗಿ ಸಾಗುತ್ತಾ ಗಟ್ಟಿಗೊಳ್ಳುತ್ತಾ ಹೋಗುತ್ತದೆ. ತಾನು ಸತ್ತ ಮೇಲೂ ಸಹ 'ಅತ್ತರಿ'ನ ಪರಿಮಳದ ರೂಪದಲ್ಲಿ ಆಕೆ ಬದುಕಿರುತ್ತಾಳೆ.

ವಿಜಯಾ ಸುಬ್ಬರಾಜ್ ಅವರ 'ನೂರ್‌ಜಹಾನ್' ಕಾದಂಬರಿಯಲ್ಲಿ ನೂರ್‌ಜಹಾನ್ ಪೂರ್ಣ ಪ್ರಮಾಣದಲ್ಲಿ ರಾಜಕೀಯ ಮುತ್ಸದ್ದಿಯಾಗಿ ಕಂಡುಬರುತ್ತಾಳೆ. ಲೇಖಕಿ ಇಲ್ಲಿ ಆಕೆಯ ಭಾವನಾತ್ಮಕ ಅಂಶಗಳನ್ನು ಗೌಣವಾಗಿಸಿದಂತೆ ಭಾಸವಾಗುತ್ತದೆ. ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಯಾವುದೇ ಕೆಲಸವನ್ನು ಮಾಡುವುದಕ್ಕೂ ಹಿಂಜರಿಯದ, ತನ್ನ ಮಗಳ ಜೀವನ ಹಾಳಾಗುತ್ತಿರುವುದು ಆಕೆಯ ಗಮನದಲ್ಲಿ ಇದ್ದರೂ ಉದ್ದೇಶಪೂರ್ವಕವಾಗಿ ಕೆಲವು ಆತುರದ ನಿರ್ಣಯಗಳನ್ನು ತೆಗೆದುಕೊಳ್ಳುವವಳಾಗಿ ಕಂಡುಬರುತ್ತಾಳೆ. ಕಾದಂಬರಿಯಲ್ಲಿ ಆರಂಭದಿಂದ ಮೇಲ್ಮುಖವಾಗಿ ಏರುತ್ತಾ ಹೋಗುವ ನೂರ್‌ಜಹಾನಳ ವ್ಯಕ್ತಿತ್ವವು ಆಡಳಿತದ ಚುಕ್ಕಾಣಿಯನ್ನು ಹಿಡಿದೊಡನೆ ಬದಲಾಗಿಬಿಡುತ್ತದೆ. ಇದಕ್ಕೆ ರಾಜಕೀಯ ಕಾರಣಗಳೂ ಇವೆ. ಎಷ್ಟೇ ಉತ್ತಮ ವ್ಯಕ್ತಿತ್ವವುಳ್ಳ ವ್ಯಕ್ತಿಯಾದರೂ ಅಧಿಕಾರದ ಚುಕ್ಕಾಣಿಯನ್ನು ಹಿಡಿದಾಗ ತಮ್ಮ ಸ್ವಾರ್ಥಕ್ಕಾಗಿ ಅಧಿಕಾರವನ್ನು ಬಳಸಿಕೊಳ್ಳುತ್ತಾರೆ ಎಂಬುದನ್ನು ಇಲ್ಲಿ ನೂರ್‌ಜಹಾನ್ ಪಾತ್ರದ ಮೂಲಕ ಲೇಖಕಿ ತಿಳಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಕೊನೆಗೆ ತಾನೇ ತನ್ನ ಮಗಳ ಜೀವನವನ್ನು ಹಾಳು ಮಾಡಿದೆನೆಂಬ ಕೊರಗಿನಿಂದ ಮರಣಿಸುವುದು ಅತಿಯಾದ ಮಹತ್ವಾಕಾಂಕ್ಷೆಯ ಪ್ರತಿಕೂಲ ಪರಿಣಾಮವನ್ನು ಲೇಖಕಿ ಇಲ್ಲಿ ನೂರ್‌ಜಹಾನಳ ಪಾತ್ರದ ಮೂಲಕ ಚಿತ್ರಿಸಿದ್ದಾರೆ.

ಅಂತಿಮವಾಗಿ ಹೇಳುವುದಾದರೆ 'ಪರ್ಷಿಯಾ ಪರಿಮಳ' ಮತ್ತು 'ನೂರ್‌ಜಹಾನ್' ಕಾದಂಬರಿಗಳಲ್ಲಿ ನೂರ್‌ಜಹಾನಳ ವ್ಯಕ್ತಿತ್ವವನ್ನು ಲೇಖಕಿಯರು ತಮ್ಮದೇ ಆದ ವಿಭಿನ್ನ ದೃಷ್ಟಿಕೋನಗಳ ಮೂಲಕ ಕಟ್ಟಿಕೊಡುವುದಕ್ಕೆ ಪ್ರಯತ್ನಿಸಿದ್ದಾರೆ. ಉಷಾನರಸಿಂಹನ್ ಅವರು ಭಾವನಾತ್ಮಕ ಮತ್ತು ಆರ್ಥಿಕ ಸಬಲೀಕರಣದ ನೆಲೆಯಲ್ಲಿ ನೂರ್‌ಜಹಾನಳ ಪಾತ್ರವನ್ನು ಚಿತ್ರಿಸಿದರೆ, ವಿಜಯಾ ಸುಬ್ಬರಾಜ್ ಅವರು ನೂರ್‌ಜಹಾನಳನ್ನು ಒಬ್ಬ ಸಮರ್ಥ ರಾಜಕೀಯ ಧುರೀಣೆಯನ್ನಾಗಿ ಚಿತ್ರಿಸಿ, ಆಕೆಯ ರಾಜಕೀಯ ಚಾತುರ್ಯ, ಅಧಿಕಾರದ ಹೋರಾಟ ಮತ್ತು ಅದರ ನೈತಿಕ ಪರಿಣಾಮಗಳನ್ನು ಪ್ರಧಾನವಾಗಿ ಪರಿಶೀಲಿಸುತ್ತಾರೆ. ಈ ಎರಡೂ ಕಾದಂಬರಿಗಳು ನೂರ್‌ಜಹಾನಳಂತಹ ಐತಿಹಾಸಿಕ ಪಾತ್ರವನ್ನು ಬಹುಮುಖಿ ದೃಷ್ಟಿಕೋನಗಳಿಂದ ಪುನರ್ ವ್ಯಾಖ್ಯಾನಿಸುವ ಸಾಹಿತ್ಯಿಕ ಪ್ರಯತ್ನಗಳಾಗಿ ಮಹತ್ವವನ್ನು ಪಡೆದಿವೆ.

ಆಕರ ಕೃತಿಗಳು :

1. ನೂರ್ ಜಹಾನ್ : ವಿಜಯಾ ಸುಬ್ಬರಾಜ್, ಪುಟ–230

ಪರಾಮರ್ಶನ ಗ್ರಂಥಗಳು :

1. ಉಷಾನರಸಿಂಹನ್ : ಪರ್ಷಿಯಾ ಪರಿಮಳ, ಅನನ್ಯ ಪ್ರಕಾಶನ, ಬೆಂಗಳೂರು, 2016.
2. ವಾಸುದೇವಾಚಾರ್ಯ ಕೆರೂರು : ಬೆಳಗಿದ ದೀಪಗಳು (ಚಾರಿತ್ರಿಕ ಕಥೆಗಳು), ವಾಸುದೇವ ಪುಸ್ತಕಾಲಯ, ಬಾಗಿಲುಕೋಟೆ, 1952.
3. ವಿಜಯಾ ಸುಬ್ಬರಾಜ್ : ನೂರ್‌ಜಹಾನ್, ನವಕರ್ನಾಟಕ ಪ್ರಕಾಶನ, ಬೆಂಗಳೂರು, 2020.

***

ವಿಕ್ರಮ ವಿಸಾಜಿ ಅವರ 'ರಕ್ತವಿಲಾಪ' ನಾಟಕದಲ್ಲಿ ಧರ್ಮ ರಾಜಕಾರಣದ ನೋಟಕ್ರಮ

ನಾಗೇಶ್ ಎನ್.
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂ–56

ಒಂದಾನೊಂದು ಹಳ್ಳಿಯಲ್ಲಿ ಜನ ಒಂದು ವಿಷಯದ ಬಗ್ಗೆ ಭಯಗ್ರಸ್ತರಾಗಿದ್ದರು. ಹಳ್ಳಿಯ ಜನ ರಾತ್ರಿಯಾದರೆ ಮನೆ ಬಿಟ್ಟು ಹೊರಗೆ ಬರುಲು ಧೈರ್ಯವೇ ಮಾಡುತ್ತಿರಲಿಲ್ಲ. ಅದಕ್ಕೆ ಕಾರಣ ಅಲ್ಲಿದ್ದ ಒಬ್ಬ ದೊಡ್ಡ ದರೋಡೆಕೋರನಾದ ಅಂಗುಲಿಮಾಲ. ಅವನು ಹಳ್ಳಿಯ ಪಕ್ಕದಲ್ಲಿದ್ದ ಅರಣ್ಯವನ್ನು ದಾಟಿ ಹೋಗುವವರ ಬಳಿ ಇರುವ ವಸ್ತುಗಳನ್ನು ದರೋಡೆ ಮಾಡಿ ಅವರನ್ನು ಸಾಯಿಸಿ ಬಿಡುತ್ತಿದ್ದನು. ನಂತರ ಅವರ ಬೆರಳುಗಳನ್ನು ಕತ್ತರಿಸಿ ತನ್ನ ಮಾಲೆಗೆ ಪೋಣಿಸಿ ಕತ್ತಿನಲ್ಲಿ ಹಾಕಿಕೊಳ್ಳುತ್ತಿದ್ದನು. ಆದ್ದರಿಂದ ಅವನಿಗೆ 'ಅಂಗುಲಿಮಾಲ' ಅನ್ನುವ ಹೆಸರು ಬಂದಿತು.

ಒಂದು ಬಾರಿ ಆ ಹಳ್ಳಿಗೆ ಬುದ್ಧಗುರು ಬಂದರು. ಹಳ್ಳಿಯ ಜನ ಬುದ್ಧಗುರುವನ್ನು ಸಂತೋಷದಿಂದ ಬರಮಾಡಿಕೊಂಡರು. ಆದರೆ ಬುದ್ಧಗುರು ಆ ಹಳ್ಳಿಯ ಜನರ ಮುಖವನ್ನು ನೋಡಿ, ಇವರಿಗೆ ಯಾವುದೋ ಸಮಸ್ಯೆ ಇದೆ ಎನ್ನುವುದನ್ನು ಅರ್ಥ ಮಾಡಿಕೊಂಡರು. ಬುದ್ಧಗುರು ಕೇಳಿದರು, ನಿಮಗೆ ಯಾವ ಸಮಸ್ಯೆ ಇದೆ? ಯಾಕೆ ಭಯಪಡುತ್ತಿದ್ದೀರಿ? ಎಂದರು. ಅದಕ್ಕೆ ಹಳ್ಳಿಯ ಜನರು ನಮ್ಮ ಭಯಕ್ಕೆ ದರೋಡೆಕೋರ ಅಂಗುಲಿಮಾಲನೇ ಕಾರಣ ಎಂದರು.

ಈ ವಿಷಯವನ್ನು ಕೇಳಿದ ಬುದ್ಧಗುರು ಆ ರಾತ್ರಿಯೇ ಅರಣ್ಯಕ್ಕೆ ಹೋಗುವುದಾಗಿ ತೀರ್ವಾನಿ ಸಿದರು. ರಾತ್ರಿ ಎಲ್ಲರೂ ಮಲಗಿದ ನಂತರ ಬುದ್ಧಗುರು ಅಂಗುಲಿಮಾಲನನ್ನು ನೋಡಲು ಅರಣ್ಯಕ್ಕೆ ಹೋದರು. ಬುದ್ಧಗುರು ಆ ಅರಣ್ಯದಲ್ಲಿ ಸ್ವಲ್ಪ ದೂರ ಹೋಗುತ್ತಿದ್ದಂತೆ, ಅವರ ಹಿಂದೆಯಿಂದ 'ನಿಲ್ಲು' ಎಂಬ ಧ್ವನಿ ಜೋರಾಗಿ ಕೇಳಿಸಿತು. ಆ ಶಬ್ದವನ್ನು ಕೇಳಿ ಬುದ್ಧಗುರು ನಿಂತ್ತು ಹಿಂತಿರುಗಿ ನೋಡಿದರು. ಅಲ್ಲಿ ಒಬ್ಬ ಘೋರವಾದ ಮನುಷ್ಯ ತನ್ನ ಕೈಯಲ್ಲಿ ಒಂದು ಖಡ್ಗವನ್ನು ಹಿಡಿದು ನಿಂತಿದ್ದ. ಅವನ ಕತ್ತಿನಲ್ಲಿ ಬೆರಳುಗಳ ಹಾರವಿತ್ತು. ಇದರಿಂದ ಅವನೇ ಅಂಗುಲಿಮಾಲ ಎಂದು ತೀರ್ಮಾನಿಸಿದರು. ನಂತರ ಬುದ್ಧಗುರು ತುಂಬಾ ತಾಳ್ಮೆಯಿಂದ ನಾನು ನಿಂತು ಬಿಟ್ಟೆ, ನೀನು ಯಾವಾಗ ಇದನ್ನು ನಿಲ್ಲಿಸುತ್ತೀಯಾ? ಎಂದು ಕೇಳಿದರು. ದರೋಡೆಕೋರನಿಗೆ ಬುದ್ಧಗುರುವಿನ ಮುಖದಲ್ಲಿ ಸ್ವಲ್ಪವು ಭಯವಿಲ್ಲದ್ದನ್ನು ನೋಡಿ ಆಶ್ಚರ್ಯವಾಯಿತು. ಇದರಿಂದ ನಿನಗೆ ನನ್ನನ್ನು ನೋಡಿ ಸ್ವಲ್ಪವೂ ಭಯವಾಗಲಿಲ್ವಾ? ಎಂದು ಕೇಳಿದರು. ಅದಕ್ಕೆ ಬುದ್ಧಗುರು ನಿನಗೆ ನಾನು ಯಾಕೆ ಭಯಪಡಬೇಕು? ನಿಜವಾದ ಬಲಶಾಲಿಯನ್ನು ನೋಡಿದರೆ ಭಯ ಪಡುವೆ ಎಂದರು. ಬುದ್ಧಗುರುವಿನ ಮಾತು ಕೇಳಿದ ಅಂಗುಲಿಮಾಲ ಜೋರಾಗಿ ನಕ್ಕ. ನಂತರ ಬುಧಗುರುವಿನ ಬಳಿ ಏ.. ಸಾಧು. ನಾನೇನು ಬಲಶಾಲಿ ಅಲ್ವಾ? ಎಂದು ಕೇಳಿದನು. ನಾನು ಒಂದೇ ಏಟಿಗೆ ಹತ್ತು ಜನರ ತಲೆಯನ್ನು ಕತ್ತರಿಸುತ್ತೇನೆ ಎಂದು ಹೇಳಿದ ದರೋಡೆಕೋರನ ಅಹಂಕಾರದ ಮಾತನ್ನು ಕೇಳಿದ ಬುದ್ಧಗುರು, ನಿಜವಾಗ್ಲೂ ನೀನು ಬಲಶಾಲಿಯಾಗಿದ್ದರೆ? ಆ ಮರದಲ್ಲಿ ಹತ್ತು ಎಲೆಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದರು. ಅದನ್ನು ಕೇಳಿದ ಅಂಗುಲಿಮಾಲ ತಕ್ಷಣವೇ ಮರದಿಂದ ಹತ್ತು ಎಲೆಗಳನ್ನು ತಂದು, ಈ ಹತ್ತು ಮರಗಳನ್ನು ಕಡಿದು ಬೀಳಿಸಬಲ್ಲೆ ಎಂದ. ಅದಕ್ಕೆ ಭಗವಾನ್ ಬುದ್ಧಗುರು, ನೀನು ಮರವನ್ನು ಕಡಿಯುವುದು ಬೇಕಾಗಿಲ್ಲ, ನೀನು ತಂದ ಎಲೆಗಳನ್ನು ಮರದಲ್ಲಿ ಇಟ್ಟು ಬಾ ಎಂದರು. ಅಂಗುಲಿಮಾಲನು ಮರದಿಂದ ಕಿತ್ತ ಎಲೆಗಳನ್ನು ಮತ್ತೆ ಅಂಟಿಸಲು ಸಾಧ್ಯವಿಲ್ಲ ಎಂದನು. ಅದಕ್ಕೆ ಬುದ್ಧಗುರು ಒಂದು ವಸ್ತುವನ್ನು ಮತ್ತೆ ಅಂಟಿಸಲು ಸಾಧ್ಯವಿಲ್ಲ ಅಂದಾಗ, ಆ ವಸ್ತುವನ್ನು ತೆಗೆಯುವ ಅಧಿಕಾರ ನಿನಗಿಲ್ಲ ಎಂದರು. ಒಬ್ಬ ವ್ಯಕ್ತಿಯ ತಲೆ ಕಡಿಯುವುದು ನಿನ್ನ ಧೈರ್ಯವೆಂದಾದರೆ, ಕತ್ತರಿಸಿದ 10 ಜನರ ತಲೆಯನ್ನು ಮತ್ತೆ ಅಂಟಿಸಿ ತೋರಿಸು ಎಂದರು. ದರೋಡೆಕೋರ ಅಂಗುಲಿಮಾಲ ಬುದ್ಧಗುರುವಿನ ಮಾತನ್ನು ಕೇಳಿ ಯೋಚನೆ ಮಾಡಲು ಆರಂಭಿಸಿ ಸ್ವಲ್ಪ ಸ್ವಲ್ಪವೇ ಅವನ ಮನಸ್ಸು ಬದಲಾಯಿತು. ಆ ನಂತರ ಆತನು ಬುದ್ಧಗುರುವಿನ ಕಾಲಿಗೆ ಬಿದ್ದು ಶಿಷ್ಯನಾದನು.

ಈ ಕಥೆಯನ್ನು ಒಬ್ಬೊಬ್ಬರು ಒಂದೊಂದು ರೀತಿ ನಿರೂಪಣೆ ಮಾಡುತ್ತಾರೆ. ಕಥೆಯನ್ನು ಹೇಗೆ ನಿರೂಪಣೆ ಮಾಡಿದರೂ ಅದರ ಮೂಲ ತಾತ್ವಿಕತೆ ಒಂದೇ ಆಗಿರುತ್ತದೆ. ಈ ಕಥೆಯಲ್ಲಿ ಪ್ರಮುಖವಾಗಿ ಗುರುತಿಸುವ ಅಂಶವೊಂದಿದೆ. ಅದನ್ನು ಮುಂದೆ ಚರ್ಚೆಗೆ ಒಳಪಡಿಸಲಾಗುವುದು. ಪ್ರಸಿದ್ಧ ಸಂಶೋಧಕರಾದ ಎಂ ಎಂ ಕಲಬುರ್ಗಿ ಅವರ ಹತ್ಯೆಯಾಗಿ ವರ್ಷಗಳೇ ಸವೆದವು. ಅದೇ ಹಾದಿಯಲ್ಲಿಯೇ ಸುಪಾರಿ ಕೊಲೆಗಡುಕರ ಕೈಯಿಂದ ಬುದ್ಧಿಜೀವಿಗಳ ಹತ್ಯೆಗಳಾದವು. ಇಂದಿಗೂ ಅವು ಸಮಾಜದ ಮುಂದೆ ಪ್ರಶ್ನೆಗಳಾಗಿ ಉಳಿದು ಬಿಟ್ಟಿವೆ. ವಿಕ್ರಮ ವಿಸಾಜಿ ಅವರ 'ರಕ್ತವಿಲಾಪ' ನಾಟಕವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಬೇರೆ ಬೇರೆ ಅರಿವಿನ ಟಿಸಿಲುಗಳು ಕಾಣಸಿಗುತ್ತವೆ. "ಇಲ್ಲಿ ಬರೆದಿರುವ ನಾಟಕ ಒಂದರ್ಥದಲ್ಲಿ ಅವರ ಸಾವಿನ ಸುತ್ತ ಹೆಣೆದದ್ದು" ಎಂಬ ಅಭಿಪ್ರಾಯ ನಾಟಕಕಾರರದು. ಸಂಶೋಧಕ ಮತ್ತು ಬರಹಗಾರರ ಬಗೆಗಿನ ಸಮಾಜ ಮತ್ತು ಸಹ ವಿದ್ವಾಂಸರ ನೋಟಕ್ರಮ, ಅರ್ಥೈಸಿಕೊಳ್ಳುವ ಬಗೆ – ಈ ಎಲ್ಲವೂ ನಾಟಕದ ರೂಪದಲ್ಲಿ ತೆರೆದುಕೊಳ್ಳುತ್ತವೆ. "ಮುಖ್ಯವಾಗಿ ಜೀವನದ ತೊಡಕು, ಅಭಿವ್ಯಕ್ತಿಯ ಬಿಕ್ಕಟ್ಟು, ಸೈದ್ಧಾಂತಿಕ ಗೊಂದಲ, ಅಸಹಾಯಕತೆ, ಬರೆಯುವ, ಯೋಚಿಸುವ ಅದಮ್ಯ ಆಸೆಯನ್ನು ಕಾಣಿಸುವ ನಾಟಕವಿದು" ಎಂಬ ಅಂಬೋಣ ನಾಟಕಕಾರರದು. ನಾಟಕ ಸುಮಾರು 10 ಪಾತ್ರಗಳನ್ನು ಒಳಗೊಂಡಿದೆ. ಒಂದೆಡೆ ದ್ವೇಷ, ಅಹಂಕಾರ, ಆಕ್ರಮಣಕಾರಿ ಮನೋಭಾವ, ಪ್ರಚೋದನಾತ್ಮಕ ಗುಂಪು ಮತ್ತೊಂದೆಡೆ ಮುಖವಾಡ ರಹಿತ ಸೌಮ್ಯ ಭಾವನೆಗಳು ಇರುವ ಗುಂಪು – ಇವೆರಡರ ಮಧ್ಯೆ ನಿರಂತರ ಸಂಘರ್ಷದಿಂದ ದ್ವೇಷ–ಅಸೂಯೆಯ ಖಡ್ಗ ಬಡಿಗೆಗಳನ್ನು ಸೌಮ್ಯವಾದವರಿಗೆ ಒರಿಸಿ ಮೆರೆಯುತ್ತಾರೆ. ಈ ದೃಶ್ಯ ರೂಪವು ಇಂದಿನ ಸಮಾಜದಲ್ಲಿ ನಡೆಯುತ್ತಿರುವ ಮತೀಯವಾದದ ಸೂಕ್ಷ್ಮ ಎಳೆಗಳನ್ನು ವಿವರಿಸುವಂತಿದೆ. ಈ ಪ್ರಕ್ರಿಯೆಯಲ್ಲಿ ಎಲ್ಲರೂ ಬಲಿಯಾಗುತ್ತಾರೆ. ಆದರೆ ಅದರ ಕೇಡು ಅರಿತವರು ಅದರಿಂದ ದೂರ ಉಳಿಯುತ್ತಾರೆ, ಇಂತಹ ಅಮಾನವೀಯ ಸಂದರ್ಭಗಳು ಕಳೆದ ದಶಕಗಳಲ್ಲಿ ಸರ್ವೇಸಾಮಾನ್ಯವಾವೆ. ಲೇಖಕರು ಈ ಎಲ್ಲಾ ಸೂಕ್ಷ್ಮತೆಗಳನ್ನು ಮೊದಲ ಪೂರ್ವರಂಗದಲ್ಲಿ ಪೀಠಿಕೆಯಾಗಿ ಬಳಸಿಕೊಂಡಿದ್ದಾರೆ.

ಸಂಶೋಧಕರನ್ನು ಭೇಟಿಯಾಗಲು ಒಬ್ಬ ಯುವಕ ಬರುತ್ತಾನೆ. ಇವರಿಬ್ಬರ ನಡುವೆ ಹಲವಾರು ವಿಚಾರಗಳ ಬಗ್ಗೆ ವಾಗ್ವಾದಗಳು ನಡೆಯುತ್ತವೆ. ಸಂಶೋಧಕ ತಾನು ಕಂಡುಕೊಂಡ ಸತ್ಯವನ್ನು ನಿರ್ಭೀತಿಯಿಂದ ಹೇಳಲು ಮುಂದಾಗುತ್ತಾನೆ. ಆದರೆ ಯುವಕ ಧರ್ಮಕ್ಕೆ ಸಂಬಂಧಿಸಿದ ವಿಚಾರದಲ್ಲಿ ಯಾವುದೇ ರಾಜಿಯಾಗಲು

ಬಯಸುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಈ ಮಾತನ್ನು ಗಮನಿಸಬಹುದು.
"ಸಂಶೋಧಕರು: ಧರ್ಮ ಹೊರಗಿನ ಶತ್ರುಗಳಿಂದ ಅಲ್ಲ. ಧರ್ಮ ಒಳಗಿನ ಶತ್ರುಗಳಿಂದ ಸಾಯ್ತದ.

ಯುವಕ: ಹುಚ್ಚುಚ್ಚಾದ ಪ್ರಶ್ನೆ ಕೇಳೋದು ಒಳಗಿನ ಶತ್ರುಗಳು

ಸಂಶೋಧಕ: ಪ್ರಶ್ನೆಗಳಿಂದ ಯಾವ ಧರ್ಮನೂ ನಾಶ ಆಗೋದಿಲ್ಲ. ಇದ್ರಿಂದೆಲ್ಲ ಧರ್ಮನಾಶವಾಗ್ತಾದಂದ್ರ ಅದರಷ್ಟು ದುರ್ಬಲ ಧರ್ಮ ಯಾವುದು ಇಲ್ಲ."[1]

ಹೀಗೆ ಧರ್ಮಕ್ಕೆ ಸಂಬಂಧಿಸಿದಂತೆ, ಸಂಶೋಧಕ ಮತ್ತು ಯುವಕನ ನಡುವೆ ಚರ್ಚೆಗಳು ನಡೆಯುತ್ತವೆ. ಮೊದಲನೆಯ ದೃಶ್ಯದಲ್ಲಿ ಸಂಶೋಧಕರ ಮತ್ತು ಯುವಕನ ನಡುವೆ ಸತ್ಯ–ಸುಳ್ಳುಗಳ ಬಗ್ಗೆ, ಸತ್ಯವನ್ನು ಶೋಧಿಸುವ ಧೈರ್ಯದ ಬಗ್ಗೆ, ಸಮಾಜಕ್ಕೆ ಅದನ್ನು ತಿಳಿಸುವಲ್ಲಿ ಕಾಡುವ ಭಯದ ಬಗ್ಗೆ, ಶ್ರಮ ಜೀವಿಗಳ ನಿಜವಾದ ದೇಶಭಕ್ತಿ ಬಗ್ಗೆ, ಹೋರಾಟ–ಕಾದಾಟ, ಧರ್ಮ–ಅಧರ್ಮ, ವರ್ತಮಾನ–ಭವಿಷ್ಯ, ರಾಜಾಡಳಿತ ಕವಿಗಳು, ಕನಸು ಹೀಗೆ ಹಲವಾರು ಸಾಮಾಜಿಕ ರಾಜಕೀಯ ಧಾರ್ಮಿಕ ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ.

ಬೌದ್ಧಿಕ ಹಾಗೂ ಸಾಮಾಜಿಕ ವಿವಾದಗಳ ಬಗ್ಗೆ ನಾಟಕದಲ್ಲಿ ಸಂಶೋಧಕನ ಮೇಲೆ ಗಂಭೀರ ಆರೋಪಗಳಿರುತ್ತವೆ. ಅವುಗಳೆಂದರೆ, ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಸಂಶೋಧಕರು ಸಾಮಾಜಿಕ ಸೌಹಾರ್ದತೆಗೆ ಧಕ್ಕೆ ತಂದಿದ್ದಾರೆ. ಚರಿತ್ರೆ, ಸಮಾಜ, ಸಂಸ್ಕೃತಿಗೆ ಅವಮಾನವಾಗುವಂತಹ ಹೇಳಿಕೆ ನೀಡಿದ್ದಾರೆ. ಎನ್ನುವ ಹಲವಾರು ಆರೋಪಗಳನ್ನು ಸಂಶೋಧಕರು ಎದುರಿಸುತ್ತಿರುತ್ತಾರೆ. ಒಬ್ಬರ ಹುಟ್ಟಿನ ಮೂಲವನ್ನು ಶೋಧಿಸಿ, ಸಮಾಜಕ್ಕೆ ತಿಳಿಸುವ ಪ್ರಯತ್ನದ ಮೂಲಕ ಸಮಾಜದಲ್ಲಾದ ಪರಿಣಾಮಗಳನ್ನು ದೃಶ್ಯ ಒಳಗೊಂಡಿದೆ. ನಾಟಕಕಾರರು ಒಬ್ಬ ಸಂಶೋಧಕರಾಗಿರುವುದರಿಂದ ಇಲ್ಲಿ ಸಂಶೋಧಕನ ಸಾಧಕ–ಬಾಧಕಗಳನ್ನು ಚರ್ಚಿಸುತ್ತಾರೆ. ನಿಜವಾದ ಸಂಶೋಧನೆಯ ಅರ್ಥವನ್ನು ಪ್ರತಿಧ್ವನಿಸುತ್ತಾರೆ. 'ಸಂತಿಗಿ ಮೂರು ಮೊಳ ನೇಯುವ ಸಂಶೋಧಕ ಅಲ್ಲ ನಾನು'. 'ಹಾಡಿದ್ದೇ ಹಾಡೋ ಸಂಶೋಧಕನು ಅಲ್ಲ' ಎನ್ನುವ ಮಾತುಗಳಿಂದ ಸಂಶೋಧಕನ ಜವಾಬ್ದಾರಿಯನ್ನು ಎಚ್ಚರಿಸುತ್ತಾರೆ. 'ಸತ್ಯ ಶೋಧಕನಾದ ಸಂಶೋಧಕ ತಪ್ಪು ಹೇಳಿರಬಹುದು, ಆದರೆ ಸುಳ್ಳು ಹೇಳಲಾರ' ಎನ್ನುವ ಸಂಶೋಧಕ ಮುಂದುವರೆದು. ವಾದ, ಸಂವಾದ, ವಾಗ್ವಾದ ಇರೋದು ಪ್ರಚಾರಕ್ಕಾಗಿ ಅಲ್ಲ ಸತ್ಯದ ನಿಲುವುವಾಗಿದೆ ಎನ್ನುತ್ತಾರೆ. ಸಂಶೋಧನೆಗಿಂತ ಸತ್ಯ ದೊಡ್ಡದು ಎನ್ನುವುದರಲ್ಲಿ ಸಂಶೋಧಕನ ನೈತಿಕತೆಯು ಗಮನ ಸೆಳೆಯುತ್ತದೆ. ಸಂಶೋಧಕ ಸಮಾಜೋದ್ಧಾರ ಮತ್ತು ಆತ್ಮೋದ್ಧಾರ

ಪರಿಕಲ್ಪನೆಗಳಿಗೆ ಹೊಸ ಉದಾಹರಣೆಗಳನ್ನು ನೀಡುತ್ತಾರೆ. "ಸಂಶೋಧಕ ನೀರಿನಲ್ಲಿ ಹಾಕಿದ ಮುತ್ತು ತಾನು ಸ್ವಚ್ಛವಾಗುತ್ತದೆ. ಆದ್ರ ನೀರಿಗೆ ಅದರಿಂದ ಏನು ಪ್ರಯೋಜನ ಇಲ್ಲ. ಮುತ್ತಿನ ಬದಲು ಸಕ್ರಿ ತುಂಡು ಹಾಕಿದ್ರಾ ಇಡೀ ನೀರನ್ನೇ ಸಿಹಿ ಮಾಡ್ತದ. ಇಡೀ ನೀರೇ ತಾನಾಗುತ್ತದೆ. ವ್ಯಕ್ತಿಯಾದವನು ಸಮಾಜವೆಂಬ ನೀರಿನಲ್ಲಿ ಮುತ್ತಿನಂತೆ ಇದ್ರ ಆತ್ಮೋದ್ಧಾರ, ಸಕ್ಕರೆಯ ತುಂಡಿನ ಅಂಗ ಕರಗಿ ಹೋದ್ರ ಸಮಾಜೋದ್ಧಾರ". ಮುಂದುವರೆದು "ಆತ್ಮೋದ್ಧಾರ ಸೋಗಿನಲ್ಲಿ ಲಿಂಗಭೇದ, ವರ್ಗಭೇದ, ವರ್ಣಭೇದ ಕಲ್ಪಿಸಿ ಸಮಾಜವನ್ನು ಕತ್ತಲ ಕೂಪಕ್ಕೆ ತಳ್ಳಿದರು. ಈ ಭೇದ ಅಳಿದು ಸಾಮಾಜಿಕ ನ್ಯಾಯ ಸ್ಥಾಪನೆಯಾಗಬೇಕು. ಇದಕ್ಕೆಲ್ಲಾ ಮುಖ್ಯವಾಗಿ ಪುರೋಹಿತಶಾಹಿ ಬಂಡವಾಳಶಾಹಿ ಅಧಿಕಾರಶಾಹಿಯ ದುಷ್ಟತೆ ಎದುರು ಹಾಕೋಬೇಕು. ಇದಕ್ಕೆ ಹೆದರಿ ಅನೇಕ ಧಾರ್ಮಿಕ ಮಹಾಪುರುಷರು ಮಾತು ಆಡತೊಡಗಿದರು. ಅಮೂರ್ತ ವಿಚಾರ ಮಂಡಿಸಿ ಸಾಮಾಜಿಕ ಅಗತ್ಯ ಕಡೆಗಣಿಸಿದ್ರು. ಇದು ಸುಲಭದ ದಾರಿ ಅನ್ನಿಸ್ತದ ನನಗ. ಇಂಥ ಆತ್ಮೋಧಾರದೊಳಗ ಸ್ವಾರ್ಥ ಅದ. ಇದನ್ನ ಹಿಡಕೊಂಡು ಭಾಳ ದೂರ ಹೋಗಾಕ ಆಗಾಂಗಿಲ್ಲ. ಬದಲಾವಣೆಗೆ ಕೈಹಾಕಿ ಹೊಸ ಸಮಾಜ ಸೃಷ್ಟಿಸೊ ಕನಸು ಇಲ್ದೆ ಇರೋ ಆತ್ಮೋಧಾರದ ಕಲ್ಪನೆ ಒಂದು ಮೋಸ. ಮುಂದುವರೆದು ಕನಸು ಕಾಣದೆ ಇರುವ ಸಮಾಜವೊಂದು ರೋಗಿಷ್ಠ ಸಮಾಜ. ಆತ್ಮೋದ್ಧಾರ ಸಾಮಾಜಿಕ ಕನಸು ಛಿದ್ರ ಮಾಡ್ತು. ಇದೆಂಥ ದುರ್ಗತಿ. ನನಗೂ ಆತ್ಮೋದ್ಧಾರ ಬೇಕು; ಗಾಂಧೀಜಿಗಿದ್ದಂತ ಆತ್ಮೋದ್ಧಾರ, ಅಂಬೇಡ್ಕರರಿಗೆ ಇದ್ದಂತ ಆತ್ಮೋದ್ಧಾರ, ಬಸವಣ್ಣನಿಗೆ ಇದ್ದಂತ ಆತ್ಮೋದ್ಧಾರ, ಬುದ್ಧನಿಗೆ ಇದ್ದಂತ ಆತ್ಮೋದ್ಧಾರ. ಇಂಥ ಆತ್ಮೋದ್ಧಾರ ಜಗತ್ತಿನೊಳಗ ಯಾರ್ ಕೊಟ್ರು ನನಗೆ ಬೇಕು."[2] ಎನ್ನುವ ಮೂಲಕ ಸವಾಲನ್ನು ಸಂಶೋಧಕ ಸ್ವೀಕರಿಸುತ್ತಾನೆ. ಇದು ಸಮಸ್ತ ಸಂಶೋಧಕರಿಗೂ ಆದರ್ಶಪ್ರಾಯವಾದದ್ದು ಎನ್ನಬಹುದು.

ನಾಟಕ ಮತ್ತೊಂದು ಮಹತ್ವದ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳುತ್ತದೆ. ಅದೇನೆಂದರೆ, "ಸ್ವತಂತ್ರ ಧರ್ಮ".

ಸಂಶೋಧಕ: ಯಾರ ದಾಳನೂ ಆಗಿಲ್ಲ.... ಯಾರನ್ನೂ ದಾಳ ಮಾಡಿಕೊಂಡಿಲ್ಲ... ಸ್ವತಂತ್ರ ಧರ್ಮ ಅಂದ್ರ; ತತ್ವ ಆವರಣೆ ಸರಳವಾಗಿರ್ತದ, ವ್ಯಕ್ತಿತ್ವದ ಶುದ್ಧೀಕರಣ ಮತ್ತು ಸಾಮಾಜೀಕರಣ ಅದರ ಗುರುಯಾಗಿರ್ತದ, ತಾನು ಬದುಕುವುದರ ಸಲುವಾಗಿ ಕಾಯಕಪ್ರಜ್ಞೆ.... ಇನ್ನೊಬ್ಬರ ಬದುಕಿಗಾಗಿ ದಾಸೋಹಪ್ರಜ್ಞೆ..... ಸಿದ್ಧಾಂತದ ವರ್ತುಲದೊಳಗ ಬರಲಿಕ್ಕ ಹೊರಗ ಹೋಗಲಿಕ್ಕ ಸ್ವಾತಂತ್ರ ಇರ್ತದ, ಮೂಲ ಸಿದ್ಧಾಂತಕ್ಕ ಮುಕ್ತ ಅವಕಾಶ ಹೊಂದಿರ್ತದ. ಈ ಲಕ್ಷಣಕ್ಕ ಅನುಗುಣವಾದ ಧರ್ಮ ಹನ್ನೆರಡನೆ

ಶತಮಾನದಲ್ಲಿ ಕಾಣಿಸ್ತು. ಇದನ್ನ 'ಸ್ವತಂತ್ರ ಧರ್ಮ' ಅಂತ ಕರದೆ. ಎನ್ನುವುದರ ಮುಖೇನ ಇವತ್ತಿನ ಧರ್ಮ ಸಂಘರ್ಷಗಳ ಮುಕ್ತಿಗೆ ನಾಂದಿಯಾಗಿದೆ ಅಂತಲೇ ಹೇಳಬಹುದು. ಬಹುಶಃ ಇಂದಿನ ಹಿಂದೂ ಧರ್ಮಕ್ಕೂ ಲಿಂಗಾಯತ ಜಾತಿಗಳನ್ನು ಹೊರತುಪಡಿಸಿ ಇರುವಂತದ್ದು.

ಸನಾತನ ಹಿಂದೂ ಧರ್ಮ ಲಿಂಗಾಯತ ಕ್ರಾಂತಿಯು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಆದರೆ, ಇಂದು ನಡೆಯುತ್ತಿರುವ ರಾಜಕೀಯ ಮೇಲಾಟಗಳಿಂದ ಹಿಂದೂಧರ್ಮ ಮತ್ತು ಲಿಂಗಾಯತ ಬಸವಧರ್ಮ ಸಿದ್ಧಾಂತಗಳು ಒಂದೇ ಎನ್ನುವಂತೆ ಬಿಂಬಿಸಲಾಗುತ್ತಿದೆ. ಆ ರೀತಿ ನೋಡುವುದಾದರೆ ಇಂದಿನ ಲಿಂಗಾಯತರಿಗೂ ಅಂದಿನ ಬಸವ ಚಳುವಳಿಗೂ ಸಂಬಂಧವಿಲ್ಲ ಎಂದು ಭಾವಿಸಬಹುದು. ಇದಕ್ಕೆ ಪುಷ್ಟಿ ಕೊಡುವಂತೆ ನಾಟಕದಲ್ಲಿ ಮತ್ತೊಂದು ಸಂಭಾಷಣೆಯನ್ನು ನೋಡಬಹುದು.

"ಸಂಶೋಧಕರು: ಹಿಮ್ಮುಖವಾಗುವುದು ಬದಲಾವಣೆ ಅಲ್ಲ. ಯಾವುದನ್ನು ಬಿಟ್ಟು ಬಂದಿತ್ತೊ ಮತ್ತ ಅಲ್ಲಿಗೆ ಒಯ್ದು ಕೂಡಿಸ್ಯಾರ. ಯಾವುದೋ ನದಿಯ ನೀರು ತರಿಸಿ ಹಂಚಿದ್ವಿ, ಎಲ್ಲಿಂದ್ಲೊ ಲಾಡು ತಂದು ಕೊಟ್ಟ್ವಿ, ಯಾಕ್ ಇಂಥ ಮನೋಧರ್ಮ ಸೃಷ್ಟಿಯಾಯ್ತು? ನಮ್ಮ ಹಳ್ಳಿಯ ನೀರು ಪವಿತ್ರ ಅಂತ ಯಾಕನ್ನಿಸಲಿಲ್ಲ? ಹಸಿದವರಿಗೆ ಸಿಗೋ ನುಚ್ಚು ಮಜ್ಜಿಗಿ ಯಾಕ್ ಪವಿತ್ರ ಅಂದುಕೊಳ್ಳಲಿಲ್ಲ? ಎಲಿಜಿಬೆತ್ ರಾಣಿಗಿಂತ ನಮ್ಮ 'ಅವ್ವ' ನಮಗೆ ಹೆಚ್ಚಲೇನು?"[3] ಎನ್ನುವುದರ ಮೂಲಕ ಮೌಢ್ಯಗಳ ವಿರುದ್ಧ ಸಂಶೋಧಕನ ನಡೆ ಸಾಗಬೇಕು ಎನ್ನುವುದನ್ನು ಪ್ರತಿಪಾದಿಸಿದ್ದಾರೆ. ಸಂಶೋಧಕ ಸದಾ ನೈತಿಕತೆಯನ್ನು ಹೊಂದಿರಬೇಕು ಎಂದು ಹೇಳುತ್ತಾರೆ. "ಹೊಸ ಪೀಳಿಗೆಯಿಂದ ನಾನು ಪಾಠ ಕಲೀಬೇಕು. ನನ್ನ ವ್ಯಕ್ತಿತ್ವ, ತಿಳಿವಳಿಕೆ ಛಿದ್ರ ಆಗಬೇಕು. ಹೊಲದ ತುಂಬಾ ಹೊಸ ಬೆಳಿ ಬರಬೇಕು. ನಾನು ಸಂಶೋಧನೆಯೊಳಗ ಇನ್ನೊಮ್ಮೆ ಹೊಸ ಮನುಷ್ಯನಾಗಿ ಹುಟ್ಟಿಬರಬೇಕು...... ಹೊಸ ಮನುಷ್ಯನಾಗಿ....."[4] ಎನ್ನುತ್ತಿದ್ದಂತೆ ತೆರೆ ಬೀಳುವುದು. ಸ್ವೀಕಾರ ಸಹಿಷ್ಣುತೆಗಳ ಮೂಲಕ ಶೋಧಕಗಳು ನಡೆಯಬೇಕು ಎನ್ನುವ ಆಶಯವನ್ನು ಇಲ್ಲಿ ಸಂಶೋಧಕ ಹೊಂದಿದ್ದಾನೆ ಎನ್ನಬಹುದು.

ಸಂಶೋಧಕರ ವಿರುದ್ಧ ಕೊಲೆಯ ಸಂಚು ರೂಪಿಸಲಾಗಿರುತ್ತದೆ. ಅದನ್ನು ನೆನೆದು ವಿದ್ವಾಂಸರು ಚರ್ಚೆಗೆ ಮುಂದಾಗುತ್ತಾರೆ. ಚರ್ಚೆಯ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಜಾತಿ, ಧರ್ಮ, ಸಂಸ್ಕೃತಿ, ಸಮಾಜ, ವೈಚಾರಿಕತೆ, ವಚನಗಳ ಪರಿಷ್ಕರಣೆ, ಪದಬಳಕೆಯ ಇತಿಮಿತಿಗಳು, ದೇವರ ಅಸ್ಮಿತೆ, ಸಂಶೋಧಕರು ನಂಬಿದ ವಾದಗಳು, ಸಂಶೋಧಕರ ಕೆಲವು ವೈಯಕ್ತಿಕ ವಿಚಾರಗಳು, ಸಂಶೋಧಕರ ವಿಚಾರ ಸಂಕಿರಣ

ಸಂದರ್ಭಗಳು, ಮಾಧ್ಯಮಗಳ ಮತ್ತು ಸಂಶೋಧಕರ ಸಂಬಂಧ ಮುಂತಾದ ವಿಚಾರಗಳನ್ನು ನಾಟಕಕಾರರು ಮೂರನೆಯ ದೃಶ್ಯದಲ್ಲಿ ಚರ್ಚೆ ಮಾಡಿದ್ದಾರೆ. ಅಂತಿಮವಾಗಿ ಸಂಶೋಧಕನು ಭೌತಿಕವಾಗಿಯೂ ಮತ್ತು ಮಾನಸಿಕವಾದ ಕೊಲೆ ಎದುರಿಸುವುದು ನಿಶ್ಚಯ ಎನ್ನುತ್ತಾರೆ ವಿದ್ವಾಂಸರು. ಸಮಕಾಲೀನ ಸಂದರ್ಭಗಳು ಮನುಷ್ಯನ ಮೇಲೆ ನಡೆಯುವ ದಾಳಿಗಳ ಬಗ್ಗೆ ಚರ್ಚೆ ಮಾಡುತ್ತಾರೆ. ಅದಕ್ಕೆ ಉದಾಹರಣೆಯಾಗಿ

“ವಿದ್ವಾಂಸ 2: ನಾಯಿಪಾಡು... ಮನುಷ್ಯರು ಮನುಷ್ಯರನ್ನ ಬೇಟೆ ಆಡೋ ಕಾಲ ಇದು. ಸಿದ್ಧಾಂತಗಳು ಸಿದ್ಧಾಂತಗಳನ್ನ ಬೇಟೆ ಆಡೋ ಕಾಲ ಇದು. ಒಟ್ನಲ್ಲಿ ಬೇಟೆ ತಪ್ಪಿದ್ದಲ್ಲ. ಎಂದೆಂದೂ ಮುಗಿಯದ ಬೇಟೆ. ಇದು ಹಸಿದವರ ಬೇಟೆ ಅಲ್ಲ. ಹೊಟ್ಟೆ ತುಂಬಿದವರ ಬೇಟೆ. ಇದು ಮಾಡೋ ಅನಾಹುತ ಹೆಚ್ಚು ಭೀಕರವಾಗಿರ್ತದ.”[5]

ನಾಲ್ಕನೆಯ ದೃಶ್ಯ ಕ್ಲೈಮ್ಯಾಕ್ಸ್ ದೃಶ್ಯ. ನಾಲ್ಕನೇ ದೃಶ್ಯ ಮೊದಲನೇ ದೃಶ್ಯದ ಮುಂದುವರೆದ ದೃಶ್ಯವಾಗಿದೆ. ಸಂಶೋಧಕ ಮತ್ತು ಯುವಕನ ನಡುವೆ ಮತ್ತೆ ಚರ್ಚೆ ಆರಂಭವಾಗುತ್ತದೆ. ಈ ಬಾರಿ ಯುವಕನು ಗಾಢವಾದ ನಂಬಿಕೆಗಳನ್ನು ಹೊಂದಿರುತ್ತಾನೆ. ಇದರಿಂದ ಹೊರಬರಲಾರದೆ ತನಗೆ ಆರೋಪಿಸಲಾದ ದೇಶಭಕ್ತಿ ಪಟ್ಟದಿಂದ ಬಂದಿಯಾಗಿರುತ್ತಾನೆ. ದೇವರು–ಧರ್ಮದ ಹುಡುಕಾಟದಲ್ಲಿ ಯುವಕ ತನ್ನನ್ನು ಕಳೆದುಕೊಂಡು ಪರಕೀಯನಾಗಿರುತ್ತಾನೆ.

ಈಗ ಪ್ರಾರಂಭದಲ್ಲಿ ಹೇಳಿದ ಬುದ್ಧ ಮತ್ತು ಅಂಗುಲಿಮಾಲರ ಕಥೆಯನ್ನು ನೆನೆಸಿಕೊಳ್ಳುವುದಾದರೆ, ಅತ್ಯಂತ ಕ್ರೂರಿಯೂ ಮತ್ತು ದರೋಡೆಕೋರನಾದ ಅಂಗುಲಿಮಾಲ ಬುದ್ಧನ ತತ್ವಗಳಿಗೆ ಶರಣಾಗುತ್ತಾನೆ. ಆದರೆ ನಾಟಕದಲ್ಲಿನ ಯುವಕನ ಪಾತ್ರ ಸಂಶೋಧಕನನ್ನು ಕೊಲ್ಲುತ್ತದೆ. ಕೊಲ್ಲುವ ಮತ್ತು ಶರಣಾಗುವುದರ ಮಧ್ಯೆ ಜೀವಪರ ಮತ್ತು ಜೀವವಿರೋಧಿಯ ಬೌದ್ಧಿಕ ಸಂಘರ್ಷಗಳಿಗಿಂತ ಭೌತಿಕ ಸೇಡುಗಳೇ ಮುನ್ನೆಲೆಯಲ್ಲಿವೆ. ಯುವಕನ ಮೇಲೆ ಪಟ್ಟಭದ್ರಹಿತಾಸಕ್ತಿಗಳ ಕರಿನೆರಳಿನ ಒತ್ತಾಯಗಳಿವೆ. ಹಾಗಾಗಿ ಸಂಶೋಧಕನನ್ನು ಮುಗಿಸುವಷ್ಟು ಕ್ರೌರ್ಯವನ್ನು ಯುವಕನಲ್ಲಿ ಬೆಳಸಲಾಗಿದೆ.

“ಯುವಕ: ಹೇಳಿದ್ದನ್ನ ಕೇಳ್ತಾ ಇದ್ರ ನಿಮ್ಮ ವಿಚಾರದೊಳಗ ಏನೊ ಅರ್ಥ ಅದ ಅನ್ನಿಸ್ತದ. ಆದ್ರ ನೀವೆಷ್ಟು ಅಸಹಾಯಕರೊ ನಾನೂ ಅಷ್ಟೇ ಅಸಹಾಯಕ. ಹಿಂತಿರುಗಿ ಬರಲಾರದಷ್ಟು ದೂರ ಬಂದೀನಿ. ಕೊಟ್ಟ ಆಜ್ಞೆ ಪಾಲಿಸ್ಬೇಕಾಗ್ಯಾದ. ನಾನು ದಾರಿ ತಪ್ಪಿದ ಪಾಪಿ ಮನುಷ್ಯ. ನನ್ನ ಕಣ್ಣೊಳಗ ಯಾರ್‍ದೊ ನೆರಳು. ನಾಲಗಿ ಮ್ಯಾಲ ರಕ್ತದ ರುಚಿ. ಅಂಗೈಯೊಳಗ ರಕ್ತದ ಕಲೆ. ತೆಲಿಯೊಳಗ ಒಂದು ದೆವ್ವ ಕುಣಿದು ಸಿಡಿವ್ಹಂಗ ಆಗ್ಯಾದ. ಬ್ಯಾರೆ ದಾರಿ ಕಾಣುವಲ್ದು. ನನ್ನನ್ನು ಕ್ಷಮಿಸಿ....”[6] ಬೇರೆಯವರ ದ್ವೇಷಾಗ್ನಿಯಲ್ಲಿ

ಸಂಶೋಧಕನನ್ನು ಕೊಲೆ ಮಾಡುವುದರ ಮೂಲಕ ನಾಟಕಕ್ಕೆ ತೆರೆ ಬೀಳುವುದು. "ಕಾಲಗರ್ಭದಿಂದ ಸತ್ಯವನ್ನು ಹೆಕ್ಕಿ ತೆಗೆಯಲು ಹಂಬಲಿಸುವ ಸಂಶೋಧಕನ ತಳಮಳಗಳನ್ನು ಈ ನಾಟಕ ಅನನ್ಯವಾಗಿ ಅಭಿವ್ಯಕ್ತಿಸಿದೆ. ಸತ್ಯವೆಂಬ ಅಗ್ನಿದಿವ್ಯವನ್ನು ಹಿಡಿಯಲು ಯತ್ನಿಸಿ ಮೈ ಸುಟ್ಟುಕೊಂಡ ಜ್ಞಾನಿಗಳ ಪರಂಪರೆಯೇ ಲೋಕದಲ್ಲಿದೆ" ಎಂದು ಗೀತಾ ವಸಂತ ಅವರು ಅಭಿಪ್ರಾಯಿಸಿದ್ದಾರೆ. ಒಟ್ಟಾರೆಯಾಗಿ "ಸಂಶೋಧನೆ ತಿಳುವಳಿಕೆ ಅನುಭವಿಸುವಿಕೆ ಮತ್ತು ಅದನ್ನು ಮತ್ತೆ ಮನನ ಮಾಡಿಕೊಳ್ಳುವುದೇ ಧರ್ಮ" ಎಂಬ ಬುದ್ಧಗುರುವಿನ ಸಂದೇಶ ಎಲ್ಲ ಧರ್ಮಗಳ ಕಣ್ಣಿನ ಹುಣ್ಣಿಗೆ ಮದ್ದಾಗಬೇಕಾಗಿದೆ.

ಅಡಿ ಟಿಪ್ಪಣಿಗಳು :

1. ವಿಕ್ರಮ ವಿಸಾಜಿ– 'ರಕ್ತವಿಲಾಪ', ಪಲ್ಲವ ಪ್ರಕಾಶನ ಚನ್ನಪಟ್ಟಣ, ಮುದ್ರಣ–2020, ಪುಟ–12
2. ಅದೇ ಪುಟ–26
3. ಅದೇ ಪುಟ–28
4. ಅದೇ ಪುಟ–30
5. ಅದೇ ಪುಟ–44
6. ಅದೇ ಪುಟ–61

ಆಕರ ಗ್ರಂಥ :

1. ವಿಕ್ರಮ ವಿಸಾಜಿ– 'ರಕ್ತವಿಲಾಪ', ಪಲ್ಲವ ಪ್ರಕಾಶನ ಚನ್ನಪಟ್ಟಣ, ಮುದ್ರಣ–2020

ಪರಾಮರ್ಶನ ಗ್ರಂಥಗಳು :

1. ಡಿ. ಆರ್. ನಾಗರಾಜ್– 'ಅಮೃತ ಮತ್ತು ಗರುಡ' ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಮುದ್ರಣ–1990
2. ಡಾ. ಮೂಡ್ನಾಕೂಡು ಚಿನ್ನಸ್ವಾಮಿ– 'ಬುದ್ಧಾನಸಾಸನಂ' ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ ಮುದ್ರಣ–2020
3. ರಂಜಾನ್ ದರ್ಗಾ – ಬುದ್ಧ, ಬಸವ ಮತ್ತು ಅಂಬೇಡ್ಕರ್– ಲಡಾಯಿ ಪ್ರಕಾಶನ, ಗದಗ ಮುದ್ರಣ–2015

***

ಜನಪದ ಸಾಹಿತ್ಯ : ಮಹಿಳೆ

ಡಾ. ಮಣೂರ ಸುಧಾರಾಣಿ ಶಿವಪ್ಪಾ

ಅತಿಥಿ ಉಪನ್ಯಾಸಕಿ

ಕನ್ನಡ ಅಧ್ಯಯನ ವಿಭಾಗ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

sudharanismanur@gmail.com

ಮಹಿಳೆಯನ್ನು ಮತ್ತೆ ಮನೆಯೊಳಗೆ ದೂಡುವ, ಸಾರ್ವಜನಿಕ ಜೀವನದಿಂದ ಹೊರಗೆ ತಳ್ಳುವ ಮಾತುಗಳು ಬೇರೆ ಬೇರೆ ಕಡೆಯಿಂದ ಕೇಳಿಬರುತ್ತಿರುವ ಈ ಸಂದರ್ಭದಲ್ಲಿ ಜಾನಪದ ಹಾಡು, ಕಥೆಗಳಲ್ಲಿನ ಮಹಿಳೆಯ ಧ್ವನಿಯನ್ನು ಮತ್ತೆ ಹೊರತರಬೇಕಾಗಿದೆ. ಜಾನಪದ ಮಹಿಳಾ ಕೇಂದ್ರಿತವಾದ ಭಾಷೆ. ಭಾಷೆ, ರೂಪಕ ಹಾಗೂ ಸಾಹಿತ್ಯದ ದೃಷ್ಟಿಯಿಂದ ನಮಗೆ ಜಾನಪದದಲ್ಲಿ ಮಹಿಳೆ ಒಂದು ದೊಡ್ಡ ಆಕರ ಸಾಮಗ್ರಿಯನ್ನು ಇಟ್ಟು ಆಕೆ ಮರೆಯಾಗಿದ್ದಾಳೆ. ಮರೆಯಾದ ಹೆಣ್ಣಿನ ಧ್ವನಿಯನ್ನು ಈಚೆ ತಂದು ನಾವು ಕರ್ನಾಟಕದ ಮಹಿಳಾ ಚರಿತ್ರೆಯನ್ನು ಕಟ್ಟಿದರೆ, ಅದರಿಂದ ಕರ್ನಾಟಕದ ಶೈಕ್ಷಣಿಕ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆ ಸಾಧ್ಯವಿದೆ. ಮಹಿಳೆ ಇಲ್ಲದೆ ಜಾನಪದ ಇಲ್ಲ. ನಮ್ಮತನ ಉಳಿಯಬೇಕಾದರೆ ಜಾನಪದ ಗೀತೆಗಳನ್ನು ಮೂಲಧಾಟಿಯಲ್ಲೇ ಹಾಡಬೇಕು. ಇತ್ತೀಚಿಗೆ 'ಕೋಲುಮಂಡೆ ಜಂಗಮದೇವ' ಹಾಡಿಗೆ ಆಧುನಿಕ ಸ್ಪರ್ಶ ನೀಡಿ, ಅರೆಬರೆ ಬಟ್ಟೆ ತೊಡಿಸಿ ವ್ಯಾಪಾರ ಉದ್ದೇಶದಿಂದ ಯೂಟ್ಯೂಬ್‌ನಲ್ಲಿ ಒಬ್ಬ ಹಾಕಿದ್ದ. ಮೂಲ ಉಳಿಸದೇ ಇದ್ದರೆ ಶಿವಶರಣ ಸಂಕಮ್ಮ ಹಾಡು ಹೀಗೆ ಇತ್ತೇನೋ ಎಂಬ ತಪ್ಪು ಸಂದೇಶವನ್ನು ಮುಂದಿನ ಪೀಳಿಗೆಗೆ ನೀಡಿದಂತಾಗುತ್ತದೆ.

ಜಾನಪದ ಎನ್ನುವುದು ಸಮಕಾಲೀನ. ಬದುಕಿನೊಳಗೇ ಜಾನಪದವಿದೆ. ನಮ್ಮ ಅಜ್ಜಿಗೆ ಹೋಗಿ ನೀನು ಜಾನಪದ ಕಲಾವಿದೆ ಎಂದರೆ ನಗುತ್ತಿದ್ದರು. ಏಕೆಂದರೆ ಜಾನಪದ ಕಲಿಯಲು ಆಕೆ ಕಲಾವಿದೆಯಾಗಿರಬೇಕಾಗಿಲ್ಲ. ಆಕೆ ಅದರೊಳಗೆ ಏನು ಬೇಕಾದರೂ ಸೇರಿಸಬಹುದು, ಹೇಗಾದರೂ ಹಾಡಬಹುದು. ಇದನ್ನು ನಾವು ಯುವಜನತೆಗೆ ಕಲಿಸಲು ನಮಗೆಷ್ಟು ಮೂಲ ಗೊತ್ತಿದೆ ಎನ್ನುವುದು ಮುಖ್ಯ. ಜಾನಪದ ಜೀವನ ಸಾಹಿತ್ಯ ಜಾನಪದ ಎಂದರೆ ಮೊದಲು ಮನಸ್ಸಿಗೆ ಬರುವುದು ತಾಯಿ, ಮಹಿಳೆ. ಬೀಸುತ್ತಾ, ಕುಟ್ಟುತ್ತಾ, ಮಗುವನ್ನು ಮಲಗಿಸುತ್ತಾ ತನ್ನ ಜಾನಪದ ಸಂಪ್ರದಾಯ ಪದಗಳೊಳಗೆ ಅವಳ ಅದ್ಭುತವಾದ ಕಲ್ಪನಾ ಶಕ್ತಿಯನ್ನು ತೆರೆದಿಟ್ಟಳು. ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯ ಇರದ ಸಂದರ್ಭದಲ್ಲಿ ಮುಕ್ತ ಚರ್ಚೆ ಸಾಧ್ಯವಾಗುತ್ತಿರಲಿಲ್ಲ ಇಂತಹ ಸಂದರ್ಭದಲ್ಲಿ ಬದುಕಿನ ಸರ್ವವಿವರಗಳನ್ನು, ಮಹಿಳೆಯರ ಅನುಭವಗಳನ್ನು ದಾಖಲಿಸಿದ್ದು ಜಾನಪದ. ಕವಿ ಬರೆಯುವುದು ವೈಯಕ್ತಿಕ, ಸಮುದಾಯ ಅನುಭವ ಜಾನಪದದಲ್ಲಿದೆ.

ಜಾನಪದ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿ ಶ್ರೀಮಂತಗೊಳಿಸುವಲ್ಲಿ ಮಹಿಳೆಯ ಪಾತ್ರ ಹಿರಿದಾಗಿದೆ. ಮಹಿಳೆ ತನ್ನ ಮನೆ ಕೆಲಸದ ಜತೆಗೆ ಹೊಲ ಗದ್ದೆಗಳಲ್ಲಿ ದುಡಿಯುತ್ತಿದ್ದಾಳೆ. ಕೆಲಸದ ಒತ್ತಡದ ಮಧ್ಯೆಯೂ ಜನಪದ ಹಾಡುಗಳನ್ನು ಹಾಡಿ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಮಾಡುತ್ತಿದ್ದಾಳೆ. ಜನಪದ ಸಾಹಿತ್ಯ ಅದು ಜನರ ಪದ. ಜನರ ಬಾಯಿಯಿಂದ ಬಾಯಿಗೆ, ಸಂದರ್ಭ ಸನ್ನಿವೇಶಗಳಿಗಾನುಸಾರವಾಗಿ, ಪರಿಸ್ಥಿತಿ, ನಂಬಿಕೆ ನಡುವಳಿಕೆಗಳಿಗೆ ಅನುಗುಣವಾಗಿ ಹುಟ್ಟಿಕೊಂಡಂತಹ ಗೀತೆಗಳು, ನೃತ್ಯಗಳು, ಪದಗಳು ಎಲ್ಲವೂ ಸಹ ನಮ್ಮ ಹಿರಿಯ ತಲೆಮಾರಿನವರ ಆಚಾರ–ವಿಚಾರಗಳಿಗೆ ಪ್ರತ್ಯಕ್ಷ ಸಾಕ್ಷಿಗಳಿದ್ದಂತೆ ಜನಪದ ಸಾಹಿತ್ಯ ಮತ್ತು ಮಹಿಳೆಯರ ನಡುವೆ ಅದೊಂದು ರೀತಿಯಲ್ಲಿ ಅವಿನಾಭಾವ ಸಂಬಂಧವಿದ್ದಂತೆ ಇದೆ. ಹಿಂದಿನ ದಿನಗಳಲ್ಲಿ ಮಹಿಳೆಯಿದ್ದ ಸಾಮಾಜಿಕ ಕೌಟುಂಬಿಕ ಪರಿಸರಗಳು ಎಲ್ಲವನ್ನು ಸಹ ಜನಪದ ಸಾಹಿತ್ಯದಡಿ ಬರುವಂತಹ ಪದಗಳು, ಒಗಟುಗಳು, ಗಾದೆಗಳೆಲ್ಲವೂ ಒಳಗೊಂಡಿದೆ ಅನ್ನುವಂತಹದ್ದನ್ನು ನಾವು ಗಮನಿಸಬಹುದು. ಬಹುಶಃ ಆಕೆಗೆ ದುಃಖ ದುಗುಡಗಳಿಲ್ಲದಿರುತ್ತಿದ್ದರೆ, ಹೆಣ್ಣಿಗೊಂದು ಸಾಮಾಜಿಕ ಅಸ್ತಿತ್ವ ಇಲ್ಲದೇ ಹೋಗಿದ್ದಿದ್ದರೆ ಜನಪದ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆಗೆ ಸ್ವಲ್ಪ ಮಟ್ಟಿನ ತೊಡಕಾಗಿರಬಹುದೇನೋ ಅಷ್ಟರ ಮಟ್ಟಿಗೆ ಜನಪದ ಸಾಹಿತ್ಯ ಮಹಿಳೆಯರ ನೋವು–ನಲಿವು– ಭಾವನೆ– ನಂಬಿಕೆಗಳಿಗೆ ಸಾಕ್ಷಿಯಾಗಿದೆ. ಈಗ ಜನಪದ ಸಾಹಿತ್ಯದ ಬಗ್ಗೆ ಸ್ವಲ್ಪ ಮಟ್ಟಿಗೆ ಹೇಳುವುದಾದರೆ ಪ್ರತಿಯೊಂದು ನಾಡಿನ ಜನತೆಯೂ ತನ್ನ ಆಚಾರ

ವಿಚಾರಗಳ ಮೂಲಕ ಪರಂಪರೆಯಿಂದ ಅನೇಕ ಸಂಗತಿಗಳನ್ನು ಹೊತ್ತು ತರುತ್ತಿರುತ್ತದೆ. ಪದ್ಧತಿ, ಸಾಹಿತ್ಯದ ಬಗೆ, ಮದ್ದು ಕ್ರೀಡೆ, ಕಲೆ, ನೃತ್ಯ, ನಾಟಕ, ಅಡುಗೆ–ಉಡುಗೆ–ತೊಡುಗೆ, ಧಾರ್ಮಿಕ ಕ್ರಿಯೆ, ಜೀವನ ವಿಧಾನ ಇವುಗಳೆಲ್ಲವೂ ಅದರೊಂದಿಗೆ ಸೇರಿರುತ್ತವೆ.

ಇವೆಲ್ಲವನ್ನೂ ಒಟ್ಟಾರೆ ಜಾನಪದ ಎನ್ನುವ ವಿಶಾಲ ಅರ್ಥದಡಿ ನಾವು ತಂದ್ದಿದ್ದೇವೆ. ಜಾನಪದ ಸಾಹಿತ್ಯವೆಂದರೆ ಗೀತೆ, ಲಾವಣಿ, ಕಥೆ, ಗಾದೆ, ಒಗಟು ಹೀಗೆ ಇಂತಹ ನಾನಾ ಪ್ರಕಾರಗಳನ್ನು ಒಳಗೊಂಡಿರುವಂತಹವುಗಳು. ನಾಡಿನ ಸಾಂಸ್ಕೃತಿಕ ಚರಿತ್ರೆಯ ಹೊಸ ನಿರ್ಮಾಣಕ್ಕೆ ಅಗತ್ಯವಾಗಿರುವ ಅದೆಷ್ಟೋ ಅಂಶಗಳು ನಮಗೆ ಜನಪದ ಸಾಹಿತ್ಯದಲ್ಲಿ ದೊರೆಯುತ್ತವೆ. ಬೇರೆ– ಬೇರೆ ಆದಿವಾಸಿಗಳ ಗುಂಪುಗಳು, ಗಿರಿಜನಗಳು, ಹಳ್ಳಿಗರು, ಹೆಂಗಸರು ಇವರೆಲ್ಲರೂ ತಮ್ಮ ಬದುಕನ್ನು ಕಡೆಗಣಿಸುವುದರಲ್ಲಿ ಅಪಾಯವಿದೆ ಅನ್ನುವುದು ವಾಸ್ತವ ಸಂಗತಿ. ಆದರೆ ಇಂತಹ ಜನರೇ ಶೇ. 80 ರಷ್ಟು ಭಾಗ ಇದ್ದಾರೆ ಎಂಬುವುದೂ ಅಷ್ಟೇ ಸತ್ಯ. ಬಹುಶಃ ಅಕ್ಷರ ಕಲಿಕೆಯಲ್ಲಿ ಆಸಕ್ತಿ ತೋರದೇ ಇದ್ದಂತಹ ಈ ಜನರು ತಮ್ಮದೇ ಪ್ರತ್ಯೇಕ ಸಂಸ್ಕೃತಿಯ ಜೊತೆ ಬೆಳೆದು ಬಂದವರು ಮತ್ತು ಸಾಹಿತ್ಯ– ಸಂಸ್ಕೃತಿ ದಬ್ಬಾಳಿಕೆಗೆ ಒಳಗಾದವರು ಎನ್ನುವಲ್ಲಿ ಎರಡು ಮಾತಿಲ್ಲ. ಜನಪದ ಅಧ್ಯಯನದಿಂದ ನಮ್ಮ ಸಾಂಸ್ಕೃತಿಕ ಚರಿತ್ರೆಯ ಪುನರ್ ನಿರ್ಮಾಣಕ್ಕೆ ಹೊಸ ವಸ್ತು ಸಿಗುತ್ತದೆ ಎಂದಾಕ್ಷಣ ಅವೆಲ್ಲವನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳಬೇಕೆಂದಲ್ಲ. ಅದು ಅಪ್ಪಟ ಚಿನ್ನವೆಂದಲ್ಲ. ಏಕೆಂದರೆ ಜಾನಪದ ಸಾಹಿತ್ಯ– ಸಂಸ್ಕೃತಿಯ ಹೆಸರಿನಲ್ಲಿ ಹಲವಾರು ಮೂಢನಂಬಿಕೆಗಳು ಜನರನ್ನು ಸುಲಿಗೆ ಮಾಡಿದ್ದನ್ನು ಗಮನಿಸಬಹುದು.

ಹೆಚ್ಚಿನ ಸಾಮಾಜಿಕ ಪದ್ಧತಿಗಳನ್ನು ಅವುಗಳು ಸೃಷ್ಟಿಯ ಆದಿಯಿಂದಲೂ ಇದ್ದಂತಹವುಗಳು ಅಥವಾ ದೇವರು ಸೃಷ್ಟಿಸಿದವುಗಳು ಎಂಬುವುದನ್ನೇ ಜನರು ನಂಬಿಕೊಂಡು ಬಂದವರು. ಒಡೆಯನಿಗೆ ಬಲಿಯಾದ ಕೆಳವರ್ಗದ ಬಂಟರಿಗೆ ಇಲ್ಲಿ ಲೆಕ್ಕವಿಲ್ಲ. ಕೆರೆಗೆ, ಪ್ರವಾಹಕ್ಕೆ, 'ನಿಧಿ'ಗೆ ಬಲಿಯಾದ ಗರತಿಯರು, ಗರ್ಭಿಣಿಯರು ಮತ್ತು ಸತ್ತ ಗಂಡನ ತಲೆಯನ್ನು ಮಡಿಲಲ್ಲಿ ಕಟ್ಟಿಕೊಂಡು ಅಗ್ನಿಗೆ ಆಹುತಿಯಾದ ಹೆಣ್ಣು ಮಕ್ಕಳನ್ನು ನಾವು ಈ ನಿಟ್ಟಿನಲ್ಲಿ ಮರೆಯುವಂತಿಲ್ಲ. ಜಾನಪದದ ಅನೇಕ ಪದರುಗಳು ಅತ್ಯಂತ ನೂತನ ಸಂಗತಿಗಳನ್ನು ಹೊರಗೆ ಹಾಕುತ್ತವೆ. ಫಲ ಸಮೃದ್ಧಿ ದೇವತೆಯ ಆರಾಧನೆ, ಬೆತ್ತಲೆ ಹೆಣ್ಣು ಪೂಜಿಸುವುದಕ್ಕೆ ಮೊದಲಾದ ಪದ್ಧತಿಗಳು ಇಂದಿಗೂ ಇವೆ. ಶಿಷ್ಟ ಸಾಹಿತ್ಯದಲ್ಲಿ ನೋಡಿದಾಗ ಅನೇಕ ಶಿಷ್ಟರು ಎಂದು ಅನ್ನಿಸಿಕೊಂಡವರು ಹೆಣ್ಣನ್ನು ಅತ್ಯಂತ ಹೀನಾಯವಾಗಿ ಚಿತ್ರಿಸಿರುವುದನ್ನು ಸಹ

ನಾವು ಕಾಣುತ್ತಿದ್ದೇವೆ. ಆದರೆ ಜನಪದ ಸಾಹಿತ್ಯದಲ್ಲಿ, ಜನಪದ ಆವರಣದಲ್ಲಿ, ಬೆವರು ಹರಿಸಿ ದುಡಿಯುವ ಹೆಣ್ಣು ಕೂಡ ಅನೇಕ ವಿಚಾರಗಳಲ್ಲಿ ಮಾನ್ಯಳಾದವಳು. ಜನಪದ ಸಾಹಿತ್ಯ ರಚನೆಯ ಬಹುಪಾಲು ಕೀರ್ತಿ ಈಕೆಯದು ಎಂದರೆ ತಪ್ಪಾಗಲಾರದು. ಮಕ್ಕಳನ್ನು ಹೊತ್ತು, ಹೆತ್ತು, ಸಾಕಿ, ಮುದ್ದಾಡಿದ ಆಕೆ ತನ್ನ ಅನುಭವವನ್ನು ಸುಂದರವಾಗಿ ಅನೇಕ ತ್ರಿಪದಿಗಳಲ್ಲಿ ಹಾಡಿದ್ದಾಳೆ. ಈ ಪದಗಳನ್ನು ಲಾಲಿ, ಜೋಗುಳ, ನಿದ್ದೆಪದ, ತೊಟ್ಟಿಲಿನ ಪದ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಕ್ಕಳನ್ನು ನೋಡಿ, ಆಡಿಸಿ, ಅವುಗಳ ಆಟಪಾಠಗಳಿಂದ ಆನಂದಗೊಂಡು ತಾಯಿ ತೊಟ್ಟಿಲು ತೂಗುತ್ತ ರಾಗವಾಗಿ ತನ್ನ ಕಂದನ ಗುಣಗಾನ ಮಾಡುತ್ತಾಳೆ. ಆಡಿ ಬಾ ಎನಕಂದ ಅಂಗಾಲ ತೊಳೆದೇನಾ ತೆಂಗೀನ ಕಾಯಿ ತಿಳಿನೀರತಕ್ಕೊಂಡು ಬಂಗಾರ ಪಾದ ತೊಳಿದೇನು. ದಿನನಿತ್ಯದ ಚಟುವಟಿಕೆಗಳನ್ನು ಕಾವ್ಯದ ಮೂಲಕ ಇಲ್ಲಿ ಎಷ್ಟು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ ಎಂಬುವುದನ್ನು ನೋಡಬಹುದು.

ಆ ರೂಪಕಗಳ ಬಳಕೆಗಳಿಂದ ಎಷ್ಟು ಚೆನ್ನಾಗಿ ಒಂದು ಸನ್ನಿವೇಶ ಚಿತ್ರಿತಗೊಂಡಿದೆ ಎಂಬುದನ್ನು ನಾವಿಲ್ಲಿ ಗಮನಿಸಬಹುದು. ಹೀಗೆ ಮಲಗುವ ಕಂದನಿಗೆ, ಹಠ ಮಾಡುವ ತನ್ನ ಮುದ್ದು ಮಗುವಿಗೆ, ಆಡಲು ಹೋಗಿ ಬಾರದಂತಹಾ ತನ್ನ ಮಗುವನ್ನು ಹುಡುಕುವುದಕ್ಕಾಗಿ ಪ್ರತೀ ಬಾರಿಯೂ ಆಕೆ ಹಾಡುವಂತಹ ಹಾಡುಗಳು ಬಹುಶಃ ನಾವು ಇಂದು ಜನಪದ ಸಾಹಿತ್ಯದಲ್ಲಿ ನೋಡುವಂತಹ ಹಾಡುಗಳೇ. 'ಹೆತ್ತ ತಾಯಿಗೆ ಹೆಗ್ಗಣವೂ ಮುದ್ದು' ಅನ್ನುವ ಹಾಗೆ ಮಗು ಎಷ್ಟು ಹಠ ಮಾಡಿದರೂ ತಾಯಿ ಹೇಳುತ್ತಾಳೆ. ಅತ್ತರೆ ಅಳಲವ್ವಾ ಈ ಕಂದ ನನಗಿರಲಿ ಕೆಟ್ಟರೆ ಕೆಡಲಿ ಮನೆಗೆಲಸ 'ಮಕ್ಕಳಿರಲವ್ವಾ ಮನೆ ತುಂಬಾ' ಜನಪದ ಸೊಗಸು ನೇರ ಮತ್ತು ಸರಳ. ತನ್ನ ಮನದ ಇಂಗಿತವನ್ನು ತಾಯಿಯಾದವಳು ತೋಡಿಕೊಳ್ಳುವ ಪರಿ ನಿಜಕ್ಕೂ ಅದ್ಭುತ. ಹಿಂದೆ ಮಕ್ಕಳೆಲ್ಲಾ ಚಂದಿರನನ್ನು ತಿಂಗಳು ಮಾಮ ಎಂಬ ಮುದ್ದಾದ ಹೆಸರಿನಿಂದ ಕರೆಯುತ್ತಿದ್ದರು. ತಾಯಿಯಂದಿರು ತಮ್ಮ ಹಾಡುಗಳ ಮೂಲಕ ಮಕ್ಕಳಿಗೆ ಚಂದಿರನನ್ನು ತೋರಿಸಿ ಊಟಮಾಡಿಸುತ್ತಿದ್ದಾಗ ತಮ್ಮ ಹಾಡುಗಳಲ್ಲಿ ಚಂದಿರನಿಗೆ ಕೊಡುತ್ತಿದ್ದ ಹೆಸರುಗಳು ನಿಜಕ್ಕೂ ಅನುರೂಪವಾಗಿತ್ತು.

ಹೀಗೆ ಲಾಲಿ ಹಾಡುಗಳು ಮಕ್ಕಳನ್ನು ಸಮಾಧಾನ ಮಾಡಲು ಬಳಸುವಂತಹ ಜನಪದ ಹಾಡುಗಳಾದರೆ, ಬೀಸುಕಲ್ಲು ಹಾಡು, ನಾಟಿ ಹಾಕುವಾಗ– ಕಳೆ ಕೀಳುವಾಗ ಹೀಗೆ ದುಡಿಯುವ ಸಂದರ್ಭದಲ್ಲಿ ಹೆಂಗಸರು ನಾನಾ ಬಗೆಯ ಹಾಡುಗಳನ್ನು ಹಾಡುತ್ತಿದ್ದದ್ದನ್ನು ನಾವು ಕಂಡುಕೊಳ್ಳಬಹುದು. ಬಹುಶಃ ಆ ಜನಪದೀಯ ಪರಿಸರ ಇಂತಹ ಹಾಡುಗಳ ರಚನೆಗೆ ಪೂರಕವಾಗಿತ್ತು ಎನ್ನುವಂತಹದ್ದು ಇಲ್ಲಿ

ಗಮನಿಸಬೇಕಾದಂತಹ ಅಂಶ. ದುಡಿಮೆಯ ಆಯಾಸವನ್ನು ಕಡಿಮೆ ಮಾಡುವುದಗೋಸ್ಕರ ಇಂತಹ ಹಾಡುಗಳ ಹುಟ್ಟು ಆಯಿತು ಅನ್ನುವಂತಹದ್ದು ಸಹ ಅಷ್ಟೇ ಸತ್ಯ. ಅನೇಕ ಜನಪದ ಸಾಹಿತ್ಯಗಳಲ್ಲಿ ಸಮಾಜ ಒಪ್ಪಿಕೊಂಡಿರುವಂತಹ ಮೌಲ್ಯಗಳನ್ನೇ ನಾವು ಕಾಣಬಹುದು.

ಶಿಷ್ಟ ಸಮಾಜದ ಪ್ರಭಾವದಡಿಯಲ್ಲೇ ಜನಪದ ಸಮಾಜವೂ ಬೆಳೆಯಿತು. ದುಡಿದು ಉಣ್ಣುವ ಹಕ್ಕು, ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡು ಮಹಿಳೆ ಗಂಡಿನ ಗುಲಾಮಳಾದಳು. ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನೇ ಜನಪದ ಸಮಾಜವೂ ಸ್ವೀಕರಿಸಿದ್ದರಿಂದ ಆ ಮೌಲ್ಯಗಳೇ ಜನಪದ ಹೆಣ್ಣಿಗೆ ಆದರ್ಶವೆನಿಸಿದವು. ಆದರೂ ನಾಗರಿಕತೆಯಿಂದ ದೂರವಿರುವ ಬುಡಕಟ್ಟು ಜನಾಂಗಗಳು ಇನ್ನು ಮಾತೃವಂಶೀಯ ಬೇರುಗಳನ್ನು ಉಳಿಸಿಕೊಂಡಿವೆ. ಮಾತೃವಂಶೀಯ ಸಮಾಜದಲ್ಲಿ ಇಂದಿಗೂ ಹೆಣ್ಣಿನ ಸ್ಥಾನಮಾನಗಳು ಭಿನ್ನವಾಗಿವೆ. ಗಾರೋ ಪರ್ವತ ಪ್ರದೇಶದಲ್ಲಿರುವ ಖಾಸೀ ಜನಾಂಗದಲ್ಲಿ ಈಗಲೂ ಮಾತೃ ಪ್ರಧಾನ ಸಮಾಜ– ಸಂಸ್ಕೃತಿಯ ಪುನರಚನೆಗೆ, ಮರುಚಿಂತನೆಗೆ ಬೆಳಕು ನೀಡುತ್ತವೆ. ಮಹಿಳಾ ಅಧ್ಯಯನ, ಸ್ತ್ರೀ ವಿಮೋಚನಾ ಚಳುವಳಿಗಳು, ಸ್ತ್ರೀವಾದಿ ಚಿಂತನೆಗಳು ರೂಢಿಗತ ಸಮಾಜ ಮತ್ತು ಸಾಂಸ್ಕೃತಿಕ ವಿನ್ಯಾಸದಲ್ಲಿರುವ ಲಿಂಗಾಧಾರಿತ ತರತಮ ಭಾವನೆಗಳನ್ನು ಮತ್ತು ಗಂಡಿನ ಸರ್ವಾಧಿಕಾರವನ್ನು ಪ್ರಶ್ನಿಸುತ್ತದೆ. ಹೆಣ್ಣಿನ ಬುದ್ಧಿ ಭಾವನೆಗಳನ್ನು ಸಂಪೂರ್ಣವಾಗಿ ಸವರಿಹಾಕಿ ಶೀಲ, ತ್ಯಾಗ, ಸಹನೆ, ಪಾತಿವ್ರತ್ಯದಂತಹ ಮೌಲ್ಯಗಳನ್ನು ಅವಳ ತಲೆಯಲ್ಲಿ ತುಂಬಿ, ಅವಳ ಬದುಕನ್ನು ದ್ವಂದ್ವಗೊಳಿಸಿದ, ಅಸ್ತಿತ್ವವನ್ನು ತುಳಿದುಹಾಕಿದ ಪುರುಷ ಸಮಾಜದ ಸ್ವಾರ್ಥವನ್ನು ಅನಾವರಣಗೊಳಿಸುತ್ತವೆ.

ಮೌಖಿಕ ಪರಂಪರೆಯಲ್ಲಿ ಜೀವಂತವಾಗಿರುವ ಮಹಿಳಾ ಜನಪದ ಸಾಹಿತ್ಯದಲ್ಲಿ ಅವಳ ಜೀವನಾನುಭವ ಗಟ್ಟಿಗೊಂಡು ಹಾಡು, ಕಥನಗೀತೆ, ಕಥೆ ಒಗಟು ಮುಂತಾದ ಪ್ರಕಾರಗಳಲ್ಲಿ ಸತ್ವಪೂರ್ಣವಾಗಿ ಅಭಿವ್ಯಕ್ತಗೊಂಡಿವೆ. ಪುರುಷ ಪ್ರಧಾನ ವ್ಯವಸ್ಥೆಯ ಅಧೀನದಲ್ಲಿಯೇ, ವ್ಯವಸ್ಥೆಯನ್ನು ಅನಿವಾರ್ಯವಾಗಿಯೇ, ಅರಿವಿಲ್ಲದೆಯೇ ಒಪ್ಪಿಕೊಂಡಂತೆ ತೋರಿದರೂ; ಅವನ ನಿಯಂತ್ರಣದ ಅಧೀನತೆಯಿಂದ ಹೊರಬರುವುದಕ್ಕೆ ಪ್ರಯತ್ನಿಸಿದ, ಮಿತಿಗಳನ್ನು ಉಲ್ಲಂಘಿಸಿದ ವ್ಯವಸ್ಥೆಯನ್ನು ಪ್ರತಿಭಟಿಸಿ ಪರ್ಯಾಯ ವ್ಯವಸ್ಥೆಯನ್ನು ಕಟ್ಟಿಕೊಂಡ ಮಾದರಿಗಳು ಮಹಿಳೆಯರಿಂದಲೇ ಸೃಷ್ಟಿಗೊಂಡ ಜನಪದ ಸಾಹಿತ್ಯದಲ್ಲಿ ದೊರೆಯುತ್ತವೆ. ಮಹಿಳಾ ಸಾಹಿತ್ಯದ ಮೂಲಕವೇ ಅವಳ ಒಳಲೋಕವನ್ನು ಗ್ರಹಿಸುವ, ಸ್ಪಂದನೆಗಳನ್ನು ಗುರುತಿಸುವ ಅಧ್ಯಯನ ಇತ್ತೀಚಿಗೆ ಮಹತ್ವವನ್ನು ಪಡೆದುಕೊಳ್ಳುತ್ತಲಿದೆ.

ಜನಪದ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರವು ಮಹತ್ವದ್ದಾಗಿದೆ. ಮಹಿಳೆಯರು ತಮ್ಮ ಅನುಭವಗಳು, ಭಾವನೆಗಳು ಮತ್ತು ಆಚರಣೆಗಳನ್ನು ಜನಪದ ಸಾಹಿತ್ಯದ ಮೂಲಕ ವ್ಯಕ್ತಪಡಿಸುತ್ತಾರೆ. ಇದು ಅವರ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸಲು ಸಹಾಯ ಮಾಡುತ್ತದೆ. ಮಹಿಳೆಯರು ತಮ್ಮ ಕುಟುಂಬ ಮತ್ತು ಸಮುದಾಯಗಳಲ್ಲಿ ಹಾಡುಗಳು, ಕಥೆಗಳು, ಒಗಟುಗಳು ಮತ್ತು ಗಾದೆಗಳನ್ನು ಹೇಳುವ ಮೂಲಕ ಅದನ್ನು ಉಳಿಸಿಕೊಳ್ಳುತ್ತಾರೆ. ಮಹಿಳೆಯರು ತಮ್ಮ ಸಂಸ್ಕೃತಿ, ನಂಬಿಕೆಗಳು ಮತ್ತು ಮೌಲ್ಯಗಳನ್ನು ಜನಪದ ಸಾಹಿತ್ಯದ ಮೂಲಕ ಮುಂದಿನ ಪೀಳಿಗೆಗೆ ರವಾನಿಸುತ್ತಾರೆ. ಜನಪದ ಸಾಹಿತ್ಯವು ಮಹಿಳೆಯರ ಸಂತೋಷ, ದುಃಖ, ಆಸೆಗಳು ಮತ್ತು ಭಯಗಳನ್ನು ವ್ಯಕ್ತಪಡಿಸಲು ಒಂದು ವೇದಿಕೆಯಾಗಿದೆ. ಕೆಲವು ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಮಹಿಳೆಯರು ತಮ್ಮ ಸಮಾಜದಲ್ಲಿನ ಅನ್ಯಾಯಗಳು ಮತ್ತು ಲಿಂಗ ತಾರತಮ್ಯವನ್ನು ಪ್ರಶ್ನಿಸುತ್ತಾರೆ. ಜನಪದ ಸಾಹಿತ್ಯವು ಮಹಿಳೆಯರಿಗೆ ಪ್ರೇರಣೆ ಮತ್ತು ಜಾಗೃತಿಯನ್ನು ನೀಡುತ್ತದೆ. ಇದು ಮಹಿಳೆಯರನ್ನು ಸಬಲೀಕರಣಗೊಳಿಸಲು ಮತ್ತು ಅವರ ಹಕ್ಕುಗಳಿಗಾಗಿ ಹೋರಾಡಲು ಪ್ರೇರೇಪಿಸುತ್ತದೆ. ಜನಪದ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರವು ಬಹುಮುಖಿಯಾಗಿದೆ. ಅವರು ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಳ್ಳುವಲ್ಲಿ, ತಮ್ಮ ಅನುಭವಗಳನ್ನು ವ್ಯಕ್ತಪಡಿಸುವಲ್ಲಿ ಮತ್ತು ಸಮಾಜದಲ್ಲಿ ಬದಲಾವಣೆ ತರಲು ಪ್ರೇರೇಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಜನಪದ ಬಿತ್ತಿ ಬೆಳೆಸುವಲ್ಲಿ ಗ್ರಾಮೀಣ ಮಹಿಳೆಯರ ಪಾತ್ರ ಅಧಿಕವಾಗಿದೆ. ನಗರ ಹಾಗೂ ಪಟ್ಟಣ ವಾಸಿಗಳು ಗ್ರಾಮೀಣರನ್ನು ಮಾದರಿಯಾಗಿಸಿಕೊಂಡು ತಾವು ಸಹ ನಿಜವಾದ ಜನಪದ ಬದುಕು ರೂಪಿಸಿಕೊಳ್ಳಬೇಕು.

ಪರಾಮರ್ಶನ ಗ್ರಂಥಗಳು :

1. ಡಾ. ಬಿ.ಎಸ್. ಗದ್ದಗಿಮಠ– ಜನತಾ ಗೀತೆಗಳು– ಸರ್ಪನ್ ಪ್ರಕಾಶನ ಧಾರವಾಡ 2017
2. ಡಾ. ಬಿ.ಎಸ್. ಗದ್ದಗಿಮಠ– ಕರ್ನಾಟಕ ಜಾನಪದ ದರ್ಶನ– ಸರ್ಪನ್ ಪ್ರಕಾಶನ ಧಾರವಾಡ 2017
3. ಡಾ. ಬಿ.ಎಸ್. ಗದ್ದಗಿಮಠ– ಲೋಕ ಗೀತೆಗಳು– ಸರ್ಪನ್ ಪ್ರಕಾಶನ ಧಾರವಾಡ 2017

***

ಸಮಕಾಲೀನ ಕನ್ನಡ ಕಾವ್ಯದಲ್ಲಿ ವಾಸ್ತವದ ಚಹರೆಗಳು

ಡಾ. ರೆಹಮಾನ್ ಆಯ್, ಗೊರಜನಾಳ

ಸಹಾಯಕ ಪ್ರಾಧ್ಯಾಪಕರು,

ಕೆ.ಎಲ್.ಇ. ಸಂಸ್ಥೆಯ ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ,

ಧಾರವಾಡ–580008

rahimangorajanal28@gmail.com

ಹೊಸಗನ್ನಡ ಸಾಹಿತ್ಯದಲ್ಲಿ ಇತ್ತೀಚಿನ ಹೊಸತಲೆಮಾರಿನ ಬರಹಗಾರರ ಸಾಹಿತ್ಯವನ್ನು ಅವಲೋಕಿಸಿದಾಗ, ಕಾವ್ಯದಲ್ಲಿ ವಾಸ್ತವದ ಚಹರೆಗಳು ನೋಡಿದಾಗ ಅಲ್ಲಿನ ಸ್ಥಿತಿಗತಿ ಪರಿಚಯವಾಗುತ್ತದೆ. ಬದುಕು, ಆಸೆ, ಕನಸು, ಬಸ್‌ನಿಲ್ದಾಣ, ಹೃದಯವಂತ, ನೆನಪು, ದಾರಿದೀಪ, ಕಾಲ, ಕನಸು ಮುಂತಾದ ಕಾವ್ಯಗಳು ವಾಸ್ತವಿಕತೆಯನ್ನು ತೆರೆದು ಇಡುತ್ತವೆ. ಕವಿಯ ಅನುಭವ, ಲೋಕಜ್ಞಾನ, ಪರಿಕಲ್ಪನೆಯೊಂದಿಗೆ ಅವರ ಒಳಗಿನ ಅರ್ಥವನ್ನು ಅಧ್ಯಯನದ ಮುಖಾಂತರ ತಿಳಿಯಬಹುದಾಗಿದೆ. ಹೀಗೆ ಕಾವ್ಯ, ವಿಷಯ ಮತ್ತು ವರ್ಣನೆ, ಸಮಕಾಲೀನತೆಯ ಸಮಸ್ಯೆಗಳು, ಪರಿಹಾರ, ಪ್ರಯೋಜನೆಗಳನ್ನು ಸಹ ಗಮನಿಸಬಹುದಾಗಿದೆ.

ಕಾವ್ಯದಲ್ಲಿ ಕವಿಯ ವಿಚಾರಧಾರೆಗಳು ಅನುಭವದೊಂದಿಗೆ ರಚನೆಗೊಂಡಿರುತ್ತವೆ. ಓದುಗನ ಹೃದಯ ಸ್ಪರ್ಶವನ್ನು ಅದರಲ್ಲಿನ ಭಾವನೆಗಳು ತಲುಪುವಂತೆ ಮಾಡುತ್ತದೆ. ಕಾವ್ಯದ ಸಮಗ್ರ ಅರ್ಥವು ಮನಸ್ಸನ್ನು ಪ್ರಸನ್ನಗೊಳಿಸುತ್ತದೆ. ಚೈತನ್ಯ, ಹುಮ್ಮಸ್ಸು, ಉತ್ಸಾಹ, ಆತ್ಮವಿಶ್ವಾಸ, ಶಕ್ತಿಯನ್ನು, ಧೈರ್ಯವನ್ನು ತುಂಬುವಂತೆ ಮಾಡುತ್ತವೆ. ಕವಿಯ ಕಲ್ಪನೆ, ವಾಸ್ತವಿಕತೆ, ಸತ್ಯ, ಪ್ರಾಮಾಣಿಕತೆಯು ಕಾವ್ಯದಲ್ಲಿನ ವಿಷಯ ವಸ್ತುವಾಗಿ ಪರಿಚಯವಾಗುತ್ತದೆ. ಸಮಕಾಲೀನ ಕನ್ನಡ ಕಾವ್ಯ ಸಾಹಿತ್ಯದಲ್ಲಿ

ವಾಸ್ತವಿಕದ ಚಹರೆಗಳು ಈ ಮೇಲಿನ ಅಂಶಗಳಂತೆ ಅನಾವರಣಗೊಂಡಿವೆ.

ಪದಗಳು: ಹೊಸಗನ್ನಡ ಸಾಹಿತ್ಯ, ಹೊಸತಲೆಮಾರು. ವಾಸ್ತವ, ಕಾವ್ಯ, ಅನುಭವ, ಸಮಕಾಲೀನತೆ, ವಿಚಾರಧಾರೆಗಳು, ಕಲ್ಪನೆ, ಚಹರೆಗಳು, ಓದುಗ ಮುಂತಾದವುಗಳು.

ಪ್ರಸ್ತಾವನೆ :

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ, ಪ್ರೇರಣೆ, ಧೋರಣೆಗಳನ್ನು ಕಾಣಬಹುದಾಗಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಈ ನಾಲ್ಕು ಸಾಹಿತ್ಯದ ಘಟಗಳಲ್ಲಿ ಕಥೆ, ಕಾದಂಬರಿ ನಾಟಕದಂತೆಯೇ ಕಾವ್ಯಪ್ರಕಾರವು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಹೀಗೆ ಸಮಕಾಲೀನತೆಯ ಕನ್ನಡ ಕಾವ್ಯ ಸಾಹಿತ್ಯದಲ್ಲಿ ವಾಸ್ತವತೆಯ ಚಹರೆಗಳು ವಿವಿಧ ಆಯಾಮಗಳಲ್ಲಿ ಅನಾವರಣಗೊಂಡಿರುವುದನ್ನು ಅಧ್ಯಯನದ ಮುಖಾಂತರ ಅರಿಯಬಹುದಾಗಿದೆ. ಬದುಕು, ಹಸಿವು, ಹೃದಯವಂತಿಕೆ, ಮನದನೋವು, ಬಂಧು, ನಮ್ಮೂರ ನೆನಪು, ದಾರಿದೀಪ ಮುಂತಾದ ವಿಷಯ ವಸ್ತುಗಳನ್ನು ಒಳಗೊಂಡಿದೆ. ಹೀಗೆ ವಿಭಿನ್ನ ವಾಸ್ತವದ ಚಹರೆಗಳು ತುಂಬಾ ಅರ್ಥವನ್ನು ಮನಮುಟ್ಟುವಂತೆ ಅರ್ಥೈಸುತ್ತವೆ. “ಸತ್ಯ ಸೌಂದರ್ಯ ಸುಖವು ಸಾಹಿತ್ಯದ ಪರಬ್ರಹ್ಮ, ಸಾಹಿತ್ಯವು ಅದರ ಸೃಷ್ಟಿ ಮಾತ್ರ. ಜೀವನವಾದರೂ ಸತ್ಯ, ಸೌಂದರ್ಯ, ಸುಖವನ್ನೇ ಭಜಿಸುವುದು. ಜೀವನವು ಅರ್ಥ ಸೃಷ್ಟಿ, ಸಾಹಿತ್ಯ ಶಬ್ಧಸೃಷ್ಟಿ, ಜೀವನದ ಅರ್ಥವನ್ನು ಸಾಹಿತ್ಯವು ಶಬ್ಧದಲ್ಲಿ ಮೂಡಿಸುವುದು. ಈ ಶಬ್ಧಗಳ ಹಿಂದೆ ಸತ್ಯ ಸೌಂದರ್ಯ ಸುಖವು ಮಿಂಚಿ ಮಿಂಚಿ ಮಾಯವಾಗಿ, ಎಲ್ಲ ಜೀವಗಳನ್ನು ದೃಶ್ಯದಿಂದ ಅದೃಶ್ಯದ ಕಡೆಗೆ ಸೆಳೆದೊಯ್ಯುವುದು. ಈ ದೃಶ್ಯಾದೃಶ್ಯಗಳ ಮಧ್ಯದಲ್ಲಿಯೆ ಅಪಾರವಾದ ಸ್ನೇಹ ಸಾಗರವೊಂದು ಇರುವುದಾಗಿ ಅನುಭವಕ್ಕೆ ಬರುವುದು. ಇದೇ ಆ ರಸೋದಧಿಯು. ಈ ಕಡಲಿನಲ್ಲಿ ಎಲ್ಲ ಜೀವಗಳ ಹಡಗುಗಳು ಕತ್ತಲೆಯಿಂದ ಬೆಳಕಿಗೂ, ಮೃತ್ಯುವಿನಿಂದ ಅಮೃತಕ್ಕೂ, ದುಃಖದಿಂದ ಸುಖಕ್ಕೂ ಹೋಗಲೆಳಸುವವು. ಸಾಹಿತ್ಯವಿಲ್ಲದ ಜೀವನವಿಲ್ಲ. ಜೀವನದ ತಿರುಳಿನಲ್ಲಿ ಕೀಳು ಮೇಲೆಂದಿಲ್ಲ. ಎಲ್ಲ ಜೀವನವೂ ಅದ್ಭುತವಾದ ರಸಾಯನವು. ಅದನ್ನು ಉಣ್ಣದಿದ್ದವರಿಲ್ಲ. ಶಬ್ಧಮಾತ್ರವೆಲ್ಲ, ಕಾವ್ಯವೆಂದೂ ಜೀವನಮಾತ್ರವೆಲ್ಲ, ಕವಿಯೆಂದೂ ಒಬ್ಬ ಜ್ಞಾನಿಯು ಹೇಳಿದ್ದಾನೆ. ಆದರೆ ಜೀವನು ಆತ್ಮನಿದ್ದೂ, ಅದರ ಅರಿವಿಲ್ಲದಿದ್ದುದರಿಂದ, ಪರಿವೆಯಿಲ್ಲದಿದ್ದುದರಿಂದ ತೊಳಲಿ ಬಳಲುವಂತೆ ಜೀವನವೊಂದು ಕಾವ್ಯ, ನಾಟಕ ಎಂಬ ಅನುಭವವಿಲ್ಲದ ಸಂಸಾರವನ್ನು ಅಸಾರವತ್ತಾಗಿ ಕಾಣುತ್ತಲಿದ್ದಾನೆ.”[1] ಹೀಗೆ ಜೀವನದಲ್ಲಿ ವಾಸ್ತವಿಕತೆಯ ಚಹರೆಗಳನ್ನು ಕಾಣಬಹುದಾಗಿದೆ.

ಹಸಿವು–ಸುರೇಶ ನಾವಿ :

ಈ ಲೋಕದೊಳು ವಿನಾಯಿತಿಯಾರಿಗಿಲ್ಲಾ ಒಂದು ಸಾರಿ ಸುತ್ತಮುತ್ತಲೂ ವಿಚಾರಿಸಿನೋಡಿ ಸತ್ಯ ಅರಿವಾಗುವುದು. ಅನ್ನಕ್ಕಾಗಿ ಪರದಾಡುವ ಬಡವರು, ಅಸಹಾಯಕರು, ನಿರ್ಗತಿಕರು ಹಸಿವಿನಿಂದ ಇರುವರು. ಹಗಲಿರುಳು ಮೆಟ್ಟಿ ನಿಂತು ಹಸಿವು ತಡೆದುಕೊಂಡರು, ಹೊಂಗಿರಣ ತಟ್ಟಿ ಹಸಿವಿನ ನೋವು ತರುವುದು. ನೀ ಜಟ್ಟಿಯಂತೆ ಹೊರಟರೂ ಬಿಡುವದಿಲ್ಲ, ಗಟ್ಟಿಯಾಗಿ ಹಿಂಬಾಲಿಸುತ್ತದೆ. ಹಸಿವಿನ ವಿವಿಧ ಪರಿಸ್ಥಿತಿಯು ಮುನಿಸಿಕೊಂಡರೂ, ಹಸಿದುಕೊಂಡು ನಾವು ಇದ್ದರೂ, ಮನಸ್ಸು ಬದಲಿಸಿದರೂ, ಸಹಕಾರ ಕೊಡಲಾರೆ, ಆಕಾರ ಬದಲಿಸುವೆ ಎನ್ನುವ ರೀತಿಯಲ್ಲಿ ಬದಲಾವಣೆ ಕಂಡುಬರುತ್ತವೆ. ಕಸದ ತೋಟಿಯ ಪಕ್ಕ ಹಸಿವಿನಿಂದ ಮಕ್ಕಳು, ನಾಯಿಗಳು ಹವಣಿಸುತ್ತಿರುವರು. ಕಾರಣ ಅನ್ನದ ಹಸಿವು. ಹಣೆಬರಹ ಬದಲಾದರೂ ಹಣಿಯೊಲ್ಲ, ಯಾರಿಗೂ ಧಣಿಯಾಗಿ ಮೆರೆಯುವೆ, ಕೊನೆಯ ಉಸಿರು ಎಳೆದರೂ ಹಸಿವು ಬಿಡಲಾರದು.

ಬದುಕು ಬದಲಾಯಿಸಿದೊಂಡವರು :

ಸೂರ್ಯನು ಉದಯಿಸುವನು ಪ್ರತಿದಿನವೂ, ಆತನನ್ನು ಬದಿಗೊತ್ತಿ ನೀವು ಬೆಳೆಯುವಿರಿ ಹೇಗೆ? ಎಂದು ಕವಿ ಸುರೇಶ ನಾವಿ ಪ್ರಶ್ನಿಸುತ್ತಾರೆ. ಹಿರಿಯರು, ಯಜಮಾನ್ಯ ಸಂಸ್ಕೃತಿಯಲ್ಲಿ ಸದೆಬಡೆಯುವ ಹುನ್ನಾರ ಮಾಡುವವರು, ಈ ರೀತಿಯ ತಪ್ಪಿದ ದಾರಿಯನ್ನು ಇನ್ನೂ ಯಾರಿಗೂ ಕಲಿಸದಿದ್ದರೆ ಒಳಿತು. ಬಡವರ ಮಕ್ಕಳು ಅಸಹಾಯಕರು, ಕಣ್ಣೀರಲ್ಲೇ ಮಿಂದೆದ್ದವರ ಮಕ್ಕಳು, ಉದರದಲ್ಲೇ ಕುಳಿತು ಒದರುವವರಲ್ಲಾ, ಅವರ ಪಾಡೇನು? ಗರ್ಭದಲ್ಲೇ ಬತ್ತಳಿಕೆಯು ಬಾಣ ಸಿದ್ಧಗೊಳಿಸಿದ್ದಾರೆ. ಬೇಕಾದದ್ದನ್ನು ಪಡೆಯಲು, ಈ ಭೂಮಿಗೆ ಬಂದು ಬದುಕು ಬದಲಾಯಿಸಿಕೊಳ್ಳುವ ಧೀರರಿವರು. ಬನ್ನಿ ನಾವೆಲ್ಲರೂ ಜೊತೆಯಾಗಿ ಎಂದು ಸಿಂಹದಂತೆ ಘರ್ಜಿಸಿ ಅದೇ ಸೌಲಭ್ಯಕ್ಕಾಗಿ, ನಮ್ಮ ಘನತೆಯನ್ನು ನಾವೇ ಹೆಚ್ಚಿಸಿಕೊಳ್ಳೋಣ ಎನ್ನುತ್ತಿರುವ ವೀರರಿವರು, ಎಂದು ಕವಿಯೂ ದಬ್ಬಾಳಿಕೆ ಮಾಡುವವರನ್ನು ಕುರಿತು ವಿವರಿಸುವರು.

ವನಿತೆ :

ನಿತ್ಯ ಹೋರಾಡುತ್ತಿರುವಳಲೊಬ್ಬಳು, ಸ್ವಾಭಿಮಾನದ ಸಂಗ್ರಾಮದಲ್ಲಿ ವೀರಗಚ್ಚೆಯನ್ಹಾಕಿ ತುತ್ತು ಅನ್ನಕ್ಕಾಗಿ, ಹೆತ್ತಮಕ್ಕಳಿಗಾಗಿ, ಅವಳೋ ತನ್ನೆದೆಯಾಳದಲ್ಲಿ ಅದುಮಿಟ್ಟುಕೊಂಡ ನೋವುಗಳನ್ನು ವೀರಾವೇಶದಿಂದ ಕೊಚ್ಚಿ ಹಾಕುತ್ತಿದ್ದಾಳೆ. ಹಾಗೆಯೇ ತನ್ನೆಲ್ಲಾ ಜೀವನವನ್ನ ದೇಶದುನ್ನತಿಯಲಿ ಸುರಿದು, ಶಿಖರ ಸೂರ್ಯನ

ಹಾಗೆ, ಪ್ರಜ್ವಲಿಸಲು ಹವಣಿಸುತ್ತಿದ್ದಾಳೆ ಮತ್ತೆ ರೋಸಿಹೋದ ತನ್ನ ತೋಳ್ಬಲಗಳಿಗೆ, ಶಕ್ತಿ ನೀಡೆಂದು ಆ ದೇವರ ಪ್ರಾರ್ಥಿಸುತ್ತಿದ್ದಾಳೆ ಆ ವನಿತೆ".[2] ಹೀಗೆ ಮಕ್ಕಳಿಗಾಗಿ ಹಲವಾರು ವನಿತೆಯರು ಇನ್ನೂ ಸಹ ಕಷ್ಟದ ಪ್ರಯತ್ನ ಭವಿಷ್ಯ ರೂಪಿಸಲು ಯತ್ನಿಸುವರು.

"ಸೆರಗಿಲ್ಲ, ಬೆರಗಿಲ್ಲ, ಹೆದರೀಕಿ ಹೊರಗಿಲ್ಲ, ಮರಗಿಲ್ಲ ಕೊರಗಿಲ್ಲ ನೆಲದೊಡಲು ಕುಣಿಯಾಲು, ಕುಣಿ ಕುಣಿಸೀತು ಕಡಲು, ಮಿಡಿದಿತು ಸಿಡಿಸಿಡಿಲು, ಹಗಲಿರುಳ ತಾಳಕ್ಕ, ಮುಗಿಯದ ಕಾಳಕ್ಕ, ಜನುಮಗಳ ಮ್ಯಾಳಕ್ಕ, ಹುಲ್ಲೆಲಾ ಸ್ಥಿರಜಲಾ, ಚಿಕ್ಕೆಲ್ಲಾ ಮುಗಿಲೆಲ್ಲಾ, ಕುಣೀತಿಲ್ದ ಜಗ ಇಲ್ಲಾ, ಅಂಗಲು ಅಂಗಲು, ಚಿಕ್ಕ ಚಿಕ್ಕ ತಿಂಗಳು, ಉಸಿರಾಸೆ ಹಿಂಗಲು, ನೆಲ ಮುಗಿಲನಪ್ಪಿತು, ಚೆಲುವಾಗಿ ಒಪ್ಪಿತು. ಸಾವೊಮ್ಮೆ ತಪ್ಪಿತು, ಆ ಕ್ಷೀರಸಾಗರ, ದಾನಂದದಾಗರ, ತೆರತೆರಿ ತರೆದರ, ಹದಿನಾಲ್ಕು ಲೋಕಕ ಚಿಮ್ಮಲಿ ಈ ಸುಖ, ಹಿಗ್ಗಲಿ ಸಿರಿಮುಖ".[3] ಹೀಗೆ ಜನಪದಗಾರುಡಿಗ ದ.ರಾ. ಬೇಂದ್ರೆಯವರು ಕುಣಿಯೋಣು ಬಾರ ಕವನದಲ್ಲಿ ಪ್ರಕೃತಿ, ಅನ್ನ, ನೀರು, ಮಳೆ ಇತರೆ ವಿಷಯಗಳನ್ನು ವಿವರಿಸಿದ್ದಾರೆ.

ಬಸ್ ನಿಲ್ದಾಣ– ಎಮ್. ಕೆ. ಶೇಖ್ (ಮೌಕುಶೇ) :

ಬಸ್‌ಸ್ಟ್ಯಾಂಡಿಗೆ ಹೂಳು ಎತ್ತುವಂತೆ ಧೂಳು ಎತ್ತುವಂತೆ ಬಸ್ಸುಗಳು ಬಂದಿವೆ. ಸಿಟ್ ಆಗದೆ (ಕುಳಿತುಕೊಳ್ಳದೆ), ಸ್ಟ್ಯಾಂಡ್ ಆಗಿ (ನಿಂತುಕೊಂಡು) ಶಬ್ಧಮಾಡುತ್ತಾ, ಕಿರುಚುತ್ತಾ, ಕಣ್ಣು ಕಿಸಿದು, ಅಗಲಮಾಡಿ ನೋಡಿ ಬೆರಗಾಗಿದ್ದವು. ಇಲ್ಲಿ ಸೇರಿದ, ಮರುಳಾದ ಜನಜಾತ್ರೆ ಕಂಡು ಹೀಗಾಗಿದೆ. ಈ ಬಸ್‌ಸ್ಟ್ಯಾಂಡ್ ಶತಮಾನದ ಆದಿಯ ಕಾಲವನ್ನು ಪೂರೈಸಿದೆ. ಬಣ್ಣವನ್ನು ಪಡೆದುಕೊಂಡು ಛಾವಣಿಯಲ್ಲಿ ಅರ್ಧಭಾಗ ಹೊತ್ತಿದೆ. ಪೂರ್ಣವಾಗಿ ಬತ್ತದೆ ಜೀವಂತಾಗಿ ಉಳಿದಿದೆ. ಈ ಜನ, ಜನಜಂಗುಳಿ ಹಗಲು ಇರುವುದು. ಮೈ ಕೈ ಸುಟ್ಟು ಸೇವೆಗೈಯುತ್ತಿವೆ ಬಲ್ಬುಗಳು. ಪ್ರತಿದಿನ ತಿರುಗುತ್ತಿರುವ ಫ್ಯಾನ್ಗಳು, ಕಿಸೆಗಳ್ಳರ ಬಲೆಗೆ ಬಲಿಯಾಗಿರುವ ಕೋತಿ, ಕತ್ತೆಗಳೆಷ್ಟೋ ಎಂದು ಕವಿ ಎಮ್. ಕೆ. ಶೇಖ್ (ಮೌ.ಕು.ಶೇ.) ತಿಳಿಸುತ್ತಾರೆ. ಕಿರುತಾ, ಹೊಗೆಯನ್ನು ಬಿಡುತ್ತಾ ಕಿಸೆಯಿಂದ ಕಾಸೆತ್ತುವ ಟಿಕೇಟ್ ನೀಡುವ ವಾಹನದ ನಿರ್ವಾಹಕರೆಷ್ಟೋ. ಪತ್ರಗಳನ್ನು ಸಾಗಿಸುವ ಪಾತ್ರದಾರಿ, ದೇಶದ ಯಮಕಿಂಕರನಾಗಿ, ಸಾಯದ ಹೆಣಕ್ಕೆ ಪರಿಹಾರ ನೀಡಿ, ಬಸ್ಸು ಓಡುವುದು ಪ್ರಗತಿಯ ಪ್ರತೀಕವಾಗಿ ಚಲಿಸುತ್ತಾ ಸಾಗುವುದು. ಚಾಲಕ, ನಿರ್ವಾಹಕರಿಗೆ, ಪ್ರಯಾಣಿಕರಿಗೆ ಊಟ ನೀಡಿ, ಪ್ರೀತಿ ನೀಡಿ ಯಜಮಾನನಿಗೆ ಬೊಕ್ಕಸವನ್ನು ತುಂಬಿಸುವ ಬಸ್ಸು ನಿನ್ನಾಗಿರುವೆ. ರೋಡಪತಿಗೂ, ಕರೋಡಪತಿಗೂ ಆಶ್ರಯದಾತ ನೀನಾಗಿರುವೆ. ಸಂಘರ್ಷಗಳು, ಕೋಮು ಗಲಭೆಗಳು ಆದಾಗ ಅವರವರ

ಸ್ವಾರ್ಥಕ್ಕೆ ನಿನ್ನ ಬಲಿ ಪಡೆದಿರುವುದು. ಉಷ್ಟ್ರಪಕ್ಷಿಯಂತೆ ಓಡಾಡಿ, ರಾಷ್ಟ್ರಭಕ್ತಿಯನ್ನು ಹೆಚ್ಚಿಸಿ ದೇಶದ ಉದ್ಧಾರಕನು ನೀನು. ನಿನ್ನ ದಣಿವರಿಯದ ಸೇವೆಗೆ ಸಹಸ್ರ ನಮನಗಳು ಎಂದು ಕವಿ ವಿವರಿಸುವರು.

ಹೃದಯವಂತ :

ನೊಂದ ಜೀವಿಯ ಮನದಾಳದ ನೋವಿನ ಧ್ವನಿಯು ಹೃದಯವಂತನನ್ನಾಗಿಸುತ್ತದೆ. ನನ್ನ ಹೃದಯ ಹಣತೆಗೆ ಎಣ್ಣೆಯನ್ನು ಹಾಕಿ ಯಾರ ಮನೆಯ ಜ್ಯೋತಿಯನ್ನು ಬೆಳಗುತ್ತಿದ್ದೀಯಾ? ಮನದ ಅಂಗಳದಲ್ಲಿ ಮನೆಯನ್ನು ಕಟ್ಟಿ ಇಂದು ಯಾರ ಮನೆಮಂದಿರದ ಮೇಲೆ ಕಳಸ ಇಡುತ್ತಿದ್ದೀಯಾ? ಎಂದು ತನ್ನ ಪ್ರೀತಿಯನ್ನು ಕುರಿತು ಅಂತರಂಗದಲ್ಲಿ ಪ್ರಶ್ನೆಗಳನ್ನು ಕವಿ ಕೇಳುತ್ತಿದ್ದಾನೆ. ನೀ ತೊಡಿಸಿದ ಪ್ರೇಮದ ಸರಮಾಲೆಗಳು ಇನ್ನೂ ಬಾಡಿಲ್ಲ, ಹೆಚ್ಚು ಹಸಿರಾಗಿವೆ. ನೀನು ಹೊತ್ತಿಸಿ ಹೋದ ಪ್ರೇಮ ಜ್ಯೋತಿಯ ಎಣ್ಣೆಯೂ ಇನ್ನೂ ಬತ್ತಿಲ್ಲ, ಧಗಧಗಿಸಿ ಉರಿಯುತ್ತಿದೆ. ನೀನು ನನ್ನನ್ನು ಮರೆತರೂ ನನ್ನ ಈ ಹೃದಯದ ಪ್ರತಿ ಬಡಿತ ನಿನ್ನನ್ನು ಮರೆತಿಲ್ಲ. ಹೃದಯ ಇನ್ನೂ ಸತ್ತಿಲ್ಲ. ನಾನು ದುಡಿದು ಮಣ್ಣಾದರೂ ಈ ಹೃದಯ ನಿನ್ನದಾಗಿದೆ. ನನ್ನ ರಕ್ತದಿಂದ ಅಂಗಳದಲ್ಲಿ ಬಿಡಿಸಿದ ರಕ್ತದ ರಂಗೋಲಿ ಇನ್ನೂ ಮಾಸಿಲ್ಲ. ಮತ್ತೆ ಹುಟ್ಟಿ ಬರುವ ಆಸೆ, ಭಾಷೆ. ಪ್ರತಿಯೊಬ್ಬ ಪ್ರೇಮಿಗಳ ಈಡೇರಲಿ ಅವರ ಅಭಿಲಾಷೆ.

ಶರಣ ಗುರೂಜಿ :

"ಶರಣರು, ಶರಣರ ಗುರುಗಳು, ಜ್ಞಾನದೀವಿಗೆಯ ತೋರಣರು, ಬೆಂದೆ ಬೆಂಗಾವಲಿನ ಬದುಕಿಗೆ, ಅರುಣರು, ವರುಣರು, ಸದಾ ತರುಣರು. ನಮ್ಮ ಶರಣ ಗುರುಗಳು ಬೆಳ್ಳುಂಡಗಿಯ ಬೆಳ್ಳಿ ಉಂಗುರರು, ಜ್ಞಾನ ದೀವಿಗೆಯ ಕರುಣರು, ಸರ್ವೋದಯದ ಸಿಂಹಾಸನಾರೂಢರು. ಸಿದ್ಧನೂರಿನ ಸಿದ್ಧಾರೂಢರು. ನಡತೆಯಲ್ಲಿ ಶ್ರೀರಾಮರು, ವಾಕ್‌ಚತುರರು. ತೆನಾಲಿರಾಮರು ನಮ್ಮ ಶರಣಗುರುಗಳು, ನಗುಮೊಗದ ನವಚೇತನರು, ಶಾಂತ ಮನದ ಷಣ್ಮುಖರು. ದೇಶದೇಳ್ಗೆಗಾಗಿ ದುಡಿದವರು. ಭಾರತಾಂಬೆಯ ಸುಪುತ್ರರು. ಸದಾ ವಂದಿಸುವೆ ನಾವು ನಿಮಗೆ"[4] ಎಂದು ಕವಿ ವಿವರಿಸುವರು.

ಅರಿವು :

"ಕನಸುಗಳೇ ಜೀವನವಾಗಿ, ಜೀವನವೇ ಆಶಾಸಾಗರವಾಗಿ, ಆ ಸಾಗರವೊಂದು ಭ್ರಮಾ ಲೋಕವಾಗಿ, ಭ್ರಮಾಲೋಕವೇ ಸುಂದರವಾಗಿ, ನಿತ್ಯ ನೂತನವಾಗಿತ್ತು. ಕಣ್ತೆರೆದಾಗ ನೀರಸವಾಕಂಡದ್ದೆಲ್ಲಾ ಸುಳ್ಳಾಗಿ, ಕನಸೊಂದು

ಅನುಭವವಾಗಿ ಅನುಭವವೊಂದು ಪಾಠವಾಗಿ, ಆ ಪಾಠ ದಾರಿ ದೀಪವಾಯಿತು, ನಿಜವಾಯಿತು, ವಾಸ್ತವವಾಯಿತು, ವಾಸ್ತವತೆಯ ಅರಿವಾಯಿತು"[5] ಎಂದು ಕವಿ ಅನಿಲ್ ಕುಮಾರ್ ತಿಳಿಸುವರು.

ಏಕಾಂತ – ರವಿ :

ಎದುರು ನೀನು ಇರಬೇಕಿತ್ತು. ಈ ಕಾಡೋ ಏಕಾಂತಕ್ಕೆ ಜೊತೆಯಾಗಿರಬೇಕಿತ್ತು. ಪ್ರತಿದಿನಕ್ಕಿಂತಲೂ ಹೆಚ್ಚಾಗಿಯೇ ನಿನ್ನ ನೆನಪು ಆಗಿದೆ. ಮನದೊಳಗೆ ಒಣಗದ ಗಿಡಮರದ ಎಲೆಗಳಿಗೂ ಚಿಗುರುವಂತೆ ವಸಂತ ಮಾಸದ ಆಸೆಯಾಗಿದೆ. ನೀನು ಈಗ ಬಂದು ಈ ಬಲವನ್ನು ಚಿಗುರಿಸು. ಸುಡುವ ಬಿರುಬಿಸಿಲ ಬೇಸಿಗೆಗೆ, ಬೆಂದ ಒಡಲಿಗೆ ನೀ ಒಲವನ್ನು ಧಾರ ಎರೆದು ಬದುಕಿಸು ಎಂಬ ಕವಿ ರವಿಯ ಈ ಕವನದ ಆಶಯವಾಗಿದೆ.

ಮನದ ನೋವಿಗೆ :

ಈ ಲೋಕದಲ್ಲಿ ಗೌರವ, ಮರ್ಯಾದೆ, ಸ್ಥಾನಮಾನಗಳಿವೆ. ಆದರೆ ಕೆಲವೆಡೆ ಈ ಸಮಯ ಕೆಟ್ಟದಾಗಿದ್ದರೆ ಸಂಬಂಧಗಳಲ್ಲಿ, ಸಿಕ್ಕ ಗೆಲುವಿಗಿಂತಲೂ ಆ ಸಂಬಂಧಗಳ ಉಳಿವಿಗಾಗಿ ಎನ್ನಲ್ಲೆ ಪ್ರಯತ್ನಗಳನ್ನು ಮಾಡಿ ಕೊನೆಗೆ ಸೋತಿದ್ದೆ ಹೆಚ್ಚು ಆಗಿದೆ. ಇಷ್ಟಕ್ಕೆಲ್ಲ ಬೇಕು–ಬೇಡಗಳ ಆಸೆಯೇ ಈಗ ಮೂಲ ಕಾರಣವಾಗಿದೆ. ಈ ಸಂಬಂಧಗಳ ಸಂಭ್ರಮಕ್ಕೂ ಹಾಗೂ ನನ್ನ ಸಂತಸಕ್ಕೂ ಕಾರಣ ಅರಿಯದಾಗಿದೆ. ನಿಜಕ್ಕೂ ಈಗ ಮನದ ನೋವಿನ ಅರಿವಿಲ್ಲ ನನಗೆ ಎಂದು ಕವಿಯೂ ತನ್ನ ನೋವಿನ ಕಥೆಯನ್ನು ಸಂಬಂಧಗಳ ನಡುವಿನ ಒತ್ತಡದ ಪರಿಸ್ಥಿತಿಯನ್ನು ಕುರಿತು ವಿವರಿಸಿದ್ದಾರೆ.

ಸೋಲಿಲ್ಲ :

ಕಳೆದುಕೊಂಡ ಪ್ರೀತಿಯನ್ನು ನೆನೆದು ಕವಿಯೂ ನೋವಿನ ಭಾವನೆಗಳಿಂದ ಪ್ರೀತಿಯನ್ನು ಕುರಿತು ವಿವರಿಸಿದ್ದಾರೆ. ಪರಿಶುದ್ಧವಾದ ಪ್ರೀತಿಯನ್ನು ಅರಿಯದೆ ಪ್ರೇಯಸಿ ನೀನು ಬಿಟ್ಟುಹೋದ ಕಾರಣ ಮುಂದು ಒಂದು ದಿನ ಪಶ್ಚಾತಾಪ ಪಡದಿರು ಎಂದು ನೆನೆದು ತಿಳಿಸುವರು. ಹೇಳುವರು, ಕವಿಯು ತಾವು ಕೊಟ್ಟ ಪ್ರೀತಿಯನ್ನು ನೆನೆದು ಕಾರಣ ಏನು ಎಂದು ನೋಡಿದರೆ ಈ ಪ್ರೀತಿಯ ಪಗಡೆಯಲ್ಲಿ ಮೋಸದ ದಾಳ ಹಾಕಿದ್ದು ನೀನು ಪ್ರೇಯಸಿ ಎಂದು ತಿಳಿಸುವರು. ಆದರೆ ಪಗಡೆಯಲ್ಲಿ ನನ್ನನ್ನು ಅಂದರೆ ಕವಿಯನ್ನು ಸೋಲಿಸಿರಬಹುದು ಈ ಪ್ರೀತಿಯಲ್ಲಿ ಸಂಬಂಧದಲ್ಲಿ ಎಂದೂ ಸೋಲಿಸಲಾಗದು ಎಂದು ತಮ್ಮ ಪರಿಸ್ಥಿತಿಯನ್ನು ಕುರಿತು ತಿಳಿಸುವರು.

ಪ್ರೀತಿಲಿ :

"ಪ್ರೀತಿಲಿ ನಾ ಪಂಡಿತನಲ್ಲ. ಇರೋ ಪ್ರೀತಿ ನಿನ್ನಗಲ್ದೆ ಮತ್ತ್ಯಾರಿಗಲ್ಲ. ಕೊಟ್ಟ

ಪ್ರೀತಿಯನ್ನ ನಿರೀಕ್ಷಿಸಿದರೂ ಅದು ಸಿಗದಲ್ಲ. ಒಂದಿನ ಕಳೆದ್ಹೋಗುವೆ. ವಿಧಿಯ ಕರೆಗೆ ಕಣ್ಮರೆಯಾಗುವೆ. ಆಗ ಕೊರಗದಿರು, ಕರಗದಿರು, ನಾ ಕೊಟ್ಟ ಪ್ರೀತಿಯ ನೆನೆದು, ನಿನ್ನ ನಗುವ ಕಳೆದುಕೊಳ್ಳದಿರು".[6] ಹೀಗೆ ಪ್ರೀತಿಯಿಂದಾದ ಅಗಲಿಕೆಯ ಮರ್ಮವನ್ನು ಕುರಿತು ಕವಿಯು ತಿಳಿಸುತ್ತಾರೆ.

ನೋವಿನ ಜೊತೆಯಲಿ (ಗಝಲ್) :

"ನೋವು ತಂದ ಕ್ಷಣಗಳ ಹೇಗೆ ಕಳೆಯಲಿ ಹೃದಯ ತುಂಬಿರಲಿ ಮೂಕ ಶಬ್ಧಗಳಲಿ. ಮನ ಮುಟ್ಟಿ ಹೋದರೆಲ್ಲಿ, ರಾತ್ರಿ ಅಳುತ್ತಿರಲು ಇಬ್ಬನಿಯಲಿ ಯಾರಿಗೆ ಗೊತ್ತು ಭೇಟಿಯಾಗುವುದೆಲ್ಲಿ. ನಿದ್ದೆ ಬರಲಿ ನೋವಿನ ಪಹರೆಯಲಿ ರಾತ್ರಿಗಣ್ಣಿಗೆ ನಿದ್ದೆ ಎಲ್ಲಿ ಕನಸುಗಳು ನಸುಕು ಕಾಣುತ್ತಿರಲಿ. ಮೊರೆಯಿಟ್ಟಿದ್ದು ಯಾರಿಗೆ ಮಂಡಿಯೂರಿ, ಗುರಿ ಯಾವುದು ನೂರು ದಾರಿಯಲಿ. ನಗು ಯಾರದು ಸಾವಿನಂಚಿನಲಿ. ನೆನಪು ತೆರೆದಿಟ್ಟ ಪುಟಗಳ ಕಣ್ಣೀರಲಿ. ಯಾರು ಯಾಕೆ ಗಾಯಗೊಂಡವರ ಬಳಿಯಲಿ, ದಯೆ ಏಕೆ ನೋವಿರುವಾಗ ಜೊತೆಯಲಿ"[7] ಎಂದು ಕವಿ ನಜೀರಚಂದಾವರ ಅವರು ಪ್ರೀತಿಯಿಂದ ಆದ ಮೋಸದ ಬಗೆಯನ್ನು ಕುರಿತು ಈ ಕವನದಲ್ಲಿ ವಿವರಿಸಿದ್ದಾರೆ.

ಮನಸ ಮೋಡ – ಶಾಂತಾ ಕುಂಟನಿ (ಶಕುಂತಲಾ) :

ಬದಲಾವಣೆ ಪ್ರಕೃತಿಯ ಸಹಜ ಕ್ರಿಯೆಯಾಗಿದೆ. ಮನಸ್ಸು ಮರುಗದೆ ಇದ್ದರೆ ನಮ್ಮ ಮನಸ್ಸು ಮೋಡವಾಗಿ ಕರಗದೇ, ಅದು ಚಲಿಸಲಿ ಹನಿ ನೀರಾಗಿ ಬೀಳಲಿಲ್ಲ ಹಗುರವಾಗಲಿ. ವರವೋ, ಶಾಪವೋ, ಇದು ಬಂದ ಪರಿಯೇ ತಿಳಿಯದಂತೆ ಆಗಿದೆ. ಕನಸುಗಳು ಕಣ್ಣಿನಲ್ಲಿ ಚಿತ್ರವನ್ನು ತುಂಬಿ ಬರೆಯದಾಗಿದೆ, ತಿಳಿಯದಾಗಿದೆ. ಜಡವಾಗಿ ಧೂಳುತುಂಬಿದ ಮನಸ್ಸಿಗೆ ಗಾಳಿಯು ತುಂಬಾ ಅವಶ್ಯಕವಾಗಿದೆ. ಶುಭ್ರವಾಗಲಿ ನಮ್ಮ ರೂಪ, ಇದು ಕಾಣದಾಗಿದೆ, ಅರಿಯಲು ಪ್ರಯತ್ನಿಸಬೇಕು. ಮನಸ್ಸು ಆಕಾಶದಲ್ಲಿ ತೇಲಾಡುವ ಹಕ್ಕಿ ಆಗಿದೆ. ಆದರೆ ತನ್ನ ರೆಕ್ಕೆಪುಕ್ಕಗಳನ್ನು ಬಿಡಿಸದಂತೆ ಮೌನವಾಗಿದೆ. ದಿವ್ಯವಾದ ಶಕ್ತಿಯೊಂದು ಬೇಡಿ ಅದನ್ನು ಕಾಯುತ್ತ ಕುಳಿತಿದೆ. ಹೃದಯದ ಒಳಗಿನ ಭಾವನೆಗಳೂ ಕುದಿಯುತ ಆವಿಯಾಗಿ ಬತ್ತಿಹೋಗಿದೆ. ಆ ಧ್ವನಿಯು ಮುಗಿಲು ಮುಟ್ಟಲು ಇಂದು ಸೋತು ನಿಂತಿದೆ. ಒಳಗೆ ನಾನೆ ಸುತ್ತಲೂ ಕಣ್ಣಾ ಕಟ್ಟಿ ನಿಂತಾಗಿದೆ, ಎಂದು ಕವಯಿತ್ರಿ ಶಾಂತಾ ಕುಂಟನಿ (ಶಕುಂತಲಾ) ಅವರು ಮನಸ್ಸಿನ ಸ್ಥಿತಿಗತಿಯನ್ನು ಕುರಿತು ವಿವರಿಸುತ್ತಾರೆ.

ಬಂಧು :

ಬಂಧಗಳು ಒಳಗೆ ಲೋಕದಲ್ಲಿ ಯಾರು ಶತ್ರುಗಳಲ್ಲ, ಪರಿಸ್ಥಿತಿ ಹಾಗೆ ಮಾಡಿಸುತ್ತದೆ. ನಮ್ಮ ಒಳಗೆ ಯಾರು ಮಿತ್ರರೂ ಅಲ್ಲ, ಬಂದು ಹೋಗುವುದು

ಕಾಯಕವಾಗಿದೆ. ಜನನ ಮರಣದ ಸೂತಕವಲ್ಲ ಲೋಕರೂಢಿಯಾಗಿದೆ. ಸಾಯೋತನ ಬಂಧುಗಳು ನಿಮ್ಮವರು ಎಂದು ತಿಳಿದೆ, ಬಂಧುಗಳಲ್ಲಿ ಬಂದು ಬಂದು ಸಂದುಗಳಲ್ಲಿ ಕುಳಿತು ಕಾಲಕಳೆದ ಈಗ ಏನೆಂದು ತಿಳಿಯುತ್ತಿದೆ. ಬಂಧುಗಳು ಬಂದು ಹೋಗುವರು. ಋಣವನ್ನು ತೀರಿಸಲು ಎಂದು ಆದರೆ ಆ ದೇವರ ಪಾದಕೆ ಒಂದು ದಿನ ಎಲ್ಲರೂ ಸೇರುವರು. ಕಾಲವನ್ನು ಕಳೆಯುವರು ಮದ, ಮತ್ಸರ, ದ್ವೇಷ, ಅಸೂಯೆಗಳಲ್ಲಿ, ತಿಳಿಯವು ಬದುಕಬೇಕು. ನನಗೇ ಅವಗೆಂದೇ ನಿಮಿಷದಲ್ಲಿ ಕಚ್ಚಾಡುವರು. ಆದರೆ ನಿಮಿಷದಲ್ಲಿಯೇ ಪ್ರಾಣಪಕ್ಷಿ ಹಾರಿಹೋದರೆ ಕಾದಾಡುತ್ತಲೇ, ಪ್ರಾಣ ಹಾರಿತು ಕಾದಾಡುತ್ತಲೇ ಹೋಯಿತು.

ಜೀವನ :

"ಬಿಡುವುದನ್ನು ನೀ ಬಿಡಬೇಕು. ಹಿಡುಕೊಂಬುದ ನೀ ಹಿಡಿಬೇಕು. ಬಿಡುವುದು, ಹಿಡಿವುದನೆಲ್ಲವ ಅರಿತು. ನಿನ್ನೇ ಹಿಡಿಬೇಕೋ ನೀನೂ ನಾಳೆ ಎಂಬುದ ಮರಿಬೇಕೊ ನೀ ನಿನ್ನೇ ಎಂಬುದ ನೆನಿಬೇಕು. ನಿನ್ನೇ ನಾಳೇ ನಾಳೇ, ನಿನ್ನೆ ತಿಳಿಯುತ ನೀನೂ ನೋಡಬೇಕು. ಸತ್ಯವನ್ನು ಕಾಣಬೇಕು ನೀ. ಸುಳ್ಳನ್ನೂ ನೋಡಬೇಕು, ಸುಳ್ಳು ಸತ್ಯ, ಸತ್ಯ ಸುಳ್ಳು ಎರಡನ್ನೂ ನೀ ತಿಳಿಯಬೇಕು. ಸೋಲನ್ನೂ ನೀ ನೂಕಬೇಕೊ. ಗೆಲುವಿಗೇ ನೀ ಕಾಯಬೇಕು. ಸೋಲೂ, ಗೆಲುವೂ, ಗೆಲುವೂ, ಸೋಲೂ ಎರಡಕ್ಕೂ ನೀ ಬಾಗಬೇಕು"[8] ಎಂದು ಕವಿಯಿತ್ರಿ ಅವರು ಜೀವನದಲ್ಲಿ ಇಂದು, ನಾಳೆ, ಸೋಲು, ಗೆಲುವಿನ ವಿಚಾರಗಳನ್ನು ತಿಳಿಸುತ್ತಾರೆ.

ಸುಳಿವು :

ಸಣ್ಣ ಸುಳಿವೇ ಸಾಕು ಬದಲಾಗಲು ಸಣ್ಣ ಸಡಿಲತೆ ಸಾಕು ಸಂಬಂಧ ಹಾಳಾಗಲು ಸಣ್ಣ ಮಾತೇ ಸಾಕು ದೂರ ಸರಿಯಲು, ಸಂಕಟಕ್ಕೆ ಸಾವೇ ಪರಿಹಾರವಲ್ಲ, ಸಾಧಿಸಿ, ಸಂಭ್ರಮಿಸಿ, ಬದುಕನ್ನ. ನೆನಪಿರಲಿ, ಮುರಿದ ಮನಸ್ಸನ್ನು ಎಷ್ಟೇ ಪ್ರಯತ್ನ ಪಟ್ಟರೂ, ಸಹಿಸಿಕೊಳ್ಳಬಹುದೇ ಹೊರತು, ಸರಿಪಡಿಸಲಾಗದು"[9] ಎಂದು ಕವಿ ರವಿಯೂ ಬದುಕಿನಲ್ಲಿ ಛಲದಿಂದ ಸಾಧಿಸಿ ಪರಿಹಾರದಿಂದ ಬದುಕಬೇಕೆಂಬ ಆಶಯ ನುಡಿಗಳಿವೆ.

ನಮ್ಮೂರ ನೆನಪು – ಕೆ.ಎಸ್. ಚಿದಾನಂದ :

ಗಡನಾಡುಗಡಿಯಲ್ಲಿ ಕನ್ನಡ ಭಾಷೆಯ ಅಕ್ಷರಗಳನ್ನು ಬಿತ್ತುವರು, ಆಂಧ್ರದ ಗಡಿಗೆ ಹತ್ತಿರುವಾಗ ಮುತ್ತಿಡುವ ಸ್ವಚ್ಛತೆಯ ಕನ್ನಡ ಭಾಷೆಯನ್ನು ಬಳಕೆ ಮಾಡಿ ಮಾಡನಾಡುವರು. ಕೆಂಚಮ್ಮನ ಹಳ್ಳಿಯೂ ನಮ್ಮೂರಾಗಿದೆ ಎಂದು ಕವಿ ಕೆ.ಎಸ್. ಚಿದಾನಂದ ಅವರು ತಿಳಿಸುತ್ತಾರೆ. ಸವಿ ಸವಿಯಾದ ಅನುಭವ ಕಂಡುಬರುತ್ತವೆ. ಮಾವು, ತೆಂಗು, ಹುಣಸೆಮರದ ಫಲದರಾಶಿಯು ಏನು ಚಂದ, ಶಶಿಯನ ಕೃಷ್ಣೆಯಿಂದ

ಅರಳಿದ ಮಲ್ಲಿಗೆ, ಸಂಪಿಗೆ, ಕನಕಾಂಬರ ಹೂವುಗಳು ತುಂಬಾ ಸುಂದರವಾದ ಪ್ರಕೃತಿಯಾಗಿದೆ. ಬಂಡೆಗಳು, ಜಲಾಮೃತದ ನೀರಿನಲ್ಲಿ ದೋಣಿಗಳು ಸಾಗುವುದನ್ನು ಕಾಣಬಹುದು. ಹಬ್ಬಗಳಲ್ಲಿ ಹುಬ್ಬುತನದಿಂದ ಜನರು ಆಚರಿಸುವರು. ಕಲೆಗೆ ಬೆಲೆಯನ್ನು ನೀಡುವ ಅಭಿಮಾನಿಗಳು, ನಾಟಕ, ಸಿನಿಮಾ ನೋಡುವರು, ನಾಯಕರನ್ನು ಮೀರಿಸುವ ಅಭಿಮಾನಿಗಳು ಆಗಿರುವರು. ಸಹಬಾಳ್ವೆ, ಪ್ರೇಮದಿಂದ ಕೂಡಿಬಾಳುವರು. ದೇವರ ನೆನಪಿನಲಿ ಅನ್ನವನ್ನು ನೀಡುವ ಹನುಮ, ಕೆಂಚಮ್ಮನ ಭಕ್ತರು. ನೆಮ್ಮದಿಯ ಬದುಕು ರೂಪಿಸಿಕೊಳ್ಳುವರು.

ಕೃತಜ್ಞತೆಯ ನೆನಪೆಲ್ಲಿ ? :

ಬ್ರಹ್ಮಾಂಡದಲ್ಲಿ ಜೀವ ಸಂಕುಲದಲ್ಲಿ ಅಗಣ್ಯ ಮೂಕ ಜೀವಿಗಳಿವೆ. ಇವುಗಳಲ್ಲಿ ಸಾಮರಸ್ಯವು ಹೊಂದಾಣಿಕೆಯು ತುಂಬಿದೆ. ಮಾತನಾಡಬಲ್ಲ ಮನುಜರಲ್ಲಿ ಜನಸಿಯು ಮನೆಮಾಡಿದೆ. ಕಾರಣ ಹಲವಿವೆ. ಕಷ್ಟ–ನಷ್ಟದಲ್ಲಿ ಹೆಗಲಿಗೆ ಹೆಗಲನ್ನು ಕೊಟ್ಟು ಎತ್ತಿ ಎಳೆದ ಜೀವಗಳಿಗೆ ಎತ್ತು, ಕುದುರೆ, ಎಮ್ಮೆ ಮುಂತಾದ ಪ್ರಾಣಿಗಳಿಗೆ ಎಂತಹ ದಯಾಮಯ ಗುಣಗಳಿವೆ. ಆದರೆ ಜನರಲ್ಲಿ ಸುಳಿವು ಸಿಕ್ಕರೆ ಸಾಕು ಹೊಟ್ಟೆಕಿಚ್ಚು ಜ್ವಾಲೆಯನ್ನು ಉಗುಳಿ ತಮ್ಮೊಳಿಗಿನ ಸಂತಸವೇ ಮರೀಚಿಕೆಯಾಗಿ ಮಾಡಿಕೊಂಡಿದ್ದಾರೆ. ಸ್ನೇಹಜೀವ, ಮನದಮಾತು, ಹಗಲು–ಇರುಳು ಪರಿವೆ ಮರೆತು, ಕರೆದ ಮಾತಿಗೆ ಕಣ್ಣನ್ನು ಚಾಚಿ ಕೇಳಿ, ದುಡಿದ ಜೀವ, ರೈತರು, ಕೂಲಿ ಕಾರ್ಮಿಕರು, ಶ್ರಮಜೀವಿಗಳ ಜೀವ ಕೊರಗಿ ಬಾಡಿತು. ಪ್ರಾಮಾಣಿಕತನದಿಂದ ಕೆಲಸಮಾಡಿದವರಿಗೆ ನೋವು, ಶೋಷಣೆ, ಕಣ್ಣೀರ ಕಾಣಿಕೆ ನೀಡಿದರು. ಕಷ್ಟವನ್ನು ನೀಡಿದವರಿಗೆ ಕರ್ಮ ಉತ್ತರಿಸುವುದು. ಆದ್ದರಿಂದ ನಿಮ್ಮ ಹೊಟ್ಟೆ ತಣ್ಣಗೆ ಇರಲಿ ಎಂದು ಕವಿಯ ಆಶಯವಾಗಿದೆ.

ದಾರಿದೀಪ :

ಒಲವು ಮೌನವಾಯ್ತೆ ಮನವೆ? ಕೊರಗದಿರು. ಕೊರಗಿ ಕರಗದಿರು, ನಿನ್ನ ಕೊರಗ ಕೇಳೊ ಕಿವಿಗಳೆಲ್ಲ ಕಿವುಡು. ಎಚ್ಚರ! ಎಚ್ಚರ! ಕಣ್ಗಳಲ್ಲಿ ಮಾಡನಾಡಿ, ಕೈಗಳಲ್ಲಿ ನಡೆದು, ನಂಬಿದೊಡಲಿಗೆರಡು ಬಗೆವ, ವಿಷಸರ್ಪಗಳಕ್ಕಪಕ್ಕ. ಎಲ್ಲ ಮೂಢರಲ್ಲ ಇಲ್ಲಿ. ಅನುಮಾನವಿಲ್ಲ? ನೀ ಶತಮೂಢ, ಬಿದ್ದಿರುವೆ ನೀ ಎತ್ತೋ ರಾಮ? ಬರೆಯ ಮೇಲೆ, ಬರೆ ಎಳೆದವರೇ? ಅಕ್ಕಪಕ್ಕದಲ್ಲಿ ನಡೆವ ಕಾಲ್ಗಳಿಲ್ಲ, ನುಡಿವ ಬಾಯ್ಗಳಿಲ್ಲ, ಏಕಾಂಗಿ, ಪರರ ನೆಚ್ಚಿ ಫಲವಿಲ್ಲ. ಮೈಯ ಕೊಡವಿ ಎದ್ದು, ನಿನಗೆ ನೀನೆ ದಾರಿದೀಪವಾಗು"[10] ಎಂದು ಕವಿ ಜೀವನದಲ್ಲಿ ಸಾವರಿಸಿಕೊಂಡು ಮತ್ತೆ ಬದುಕುವ ಸ್ಫೂರ್ತಿ ತಿಳಿಸುವರು.

"ನಗೆಯೊಗೆವ ನಲಿವುಗಳ ಹೊಗೆ ಬಾಳ ಬವಣೆಗಳ, ಸೂಕ್ಷ್ಮ ಸಂವೇದನೆಯ

ಭಟ್ಟಿಯಲ್ಲಿ ಹಾಸಿ, ಪ್ರಜ್ಞೆಯ ಕಾಸಿ ಹಸನಾದ ಕಣ ಸೋಸಿ, ಸುರಿಯುವನು ಶಬ್ಧರಸ ಘಟ್ಟಿಯಲ್ಲಿ. ಸ್ವಾನುಭವರಂಗದಲಿ ಜಗ–ಜನದ ಸಂಗದಲಿ, ಸತ್ಯ–ಸೌಂದರ್ಯಗಳನು ಅರಸುವಲ್ಲಿ, ಮುಂಬರುವ ಬಾಳುವೆಯ ಮುನ್ನೋಟವೀಯುವನು, ತೇಲು ನೋಟಕೆ ತಿಳಿವು ಹೊಳೆಯದಲ್ಲಿ".[11] ಹೀಗೆ ಕವಿ ಬಿ. ಎ. ಸನದಿಯವರು ಜೀವನ ಸಾಧನೆ ಮುಂತಾದ ವಿಷಯ ವಸ್ತುಗಳನ್ನು ಕುರಿತು ವಿವರಿಸುತ್ತಾರೆ.

ಒಂದು ಗಾಯವನ್ನು – ಆರಿಫ್‌ರಾಜಾ :

ಒಂದು ಗಾಯವನ್ನು ಊರಿಂದ ಊರಿಗೆ ಹೊತ್ತಿಕೊಂಡು ತಿರುಗುತ್ತಿದ್ದೇನೆ. ಎದೆಯ ಎಡಭಾಗದಲ್ಲಿ ಸರಿಯಾಗಿ ಹೃದಯದ ಮೇಲೆ ಆದಂತಹ ಆಳವಾದ ಗಾಯವದು. ಇಂತಹ ಗಾಯಕ್ಕೆ ಪರಿಹಾರವಿಲ್ಲವೆ. ಈ ಜಗದ ಯಾವ ಮುಲಾಮು ಹಚ್ಚಿದರೂ ವಾಸಿಯಾಗಲಾರದು. ಚಂದ್ರನಲ್ಲಿ ಉಂಟಾಗಿರುವ ಕಂದಗಳಂತೆ ಸೂರ್ಯ ಬೆಳಕು ಸೂಜಿ ಗಾತ್ರದಲ್ಲಿ ಪಾರಾಗುವಂತಹ ಆಕರದಲ್ಲಿ ಒಂದು ಗಾಯವನ್ನು ಆಗಿದೆ. ಇರುವೆಯ ತುತ್ತು ಕಸಿದುಕೊಂಡವರು ಯಾರು? ಕೂದಲು ಸೀಳುವ ನಾಗರಿಕತೆಗೇನು ಗೊತ್ತು ಇರುವೆ ಹೃದಯಕ್ಕಾಗದ ಗಾಯವದು. ಊರಿಂದ ಊರಿಗೆ ತಿರುಗುತ್ತಾ ಹಸಿಗಾಯವನ್ನು ಹೊತ್ತು ತಿರುವುದು ತಪ್ಪಲಿಲ್ಲ. ಇರುವೆ ಚೀರುವ ಧ್ವನಿ ಇಲ್ಲಿ ಯಾರಿಗೂ ಕೇಳಿಸಲಿಲ್ಲ, ಗಾಯದ ನೋವು ಕಡಿಮೆ ಆಗಲಿಲ್ಲ.

ಒಂದು ಸೇಬುಹಣ್ಣಿನ ಯೋಗ್ಯತೆ :

ಕವಿಯು ಅಸಹಾಯಕತೆಯನ್ನು ಅಭಿವ್ಯಕ್ತಿಪಡಿಸುತ್ತಾರೆ. ಕಾರಣ ತಮಗೆ ಒಂದು ಸೇಬುಹಣ್ಣನ್ನು ಕೊಂಡುಕೊಳ್ಳುವ ಯೋಗ್ಯತೆ ಇಲ್ಲ ಎಂದು ತಿಳಿಸುತ್ತಾರೆ. ನಮ್ಮ ದರಿದ್ರ ಬಡತನ ದೇಶದಲ್ಲಿ ತಮ್ಮಂಥವನ್ನು ಒಂದು ಸೇಬಿನಲ್ಲಿ ಒಂದು ಹುಣಸೆ ಬೀಜವನ್ನು ಕೊಂಡುಕೊಳ್ಳಲಾರದ ಪರಿಸ್ಥಿತಿ ಇದೆ ಎನ್ನುತ್ತಾರೆ. ಡಾಕ್ಟರ್ ಹೇಳುತ್ತಾರೆ, ಹೃದಯ ಬಲಹೀನವಾಗಿ ರಕ್ತದ ಕೊರತೆ, ಅಶಕ್ತಿಯಾಗಿದ್ದಿಯಾ, ಪ್ರತಿದಿನ ಒಂದು ಸೇಬು ತಿನ್ನು ಎಂದು ಸಲಹೆ ನೀಡುತ್ತಾರೆ. ಹೇಗೆ ತಿಳಿಸಲಿ ಇವರಿಗೆ ನಮ್ಮ ದೇಶದಲ್ಲಿ ಪ್ರತಿದಿನ ಎಲ್ಲೆಂದರಲ್ಲಿ ರಕ್ತಾಭಿಷೇಕ ನಡೆಯುತ್ತಿರುವಾಗ ನನಗೆ ರಕ್ತದ ಕೊರತೆಯೇ? ಎಂದು ಹೇಳುತ್ತಾರೆ. ನಂತರ ನಾನು ಸರಕಾರಿ ಆಸ್ಪತ್ರೆಯ ಬಡರೋಗಿ, ಕಾಯಿಲೆ ಬಿದ್ದಾಗ ಸೇಬು ಕೊಂಡುಕೊಳ್ಳುವ ಉಣ್ಣುವ ಯೋಗ್ಯತೆ ನನಗಿನ್ನೂ ಬಂದಿಲ್ಲ ಸಾರ್ ಎಂದು ಬಡರೋಗಿಯ ಸ್ಥಿತಿ ಎಂತಹುದು ಎಂದು ಮಾರ್ಮಿಕವಾಗಿ ವಿವರಿಸಿದ್ದಾರೆ.

ಸ್ಪರ್ಧೆ :

ಗುಂಡು ಮತ್ತು ಓಟಗಾರನ ನಡುವೆ ತಲೆತಲಾಂತರದಿಂದ ಅಘೋಷಿತ

ಓಟದ ಸ್ಪರ್ಧೆ ಏರ್ಪಟ್ಟಿತ್ತು. ಆತನು ಬಂದೂಕಿನಿಂದ ಬಿಟ್ಟ ಗುಂಡಿಗಿಂತಲೂ ವೇಗವಾಗಿ ಓಡಬಲ್ಲವನಾಗಿದ್ದನು ಎಂಬ ಕಾರಣಕ್ಕೆ ಗುಂಡುಗಳನ್ನು ಅವನ ಬೆನ್ನ ಹಿಂದೆ ಛೂ ಬಿಟ್ಟಿದ್ದರು. ಓಟಗಾರನೇ ಮೊದಲು ಗುರಿ ತಲುಪುತ್ತಿದ್ದನು. ಆದ್ದರಿಂದಲೇ ಗುಂಡುಗಳು ಗುರಿಯಿಂದ ಉಳಿದು ಉರುಳಿಬಿಡುತ್ತಿದ್ದವು. ಚಿರತೆಯ ವೇಗದ ಆತನ ಕಾಲನ್ನು ಕಟ್ಟಿಹಾಕುವ ರಹಸ್ಯ ಅವರಿಗೆ ತಿಳಿಯಿತು, ಕಡಿವಾಣ ಹಾಕಿದರು. ಸೂರ್ಯನ ಉದಯ ಗುಂಡು ರಭಸವಾಗಿ ಹಿಂದೆ ಹಾಸಿ ದಾಟಿಕೊಂಡು ಮುಂದೆ ಹೊರಟುಹೋಯಿತು. ಅವತ್ತಿನಿಂದ ಜಗತ್ತಿನಲ್ಲಿ ಸೂರ್ಯೋದಯ ಸೂರ್ಯಾಸ್ತಗಳು ಕೆಂಪಾದವು, ಹೀಗೆ ಸ್ಪರ್ಧೆ ಫಲಿತಾಂಶಗಳು ಕಂಡು ಬರುತ್ತವೆ.

ಒಂದು ಹೆಗಲು :

"ಒಂದು ಹೆಗಲುಬೇಕು ಪುಟ್ಟ ಮಗುವೊಂದು ಹತ್ತಿಕೂಡಲು ಪ್ರಿಯವಲ್ಲರಿ ಬಾಗಿ ಬಲವಿನಿಂದ ಗಲ್ಲ ತಡುವಲು ಖಂಡಿತ ಬೇಡ ಲೋಕದ ಭಾರ ಹೊತ್ತು, ಭುಜಕ್ಕೆ ಭುಜ ತಗುಲಿಸಿ, ಕವಾಯತು ಮಾಡಲು, ಹೆಗಲ ಚೀಲಗಳಲ್ಲಿ ಕರಪತ್ರಗಳೆಂಬ ಪ್ರೇಮಪತ್ರಗಳನ್ನು ಹಾಕಿಕೊಂಡು ಓಡಾಡಲು, ನನಗೊಂದು ಹೆಗಲುಬೇಕು. ಉಕ್ಕಿಬರುವ ಕಣ್ಣೀರನ್ನು ಕಿನಾರೆಗಾನಿಸಿ, ಬಿಕ್ಕಳಿಸಲು, ಆಡಿ ಅರ್ಧಕ್ಕೆ ನಿಂತ ಮಾಡಿನಂತೆ, ಹಾಳು ಮಧ್ಯಾಹ್ನಗಳು, ಇಂಥ ಹಾಳು ಮಧ್ಯಾಹ್ನಗಳು, ಇಂಥ ಹಾಳು ಮಧ್ಯಾಹ್ನಗಳಲಿ ಸಾಕು ನನಗೆ ಒಂದು ಹೆಗಲು. ಬೇಡವೆ ಬೇಡ ಸರ್ತಿಗೆ, ಸದಿಗೆ ಹೊತ್ತು ಓಡಾಡುವ ಆ ಇನ್ನೊಂದು ಹೆಗಲು"[12] ಹೀಗೆ ತಂದೆಯ ಪ್ರೀತಿಯನ್ನು ಬಯಸುವ ಮಗು ಹೆಗಲನ್ನು ಒಲವನ್ನು ಕೇಳುವ ಪರಿಯನ್ನು, ಪ್ರೀತಿಯನ್ನು ಬಯಸುವ ಮಗು ಹೆಗಲನ್ನೂ, ಬಲವನ್ನೂ ಕೇಳುವ ಪರಿಯನ್ನೂ ಕಾಣಬಹುದಾಗಿದೆ.

ಗೂಡು ಕಟ್ಟಬೇಕು – ಹಾರನಹಳ್ಳಿ ಮಳಲಿಗೌಡ :

ಪಕ್ಷಿಗಳು ಕೂಡಿ ಬದುಕುವಾಗ ಮಕ್ಕಳನ್ನು ಪಡೆಯುವಾಗ ಸಹಜವಾದ ಮುಂಜಾಗೃತಿಯನ್ನೇ ವಹಿಸುತ್ತವೆ. ಹೊಟ್ಟೆಯ ಒಳಗಿರುವ ಮೊಟ್ಟೆಗಳು ಡಿಕ್ಕಿ ಹೊಡೆಯುತ್ತಿವೆ. ಅದಕ್ಕೆ ನಾವು ಗೂಡು ಕಟ್ಟಬೇಕು. ಆಡಾಡುತ್ತ ಹಾರಿಬಂದು ನೆಲಸಿದ ಬೆಟ್ಟವು ಇದರ ತುದಿ ಇಷ್ಟ ಕಡಿದಾಗುತ್ತಿದೆಯೋ. ಈಗ ಅನಿಸಬೇಕೆ ನಮ್ಮ ಹೊಸ ಗೂಡು ಬೇಕೆಂದು. ಇಲ್ಲಿ ಹರಡಿರುವ ಪ್ರದೇಶ ಅದೆಷ್ಟೋ ಪ್ರದೇಶವಾಗಿದೆ. ಹಿಂದೆ ಬಂದುದನ್ನು ಕಡಿದು ಮುಂದೆ ಇರುವುದನ್ನು ಹರವಿ ಇಲ್ಲಿಗೆ ಸಾಗಿ ಬಂದಿದ್ದೇವೆ. ಅದಕ್ಕೆ ನಾವು ನಮ್ಮದೊಂದು ಹೊಸಗೂಡನ್ನು ಕಟ್ಟಿಕೊಳ್ಳಬೇಕೆಂದು ಕವಿ ಹಾರನಹಳ್ಳಿ, ಮಳಲಿಗೌಡ ಅವರು ವಿವರಿಸಿದ್ದಾರೆ. ಬಾಳೆಯ ಎಲೆಗಳಲ್ಲಿ ನವೆದ ಸೀರೆ ಎಳೆಗಳಲ್ಲಿ ಬೆಳೆಯುತ್ತಿರುವ ಬೆಳೆಯ ಮೊಳೆಯ ಒಳಗೆ ಹೊಸ ಸೃಷ್ಟಿಯು ಬರುವವರೆಗೂ

ಗೂಡು ಕಟ್ಟಬೇಕು. ಋತುಮಾನಕ್ಕೂ, ಹಾವಿನ ಭೋಜನಕ್ಕೂ ಬೇಟೆಗಾರನ ಬಾಯಚಪಲಕ್ಕೂ ಸಿಗದಂತೆ ಹೊಸಗೂಡು ಕಟ್ಟಬೇಕು ಎಂಬ ವಿಷಯಗಳನ್ನು ತಿಳಿಯಬಹುದಾಗಿದೆ.

ಕಾಲ :

ತಾವು ಹೊತ್ತಿಸಿಕೊಂಡ ಸಿಗರೇಟನಂತೆ ಉರಯುತ್ತಲೇ ಹೋಗುತ್ತದೆ. ಆದಷ್ಟು ಸೇದು ಬಿಡು. ಉಸಿರಾಟವು ಹ್ರಸ್ವ, ಧೀರ್ಘದ ಏರಿಳಿತವಿರುತ್ತದೆ. ಕಾಲ ಸವೆದಂತೆ ತಲೆಯ ಕೂದಲು ಉದುರಿ ಬೊಕ್ಕತಲೆ ಬೆಳೆದು ನುಣುಪಾದ ಕೆನ್ನೆ ಗಡ್ಡ ಮಾಯವಾಗಿ ಬಿಳುಪು ತಲೆ ಕಂಡು ಬರುತ್ತದೆ. ಸಮಯವು ಸಾಗುತ್ತಾ ಕಳೆಯುತ್ತಾ ಸಾಗುತ್ತಾ, ನಮ್ಮನ್ನು ರೇಗಿಸುತ್ತಾ, ಸಂಭ್ರಮಿಸುತ್ತಾ, ನೋಯಿಸುತ್ತಾ, ಕಲಿಸುತ್ತಾ, ಕೊಲ್ಲುತ್ತಾ ನಮ್ಮನ್ನು ನೋವಿಸುತ್ತಾ ಇದೆ ಈ ಕಾಲ. ಈ ಕಾಲವೇ ಬದಲಾದಾಗ ಕಷ್ಟ–ಸುಖಗಳು ಏರಿಳಿತವಾಗಿ ಬರುತ್ತದೆ.

ಕನಸು :

“ಬರಿಕನಸುಗಳ ಬರಬಡಿದು, ನನ್ನ ನೆತ್ತಿ ಸೀಳಿ, ಬೀಟೆ ಬಿಟ್ಟ ಗದ್ದೆಯಲ್ಲಿ ಭತ್ತ ಬೆಳೆಯುತ್ತಿಲ್ಲ. ಕೊನೆಗೊಂದು ದಿನ ಸಾಯುತ್ತೇನೆ. ಅದಕ್ಕೂ ಮೊದಲು ನಾನು ಕಂಡ ಕನಸುಗಳ, ನನಸಿನಲ್ಲಿ, ಸುಟ್ಟು ಬೂದಿಯಾಗುತ್ತೇನೆ. ಆಮೇಲೆ ಕನಸು ಕಟ್ಟುವುದಿಲ್ಲ ಎಂಬ ಕನಸಿನಲ್ಲಿ ಬದುಕುತ್ತೇನೆ”[13] ಎಂದು ಕವಿಯೂ ಕನಸಿನ್ನು ಕುರಿತು ತಮ್ಮ ವಿಚಾರ ಚಿಂತನೆಗಳನ್ನು ತಿಳಿಸುವರು.

“ಸೋಲಾಯಿತೆಂದು ಪೋಲಾಗಬೇಡ ಮುಂದೆ ನೀ ಗೆಲ್ಲಬೇಕು. ಆ ಗೆಲುವಿಗೆ ಮೆಟ್ಟಿಲುಗಳೇ, ಈ ನಿನ್ನ ಸೋಲು. ಒಂದೊಮ್ಮೆ ಸೋತರೆ, ಮತ್ತೊಮ್ಮೆ ಸೋಲು. ನೀ ಗೆಲ್ಲುವವರೆಗೆ ಗುರಿಬಿಡದಿರು. ನಿನ್ನಾರು ಹೀಗಳಿವರೋ ಅಂಥವರಿಗೆ, ಬೆನ್ನು ತೋರಿ ನಡೆ ಮುಂದೆ. ನಿನಾಗದೆಂದೊತ್ತಿ ಹೇಳುವವರಿಗೆ, ಕಿವುಡನಂತೆ ವರ್ತಿಸು ಅವರ ಮುಂದೆ, ಧೈರ್ಯ ಮತ್ತು ತಾಳ್ಮೆ ಯಶಸ್ಸಿನೆರಡು ಮೆಟ್ಟಿಲುಗಳು, ನೀ ಬಳಸು ಈ ಅಸ್ತ್ರವ, ಗೆಲುವು ನಿನ್ನದೇ ಖಚಿತವು” ಎಂದು ಕವಿ ಶ್ರೀಶೈಲ ಬಿರಾದಾರ ಅವರು ಸೋಲು ಗೆಲುವಿನ ಬಗ್ಗೆ ವಿವರಿಸಿದ್ದಾರೆ.

ಉಪಸಂಹಾರ :

ಒಟ್ಟಾರೆಯಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಪರಿವರ್ತನೆಯೊಂದಿಗೆ ಕಾವ್ಯದಲ್ಲಿ ವಾಸ್ತವದ ಚಹರೆಗಳನ್ನು ಈ ಮೇಲಿನ ಅಂಶಗಳನ್ನು ಕಾಣಬಹುದಾಗಿದೆ. ಕನಸು, ಕಾಲ, ಪ್ರೀತಿ, ಸೋಲು, ಏಕಾಂತ, ಅರಿವು, ಬಸ್‌ನಿಲ್ದಾಣ ಮುಂತಾದ ಕಾವ್ಯಗಳು ಪರಿಚಯಿಸುತ್ತವೆ, ಮತ್ತೆ ಹೊಸತನದ ಪರಿವರ್ತನೆಯೊಂದಿಗೆ

ಅರಿವಿನಿಂದ ವಿವಿಧ ಹೊಸತನದ ಹೊಳಪು ಮೂಡಿ ಬರುತ್ತವೆ. ಚೈತನ್ಯ, ಧೈರ್ಯ, ಆತ್ಮವಿಶ್ವಾಸ, ಬದುಕಲು ಆತ್ಮವಿಶ್ವಾಸವು ವೃದ್ಧಿಸುವ ಬಗೆಯನ್ನು ಕಾಣಬಹುದಾಗಿದೆ.

ಕೊನೆಯ ಟಿಪ್ಪಣಿಗಳು :

1. ಸಂ:ಹಲಸಂಗಿಯ ಚನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ, ಗರತಿಯ ಹಾಡು, ಪು.ಸಂ.–11
2. ಸುರೇಶ ನಾವಿ, ಬುದ್ಧನಗಲಾರ, ಪು.ಸಂ.–19
3. ಸಂ:ಡಾ. ವಿನಯಾ ಒಕ್ಕುಂದ, ಡಾ.ಎಸ್. ಎಚ್. ನಾಯಕ, ಆಧುನಿಕ ಕನ್ನಡ ಕಾವ್ಯ ಸಾಹಿತ್ಯ ಚಿಂತನ, ಪು.ಸಂ.13–14
4. ಎಮ್. ಕೆ. ಶೇಖ್ (ಮೌ.ಕು.ಶೇ.) ಭೂಮಾತೆ ನನ್ನ ಮಾತೆ, ಪು.ಸಂ.–25
5. ಪ್ರ.ಸಂ.: ಹೊನನೀಲಕಂಠೇಗೌಡ, ನಾವು ಜೊತೆ ಜೊತೆಯಲಿ, ಪು.ಸಂ.–18
6. ಸಂ:ಶಿವರಾಜ್ ಮೋತಿ, ರವಿಯ ಕವಿತೆಗಳು, ಪು.ಸಂ.–05
7. ನಜೀರ ಚಂದಾವರ, ಕಾತರ, ಪು.ಸಂ.–16
8. ಶಾಂತಾ ಕುಂಟಿನಿ (ಶಕುಂತಲಾ), ಸೂಕ್ಷ್ಮ ದೃಷ್ಟಿ, ಪು.ಸಂ.–40
9. ಸಂ: ಶಿವರಾಜ್ ಮೋತಿ, ರವಿಯ ಕವಿತೆಗಳು, ಪು.ಸಂ.39
10. ಕೆ.ಎಸ್. ಚಿದಾನಂದ, ಒಲವಿನ ಅಲೆಗಳು, ಪು.ಸಂ.–39
11. ಡಾ. ಗೌರೀಶ್ ಕಾಯ್ಕಿಣಿ, ಮಾನವ್ಯ ಕವಿ, ಪು.ಸಂ.–39
12. ಆರಿಫರಾಜಾ, ಬೆಂಕಿಗೆ ತೊಡಿಸಿದ ಬಟ್ಟೆ, ಪು.ಸಂ.–58
13. ಹಾರನ ಹಳ್ಳಿ ಮಳಲಿಗೌಡ, ಗೂಡು ಕಟ್ಟಬೇಕು, ಪು.ಸಂ.–18

***

ಕನ್ನಡದಲ್ಲಿ ಆತ್ಮಕಥನಗಳ ಸಾಹಿತ್ಯಕ ಮೌಲ್ಯ ಮತ್ತು ಮಹತ್ವ

ಡಾ.ಉಮೇಶ

ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹೊಳೆನರಸೀಪುರ,
ಹಾಸನ ಜಿಲ್ಲೆ 573211

ಮನುಷ್ಯ ತನ್ನ ಭಾವನೆಗಳಿಗೆ ತನ್ನದೇಯಾದ ಸ್ವತಂತ್ರವಾದ ರೂಪುಕೊಡುವ ಕ್ರಿಯೆಯೇ ಸೃಜನಶೀಲ ಪ್ರಕ್ರಿಯೆ. ಸಾಹಿತ್ಯವಲಯದಲ್ಲಿ ಇದು ಬರವಣಿಗೆಯ ಮೂಲಕ ಅಭಿವ್ಯಕ್ತಿ ಪಡೆಯುತ್ತದೆ. ಬರಹಗಾರ ತನ್ನ ಅನುಭವ ಮತ್ತು ತನ್ನದೇ ಆದ ವಿಶಿಷ್ಟ ಒಳನೋಟದಿಂದ ಪರಿಗ್ರಹಿಸುವ ವಸ್ತುವಿನ ಕುರಿತು ತಾವು ರೂಢಿಸಿಕೊಂಡ ವಿಶಿಷ್ಟ ಭಾಷಾಶೈಲಿಯನ್ನು ಬಳಸಿ ರಚಿಸುವ ಕೃತಿ ಸೃಜನಶೀಲ ಸಾಹಿತ್ಯ ಎನಿಸುತ್ತದೆ. ಅದು ಅನುಕರಣೆ ಆಗಿರದೆ ಹೊಸ ಸೃಷ್ಟಿ ಆಗಿರುತ್ತದೆ. ಒಂದು ವಸ್ತು, ವಿಷಯದ ಆಧಾರ ಮತ್ತು ಅನುಕರಣೆಯಿಂದ ರಚಿಸುವ ಕೃತಿಗಳು ಸೃಜನೇತರ ಸಾಹಿತ್ಯ ಪ್ರಕಾರಕ್ಕೆ ಸೇರುತ್ತವೆ. ಈ ದೃಷ್ಟಿಯಿಂದ ಕಥೆ, ಕವನ, ಕಾದಂಬರಿಗಳನ್ನು ಸೃಜನಶೀಲ ಸಾಹಿತ್ಯದ ವಿವಿಧ ಪ್ರಕಾರಗಳನ್ನಾಗಿ ಪರಿಭಾವಿಸುತ್ತೇವೆ. ಸೃಜನಶೀಲ ಸಾಹಿತ್ಯದ ಪ್ರಮುಖಾಂಶಗಳು ಹಲವು ಪ್ರಕಾರಗಳಲ್ಲಿ ದೊರೆಯುವುದಿಲ್ಲ. ವಿಚಾರವನ್ನು ದಾಖಲಿಸುವ, ನಮೂದಿಸುವ, ತಮ್ಮ ಅರಿವನ್ನು ಮಂಡಿಸುವ ಕ್ರಿಯೆ ಸೃಜನಶೀಲತೆಯಲ್ಲ. ಸೃಜನಶೀಲತೆಯ ಮೂಲಬೇರು ಜೀವನದ ಅಂತಃದೃಷ್ಟಿ. ಅದು ಕಥನವಾಗಲಿ, ಕಾವ್ಯವಾಗಲಿ, ಕಾದಂಬರಿಯಾಗಲಿ ಅಲ್ಲಿ ಬರಹಗಾರ ಒಂದು ನಿರ್ದಿಷ್ಟ ಚೌಕಟ್ಟು ಹಾಕಿ ತನ್ನ ಅನುಭವವನ್ನು ಅಭಿವ್ಯಕ್ತಿಪಡಿಸುತ್ತಾನೆ. ಹೀಗೆ ಮೇಲಿನಂತೆ ಬೆಳೆದುಬಂದ ಸೃಜನಶೀಲ ಸಾಹಿತ್ಯದ ಹಲವು ಪ್ರಕಾರಗಳಲ್ಲಿ 'ಆತ್ಮಕಥೆ'ಯೂ ಒಂದಾಗಿದೆ. ಸತ್ಯಸಂಗತಿಗಳ

ದಾಖಲೆಯೇ ಆತ್ಮಕಥೆಗಳ ಮೂಲ ಆಶಯವಾಗಿರುವುದರಿಂದ ಸೃಜನಶೀಲ ಸಾಹಿತ್ಯವಾಗಿ ಆತ್ಮಕಥೆಗಳ ಮಹತ್ವವನ್ನು ಈ ಕೆಳಗಿನಂತೆ ಅರಿಯಬಹುದಾಗಿದೆ.

ಆತ್ಮಕಥನ ಎಂದರೆ ಬದುಕಿನ ವಾಸ್ತವ ಘಟನೆಗಳ ಹಿನ್ನೋಟ. ತಮ್ಮ ಜೀವನದ ಅನುಭವ ಲೋಕವನ್ನು ತಾವೇ ಬರೆದುಕೊಳ್ಳುವುದು. ಇಡೀ ವಸ್ತುವೇ ತಾವೇ ಆಗಿದ್ದು ಬರಹಗಾರರು ತಾವೇ ಆಗಿರುತ್ತಾರೆ. ಆತ್ಮಚರಿತ್ರೆ ವ್ಯಕ್ತಿಯೋರ್ವನ ಚರಿತ್ರೆಯಾಗಿರದೆ ತಾವು ಸಮಾಜವನ್ನು ಕಂಡ ರೀತಿ, ಸಮಾಜವೂ ತಮ್ಮನ್ನು ಕಂಡ ರೀತಿಯೂ ಆಗಿದ್ದು ಸಮಾಜದ ಆತ್ಮಕಥನವೂ ಆಗಿರುತ್ತದೆ. ಆತ್ಮಕಥನವೆಂದರೆ ಒಂದು ರೀತಿಯ ಸತ್ಯಶೋಧ. ಆದುದರಿಂದಲೇ ಗಾಂಧೀಜಿ ತಮ್ಮ ಬದುಕಿನ ಕಥನಕ್ಕೆ ಕೊಟ್ಟ ಹೆಸರು 'ಸತ್ಯಾನ್ವೇಷಣೆ' ಎಂದು. ತಾವು ಬದುಕಿ ಬಂದ ದಾರಿಯನ್ನು ಸತ್ಯದಿಂದ ತಾವು ಅನ್ವೇಷಿಸಿಕೊಳ್ಳುವುದು. ಇದೊಂದು ಕಷ್ಟದ ಕೆಲಸವು ಕೂಡ.

ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಆತ್ಮಕಥನವು ವಿಶಿಷ್ಟಸ್ಥಾನವನ್ನು ಹೊಂದಿದೆ. ಆತ್ಮಕಥನಗಳು ಹೊರನೋಟಕ್ಕೆ ಒಬ್ಬ ವ್ಯಕ್ತಿಯ ಚರಿತ್ರೆಯ ಹಾಗೆ ಕಂಡರೂ ವಾಸ್ತವವಾಗಿ ಅವು ಸಂಬಂಧಿಸಿದ ವ್ಯಕ್ತಿಯ ಪೂರ್ವಕಾಲೀನ ಮತ್ತು ಸಮಕಾಲೀನ ಸಾಂಸ್ಕೃತಿಕ ಬದುಕಿನ ದಾಖಲೆಗಳಾಗಿರುತ್ತವೆ. "ಆತ್ಮಕಥೆ ಕೇವಲ ಕಳೆದುಹೋದ ಜೀವನ ವೃತ್ತಾಂತವಾದರೂ ಅದು ಉಳಿದವರ ಜೀವನದ ಮೇಲೆ ಬೀರುವ ಪ್ರಭಾವ ಮಹತ್ತರವಾದುದು, ಮಾರ್ಗದರ್ಶಕವಾದುದು" ಎಂಬ ದೇ.ಜವರೇಗೌಡರ ಮಾತುಗಳು ಸಮರ್ಪಕವಾಗಿವೆ. ಆತ್ಮಕಥನಕಾರ ತನ್ನ ಮತ್ತು ತನ್ನ ಸುತ್ತಮುತ್ತಲಿನ ಜೀವನವನ್ನು ತಾನು ಕಂಡಂತೆ ಇಲ್ಲಿ ವರ್ಣಿಸಿರುತ್ತಾನೆ. ಬರೆಯುವಷ್ಟು ಶಕ್ತಿ ಮತ್ತು ತಾಳ್ಮೆ ಇದ್ದಲ್ಲಿ ಪ್ರತಿಯೊಬ್ಬನೂ ತನ್ನ ಆತ್ಮಕಥೆಯನ್ನು ಬರೆಯಬಹುದು. ಅದಕ್ಕೆ ತನ್ನದೇ ಆದ ಪ್ರಾಮುಖ್ಯತೆ ಇದ್ದೇ ಇದೆ. ಬರೆಯುವವರು ಸಮಾಜದಲ್ಲಿ ಗಣ್ಯವ್ಯಕ್ತಿಯಾದರೆ ಅವರು ಬರೆದ ಆತ್ಮಕಥೆಗೆ ಹೆಚ್ಚಿನ ಪ್ರಾಧಾನ್ಯತೆ ದೊರಕುತ್ತದೆ.

ಆತ್ಮಕಥನಕಾರ ಬದುಕಿನಲ್ಲಿ ತಾವು ಮಾಡಿದ್ದಕ್ಕಿಂತ ಬದುಕು ಅವರಿಗೆ ಹೇಗೆ ಕಂಡಿತು ಎನ್ನುವುದು ವಿಶಿಷ್ಟವಾದುದು. ಅವರ ಬದುಕಿನ ಹಿನ್ನೋಟದಲ್ಲಿ ಗತಕಾಲದ ಬದಲಾವಣೆ, ಆ ಮೂಲಕ ಬದಲಾದ ಇತಿಹಾಸ, ಸಾಂಸ್ಕೃತಿಕ ಪಲ್ಲಟ, ಪರಿವರ್ತನೆಯಾದ ಸ್ಥಿತಿಗತಿ, ನಾಗರಿಕ ಪ್ರಜ್ಞೆ, ಮಾನವ ಸಂಬಂಧಗಳ ಮೂಲಕ ಕಂಡುಕೊಂಡ ಚಲನಶೀಲ ಬದುಕಿನ ಅನನ್ಯತೆ ಮಹತ್ವವಾದುದು. ಆತ್ಮಕಥನಗಳು ಕಥನಕಾರನ ಬದುಕಿನ ಮಹತ್ವದ ಅನುಭವಗಳು ಸಮಕಾಲೀನ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿಗೆ ದಾರ್ಶನಿಕತೆಯನ್ನು ತೋರುತ್ತವೆ. ಮುಂದಿನ ತಲೆಮಾರಿಗೆ

ಆದರ್ಶಪ್ರಾಯವಾಗುತ್ತವೆ. ಆತ್ಮಕಥನಗಳು ಮಾನವೀಯ ಸಂಬಂಧಗಳನ್ನು, ಸಂಸ್ಕೃತಿಯ ಜೀವಂತಿಕೆಯನ್ನು ಉಳಿಸುವ ಮತ್ತು ಬೆಳೆಸುವ ಸಂಕಥನಗಳಾಗುತ್ತವೆ. ಲೇಖಕರ ಬದುಕಿನ ಕಾದಂಬರಿಯಂತೆ ಬಿಚ್ಚಿಕೊಳ್ಳುತ್ತಾ ಕಾಲಾಂತರದಲ್ಲಿ ಉಳಿಯುತ್ತಾ ಹೋಗುತ್ತದೆ.

ಆತ್ಮಕಥೆಯನ್ನು ಓದುವುದರಿಂದ ಸ್ವಾರಸ್ಯಕರವಾದ ಒಬ್ಬ ವ್ಯಕ್ತಿಯ ಸಂಗ ಸಿಕ್ಕಿದಂತಾಗುತ್ತದೆ. ಆತ್ಮಕಥೆ ಬರೆದವರು ದೊಡ್ಡ ವ್ಯಕ್ತಿಯಾಗಿದ್ದರೆ ಒಂದು ದೇಶದ ಅಥವಾ ಒಂದು ಕಾಲದ ಚರಿತ್ರೆ ರೂಪಿತವಾಗಲು ಅವರ ಪಾತ್ರವೇನು ಎಂಬುದರ ಅರಿವಾಗುತ್ತದೆ. ದೊಡ್ಡ ದೊಡ್ಡ ವ್ಯಕ್ತಿಗಳು ಮತ್ತು ಘಟನಾವಳಿಗಳ ಮೇಲೆ ಅವರು ಮಾಡಿರುವ ಟೀಕೆಗಳು ಉಪಯುಕ್ತವಾದದ್ದಾಗಿರುತ್ತವೆ. ಆತ್ಮಕಥನಕಾರನ ಅಂದಿನ ಮನೋವೃತ್ತಿ ಒಂದು ದೇಶದ ಮತ್ತು ಒಂದು ಕಾಲದ ಮನೋವೃತ್ತಿಯನ್ನು ಪ್ರತಿಬಿಂಬಿಸುತ್ತದೆ. ಆತ್ಮಕಥನಕಾರ ನೈಜವಾದದನ್ನೇ ಬರೆದಿದ್ದರೆ ಅವರ ಕೃತಿ ಜೀವನಚರಿತ್ರೆಯನ್ನು ಬರೆಯುವವನಿಗೆ ಒಂದು ಉಪಯುಕ್ತ ಆಧಾರ ಗ್ರಂಥವಾಗುತ್ತದೆ. ಆದ್ದರಿಂದಲೇ ಚರಿತ್ರೆಯನ್ನು 'ಮಹಾಪುರುಷರ ಜೀವನ ಪರಂಪರೆ' ಎಂದು ಕರೆದಿರುವುದು. ಆದ್ದರಿಂದಲೇ ಆತ್ಮಕಥನಗಳು ಆ ಕಾಲಘಟ್ಟದ ಸಾಮಾಜಿಕ ಹಾಗೂ ಸಾಮೂಹಿಕ ರಾಜಕೀಯ ಜೀವನದ ಇತಿಹಾಸವಾಗುತ್ತದೆ.

ಹೊಸಗನ್ನಡ ಸಾಹಿತ್ಯ ಪ್ರಕಾರಗಳು ಹೆಚ್ಚಾಗಿ ಜೀವನಮುಖಿ ಮತ್ತು ಸಮಾಜಮುಖಿಯಾದ ದೃಷ್ಟಿ ಧೋರಣೆಗಳನ್ನು ಇಟ್ಟುಕೊಂಡು ರಚನೆಯಾಗಿವೆ. ಆರಂಭಕಾಲದ ಸಾಹಿತ್ಯದಲ್ಲಿ ಕಲ್ಪನಾಶಕ್ತಿ, ಪ್ರತಿಭೆ, ಆನಂದ, ಪೌರಾಣಿಕ ಕಥಾವಸ್ತು ಮತ್ತು ನಿಶ್ಚಿತ ಛಂದೋಪ್ರಕಾರಗಳ ಬಳಕೆ ಮುಂತಾದ ಅಂಶಗಳು ಪ್ರಧಾನವಾಗಿರುತ್ತಿದ್ದವು. ಆದರೆ ಆಧುನಿಕ ಕಾಲಘಟ್ಟದಲ್ಲಿ ಮೇಲಿನ ಅಂಶಗಳು ಪಕ್ಕಕ್ಕೆ ಸರಿದು ಅವುಗಳ ಸ್ಥಾನದಲ್ಲಿ ಜೀವನಪರವಾದ ಮತ್ತು ಜನಪರವಾದ ಸಂವೇದನೆಗಳನ್ನು ಹೊತ್ತು ಸಾಹಿತ್ಯ ರಚನೆಯಾಗುತ್ತಿದೆ. ಕಲ್ಪನೆಯ ಸ್ಥಾನದಲ್ಲಿ ಇಂದು ವಾಸ್ತವ ಅನುಭವ ಕಂಡುಬರುತ್ತಿದೆ. ಬದಲಾಗುತ್ತಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ಸಾಹಿತಿಗಳು ಕೂಡ ಇಂದಿನ ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾವಣೆಗೆ ಒಳಪಡುವುದು ಅಗತ್ಯವಾಗಿದೆ. ಕನ್ನಡದಲ್ಲಿ ರಚನೆಯಾಗಿರುವ ಬಹುತೇಕ ಆತ್ಮಕಥನಗಳು ಮೇಲೆ ಹೇಳಿದ ಬದಲಾವಣೆಯ ಅಂಶಗಳನ್ನು ಗರ್ಭೀಕರಿಸಿಕೊಂಡಿವೆ.

ಆತ್ಮಕಥನಗಳ ವಸ್ತುಗಳಲ್ಲಿ ಸಾಮಾನ್ಯವಾಗಿ ಆಯಾಯ ಲೇಖಕರ ಜೀವನವೇ ಪ್ರಧಾನವಾಗಿರುತ್ತದೆ. ಲೇಖಕರು ತಮ್ಮ ಜೀವನದಲ್ಲಿ ಕಂಡುಂಡ, ಬದುಕಿನಲ್ಲಿ ಅನುಭವಿಸಿದ ಘಟನೆಗಳ ಹಿನ್ನೋಟಗಳೇ ಆತ್ಮಕಥನದ ವಸ್ತುವಾಗಿರುವುದು ಸ್ಪಷ್ಟವಾಗಿ

ಗೊತ್ತಾಗುತ್ತದೆ. ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ವಸ್ತುವಿನ ಆಯ್ಕೆ ಮತ್ತು ವಿಧಾನಗಳು ಬೇರೆ ಬೇರೆ ರೀತಿಯದ್ದಾಗಿರುತ್ತದೆ. ಅಲ್ಲಿ ಲೇಖಕರು ತನ್ನ ಕೃತಿ ರಚನೆಗೆ ಬೇರೆ ಬೇರೆ ಕಡೆಯಿಂದ ವಸ್ತುವನ್ನು ಆಯ್ಕೆ ಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ಆಯ್ಕೆ ಮಾಡಿಕೊಂಡ ವಸ್ತುವನ್ನು ತಮ್ಮ ದೃಷ್ಟಿ ಮತ್ತು ಧೋರಣೆಗಳಿಗೆ ತಕ್ಕಂತೆ ಕಲಾತ್ಮಕವಾಗಿ ನಿರೂಪಿಸುವ ಮತ್ತು ರಸ ಸ್ವರೂಪಿಯನ್ನಾಗಿಸುವ ಸ್ವಾತಂತ್ರ್ಯವು ಇರುತ್ತದೆ. ಆದರೆ ಆತ್ಮಕಥನ ರಚನೆಯ ಸ್ವರೂಪವೆ ಬೇರೆ. ಆತ್ಮಕಥನ ಸಾಹಿತ್ಯ ರಚನಾ ಸಂದರ್ಭದಲ್ಲಿ ವಸ್ತು ಮತ್ತು ವಿಷಯಗಳನ್ನು ಬೇರೆ ಬೇರೆ ಕಡೆಗಳಿಂದ ತರಲು ಸಾಧ್ಯವಿಲ್ಲ. ಹೊರಗಿನಿಂದ ಆಯ್ಕೆ ಮಾಡಿಕೊಳ್ಳುವ ಮತ್ತು ತಮ್ಮ ದೃಷ್ಟಿಧೋರಣೆಗಳಿಗೆ ತಕ್ಕಂತೆ ರೂಪಿಸುವ, ನಿರ್ಮಿಸುವ ಸ್ವಾತಂತ್ರ್ಯ ಈ ಲೇಖಕರಿಗೆ ಇರುವುದಿಲ್ಲ. ಒಂದು ಸಂದರ್ಭದಲ್ಲಿ ಹಾಗೆ ಮಾಡಿದರೆ ಅದು ಆತ್ಮಕಥನ ಎನ್ನಿಸಿಕೊಳ್ಳಲಾರದು.

ಆತ್ಮಕಥನ ಸಾಹಿತ್ಯ ರಚನಾ ಸಂದರ್ಭದಲ್ಲಿ ಲೇಖಕರು ಅವರ ಜೀವನದ ಉದ್ದಕ್ಕೂ ಕಂಡುಂಡ ಅನುಭವ ಪ್ರಪಂಚವೇ ಆತ್ಮಕಥೆಯ ವಸ್ತುವಾಗಿಬಿಡುತ್ತದೆ. ಅದೇ ಅವರ ಆಯ್ಕೆಯ ವಿಷಯವಾಗಿಬಿಡುತ್ತದೆ. ಬೇರೆ ತೆರನಾದ ಯಾವುದೇ ಹೊಸ ವಸ್ತು ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ಪ್ರಮೇಯ ಇಲ್ಲಿ ಬರುವುದಿಲ್ಲ. ಅವಾಸ್ತವವಾದ ನೆಲೆಯಲ್ಲಿ ಸೃಷ್ಟ್ಯಾತ್ಮಕ ಅಥವಾ ಸೃಜನಾತ್ಮಕ ವಸ್ತುವಿನ ಆಯ್ಕೆಗೆ ಇಲ್ಲಿ ಅವಕಾಶ ಇರುವುದಿಲ್ಲ. ಆದರೆ ತಮ್ಮ ಆತ್ಮಕಥನದ ವಸ್ತುವಿಗೆ ಭಾಷೆಯ ಮೆರುಗನ್ನು ಲೇಖಕರು ಕಲಾತ್ಮಕವಾಗಿ ರಸವಿನ್ಯಾಸಗೊಳಿಸಬಹುದು. ಆತ್ಮಕಥನದ ವಸ್ತುವಿನ ಆಯ್ಕೆ ಸರಳವಾದುದು ಮತ್ತು ಅಷ್ಟೇ ವಿಶಿಷ್ಟವಾದುದು.

ಆತ್ಮಚರಿತ್ರೆಕಾರರು ಯಾವುದೇ ಕ್ಷೇತ್ರದವರಾಗಿರಬಹುದು. ಅವರು ಬದುಕಿನಲ್ಲಿ ಕಂಡುಂಡ ಅನುಭವಗಳು ಭಿನ್ನವಾಗಿರಬಹುದು. ಅವೆಲ್ಲವೂ ಇಲ್ಲಿ ವಸ್ತುರೂಪವಾಗಿ ಅರಳಿಕೊಳ್ಳುತ್ತವೆ. ಆತ್ಮಕಥನಗಳಲ್ಲಿ ಲೇಖಕರೇ ಕೃತಿಯ ನಾಯಕನಾಗಿದ್ದು ಪ್ರಧಾನರಾಗಿರುತ್ತಾರೆ. ಅವರ ಬದುಕಿನ ಹಿನ್ನೋಟವು ಆತ್ಮಕಥನದ ವಸ್ತುವಾಗುತ್ತದೆ. ಅದು ಸಂಕ್ಷಿಪ್ತವಾಗಿರಬಹುದು, ಇಲ್ಲವೆ ಸಮಗ್ರವಾಗಿರಬಹುದು. ಅವರ ಹುಟ್ಟು, ಬಾಲ್ಯಜೀವನ, ಪೂರ್ವಪರಂಪರೆ, ಕಷ್ಟ–ನಷ್ಟಗಳು, ಬದುಕಿನ ಏರುಪೇರುಗಳು, ಬದುಕಿನಲ್ಲಿ ಎದುರಿಸಿದ ಸವಾಲುಗಳು, ತಾಳಿದ ನಿಲುವುಗಳು, ನಂಬಿಕೆ, ಆಚರಣೆ, ಸಂಪ್ರದಾಯ, ಪದ್ಧತಿಗಳು, ಸಾಧನೆ–ಸಿದ್ಧಿಗಳು, ಆದರ್ಶಗಳು, ವೃತ್ತಿಜೀವನ, ಉಪಜೀವನ, ಮುಪ್ಪು, ಆರೋಗ್ಯ–ಅನಾರೋಗ್ಯ, ಧಾರ್ಮಿಕ–ಸಾಮಾಜಿಕ ಅನುಭವಗಳು, ದುಃಖ ದುಮ್ಮಾನಗಳು, ಆಂತರಿಕ ಮತ್ತು ಬಾಹ್ಯ ಪ್ರಪಂಚದ

ಅನುಭವಲೋಕವು ಆತ್ಮಕಥನಗಳ ವಸ್ತುವಾಗುತ್ತವೆ. ಅವುಗಳ ವಸ್ತುಸತ್ಯಗಳೇ ಸಮಗ್ರಗೊಂಡು ಆತ್ಮಕಥನವಾಗಿ ಸೊಗಸುಗಾರಿಕೆಯನ್ನು ಪಡೆದುಕೊಳ್ಳುತ್ತವೆ.

ಉತ್ತಮ ಆತ್ಮಚರಿತ್ರೆಕಾರ ಈ ವಸ್ತುವಿನ ಆಯ್ಕೆ ವಿಷಯದಲ್ಲಿ ಸಾಕಷ್ಟು ಸ್ವಾತಂತ್ರ್ಯ ಬಯಸುತ್ತಾರೆ. ಅದು ಎಷ್ಟರಮಟ್ಟಿಗೆ ಎಂದರೆ ಲೇಖಕರ ವಿವೇಚನೆ ಮತ್ತು ವಿಮರ್ಶಾ ಪ್ರಜ್ಞೆಗೆ ಸಂಬಂಧಿಸಿದ್ದಾಗಿರುತ್ತದೆ. ಆತ್ಮಕಥನವೆಂದರೆ ಕೇವಲ ಅವರು ಹುಟ್ಟಿದ ವರ್ಷ, ಅವರಿಗಾದ ಮದುವೆ, ಮಕ್ಕಳಾದ ವರ್ಷ, ಮೊದಲಾದ ಅಂಕಿಅಂಶಗಳ ಶುಷ್ಕ ವರದಿಯಲ್ಲ, ಅದೆಲ್ಲ ನಿಮಿತ್ತ ಮಾತ್ರ. ಆ ನೆಪದಲ್ಲಿ ಲೇಖಕರು ತಮ್ಮ ಸಮಕಾಲೀನ ಪರಿಸರ ಮತ್ತು ತನ್ನ ಜೀವನಾನುಭವದ ವಿಶಿಷ್ಟ ಲಕ್ಷಣಗಳನ್ನು ಕೃತಿಯಲ್ಲಿ ದಾಖಲಿಸುತ್ತಾ ಹೋಗುತ್ತಾರೆ. ಈ ದೃಷ್ಟಿಕೋನವನ್ನು ಇಟ್ಟುಕೊಂಡು ರಚನೆಯಾದ ಆತ್ಮಕಥನಗಳು ಉತ್ತಮ ಗುಣಮಟ್ಟದ್ದಾಗಿವೆ. ಆದುದರಿಂದಲೇ ಆತ್ಮಕಥನಗಳ ಪ್ರಧಾನ ಲಕ್ಷಣ ಎಂದರೆ ವೈಯಕ್ತಿಕ ನೆಲೆಯಿಂದ ಸಾಮಾಜಿಕ ನೆಲೆಯ ಕಡೆಗೆ ಸಾಗುವುದು. ಇಲ್ಲಿ ಆತ್ಮಚರಿತ್ರೆಕಾರರಿಗೆ ತಮ್ಮ ಹುಟ್ಟು ಮತ್ತು ಜೀವನ ಅಷ್ಟೇ ಮುಖ್ಯವಾಗಿ ಇರುವುದಿಲ್ಲ. ತಮ್ಮ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ಸಾಹಿತ್ಯಿಕ ಸ್ಥಿತಿಗತಿಗಳು ಮುಖ್ಯ ಆಗುತ್ತವೆ.

ತಿ.ತಾ.ಶರ್ಮರಿಗೆ ಭಾರತದೇಶದ ಪ್ರಾಚ್ಯ ಸಂಪತ್ತು ಮತ್ತು ಅದರ ಸಂರಕ್ಷಣೆಗಳು ಮುಖ್ಯವಾಗಿ ಕಂಡುಬರುತ್ತವೆ. ಲಂಕೇಶ್ ಅವರಿಗೆ ಸಾಮಾಜಿಕ ಮತ್ತು ಆರ್ಥಿಕ ಚಿಂತನೆಗಳು ಮುಖ್ಯವೆನಿಸುತ್ತವೆ. ಗೋಪಾಲಕೃಷ್ಣ ಅಡಿಗರಿಗೆ ಇಡೀ ಪರಿಸರ ಅದರ ಏರಿಳಿತಗಳು ಮುಖ್ಯವೆನಿಸುತ್ತವೆ. ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ ಅವರಿಗೆ ಜಾತಿಸಮಸ್ಯೆ ಮುಖ್ಯ ವಸ್ತುಗಳಾಗಿ ಕಂಡುಬರುತ್ತವೆ. ಎಸ್.ಎಲ್.ಭೈರಪ್ಪ ಅವರಿಗೆ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅಂಶಗಳು ಪ್ರಮುಖವಾಗಿ ಕಾಣುತ್ತವೆ. ಆತ್ಮಕಥನಗಳಲ್ಲಿ ಈ ಬಗೆಯ ಬಹುಮುಖ ವಸ್ತುವಿಷಯಗಳು ಇರಬೇಕಾದದ್ದು ಆರೋಗ್ಯಕರವೇ. ಲೇಖಕರು ಅವರವರ ಅನುಭವದ ಬೆಳಕಿನಲ್ಲಿ ಅವರು ಒಂದೊಂದು ವಿಷಯವನ್ನು ವ್ಯಾಖ್ಯಾನಿಸುತ್ತಾ ಹೋಗುತ್ತಾರೆ. ಅದೇ ಅವರ ಆತ್ಮಕಥನಕ್ಕೆ ಒಂದು ತಾತ್ವಿಕತೆಯನ್ನು ತಂದುಕೊಡುತ್ತದೆ. ಈ ಹಿನ್ನೆಲೆಯಲ್ಲಿ ಆತ್ಮಕಥನಗಳನ್ನು ಶುಷ್ಕ ವರದಿಗಳಾಗಿ ಪರಿಗಣಿಸದೆ ಜೀವಾನುನುಭವದ ತಾತ್ವಿಕ ಗ್ರಂಥಗಳೆಂದು ಕರೆಯಬಹುದು.

ಕನ್ನಡ ಆತ್ಮಕಥನಗಳ ಭಾಷೆ ಸಾಮಾನ್ಯವಾಗಿ ಹೊಸಗನ್ನಡ ಗದ್ಯರೂಪದ್ದಾಗಿದೆ. ಆದರೂ ಆಯಾ ಲೇಖಕರು ಬಳಸಿರುವ ಭಾಷೆ ಭಿನ್ನವಾಗಿರುವುದನ್ನು ಉದಾಹರಣೆ ಸಹಿತ ಗುರುತಿಸಬಹುದು. ಹೆಚ್ಚಿನ ವಿದ್ವತ್ತು, ಸೃಜನಶೀಲತೆ, ಶಬ್ದಾಡಂಬರ ಮತ್ತು

ಸಂಕೀರ್ಣತೆಗಳ ಗೋಜಲಿಲ್ಲದೆ ಕನ್ನಡ ಆತ್ಮಕಥನಕಾರರು ತಮ್ಮ ಕೃತಿಗಳನ್ನು ರಚಿಸಿರುವುದು ವಿಶೇಷವಾಗಿದೆ. ಹೀಗೆ ಹೇಳಿದ ಮಟ್ಟಿಗೆ ಎಲ್ಲಾ ಆತ್ಮಕಥನಗಳ ಭಾಷೆ ಮತ್ತು ನಿರೂಪಣಾ ಶೈಲಿಗಳು ಅತ್ಯುತ್ತಮ ಗುಣಮಟ್ಟದ್ದಾಗಿವೆ ಎಂದು ಅರ್ಥವಲ್ಲ. ತೀರಾ ಸಾಮಾನ್ಯ ಮಟ್ಟದ ಭಾಷೆಯನ್ನು ಬಳಸಿರುವ ಕೃತಿಗಳು ಇವೆ. ಕೆಲವೊಂದು ಆತ್ಮಕಥನಗಳು ಓದಿಸಿಕೊಂಡು ಹೋಗುವ ಆಕರ್ಷಣೆ ಹೊಂದಿದ್ದರೆ ಮತ್ತೆ ಕೆಲವು ಬೇಸರ ಉಂಟುಮಾಡುತ್ತವೆ. ಅದೇನೇ ಇದ್ದರೂ ಇದು ಕೇವಲ ಭಾಷೆಯ ಬಳಕೆಯ ವಿಷಯದಲ್ಲಿ ಲೇಖಕರ ಸೋಲಾಗಿರಬಹುದೇ ಹೊರತು ಅವರ ಇಡೀ ಕೃತಿಯ ಸೋಲಲ್ಲ ಎಂಬುದನ್ನು ಗಮನಿಸಬೇಕಿದೆ.

ಆತ್ಮಕಥೆಗಳಲ್ಲಿ ಅನೇಕ ದೋಷಗಳು ಇರಬಹುದು. ಸತ್ಯಸಂಧನಲ್ಲದ ಆತ್ಮಕಥೆಗಾರ ವಿಷಯವನ್ನು ಮರೆಮಾಚಬಹುದು. ಇಲ್ಲದ್ದನ್ನು ಸೇರಿಸಬಹುದು. ಇದ್ದದ್ದನ್ನು ವಿರೂಪ ಮಾಡಬಹುದು ಅಥವಾ ಅತಿ ಮಾಡಬಹುದು. ಎಲ್ಲಾ ಆತ್ಮಕಥನಗಾರರು ತಮ್ಮ ವಿಚಾರದಲ್ಲಿ ನಿಷ್ಪಕ್ಷಪಾತಿಗಳು ಆಗಿರುವುದಿಲ್ಲ. ತಮ್ಮನ್ನು ತಾವೇ ದಂಡಿಸಿಕೊಳ್ಳುವ ಮನೋಭಾವದವರು ಇರುತ್ತಾರೆ. ಸ್ವಪ್ರತಿಷ್ಠೆಯವರು ಇರುತ್ತಾರೆ. ಅನೇಕ ಸಂದರ್ಭಗಳಲ್ಲಿ ಆತ್ಮಕಥೆ ಬರೆಯುವವರ ಭಾವೋದ್ರೇಕದಿಂದ ಅವರ ಕೃತಿ ದೋಷಯುಕ್ತವಾಗುತ್ತದೆ. ಅವರ ಜೀವನದ ನೈಜಚಿತ್ರ ಸಿಗದೆ ಮರೆಯಾಗಿಬಿಡುತ್ತದೆ. ಆತ್ಮಕಥನದಲ್ಲಿ ನಾವು ನಿರೀಕ್ಷಿಸುವುದು ವ್ಯಕ್ತಿಯ ಜೀವನದ ವಿವರಗಳನ್ನೇ ಅಲ್ಲದೆ ಕಲಾತ್ಮಕವಾಗಿ ಮತ್ತು ನೈಜವಾಗಿ ರಚಿಸಿದ ಒಬ್ಬ ವ್ಯಕ್ತಿಯ ಸಂಪೂರ್ಣ ಜೀವನಚಿತ್ರವನ್ನು ಆ ಕೃತಿಯನ್ನು ಓದುವಾಗ, ಆ ವ್ಯಕ್ತಿಯ ಸಂಗಡ ಇದ್ದೇವೆ ಮತ್ತು ಅವನೊಡನೆ ಸಂಭಾಷಣೆ ಮಾಡುತ್ತಿದ್ದೇವೆ ಎಂಬಂತೆ ಇರಬೇಕು. ಕೃತಿಕಾರ ನಮ್ಮನ್ನು ನಂಬಿ ನಮ್ಮ ಮುಂದೆ ಅವರ ಕಷ್ಟ ಸುಖಗಳನ್ನು, ಆಸೆ–ಆಕಾಂಕ್ಷೆಗಳನ್ನು, ಸೋಲು–ಗೆಲುವುಗಳನ್ನು, ಮಾನ–ಅಪಮಾನಗಳನ್ನು ತೋಡಿಕೊಳ್ಳುತ್ತಿದ್ದಾರೆ ಎಂಬ ಭಾವನೆ ನಮಗೆ ಬಂದರೆ ಅದು ಉತ್ತಮ ಆತ್ಮಕಥೆ ಎಂದು ಹೇಳಬಹುದು.

ಆತ್ಮಕಥನವನ್ನು ರಚಿಸುವವರು ಸಾಮಾನ್ಯವಾಗಿ ಒಂದಲ್ಲ ಒಂದು ಕ್ಷೇತ್ರದ ಗಣ್ಯರಾಗಿರುತ್ತಾರೆ. ಹಾಗಾಗಿ ಕರ್ನಾಟಕದ ಇತಿಹಾಸ, ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ನಿಕಟ ಸಂಪರ್ಕ ಅವರಿಗೆ ಇದ್ದೇ ಇರುತ್ತದೆ. ಈ ಕಾರಣದಿಂದ ಕರ್ನಾಟಕದ ನೆಲ, ಜಲ, ಭಾಷೆ, ಏಕೀಕರಣ, ಭಾರತದ ಸ್ವಾತಂತ್ರ್ಯ, ಸಮಕಾಲೀನ ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಗತಿಗಳು ಒಂದಲ್ಲಾ ಒಂದು ನೆಲೆಯಲ್ಲಿ ಅವರ ಕೃತಿಗಳಲ್ಲಿ ವ್ಯಕ್ತವಾಗಿರುತ್ತವೆ. ಲೇಖಕರು ಬದುಕಿದ ಪ್ರದೇಶದ ಪ್ರಾದೇಶಿಕತೆ, ಪರಿಸರ, ಸಮಕಾಲೀನ ಚಿಂತನೆಗಳು, ಸ್ಥಿತಿಗತಿಗಳು ಅವರ ಕೃತಿಗಳಲ್ಲಿ

ಸಂದರ್ಭೋಚಿತವಾಗಿ ಪ್ರಕಟಗೊಂಡಿರುತ್ತವೆ. ಈ ದೃಷ್ಟಿಯಿಂದ ನೋಡಿದರೆ ನಿಜವಾದ ಚರಿತ್ರೆ ರಚನೆಗೆ ನಮ್ಮ ಇತಿಹಾಸಕಾರರಿಗೆ ಈ ಆತ್ಮಕಥನ ಕೃತಿಗಳು ಅತ್ಯುತ್ತಮ ಆಕರ ಗ್ರಂಥಗಳು ಆಗಬಲ್ಲವು. ಹಾಗಾದಾಗ ಮಾತ್ರ ಇದುವರೆಗಿನ ನಮ್ಮ ಚರಿತ್ರೆಯಲ್ಲಿ ಸೇರಿ ಬಂದ ಕಸ, ಕಡ್ಡಿ ಮತ್ತು ಧೂಳು ದೂರವಾಗುತ್ತವೆ. ಆಗ ನೈಜ ಚರಿತ್ರೆ ನಮಗೆ ಒದಗುತ್ತದೆ. ಆತ್ಮಕಥನಗಳನ್ನು ಆಧರಿಸಿ ನವ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವ ಹೊಸ ಬಗೆಯ ಪ್ರಯತ್ನವೊಂದು ನಡೆಯಬೇಕಾಗಿದೆ.

ಪರಾಮರ್ಶನ ಕೃತಿಗಳು :

1. ಜವರೇಗೌಡ ದೇ : (ಸಂ) : (1967–77) ಕನ್ನಡ ವಿಶ್ವಕೋಶ ಸಂಪುಟ 1: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
2. ಶ್ಯಾಮೂರ್ತಿ:(2001) ಕನ್ನಡ ಆತ್ಮಕಥನ ಸಾಹಿತ್ಯ : ಸಂಸ್ಕೃತಿ ಪ್ರಕಾಶನ, ಬಳ್ಳಾರಿ.
3. ಆಲೂರು ವೆಂಕಟರಾಯರು : (1974) : ನನ್ನ ಜೀವನ ಸ್ಮೃತಿಗಳು : ಜಯಕರ್ನಾಟಕ ಕಛೇರಿ, ಧಾರವಾಡ.
4. ಅರವಿಂದ ಮಾಲಗತ್ತಿ : (1994) : ಗೌರ್ಮೆಂಟ್ ಬ್ರಾಹ್ಮಣ : ಅಭಿರುಚಿ ಪ್ರಕಾಶನ, ಮೈಸೂರು.
5. ಭೈರಪ್ಪ ಎಸ್ ಎಲ್ : (1996) : ಭಿತ್ತಿ : ಲಕ್ಷ್ಮೀ ಮುದ್ರಣಾಲಯ, ಮೈಸೂರು.
6. ಸಬಿಹಾ ಭೂಮಿಗೌಡ (ಸಂ): (2007) : ಮಹಿಳಾ ಆತ್ಮಕಥೆಗಳು : ಅನುಸಂಧಾನ : ರಾಜಾ ಪ್ರಿಂಟರ್ಸ್, ಬೆಂಗಳೂರು

***

'ಸರಸಮ್ಮನ ಸಮಾಧಿ' – ಚಿತ್ರಣ

ಪ್ರಭಾವತಿ ಜೆ. [1]

ಸಂಶೋಧನಾರ್ಥಿ

ಶ್ರೀನಿವಾಸ ವಿಶ್ವವಿದ್ಯಾಲಯ

ಹಂಪನ ಕಟ್ಟೆ, ಮಂಗಳೂರು.

ಸಹಾಯಕ ಪ್ರಾಧ್ಯಾಪಕರು

ಭಾರತೀಯ ಭಾಷಾ ವಿಭಾಗ

ಎಂ.ಎಸ್. ರಾಮಯ್ಯ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,

ಸ್ವಾಯತ್ತ, ಬೆಂಗಳೂರು.

ಡಾ. ರಾಜೇಶ್ ಬೆಜ್ಜಂಗಳ [2]

ಸಂಶೋಧನಾ ಮಾರ್ಗದರ್ಶಕರು, ಶ್ರೀನಿವಾಸ ವಿಶ್ವವಿದ್ಯಾಲಯ, ಪಾಂಡೇಶ್ವರ, ಮಂಗಳೂರು

rbejja@gmail.com

ಪೀಠಿಕೆ :

'ಸರಸಮ್ಮನ ಸಮಾಧಿ' ಶಿವರಾಮ ಕಾರಂತರ ಕಿರು ಕಾದಂಬರಿ, ಸ್ವಾತಂತ್ರ ಪೂರ್ವದಲ್ಲೇ ರಚನೆಗೊಂಡ ಈ ಕಾದಂಬರಿಯೂ ಕಾರಂತರ ಸಾಮಾಜಿಕ ಚಿಂತನೆ ಮತ್ತು ಹೆಣ್ಣಿನ ಅಂತರಂಗದ ಭಾವಗಳ ಹೋರಾಟದ ನೆಲೆಗಳನ್ನು ಕಾದಂಬರಿಯುದ್ದಕ್ಕೂ ಓದುಗನ ಮುಂದಿಡುತ್ತಾ ಹೋಗುತ್ತದೆ, ಸಂಸ್ಕೃತಿಯ ಪರಿಕಲ್ಪನೆಯಲ್ಲಿ ಹೆಣ್ಣು ಗಂಡಿನ 'ಸೊತ್ತಾ'ಗಿ ಅವಲಂಬಿತಳಾಗಿ ಉಳಿದುಕೊಳ್ಳುವುದರ ಹಿಂದಿನ ಹುನ್ನಾರ ಮತ್ತು ಪೂಜಿಸಲ್ಪಡುವ 'ಸರಸಮ್ಮ'ನೇ ಸ್ವತಃ ಅಂಧಾಚರಣೆಗೆ ಒಳಗಾಗಿರುವುದು ಸಮಾಜ ಸಂಸ್ಕೃತಿಯ ಹೆಸರಿನಲ್ಲಿ ಮಾಡಿದ ಶೋಷಣೆಯೇ ಆಗುತ್ತದೆ. ಇಲ್ಲಿ ಪುರುಷ ಪ್ರಧಾನ

ಸಮಾಜದಲ್ಲಿ 'ಸ್ತ್ರೀ'ಗೆ ಸ್ವಂತ ಅಸ್ತಿತ್ವವಿಲ್ಲ ಮತ್ತು ಸ್ವತಂತ್ರ ಆಲೋಚನೆಗೆ ಅರ್ಹಳಲ್ಲ ಎನ್ನುವ ವಾದ ಸಹ ಕಾಣಿಸುತ್ತದೆ. 'ಸ್ತ್ರೀ' ಹೋರಾಟದ ನೆಲೆಗಳ ಜೊತೆ ಗಂಡು ಹೆಣ್ಣಿನ ದಾಂಪತ್ಯದ ಅಧಃಪತನಕ್ಕೆ ಕಾರಣವಾಗುವ ಅಂತಹ ಸಂಬಂಧಗಳನ್ನು ಸಹ ತಿಳಿಸುತ್ತದೆ. ಪುರುಷ ಪ್ರಧಾನ ವ್ಯವಸ್ಥೆಯ ಶೋಷಣೆಯ ವಿರುದ್ಧ ದನಿ ಎತ್ತಿರುವ 'ಸುನಾಲಿನಿ' ಅಂತಹವರು ಮತ್ತದೇ ದುರಂತ ಅಂತ್ಯಕ್ಕೆ ಒಳಗಾಗುವ ಪ್ರಯತ್ನದ ಚಿತ್ರಣ ಸಹ ಕಾಣಬಹುದು.

ವಿಶ್ಲೇಷಣೆ :

'ಸರಸಮ್ಮನ ಸಮಾಧಿ'ಯು ಸಮಾಜದಲ್ಲಿನ ಹೆಣ್ಣಿನ ಬಗೆಗೆ ಇರಬಹುದಾದ ಪರಿಕಲ್ಪನೆ ಹಾಗೂ ಗಂಡು–ಹೆಣ್ಣಿನ ದಾಂಪತ್ಯದ ಬಂಧ ಪವಿತ್ರವಾಗಿರುವುದಾಗುವುದರ ಬದಲಾಗಿ ಗಂಡಿನ ದಾಷ್ಟ್ರ್ಯದಿಂದಾಗಿ ಮತ್ತಷ್ಟು ಬಿಗಡಾಯಿಸುವುದನ್ನೇ ಚರ್ಚಿಸುತ್ತಾ ಹೋಗುತ್ತದೆ. ಈ ಕಾದಂಬರಿಯ ಸ್ತ್ರೀ ಪಾತ್ರಗಳಾದ ಸರಸಮ್ಮ, ಸೀತಕ್ಕ, ಜಾನಕಿ, ಸುನಾಲಿನಿ, ಭಾಗೀರಥಿ, ನಾಗವೇಣಿ, ಗುಲಾಬಿ, ಬೆಳ್ಳಮ್ಮ ಎಲ್ಲರೂ ಸಹ ವಿಭಿನ್ನ ರೀತಿಯ ಶೋಷಣೆಗೆ ಒಳಗಾದವರೇ ಆಗಿದ್ದಾರೆ.

ತಿಮ್ಮಪ್ಪಯ್ಯರ ನಿಷ್ಠುರ ಮಾತುಗಳು ಮತ್ತು ಪುರುಷ ಪ್ರಧಾನ ಸಮಾಜದ ಸಹಜವೇ ಆದ ಹೆಣ್ಣಿನ ನಿಂದನೆ ಜಾನಕಿಯಂತಹ ಹೆಣ್ಣು ಮಕ್ಕಳನ್ನು ಹೆತ್ತ ತಾಯಿಗೆ ಜವಾಬ್ದಾರಿಯ ಅರಿವಿಲ್ಲದ ಗಂಡನಿಗೆ, ತಿರುಗಿ ಹೇಳಲು ಅಸಾಧ್ಯವಾದಂತಹ ಪರಿಸ್ಥಿತಿಯಾಗಿದೆ. ಘಮ್ಮಪ್ಪಯ್ಯರ ಬಿರುಸಾದ ನುಡಿಗಳಿಂದಲೇ ಜಾನಕಿಯಲ್ಲಿ ಮತ್ತಷ್ಟು ಭಯ, ದುಗುಡ 'ಗಂಡ' ನಿಂದ ಹೆಚ್ಚುತ್ತಿದೆ. ಜಾನಕಿಯ ಮುಂದಾಲೋಚನೆ, ತನ್ನ ಹೆಣ್ಣು ಮಕ್ಕಳ ಮುಂದಿನ ಭವಿಷ್ಯಕ್ಕೆ ಅನುಕೂಲವಾಗಲೆಂದು ಹಣ ಕೂಡಿಡಬೇಕೆಂಬ ಆಲೋಚನೆ, ಅದೇ ತಂದೆಯಾದ ತಿಮ್ಮಪ್ಪರಲ್ಲಿ ನಿರ್ಲಕ್ಷ್ಯದ ನುಡಿಗಳಾಗಿರುತ್ತದೆ, ಸದಾ ಕೋರ್ಟು–ಕೆಲಸ ಎಂದು ತನ್ನನ್ನು ತಾನು ಜವಾಬ್ದಾರಿ ನಾಗರೀಕನೆಂದುಕೊಂಡಿರುವವರಿಗೆ ತನ್ನ ಮನೆಯ ಮಕ್ಕಳ ಭವಿಷ್ಯದ ಬಗ್ಗೆ ಎಚ್ಚರಿಕೆ ಇಲ್ಲದೇ ಇರುವುದು ಗಂಡಿನ ಸಹಜ ನಡವಳಿಕೆಯೇ ಎಂಬಂತೆ ಬಿಂಬಿತವಾಗುತ್ತದೆ. ಸಮಾಜದಲ್ಲಿ ಹೆಣ್ಣು ಪ್ರಶ್ನೆ ಮಾಡಲು ಅರ್ಹಳಲ್ಲ ಮತ್ತು ಸೀತಕ್ಕ ಹೇಳುವ ಹಾಗೆ "ಹೆಣ್ಣು ಮಕ್ಕಳಿಗೆ ಹಣಕಾಸಿನ ಮೇಲೆ ಹಕ್ಕೇನಿದೆ ಹೇಳು"? ಮನೆ ಕೆಲಸಕ್ಕೆ ಮೀಸಲು ಎಂಬ ನುಡಿಗಳು ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಪ್ರಶ್ನಿಸುತ್ತದೆ, ಸುಮಾಜ ಹೊರಿಸಿದ ಕಟ್ಟು ಪಾಡುಗಳಿಗೆ ಹೆಣ್ಣು ಮಾತ್ರ ಬದ್ಧಳು ಎಂಬ ಧ್ಯೇಯ ವಾಕ್ಯದಂತಿರುತ್ತದೆ. ಇಷ್ಟೆಲ್ಲಾ ಭವಿಷ್ಯದ ಚಿಂತೆ, ಬೇಜವಾಬ್ದಾರಿ ಗಂಡನನ್ನು ಸರಿ ಮಾಡಲು ಜಾನಕಿ, 'ಸರಸಮ್ಮ ಸಮಾಧಿ'ಯ ಪೂಜೆಗೆ ಅಣಿಯಾಗುತ್ತಾಳೆ. ಸಂಸ್ಕೃತಿ ಹಿನ್ನೆಲೆಯ ಆಚರಣೆ–

ನಂಬಿಕೆಗಳು ಹೆಣ್ಣಿನ ಕಷ್ಟಕ್ಕೆ ಮತ್ತೊಬ್ಬ ಹೆಣ್ಣು ಎಂಬಂತೆ ಸೂಚಿಸುತ್ತದೆ. ನಮ್ಮ ಸಂಸ್ಕೃತಿಯ ಆಳವಾದ ತಿಳುವಳಿಕೆಯಲ್ಲಿ ಶಕ್ತಿ ಮೀರಿ ಕುಟುಂಬ ವ್ಯವಸ್ಥೆಯನ್ನು ನಮ್ಮ ಸಂಸ್ಕೃತಿಯ ಆಳವಾದ ತಿಳುವಳಿಕೆಯಲ್ಲಿ ಶಕ್ತಿ ಮೀರಿ ಕುಟುಂಬ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಹಂಬಲದಲ್ಲಿಯೇ ಅಲ್ಲಿಯ ಹುಳುಕುಗಳನ್ನು ಹೊರ ತೆಗೆದು ಸಾಧ್ಯವಾದಷ್ಟು ಅದರ ಪರಿಧಿಯಲ್ಲಿ ಜೀವ ಜೀವಗಳ ಸಂಬಂಧಗಳನ್ನು ಜೋಡಿಸುವ ಆಳವಾದ ಜೀವನ ಶ್ರದ್ಧೆಯನ್ನು ತೋರಿಸುತ್ತದೆ.

ಕುಟುಂಬ ವ್ಯವಸ್ಥೆಯೇ ಹೆಣ್ಣಿನ ಮಾನಸಿಕ ದೈಹಿಕ ಹಿಂಸೆಯ ತಾಣವಾಗಿದೆ ಎಂದೂ, ಗಂಡಿನ ದೌರ್ಜನ್ಯ, ಬೇಜವಾಬ್ದಾರಿಯುತ ವರ್ತನೆಗಳು ಅವಳಿಗೆ ಇನ್ನಿಲ್ಲದ ಅಸಹನೀಯತೆಯನ್ನು ತಂದೊಡ್ಡುತ್ತದೆ ಎನ್ನುವ ಸ್ಪಷ್ಟ ಪ್ರಜ್ಞೆಯಿಂದಲೇ ಗಂಡಿನ ಕರ್ತವ್ಯವನ್ನು ಕಾರಂತರು ಮತ್ತೆ ಮತ್ತೆ ವಿವರಿಸುತ್ತಾರೆ. ಅದಕ್ಕಾಗಿಯೇ ವಿರಕ್ತಿಯ ಸೊಗಿನಲ್ಲಿ ಸಾಂಸಾರಿಕ ಹೊಣೆಗರಿಕೆಯನ್ನು ಮರೆಯುವ ಕೆಲವು ಗಂಡಸರನ್ನು ಕಾರಂತರು ಟೀಕಿಸುತ್ತಾ ಹೋಗುತ್ತಾರೆ. ಗಂಡಸಿನಂತೆ ಹೆಂಗಸರೂ ಅಂತಹ ಹೊಣೆಗೇಡಿತನವನ್ನು ಪ್ರದರ್ಶಿಸಿದರೆ ಸಂಸಾರ ಕುಟುಂಬ ವ್ಯವಸ್ಥೆ ಉಳಿಯುವುದಾದರೂ ಹೇಗೆ? ಆದ್ದರಿಂದಲೇ ಹೆಣ್ಣಿಗೆ ಸಂಯಮ, ಆಧ್ಯಾತ್ಮಿಕ ಒಲವುಗಳ ಅಪೂರ್ವ ಮಾದರಿಗಳನ್ನು ಉದಾಹರಣೆಯಾಗಿ ನೀಡುತ್ತಾರೆ. ಕುಟುಂಬ ವ್ಯವಸ್ಥೆಯ ಮೂಲಕವೇ ಸಮಾಜ, ಅಲ್ಲಿ ನಂಬಿಕೆ, ಶ್ರದ್ಧೆ ಆಚರಣೆಗಳಿಗೆ ಹೆಣ್ಣು ಮಾತ್ರ ಹೊಣೆಗಾರಳು ಎಂಬ ನಿಲುವು ಸಹ ಕಾಣುತ್ತದೆ.

ಮಹಾ ಸತಿ ಕಲ್ಲು 'ಮಾಸ್ತಿ' ಕಲ್ಲು ಎಂಬ ಪರಿಕಲ್ಪನೆಗೆ 'ಸರಸಮ್ಮನ ಸಮಾಧಿ'ಯ ಹಿಂದಿರುವ ರೋಚಕ ಕತೆ–ನಂಬಿಕೆ ಮತ್ತು ಅದರ ಆಚರಣೆ ಮತ್ತೆ ಸತಿ ಸಹಗಮನದಲ್ಲಿನ ಹೆಣ್ಣಿನ ಅಧಃಪತನ ಸಮಾಜ ಕಟ್ಟುಪಾಡುಗಳಾಗಿ ಮಾರ್ಪಾಟಾದ ಹೆಣ್ಣಿನ ಹಕ್ಕುಗಳನ್ನೇ ಬಿಂಬಿಸುತ್ತದೆ. ಗಂಡಿನ ಕಾಟಕ್ಕೋ ಅಥವಾ ಸಂಸಾರದ ತಾಪತ್ರಯಗಳಿಗೆ 'ಸರಸಮ್ಮ'ನ ಮೊರೆ ಹೋಗುವುದು ಬರೀ ಹೆಂಗಸರು ಮಾತ್ರವಲ್ಲ ಗಂಡಸರೂ ಸಹ ಇರುವುದು 'ಸರಸಮ್ಮ'ನ ಮಹತ್ವ ಸಾರುತ್ತದೆ.

ಅಣ್ಣಪ್ಪ ಕಮ್ತಿಯು ವಿದ್ಯಾವಂತ ಹೆಂಡತಿಯಾದ ಸುನಾಲಿನಿ ಋಣಾನುಬಂಧದಿಂದ ಆದ ಮದುವೆಯ ನಿರರ್ಥಕತೆಯನ್ನು ಸದಾ ಜರಿಯುತ್ತಲೇ ದಿನ ದೂಡುತ್ತಾಳೆ. ಗಂಡಿನ ಸಹಜವಾದ ನಡವಳಿಕೆ ಸುನಾಲಿನಿಯಂತಹ ಅಕ್ಷರಸ್ಥೆಯಲ್ಲಿ 'ಸರಸಮ್ಮನ ಸಮಾಧಿ'ಯ ಆಚರಣೆಯಿಂದ ಬದಲಾಗುತ್ತದೆ ಎಂಬ ನಂಬಿಕೆ ಹುಟ್ಟುತ್ತದೆ. ತನ್ನ ತಂದೆಯ ಮನೆಯವರ ನಷ್ಟವನ್ನು ತನ್ನ ಜೀವನಕ್ಕೆ ಹೋಲಿಸಿ ಅವಮಾನಿಸುವ ಅತ್ತೆಯಾದರೆ ಅದನ್ನು ಇಂಬು ನೀಡುವಂತೆ ಸಮರ್ಥಿಸುವ ಅಣ್ಣಪ್ಪ ಕಮ್ತಿಯು

ಪುರುಷ ಪ್ರಧಾನದ 'ಅಹಂ'ನ ಅಭಿವ್ಯಕ್ತಿಯಾಗಿ ಕಾಣಿಸುತ್ತಾನೆ. ಸುನಾಲಿನಿ ತನ್ನ ನೋವನ್ನು ಚಂದ್ರಯ್ಯನಲ್ಲಿ ಹೇಳಿಕೊಳ್ಳುವುದಕ್ಕೂ ಇರುವ ಸಾಮ್ಯತೆಯಲ್ಲಿ ಈ ಪ್ರತಿಕಾತ್ಮಕತೆ ಹೆಚ್ಚು ಸ್ಪಷ್ಟವಾಗಿ ಕಾಣಿಸುತ್ತದೆ.

ಇದರರ್ಥ ಸರಸಮ್ಮ ಪುರುಷ ಸಮಾಜದ ಅಂಕಿತಕ್ಕೆ ಒಳಗಾಗಿ ಪ್ರತಿಭಟಿಸಲಾಗದೆ ಸತ್ತು ಸಮಾಧಿಯದವಳು. ಇವಳಿಗೆ ಪ್ರತಿರೋಧದ ದನಿಯಿಲ್ಲ. ಜೀವಂತ ಇರುವಾಗಲೆಲ್ಲಾ ನೀಲಾಚಲಯ್ಯನ ರೋಗಿಷ್ಟ ದೇಹ ಧರ್ಮದಲ್ಲೇ ಸ್ತ್ರೀತ್ವವನ್ನು ಕಂಡು ಅದರಲ್ಲೇ ನೊಂದು ಬೆಂದು 'ಮಹಾಸತಿ' ಎನಿಸಿಕೊಂಡವಳು ಈ ಸರಸಮ್ಮ. ಅವಳ ಪ್ರೇತ ಬೆಳ್ಯಕ್ಕ ಅನ್ಯಾಯ, ದೌರ್ಜನ್ಯದ ಸಾಮಾಜಿಕ ವ್ಯವಸ್ಥೆಗೆ ತೋರಿಸಿದ ಪ್ರತಿಭಟನೆ, ಬಂಡಾಯದ ಸಾಂಕೇತಿಕ ಧ್ವನಿ. ಮತ್ತದೇ ವಿಡಂಬನೆಯಾಗಿ ಕಾಣುವ ಗಂಡನೆಂಬ ಅಧಿಕಾರಕ್ಕೆ ಒಳಗಾಗುವ ಸುನಾಲಿನಿ

ಸಾಂಸಾರಿಕ ಒಡಕುಗಳು ಎಲ್ಲೆಲ್ಲೂ 'ಗುಟ್ಟಾಗಿ' ಉಳಿದರೂ ಸರಸಮ್ಮನ ಗುಡಿಯು ಮುಂದೆ ತಾವಾಗಿಯೇ ಬಿಚ್ಚಿಕೊಳ್ಳುತ್ತದೆ. ಇದಕ್ಕೆ ಗಂಡಸರೂ ಹೊರತಾದವರಲ್ಲ, ಹೆಂಗಸಾದರೆ ತಮ್ಮ ಪತಿ ಒಲಿಯಲೆಂದು ಬೇಡಿ, ಮಾಸ್ತಿಗೆ ಕುಂಕುಮವಿರಿಸಿ ಹೊರಗೆ ಬಂದು ಕೆರೆಯಲ್ಲಿ ಒಂದು ತೆಂಗಿನಕಾಯಿ ಹಾಕಿ ಹೋಗುವರು. ಇದು ಗುರುವಾರ ದಿನ ಮರುದಿನ ಶುಕ್ರವಾರ ಹೇಗೂ ಅದು ಅಮ್ಮನವರ ದಿವಸ. ಆ ದಿನ ಹರಕೆ ಹೊತ್ತವರು ಅಲ್ಲಿಗೆ ಬಂದೇ ಬರುತ್ತಾರೆ. ತಾವು ಎಸೆದ ತೆಂಗಿನ ಕಾಯಿಯ ಮಾಧ್ಯಮದ ಮೂಲಕ ತಮ್ಮ ಗುಟ್ಟನ್ನೆಲ್ಲಾ ಸರಸಮ್ಮನಿಗೆ ಒಪ್ಪಿಸುವ ಇಲ್ಲಿಯ ಹೆಂಗಸರು, ದುಷ್ಟ ಗಂಡನಿಂದ ತಮ್ಮನ್ನು ತಾವು ತಪ್ಪಿಸಿಕೊಳ್ಳುವುದಕ್ಕಲ್ಲ, ಅವನ ದುಷ್ಟತನ ಅಡಗಿ ಪ್ರೇಮ, ಸಹೃದಯತೆಯ ಸರಳತೆಗಾಗಿ, ವ್ಯಕ್ತಿತ್ವಕ್ಕಾಗಿ ಹಂಬಲಿಸುವವರು, ಮೂಡುಬೈಲಿನ ಮಹಾಸತಿ ಸರಸಮ್ಮ ಇವರೆಲ್ಲರ ಅಹವಾಲುಗಳನ್ನು ಸ್ವೀಕರಿಸಿ ಅಭಯದಾನ ಮಾಡುವ ತಾಯಿ, ಸೀತಮ್ಮನ ತಾಯಿ ಮಾಚಕ್ಕನ ಕಾಲದಿಂದಲೂ ಅವಳು ಪ್ರಸಿದ್ಧೆ. ಮಾಚಕ್ಕನ ಗಂಡ ಸಂಶಯ ಪಿಶಾಚಿ, ಅವಳ ಜೀವ ಹಿಂಡುವುದಕ್ಕಾಗಿಯೇ ಮದುವೆಯಾದವನು. ಜೊತೆಗೆ ಬೈಲು ಕೆರೆಯ ಬೆಳ್ಯಮ್ಮನ ಸಂಗ ಬೇರೆ. ಅವಳ ಮಾನಸಿಕ ಸಂಕಟಕ್ಕೆ ಪರಿಹಾರವಿತ್ತವಳು ಈ ಸರಸಮ್ಮ. ಅವಳಂತೆ ಅಕ್ಕಸಾಲಿ ಬಂಗಾರಿಯನ್ನು ಪಟೇಲ ನಾಣಯ್ಯನಂತಹ ಕಾಮುಕರ ಕಾಟದಿಂದ ತಪ್ಪಿಸುವಲ್ಲಿ ಮಹಾಸತಿಯೇ ಅಭಯ ನೀಡಿದಳು. ಮನೆಯ 'ಯಜಮಾನ' ನೆನೆಸಿಕೊಂಡ ಬಂಗಾರಿಯ ಗಂಡನಿಂದಲೂ ಸಾಧ್ಯವಾಗದ ಕೆಲಸವನ್ನು ಸರಸಮ್ಮ ಮಾಡಿ ತೋರಿಸಿದ್ದಾಳೆ. ಇದರಂತೆ ಹೆಂಡತಿಯ ಕಾಟದಿಂದಲೂ ಇವಳು ಗಂಡಸರನ್ನು ಪಾರು ಮಾಡಿದ್ದಾಳೆ.

ನಾಗವೇಣಿಯ ಪಾತ್ರವಾದರೇ ತಿಮ್ಮಪ್ಪಯ್ಯ ಜಾನಕಿಯರ ಮೊದಲ ಮಗಳಾದ ನಾಗವೇಣಿ ಗಂಡ ಧರ್ಮ ಮತ್ತು ಹಕ್ಕಿನ ಅಧಿಕಾರದಿಂದ ಒಳಗಾಗಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದವಳು. ಗಂಡ ಸೀತಾರಾಮ ವಿದ್ಯಾವಂತನಾದರೂ ತಂಬಾಕು, ಸಿಗರೇಟಿನ ದಾಸ, ಇಂಗ್ಲೀಷ್ ಸಂಸ್ಕೃತಿಗೆ ಒಳಗಾದ ಸ್ವೇಚ್ಛಾಚಾರಿ ಧೋರಣೆಯನ್ನು ತಳೆದಿದ್ದಾನೆ. ಕಾರಂತರು ಕೃತಿಯ ಮುನ್ನುಡಿಯಲ್ಲಿಯೇ ಹೇಳುವಂತೆ "ಪುರುಷ ಪ್ರಧಾನ ಸಮಾಜದಲ್ಲಿ ಜೀವನದ ಅನೇಕ ಕ್ಷೇತ್ರಗಳಲ್ಲಿ ಸ್ತ್ರೀಯ ಮನಸ್ಸು ಮತ್ತು ಶರೀರಗಳೆರಡೂ ಅವನ ಸೊತ್ತು; ಅದಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ" ಎಂಬ ಭಾವನೆ ಜಗತ್ತಿನ ಹಲವು ದೇಶ ಮತ್ತು ಮತಗಳು ಸಾರುತ್ತ ಬಂದಿದೆ. ಯಾರ ಸಂಸ್ಕೃತಿಯೇ ಆಗಲಿ, ತನ್ನ ಜನಗಳ ಮೇಲೆ ವಿಧಿಸಿ ವರ್ತನೆಗಳ ಬೆನ್ನಿಗೆ, ಪಾಪ–ಪುಣ್ಯ, ನ್ಯಾಯ–ನೀತಿ, ಸ್ವರ್ಗ–ನರಕಗಳ ನಂಬಿಕೆಯಿಂದ ಬೆಸೆಯುತ್ತ ಬಂದಿರುವುದರಿಂದ, ಅದರಿಂದಾಗಿ ಹಲವಾರು ಮನೋದಾಸ್ಯದಿಂದ ಬಂಧಿತರಾಗಿರುವುದು ಕಾದಂಬರಿಯ ಗಮನಾರ್ಹ ಸಂಗತಿ.

ಗಂಡಸು ಮತ್ತು ಹೆಂಗಸರ ನಡುವಣ ದಾಂಪತ್ಯದ ಚಂಚಲ ಸಂಬಂಧಗಳನ್ನು ಕುರಿತು ಈ ಕಾದಂಬರಿ ಚಿತ್ರಿಸಲು ಹೊರಟಿದೆ. 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿನ ಎಲ್ಲಾ ದಾಂಪತ್ಯದ ಪಾತ್ರಗಳು ಇದನ್ನು ಪ್ರತಿಧ್ವನಿಸುತ್ತದೆ. ಈ ಕೇಂದ್ರದ ಸುತ್ತ ವೈವಾಹಿಕ ಜೀವನದ ವೈಷಮ್ಯ ದುರಂತಗಳನ್ನು ಕಾರಂತರು ಚಿತ್ರಿಸಿದ್ದಾರೆ. ಸಮಕಾಲೀನ ಬದುಕು ಸಹ ಇದಕ್ಕೆ ಹೊರತಾಗಿಲ್ಲ ಎಂಬಂತೆ ಈ ರೀತಿಯ ತಾಕಲಾಟಗಳು ಮುಂದುವರೆಯುತ್ತಲೇ ಇದೆ. ಸಾಂಪ್ರದಾಯಿಕ ಒತ್ತಡ, ಅನಿವಾರ್ಯತೆ, ದಾಂಪತ್ಯದ ವೈಷಮ್ಯ, ಪ್ರೇತ–ಪ್ರೇಮ, ಬೌದ್ಧಿಕ ಶೋಧ ಇಲ್ಲಿಯ ಪ್ರಧಾನ ವಸ್ತು. ಆನರ ದೃಷ್ಟಿಯಲ್ಲಿ ಮಹಾತಾಯಿ ಎನಿಸಿದ್ದ ಸರಸಮ್ಮ ದಾಂಪತ್ಯದ ಅತೃಪ್ತಿಯಲ್ಲಿ ನೊಂದವಳು, ಅವಳು ನಿರಾಕರಿಸಿದರು ಸಹ ಸಮಾಜದ ನಿಯಮಾವಳಿಗೆ ಒಳಗೊಟ್ಟು ಆಕೆಯ ರೋಧವನ್ನು ಕೇಳಿಸಿಕೊಳ್ಳದೆ, ಅವಳ ರೋಗಿಷ್ಟ ಗಂಡನ ಶವದ ಜೊತೆ ಅವಳನ್ನು ಸುಟ್ಟು ಮಹಾಸತಿಯನ್ನಾಗಿ ಮಾಡಿದ್ದಾರೆ. ಈ ನೈಜದ ಸತ್ಯದೊಂದಿಗೆ ಅನಾವರಣಗೊಳ್ಳುವ ಹಲವು ಜನರ ದಾಂಪತ್ಯ ಜೀವನದ ವಿವಿಧ ನೋಟಗಳು ಕಾದಂಬರಿಯ ವೈಚಾರಿಕತೆಯನ್ನು ರೂಪಿಸಿದೆ.

ಅಧ್ಯಯನ ಫಲಿತಗಳು :

'ಸರಸಮ್ಮ ಸಮಾಧಿಯ' ಗಂಡು–ಹೆಣ್ಣಿನ ನಡುವಣ ಸಾಮಾಜಿಕ ಒಪ್ಪಂದ ಎಂದು ರೂಪಿತವಾಗಿರುವ ವೈವಾಹಿಕ ಸಂಬಂಧ 'ದಾಂಪತ್ಯ' ನಿಯಮಗಳ ನಡುವೆ

ಮುಂದುವರೆದು ತನ್ನ ಗಟ್ಟಿತನವನ್ನು ಕಾಯ್ದುಕೊಳ್ಳುವುದು ಪ್ರಸ್ತುತ ಸಂದರ್ಭಕ್ಕೂ ಇದು ಉಳಿದುಕೊಂಡಿರುವ ಸತ್ಯವೇ ಆಗಿದೆ ಎಂಬುದು ತಿಳಿಯುತ್ತದೆ. ಗಂಡು–ಹೆಣ್ಣಿನ ನಡುವಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಮನೋ–ವೈಜ್ಞಾನಿಕ ನೆಲೆಯಲ್ಲೂ ಸಹ ಈ ಕಾದಂಬರಿಯ ಅವಲೋಕನ ಬಿಕ್ಕಟ್ಟುಗಳ ನಡುವೆ ದಾಂಪತ್ಯದ ಸಫಲತೆಯನ್ನು ತಿಳಿಸುತ್ತದೆ. ಪ್ರೇತ–ಮನುಷ್ಯ ಸ್ನೇಹದ ಒಳಗಿನ ಅಮೂರ್ತ ಪ್ರೀತಿ ಕಾದಂಬಿರಯ ಸಾಂಕೇತಿಕ ಅಭಿವ್ಯಕ್ತಿಯಾಗಿರುವುದಿರಂದ ಮನೋವೈಜ್ಞಾನಿಕ ಅಂಶಗಳನ್ನು ಬೆಳಕಿಗೆ ತರುತ್ತದೆ.

ಸಮಾರೋಪ :

ಸರಸಮ್ಮನ ಸಮಾಧಿಯ ‘ದಾಂಪತ್ಯ’ ಅತೃಪ್ತ ದೇಹ ಧರ್ಮದ ಪ್ರತೀಕವಾಗಿ ಸರಸಮ್ಮ, ಹೆಣ್ಣಿನ ಸಹಜ ಆಸೆ ಆಕಾಂಕ್ಷೆಗಳನ್ನೆಲ್ಲಾ ಮಣ್ಣುಗೂಡಿಸಿ ಬದುಕಿದ್ದಾಗಲೇ ಚಿತೆಗೇರಿಸಿ ಆ ಚಿತೆಯ ಮೇಲೆ ಕಟ್ಟಿದ ಸಮಾಧಿ, ದಾಂಪತ್ಯದ ಹೆಣ್ಣಿನ ಗೋಳಿನ ಕತೆ–ವ್ಯಥೆಯನ್ನು ತಿಳಿಸುತ್ತದೆ. ನಮ್ಮ ಸಮಾಜದ ಈ ವೈರುಧ್ಯಗಳನ್ನು ಚಿತ್ರಿಸುವಲ್ಲಿ ಕಾರಂತರು ಸಹಜ ಸ್ತ್ರೀಪರ ನಿಲುವುಗಳು ಕಾಣಬಹುದು.

ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ಯಜಮಾನ್ಯದ ಸ್ವರೂಪದಲ್ಲಿ ಹೆಣ್ಣಿನ ಆರ್ಥಿಕ ಸ್ವಾತಂತ್ರ, ಅಭಿವ್ಯಕ್ತಿ ಸ್ವಾತಂತ್ರ್ಯ, ಸಹಭಾಗಿತ್ವ, ಲೈಂಗಿಕ ಸ್ವಾತಂತ್ರ್ಯ ಮೊದಲಾದವು ಹೇಗೆ ಅಪಹರಣಕ್ಕೆ ಕಸಿದುಕೊಳ್ಳುವಿಕೆಗೆ ಒಳಗಾಗಿದೆ ಎನ್ನುವುದನ್ನು ಈ ಪಾತ್ರಗಳು ಚಿತ್ರಿಸುತ್ತವೆ. ವೈವಾಹಿಕ ಚೌಕಟ್ಟಿನೊಳಗಿನ ದೌರ್ಜನ್ಯಗಳಿಗೆಲ್ಲಾ ಸಾಮಾಜಿಕ ಒಪ್ಪಂದವಾದ ದಾಂಪತ್ಯಕ್ಕೆ ಬಲಿಯಾದ ಹೆಣ್ಣುಗಳ ಪ್ರತಿನಿಧಿಗಳಾಗಿ ಜಾನಕಿ, ನಾಗವೇಣಿ, ಸುನಾಲಿನಿ, ಭಾಗೀರಥಿ ಮೊದಲಾದವರು ಕಾಣಿಸುತ್ತಾರೆ.

ಪರಾಮರ್ಶನ ಗ್ರಂಥಗಳು :

1. ಶಿವರಾಮ ಕಾರಂತ., ‘ಸರಸಮ್ಮನ ಸಮಾಧಿ’ (ಕಾದಂಬರಿ)., ಪ್ರಕಾಶಕರು., ಸ್ವಪ್ನ ಬುಕ್ ಹೌಸ್ – 2014
2. ಶಿವರಾಮ ಕಾರಂತ ಮಾಲಿನಿ ಮಲ್ಯ., ಸಂಪಾದಕರು: ಡಾ ಹಾ.ಮಾ ನಾಯಕ ಪ್ರಕಾಶಕರು., ನವಕರ್ನಾಟಕ ಪ್ರಕಾಶನ., 2014
3. ಶಿವರಾಮ ಕಾರಂತ., ಎರಡು ಅಧ್ಯಯನಗಳು., ಅಶೋಕ ಟಿ.ಪಿ.., ಪ್ರಕಾಶಕರು: ಅಕ್ಷರ ಪ್ರಕಾಶನ – 2015
4. ಕಾರಂತರ ಕಾದಂಬರಿಗಳಲ್ಲಿ ದಾಂಪತ್ಯ (ಸಂಶೋಧನಾ ಪ್ರಬಂಧ)., ರವಿಕುಮಾರ್., ತುಮಕೂರು ವಿಶ್ವವಿದ್ಯಾಲಯ., 2019

ಕಾವ್ಯ ಎಂಬ ಜಗದ ಬೆಳಕು

ಡಾ. ಮೈತ್ರಿ ಭಟ್, ವಿಟ್ಲ

W/o ರವಿಶಂಕರ ಕೆ.

5–392, ಜಯದುರ್ಗಾ

ನೇತ್ರಕೆರೆ, ವಿಟ್ಲ ಅಂಚೆ

ಬಂಟ್ವಾಳ ತಾಲೂಕು, ದ ಕ – 574243

'**ಮ**ನದ ಮೌನದಲಿ ತೊಳಲುವ ಭಾವಕೆ/ ಹಾಡಾಗುವ ತವಕ/ ಸಮಾನ ಹೃದಯದ ಸಮ್ಮೇಳನದಲಿ/ ರಸವಾಗಲು ಪುಳಕ' ಹೌದು.. ಈ ಕಾವ್ಯದ ಸೆಳೆತ ಎದೆಯೊಳಗೆ ಸದ್ದಿಲ್ಲದೆ ಉರಿಯುವ ದೀಪ. ಎಲ್ಲರ ಒಡನಾಡಿಯಾಗಿದ್ದಾಗಲೂ ಕಾಡುವ ಒಂಟಿತನವನ್ನು ಮರೆಸುವ ಎದೆಯಾಳದ ಗೆಳೆತನ. ಮನುಷ್ಯನ ದಿನನಿತ್ಯದ ನೋವು ನಲಿವಿನ ಸೂಕ್ಷ್ಮ ಸಂವೇದನೆಯನ್ನು ಉತ್ತಮ ಭಾಷೆಯ ಮೂಲಕ ಅಭಿವ್ಯಕ್ತಿಪಡಿಸುವ ಕಲೆಯೇ ಕಾವ್ಯ. ಅದರಲ್ಲೂ ಭಾಷೆ ಮತ್ತು ಗ್ರಹಿಕೆಯ ಮನಃಸ್ಥಿತಿ ಹೊಂದಿರುವ ಪ್ರತಿಯೊಬ್ಬ ಮನುಷ್ಯನಲ್ಲೂ ಒಬ್ಬ ಕವಿ ಇದ್ದೇ ಇರುತ್ತಾನೆ.

ಈ ಕಾವ್ಯ ಎನ್ನುವುದು ಜೀವನ್ಮುಖಿಯೂ ಹೌದು, ಸಮಾಜಮುಖಿಯೂ ಹೌದು. ತನ್ನ ಕವಿತೆಗಳ ಮೂಲಕ ಕವಿಯೊಬ್ಬ ಸಹೃದಯ ಮನದೊಳಗೆ ಭಾವದ ಹೂವರಳಿಸುತ್ತಾನೆ. ತನ್ನ ಕಾವ್ಯದೀಪದ ಮೂಲಕವೇ ಜಗದ ಅಂಧಕಾರ ಕಳೆದು ಮನವ ಬೆಳಗುವ ಈ ಕವಿ ಒಬ್ಬ ಅಕ್ಷರ ಮಾಂತ್ರಿಕ. ಅವನು ಬೆಂಕಿಯ ಕಿಡಿ ಹಚ್ಚಿ ಕಿಚ್ಚು ಹಚ್ಚುವ ಕಾರ್ಯ ಮಾಡುವುದಿಲ್ಲ. ಬದಲಾಗಿ ಪುಟ್ಟ ಹಣತೆಯ ಹಚ್ಚಿ ಲೋಕಕ್ಕೆ ಬೆಳಕು ತರುತ್ತಾನೆ.

ಮಾತಿಗೆ ತಡಕಾಡಿದರೂ ಸಿಗದೇ ಹೋಗುವ ಪದಗಳು ಮನದೊಳಗೆ ಅಲೆಯೆಬ್ಬಿಸಿ ಆಕಾರವನ್ನು ತಳೆಯುತ್ತವೆ ಎಂದುಕೊಂಡಾಗ ಅಳಿಯುವ ಭಾವಗಳು

ಭಾಷೆಯೊಳಗೆ ಸಿಲುಕಿದಾಗ ಕವಿತೆಯ ರೂಪವನ್ನು ತಳೆಯುತ್ತದೆ. ನಮ್ಮ ಅಂತರಂಗದಲ್ಲಿ ಕಾಡುವ ಬೆರಗಿಗೆ, ಬೆರಗಿನ ಭಾವಗಳಿಗೆ, ಕತ್ತಲಲ್ಲಿ ಮಿರುಗಿ ಕಾಡುವ ಬೆಳಕಿಗೆ, ಬೆಳಕಿನಲ್ಲೊಂದು ಬೆಳಗಿನ ರೂಪವೇ ಕಾವ್ಯ.

ಬದುಕಿನಲ್ಲಿ ಅನೇಕ ವಿಷಯಗಳಿಗೆ ಸಂವೇದಿಸುವ ಮನಸ್ಸು ಸುಖ–ದುಃಖ ಎರಡನ್ನೂ ಸವಿಯುತ್ತದೆ. ಅವುಗಳ ಕಾರ್ಯ–ಕಾರಣ ಸಂಬಂಧದ ಅರಿವು ಕವಿತೆಗೆ ಸಾಮಗ್ರಿಯನ್ನು ಒದಗಿಸುತ್ತದೆ. ತನ್ನ ಮನಸ್ಸನ್ನು ತೆರೆದಿಡಬೇಕು ಎಂಬ ಒತ್ತಡದ ಕೈ ಮೇಲಾದಾಗ ಅನುಭವ ವಿಶಿಷ್ಟವಾಗಿ ಹೊಸ ರೂಪವನ್ನು ತಾಳಿ, ಮನಸ್ಸು ಬಾಗಿ, ಮಾಗಿ, ಮೃದುವಾಗಿ ಆರ್ದ್ರವಾದಾಗ ಭಾವ–ಭಾಷೆ ಅರಳಿ 'ಮೊಸರು ಮಜ್ಜಿಗೆಯಾದಾಗ ಬೆಣ್ಣೆ ಮೇಲೆದ್ದು ಬಂದಂತೆ' ಕಾವ್ಯದ ಹೂವು ಅರಳಿ ಘಮವ ಬೀರುವುದು.

ಮನುಷ್ಯನ ಭಾವನೆಗಳು ಹಾಗೂ ದಿನನಿತ್ಯದ ಜಂಜಾಟದ ಸೂಕ್ಷ್ಮ ಸಂವೇದನೆಯ ಪ್ರಕ್ರಿಯೆ ಕಾವ್ಯವಾಗಿ ಹೊರ ಹೊಮ್ಮುತ್ತದೆ. ನಾಟಕ, ಲೇಖನ, ಕಾದಂಬರಿ, ಕಥೆಗಳಿಗಿಂತ ಕಾವ್ಯವು ಭಿನ್ನವಾಗಿದ್ದು, ಸೂಕ್ಷ್ಮ ಸಂವೇದನೆಯಿಂದ ಗ್ರಹಿಸಿದರೆ ಸಮಾಜದಲ್ಲಿನ ಪ್ರತಿಯೊಂದು ಜೀವರಾಶಿಯು ಒಂದೊಂದು ಕಾವ್ಯಕ್ಕೆ ಸ್ಫೂರ್ತಿಯಾಗುತ್ತದೆ. ಕವಿತೆ ಎನ್ನುವುದು ಕೇವಲ ಅಕ್ಷರಗಳ ಕಟ್ಟುವಿಕೆಯಲ್ಲ. ಕವಿತೆಯು ಸಹಜತೆ, ಸರಳತೆಗಳಿಂದ ಕೂಡಿದ್ದು ಸಹೃದಯನ ಮನವನ್ನು ಸೂರೆಗೊಳ್ಳುವಂತಿರಬೇಕು. ಸಹಜತೆಯೇ ಕಾವ್ಯದ ಜೀವಾಳ.

ಕವಿತೆಯಲ್ಲಿ ಕವಿಯ ಮನಸ್ಸಿನ ಇರುವಿಕೆ ಬಹಳ ಮುಖ್ಯ. ಯಾವುದೇ ಕ್ರಿಯಾಶೀಲ ಕೃತಿಯನ್ನೂ ಒಂದು ಜಡ ವಸ್ತುವಿನಂತೆ ನೋಡಲು ಸಾಧ್ಯವಿಲ್ಲ. ಒಂದು ಕವಿತೆಯನ್ನು ಓದುತ್ತಿದ್ದಂತೆ ಅಥವಾ ಕಲಾಕೃತಿಯನ್ನು ನೋಡುತ್ತಿದ್ದಂತೆ ಅವು ನಮ್ಮ ಭಾವಕೋಶದಲ್ಲಿ ಜೀವತಳೆಯಲು ಆರಂಭಿಸುತ್ತವೆ.

ಈ ಕವಿತೆ ಎನ್ನುವುದು ಶಬ್ದ ಮತ್ತು ನಿಶ್ಶಬ್ದ ಎರಡನ್ನೂ ಒಟ್ಟಿಗೇ ಹಿಡಿದಿಡುವ ಲೋಕ. ಕವಿತೆಯು ಆಧುನಿಕ ಜಗತ್ತಿನ ತೋರುಬೆರಳೂ ಹೌದು. ಎಲ್ಲರೂ ಬದುಕುವ ಬದುಕನ್ನೇ ಕವಿಯೂ ಜೀವಿಸುತ್ತಿರುತ್ತಾನೆ. ಆದರೆ ಅವನನ್ನು ಇತರರಿಂದ ಬೇರೆಯಾಗಿಸುವುದು ಬದುಕಿನ ಕುರಿತಾದ ಅವನ ವಿಶಿಷ್ಟ ನೋಟ, ಗ್ರಹಿಕೆ.

"ಕಾವ್ಯ ಎಂದರೇನು ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಹೇಳಲು ಸಾಧ್ಯವಾಗದೆ ಇರುವುದನ್ನು ಹೇಳಲು ಸಾಧ್ಯವಿರುವ ಸಲಕರಣೆಗಳ ಮೂಲಕ ಧ್ವನಿಸುವುದು ಕಾವ್ಯ" ಎಂಬ ಅಭಿಪ್ರಾಯ ಬನ್ನಂಜೆ ಗೋವಿಂದಾಚಾರ್ಯ ಅವರದು. ನಮ್ಮ ಮಾತಿಗಾದರೂ ಆಡಿದಷ್ಟೇ ಪದಗಳು. ಆದರೆ ಮೌನಕ್ಕೆ ಲೆಕ್ಕವಿಲ್ಲದಷ್ಟು. ಮಾತು ಆಕಾರವಾದರೆ, ಮೌನ ನಿರಾಕಾರ. ನಿರಾಕಾರ ಆಕಾರವಾಗಲು ನಡೆಸುವ

ಹೋರಾಟದಲ್ಲಿ ಕಾವ್ಯವು ಸೃಷ್ಟಿಯಾಗುತ್ತದೆ. ಅದರಲ್ಲೂ ಕಾವ್ಯ ಸಂವೇದನೆ ಎನ್ನುವುದು ನಿರಂತರವಾಗಿ ನಮ್ಮನ್ನು ಹರಿತಗೊಳಿಸುವ ಕ್ರಿಯೆಯಾಗಿದ್ದು, ಕಾವ್ಯವು ಭಾಷೆಯ ಜೊತೆ ಸಜೀವ ಹುಡುಕಾಟದ ಅನುಸಂಧಾನವೂ ಆಗಿದೆ.

ಕವಿತೆ ಎಂದರೆ ಕೇವಲ ಸಂವಹನ ಅಲ್ಲ, ಅದು ಹೃದಯಗಳ ಸಂವಾದ. ಒಂದು ಬಗೆಯ ರಸಾನುಭೂತಿ. ಕಾವ್ಯವು ನಮ್ಮ ಮನದ ಭಾವಗಳನ್ನು ಮೆಲ್ಲಗೆ ಚಿವುಟುವ ಮೂಲಕ ಚೈತನ್ಯವನ್ನು ವೃದ್ಧಿಸುತ್ತದೆ. ನಾವು ಬರೆದದ್ದೆಲ್ಲವೂ ಕಾವ್ಯವೋ ಸಾಹಿತ್ಯವೋ ಆಗುವುದಿಲ್ಲ. ಬರೆವಣಿಗೆಯು ಅರ್ಥಗರ್ಭಿತವಾಗಿಯೂ ಬದುಕಿಗೆ ಹತ್ತಿರವಾಗಿಯೂ ಇದ್ದಾಗ ಮಾತ್ರ ಅದು ಕಾವ್ಯವಾಗುತ್ತದೆ. ಒಂದೊಮ್ಮೆ ಡಾ. ಕೆ. ಶಿವರಾಮ ಕಾರಂತರು 'ಬರೆಯುವುದಕ್ಕೆ ಯಾವ ದೊಣ್ಣೆನಾಯಕನ ಅಪ್ಪಣೆಯ ಅಗತ್ಯವೂ ಇಲ್ಲ'ವೆಂದು ಹೇಳಿದ್ದರಂತೆ. ಅವರ ಈ ಮಾತಿನ ಅರ್ಥ ಸುಮ್ಮನೇ ಏನೇನೋ ಬರೆಯುವುದಲ್ಲ. ಬೇಂದ್ರೆಯವರಂತೂ 'ಕಾವ್ಯದಲ್ಲಿ ಭಾವದ ಅತೀ ಸಾಮಾನ್ಯತೆ ಇದ್ದರೆ ಅದು ಕಾವ್ಯದ ದೋಷ. ಇದರ ಸೀಮೋಲ್ಲಂಘನ ಮಾಡಬೇಕು. ಅಂತೆಯೇ ಕಾವ್ಯದಲ್ಲಿ ಅಲಂಕಾರ ಅತಿಯಾದರೆ ಅದೂ ಕೂಡ ದೋಷ. ಧ್ವನಿ ಅತಿಯಾದರೆ ಕಾವ್ಯದ ಪ್ರಭಾವ ಕುಗ್ಗುತ್ತದೆ' ಎಂದು ತಮ್ಮ 'ಸಾಹಿತ್ಯದ ವಿರಾಟ್ ಸ್ವರೂಪ' ಕೃತಿಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ನಮ್ಮ ಸುತ್ತಲೂ ಕತ್ತಲೆಯೇ ತುಂಬಿದ್ದಾಗ ಬೆಳಕನ್ನು ಅರಸುತ್ತಾ ಇರುತ್ತೇವೆ. ಆಗ ದೂರದಲ್ಲಿ ಎಲ್ಲೋ ಒಂದು ಬೆಳ್ಳಿ ಗೆರೆಯಂತೆ ಬೆಳಕು ಗೋಚರಿಸುತ್ತದೆ. ಆಗ ನಾವು ಉತ್ಸಾಹದಿಂದ ಅತ್ತ ನಡೆಯಲು ಹೊರಟಾಗ, ಆ ಬೆಳಕಿನ ಭ್ರಮೆ ಕತ್ತಲಲ್ಲಿ ಕರಗಿಹೋಗಿ, ಬೆಳಕಿನ ಕಿರಣ ಮಾಯವಾಗಿ ಮತ್ತೆ ಕತ್ತಲೆಯೆ ತುಂಬಿಕೊಂಡರೆ ಯಾವ ಸ್ವಾದವೂ ಉಳಿಯದು. ಆದರೆ ಕವಿತೆ ಎನ್ನುವುದು ಹಾಗಲ್ಲ. ಅದು ಮನದಲ್ಲಿ ಹೊಳೆಯುವ ಬೆಳಕು. ಬಾಳ ಬೆಳಗುವ ತುಣುಕು. ಅದು ಕಾಡು ಹರಟೆಯೂ ಅಲ್ಲ, ಒಣ ಅಲಾಪನೆಯೂ ಅಲ್ಲ.

ಕಾವ್ಯವು ಕೇವಲ ಪದಗಳ ಜೋಡಣೆಯಲ್ಲ. ಅದು ಬೆಳಕಿನಂತೆ ನಮ್ಮ ಜೀವನವನ್ನು ಬೆಳಗುವ ಒಂದು ಶಕ್ತಿ. ಕಾವ್ಯವು ನಮ್ಮ ಭಾವನೆಗಳನ್ನು ಅಭಿವ್ಯಕ್ತಪಡಿಸುವ, ನಮ್ಮ ಅಂತರಂಗವನ್ನು ತಟ್ಟುವ ಮತ್ತು ಆ ಮೂಲಕ ಸತ್ಯವನ್ನು ಅರಿತುಕೊಳ್ಳಲು ಸಹಾಯ ಮಾಡುವ ಒಂದು ಮಾಧ್ಯಮವಾಗಿದೆ. ಆದುದರಿಂದ ಕವಿತೆ ಎಂದಿಗೂ ಕಾಲಹರಣವಲ್ಲ ಎಂಬ ಎಚ್ಚರವಿರಬೇಕು. "ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ/ ನೀಡುವೆನು ರಸಿಕ ನಿನಗೆ/ ಕಲ್ಲುಸಕ್ಕರೆಯಂಥ ನಿನ್ನೆದೆಯು ಕರಗಿದರೆ/ ಅದರ ಸವಿಯನಷ್ಟೆ ಹನಿಸು ನನಗೆ" ಎಂಬುದಷ್ಟೇ ಕವಿಯ ಭಾವ. ಅದರ ಅರಿವ ತಾಕತ್ತು ಸಹೃದಯ ಮನಕ್ಕಿರಬೇಕು ಅಷ್ಟೇ.

ಕಾವ್ಯವು ನಮ್ಮ ಸುತ್ತಲಿನ ಪ್ರಪಂಚದ ಬಗ್ಗೆ ಹೊಸ ಅರಿವನ್ನು ಮೂಡಿಸುವ ಮೂಲಕ ಹೊರಗೆ ಕತ್ತಲಿದ್ದರೂ ಎದೆಯನ್ನು ಬೆಳಗುತ್ತದೆ. ನಾವು ನೋಡುವ ಮತ್ತು ಅನುಭವಿಸುವ ವಿಷಯಗಳನ್ನು ಹೊಸ ದೃಷ್ಟಿಕೋನದಿಂದ ನೋಡಲು ಸಹಕರಿಸುತ್ತದೆ. ನಮ್ಮ ಮನದ ಭಾವನೆಗಳನ್ನು ವ್ಯಕ್ತಪಡಿಸಲು ಮಾರ್ಗವನ್ನು ಒದಗಿಸುವ ಕಾವ್ಯವು ಸತ್ಯದ ಹುಡುಕಾಟದಲ್ಲಿ ನಮಗೆ ದಾರಿದೀಪವಾಗಬಲ್ಲುದು. ಜೀವನದ ಅರ್ಥವನ್ನು ಅರಿಯುವ ಮೂಲಕ ನಮ್ಮ ಅಸ್ತಿತ್ವದ ಬಗ್ಗೆ ಪ್ರಶ್ನೆಗಳನ್ನು ಕೇಳಲು ಪ್ರೇರೇಪಿಸುವ ಕಾವ್ಯವು ಬದಲಾವಣೆಗೆ ಪೂರಕ. ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಕಾವ್ಯವು ಬಹಳ ಮುಖ್ಯವಾದ ಸ್ಥಾನವನ್ನು ಪಡೆದಿದೆ. ಕುವೆಂಪು, ಬೇಂದ್ರೆ, ಕಂಬಾರ, ಕೆ. ಎಸ್. ನರಸಿಂಹಸ್ವಾಮಿ, ಎಚ್. ಎಸ್. ವೆಂಕಟೇಶಮೂರ್ತಿ ಮೊದಲಾದ ಅನೇಕ ಕವಿಗಳು ತಮ್ಮ ಕಾವ್ಯದ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವರ ಕಾವ್ಯಗಳು ಇಂದಿಗೂ ಸಹ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ.

ಆದುದರಿಂದಲೇ ಕಾವ್ಯ ಎಂಬುದು ಕನಸಿನ ನೆರಳಿನಲ್ಲಿ ಮನಸಿನೊಳಗೆ ಪೋಣಿಸಿದ ಮಣಿಯ ಹಾರ. ನವಿರು ಸ್ಪರ್ಶ ಮತ್ತು ಭಾವ ಸಂಬಂಧದ ಮೂಲಕ ಆಪ್ತವಾಗುವ ಕಾವ್ಯ ಹೃದಯಕ್ಕಿಳಿಯುವ ಮೂಲಕ ಭಾವ ಸಂಬಂಧವನ್ನು ಮಿಡಿಯುತ್ತದೆ. ಮನವ ಬಿಕ್ಕಳಿಸಿ ಅಳಿಸದೇ, ಹುಬ್ಬು ಗಂಟಿಕ್ಕಿಸದೇ, ಮುಖವ ಕಿವುಚಿಸದೇ, ಓದಿ ಮುಗಿಸಿದ ನಂತರದಲ್ಲಿ ಮನದಲ್ಲಿ ಯಾವ ವಿಷಾದವನ್ನೂ ಉಳಿಸದೇ, ಕಣ್ಣಂಚಲೇ ತೂಗಿದ ಹನಿಯೊಳಗೆ ಬದುಕಿನ ಬಗ್ಗೆ ಭರವಸೆಯ ಹೊಸದೊಂದು ನಿರೀಕ್ಷೆಯ ಹೊಳಪನ್ನು ಕಣ್ಣೊಳಗೇ ಮಿನುಗಿಸುವ ಬದುಕ ಬೆಳಕು. ಇದೊಂದು ಪರಿಕಲ್ಪನೆಯಲ್ಲ, ಜೀವನ ಮಾರ್ಗ, ಒಂದು ಅನುಭವ. ಇಂತಹ ಅರ್ಥಪೂರ್ಣ ಕಾವ್ಯವನ್ನು ಓದುವ ಮತ್ತು ಆನಂದಿಸುವ ಮೂಲಕ, ನಾವು ನಮ್ಮ ಜೀವನವನ್ನು ಮತ್ತಷ್ಟು ಅರ್ಥಪೂರ್ಣವಾಗಿಸಿಕೊಳ್ಳಬಹುದು.

***

ಮಲೆನಾಡಿನ ಅಂಟಿಗೆ – ಪಂಟಿಗೆ ಹಾಡು

ಮಂಜುನಾಥ ಟಿ. ಚಳ್ಳಕೆರೆ

ಸಂಶೋಧನಾರ್ಥಿ

ಕನ್ನಡ ಭಾರತಿ

ಕುವೆಂಪು ವಿಶ್ವವಿದ್ಯಾಲಯ

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ

manjumt94@gmail.com mobile

ಮಲೆನಾಡಿಗೂ ಅಂಟಿಗೆ ಪಂಟಿಗೆಗೂ ವಿಶಿಷ್ಟ ಬಗೆಯ ನಂಟು – ದೀಪಾವಳಿಯ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ಒಂದು ಸಂಪ್ರದಾಯ. ಇದು ಪ್ರಮುಖವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ, ಗೌಣವಾಗಿ ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಸಾಗರ, ಸೊರಬ, ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ಅಂಟಿಗೆ ಪಂಟಿಗೆಗೆ ಪರ್ಯಾಯವಾಗಿ 'ಹಬ್ಬ ಹಾಡುವುದು' 'ಜ್ಯೋತಿ ಕೂಡುವುದು', 'ದೀಪ ನೀಡುವುದು' ಎಂದು ಬೇರೆ ಬೇರೆ ಹೆಸರುಗಳಿವೆ. ಉತ್ತರ ಕರ್ನಾಟಕ ಭಾಗದಲ್ಲಿ ಕಂಡು ಬರುವ ಆಣಿ ಪೀಣಿ ಸಂಪ್ರದಾಯಕ್ಕೂ ಕೆಲವು ಸಾಮ್ಯತೆಗಳಿವೆ. ಹಾಗಾಗಿ ಅಂಟಿಗೆ ಪಂಟಿಗೆಯನ್ನು ಹೋಲುವ ಸಂಪ್ರದಾಯವೊಂದು ಕರ್ನಾಟಕಾದ್ಯಂತ ರೂಢಿಯಲ್ಲಿದ್ದು ಕ್ರಮೇಣ ಕೆಲವು ಭಾಗಗಳಲ್ಲಿ ಮಾತ್ರ ಉಳಿದುಕೊಂಡಿರಬೇಕೆಂಬ ಊಹೆಯನ್ನು ಕೆಲವರು ಮಾಡಿದ್ದಾರೆ.

ಅಂಟಿಗೆ ಪಂಟಿಗೆ ಶಬ್ದದ ನಿಷ್ಪತ್ತಿ ಕುರಿತು ಜಿಜ್ಞಾಸೆ ಇದೆ. ಈ ಬಗ್ಗೆ ಚರ್ಚಿಸಿರುವ "ಎಂ. ಚಿದಾನಂದಮೂರ್ತಿಯವರು ಅಂಟಿಸು ಎಂದರೆ ದೀಪ ಹೊತ್ತಿಸು ಎಂದು ಅರ್ಥ, ಅಂಟಿಸು ಎಂಬುದರ ನಾಮರೂಪ ಅಂಟಿಕೆ."[1] ಇದರ ಪ್ರತಿಧ್ವನಾತ್ಮಕ ಶಬ್ದ

ಪಂಟಿಗೆ ಎಂದಿದ್ದಾರೆ. ಕನ್ನಡದ ಪ್ರಾಚೀನ ಕವಿಗಳಲ್ಲೊಬ್ಬನಾದ ರನ್ನ (ಕ್ರಿ.ಶ. 990)ನ ಕಾವ್ಯದಲ್ಲಿ 'ಅಂಟಿ–ಸುಂಟಿ' ಎಂಬ ಪದವಿದೆ ಎಂದೂ ಇದರಿಂದ ಅಂಟಿಗೆ ಪಂಟಿಗೆ ನಿಷ್ಪನ್ನಗೊಂಡಿರಬೇಕೆಂಬ ಊಹೆಯೂ ಇದೆ.

"ಅಂಟಿಕೆ ಪಂಟಿಕೆ" ಎಂದು ಕರೆಸಿಕೊಳ್ಳುವ ಈ ಒಂದು ಕಲಾತ್ಮಕ ಮೇಳ ಕಾರ್ತಿಕ ಮಾಸದ ಮೊದಲ ದಿನದಿಂದ (ಬಲಿಪಾಡ್ಯಮಿ ದಿನದಿಂದ) ಪ್ರಾರಂಭಿಸಿ ಎರಡು ಅಥವಾ ಐದು ದಿನಗಳ ಕಾಲ ಕಲಾ ಪ್ರದರ್ಶನ ನಡೆಸುತ್ತದೆ. ಬಲೀಂದ್ರನ ಆರಾಧನೆಗೆಂದೇ ರೂಪ ಪಡೆದಿದೆ ಎಂದು ಹೇಳಲಾಗುವ ಈ ಕಲೆಯ ದಂತ ಕತೆಯಂತೆ, "ಬಲೀಂದ್ರನು ದೀಪಾವಳಿಯ ಸಂದರ್ಭದಲ್ಲಿ ಅರಘಳಿಗೆಯ ಕಾಲ ಭೂಮಿಗೆ ಬರುವುದಾಗಿಯೂ, ಈ ಅವಧಿಯಲ್ಲಿ ಎಲ್ಲರೂ ತಮ್ಮ ನೋವನ್ನು ಮರೆತು ಸಂತಸದಿಂದ ತನ್ನನ್ನು ಸ್ತುತಿಸಿದರೆ ಅವರ ಅಭೀಷ್ಟಗಳನ್ನು ನೆರವೇರಿಸು ವುದಾಗಿಯೂ ವರವನ್ನು ನೀಡಿದ" ಎಂಬ ನಂಬಿಕೆ ಇದೆ. ಬಲೀಂದ್ರನ ಅಂಶವು ಆವಾಹಿತವಾಗಿರುವುದೆಂದು ನಂಬಲಾಗಿರುವ 'ಕೈದೀಪ' ವೊಂದನ್ನು ಹಿಡಿದು ಕಲಾವಿದರು ಮನೆಮನೆಗೆ ಹೋಗಿ. ಬಲೀಂದ್ರನ ಸಂದೇಶವನ್ನು ನೆನಪು ಮಾಡಿಕೊಟ್ಟು ಅವರ ಮಹಿಮೆಯನ್ನು ಹಾಡಿ ಹೊಗಳುತ್ತಾರೆ.

ಮೊದಲೇ ನಿರ್ಧರಿಸಿದಂತೆ ಊರಿನವರೆಲ್ಲ ತಮ್ಮ ಜನಾಂಗದ ನಾಯಕನ ಮನೆ ಸೇರಿ ತುಳಸಿ ಮತ್ತು ಬಲೀಂದ್ರನಿಗೆ ಪೂಜೆ ಸಲ್ಲಿಸಿ ಕೈದೀಪ ಹೊತ್ತಿಸಿ ತುಳಸಿ ಕಟ್ಟೆಯ ಎದುರು ಎಲ್ಲರೂ ನಿಂತು ಇಲ್ಲವೆ ಕುಳಿತು,

"ದೀಪೋಳಗೆನ್ನಿರೋ ನಮ್ಮೂರ ಗ್ರಾಮಕೆ ದೀಪೋಳಗೆನ್ನಿರೋ
ನಮ್ಮೂರ ಭೂತಕ್ಕೆ ದೀಪೋಳಗೆನ್ನಿರೋ
ನಮ್ಮೂರ ಬಸವಗೆ ದೀಪೋಳಿಗೆನ್ನಿರೋ ದೀಪೋಳಿಗೆ"[2.]

ಎಂದು ಹಾಡುತ್ತಾರೆ. ಈ ಸಂಪ್ರದಾಯದಲ್ಲಿ ವಿಶೇಷವಾಗಿ ದೇವಸ್ತುತಿ ಇದ್ದು ಅಶ್ಲೀಲ ಅಸಂಬದ್ಧ ವಿಚಾರಗಳಿಗೆ ಇಲ್ಲಿ ಎಡೆಯಿಲ್ಲ. ಭಕ್ತಿಯೇ ಪ್ರಧಾನ– ದೇವರ ಕತಾವಳಿಯೇ ದೀಪಾವಳಿ. ದೀಪಾವಳಿ ವ್ಯವಸಾಯಪ್ರಧಾನವಾದ ಹಬ್ಬ. ಇದರ ಆಚರಣೆಯಲ್ಲಿ ವೈವಿಧ್ಯತೆ ಇದೆ. ಈ ಹಬ್ಬದಲ್ಲಿ ನರಕ ಚತುರ್ದಶಿ, ಅಮಾವಾಸ್ಯೆ, ಬಲಿಪಾಡ್ಯಮಿ ಎಂದು ಮೂರು ದಿನಗಳೂ ಕೆಲವು ಆಚರಣೆಗಳಿರುವುದು ಸಾಮಾನ್ಯ. ಆದರೆ ಮಲೆನಾಡಿನಲ್ಲಿ ಬಲಿಪಾಡ್ಯಮಿಯ ಅನಂತರವೂ ಕರಿ, ವರ್ಷತೊಡಕು ಎಂದು ಹಬ್ಬಗಳಿರುತ್ತವೆ. ಪಾಡ್ಯದಿಂದ ಈ ಮೂರು ರಾತ್ರಿಗಳಲ್ಲಿ ಊರಿನ ತರುಣರು ಗುಂಪುಕಟ್ಟಿಕೊಂಡು ದೀಪ ಹಿಡಿದು ಹಾಡುತ್ತ ಊರಾಡುತ್ತ ಮನೆ ಮನೆಗೆ ದೀಪ ಒಯ್ಯುತ್ತಾರೆ. ಈ ದೀಪವನ್ನು ಜ್ಯೋತಿ, ಜ್ಯೋತಮ್ಮ ಎಂದು ಕರೆಯಲಾಗುವುದು.

ಈ ಜ್ಯೋತಿಯ ಮೂಲಕ ಮನೆಮನೆಗಳ ದೀಪಗಳನ್ನು ಬೆಳಗುವ ಸಂಪ್ರದಾಯವನ್ನೇ ಅಂಟಿಗೆ ಪಂಟಿಗೆ ಎಂದು ಹೇಳುತ್ತಾರೆ. ಇದು ಮಲೆನಾಡಿನ ದೀಪಾವಳಿಗೆ ವಿಭಿನ್ನತೆಯನ್ನು ತಂದುಕೊಟ್ಟಂತಹ ಸಂಪ್ರದಾಯ. ದೀಪವು ಕತ್ತಲೆಯನ್ನು ಹೋಗಲಾಡಿಸಿ ಬೆಳಕನ್ನು ನೀಡುವಂಥದ್ದು. ಜ್ಞಾನದ ಸಂಕೇತ. ಮನೆಮನೆಗೆ ಬೆಳಕು ನೀಡಿ, ಪ್ರೀತಿ ವಿಶ್ವಾಸವನ್ನು ಬೀರುತ್ತ ಶುಭ ಹಾರೈಸುವುದೇ ಈ ಸಂಪ್ರದಾಯದ ಆಶಯ.

ಅಂಟಿಗೆ ಪಂಟಿಗೆ ಮೇಳದಲ್ಲಿ ಎಷ್ಟು ಜನರಾದರೂ ಇರಬಹುದು, ನಿರ್ದಿಷ್ಟ ಸಂಖ್ಯೆಯೇನೂ ಇಲ್ಲ. ಆದರೆ ಸುಮಾರು ಎಂಟು ಹತ್ತು ಜನರಿಂದ ಐವತ್ತರವರೆಗೆ ಗುಂಪು ಕಟ್ಟಿಕೊಳ್ಳುತ್ತಾರೆ. ಗುಂಪಿಗೆ ಅವರಲ್ಲಿಯೇ ಒಬ್ಬ ಯಜಮಾನ. ಇವರೆಲ್ಲ ಮೊದಲು ದೇವಸ್ಥಾನದಲ್ಲಿ ಸೇರುತ್ತಾರೆ. ಕೆಲವೊಮ್ಮೆ ತುಳಸಿ ಕಟ್ಟೆಯ ಮುಂದೆ ಒಟ್ಟೈಸುವುದೂ ಉಂಟು. ಏಕೆಂದರೆ ಈ ಸಂಪ್ರದಾಯವಿರುವ ಮಲೆನಾಡಿನ ಭಾಗವು ವೈಷ್ಣವ ಧರ್ಮದ ಪ್ರಭಾವಕ್ಕೆ ಒಳಗಾಗಿರುವುದರಿಂದ ತುಳಸಿಯ ಬಗ್ಗೆ ವಿಶೇಷ ಭಕ್ತಿಭಾವವಿದೆ. ಮೇಳದಲ್ಲಿ ಮುಮ್ಮೇಳ ಹಿಮ್ಮೇಳ ಹಾಡುವವರು ಇರುತ್ತಾರೆ. ಕೆಲವರು ಜ್ಯೋತಿ ಹಿಡಿದುಕೊಳ್ಳುತ್ತಾರೆ. ಇನ್ನು ಕೆಲವರು ದೀವಟಿಗೆ ಹೊತ್ತುಕೊಳ್ಳುತ್ತಾರೆ. ಸಂಭಾವನೆ ರೂಪದಲ್ಲಿ ಕೊಡುವ ಹಣ ಮತ್ತು ದವಸ ಧಾನ್ಯಗಳನ್ನು ಇಟ್ಟುಕೊಳ್ಳುವ ಕೆಲಸ, ಊರಾಡಲು ದಾರಿ ತೋರಿಸುವುದಕ್ಕೆ ಕೆಲವರು ಹೀಗೆ ಮೇಳದವರು ಹಂಚಿಕೊಂಡು ತಮ್ಮ ಪಾಲಿನ ಕರ್ತವ್ಯಗಳನ್ನು ಕಾರ್ಯಗತ ಗೊಳಿಸುವಲ್ಲಿ ಸಹಕಾರತತ್ವ ಅಡಗಿದೆ. ಊರಾಡಲು ಹೊರಡುವ ಮುನ್ನ ಅಂಟಿಗೆ ಪಂಟಿಗೆಯವರು ದೇವರ ಮುಂದಿರುವ ದೀಪಗಳಿಂದ ತಮ್ಮ ಹಣತೆಗಳನ್ನು ಬೆಳಗಿಸಿಕೊಳ್ಳುತ್ತಾರೆ. ಇದನ್ನು 'ಜ್ಯೋತಿ', 'ಜ್ಯೋತಮ್ಮ' ಎನ್ನುತ್ತ ಸ್ತ್ರೀ ದೇವತೆಯೆಂಬ ಭಾವನೆ ಮೂಡಿಸುತ್ತಾರೆ.

"ಆರಗದಿಂದ ಬಂದಾವೆ ಆರುಸಾವಿರ ಹಣತೆ
ಬತ್ತಿ ಸಾಲಿನ ಕೊಂದಣಿಸಾಲು
ಜಗಜ್ಯೋತಿ ಸತ್ಯದಿಂದುರಿಯೇ ನಮಗಾಗಿ"[3]

ಎಂದು ದೀಪವು ಆರದೆ ಬೆಳಗಬೇಕೆಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾರೆ. ಹಾಗೆಯೇ ಗ್ರಾಮದೇವತೆ ಕುಲದೇವತೆಗಳನ್ನು ಪ್ರಾರ್ಥಿಸಿಕೊಳ್ಳುತ್ತಾರೆ. ಲಾಟೀನು ದೊಂದಿಗಳನ್ನು ಹೊತ್ತಿಸಿಕೊಂಡು ರಾತ್ರಿಯೇ ಹೊರಡುತ್ತಾರೆ.

ಮೇಳದವರು ಊರು ಬಿಡುವ ಮುನ್ನ 'ದೀಪ್ ದೀಪೋಳಿ' ಎಂದು ಕೂಗುತ್ತಾರೆ. ದಾರಿ ಉದ್ದಕ್ಕೂ ಹೀಗೆ ಕೂಗುತ್ತ ಸ್ಥಳೀಯ ದೇವತೆ, ಭೂತ, ಚೌಡಿ ಮುಂತಾದುವನ್ನು ನೆನೆಯುವುದುಂಟು. ಕೈಯಲ್ಲಿರುವ ಜ್ಯೋತಿ ಆರಿ ಹೋಗದಂತೆ

ಎಚ್ಚರಿಕೆ ವಹಿಸುವರು. ಹಾಗೇನಾದರೂ ದೀಪ ಆರಿದರೆ ಅದೊಂದು ಅಪಶಕುನವೆಂದು ಭಾವಿಸಲಾಗುವುದು. ಮಾರ್ಗ ಮಧ್ಯದಲ್ಲಿ ಬೇರೆ ಊರಿನ ಅಂಟಿಗೆ ಪಂಟಿಗೆಯವರು ಎದುರಾದರೂ ಕೆಡಕಾಗುವುದೆಂದು ನಂಬುವುದರಿಂದ ಅಂಥ ಸಂದರ್ಭ ಒದಗಿದರೆ ಮರೆಯಲ್ಲಿ ನಿಲ್ಲುತ್ತಾರೆ. ಯಾವುದಾದರೂ ಊರು ಸಮೀಪಿಸುತ್ತಿದ್ದಂತೆಯೇ "ದೀಪ ಹೊಚ್ಚಿದ್ದು ಧೂಪಾನೆ ಹಾಕಿದ್ದು ದೀವಳಿಗೆಗೆಂದು ಹೊರಬಿದ್ದು"[4] ಎಂದು ಹಾಡುತ್ತ ಸಾಗಿ ಮನೆಯ ಮುಂದೆ ನಿಂತ ಕೂಡಲೇ 'ದೀಪ್ ದೀಪೋಳಿ', 'ದೇವರ ದೀಪೋಳಿ' ಎಂದು ಕೂಗುತ್ತಾರೆ. ಆ ಮನೆಯ ತುಳಸಿಕಟ್ಟೆಯ ಮುಂದೆ ದೀಪವಿರಿಸಿ ಕೈಮುಗಿದು ಅಂಟಿಗೆ ಪಂಟಿಗೆ ಹಾಡುಗಳನ್ನು ಹಾಡುತ್ತಾರೆ. ಈ ಹಾಡುಗಳಲ್ಲಿ ಮನೆಯ ಬಾಗಿಲ ವರ್ಣನೆ, ದೀಪವನ್ನು ಸ್ವಾಗತಿಸಬೇಕೆಂಬ ಪ್ರಾರ್ಥನೆ ಅಡಗಿದೆ. ಮೇಳದವರು ಹಾಡುವಾಗ ಮನೆಯೊಡತಿ ಹೊರಬಂದು ಮೇಳದವರ ಜ್ಯೋತಿಗೆ ಎಣ್ಣೆ ಹಾಕಿ ತನ್ನ ಹಣತೆಯನ್ನು ಹಚ್ಚಿಕೊಂಡು ಒಳಗೆ ಕೊಂಡೊಯ್ಯುತ್ತಾಳೆ.. ಅನಂತರ ಮೇಳದವರಿಗೆ ತಿನ್ನಲು ಏನಾದರೂ ಕೊಟ್ಟು ಸಂಭಾವನೆಯಾಗಿ ಹಣ ಮತ್ತು ದವಸಧಾನ್ಯಗಳನ್ನು ನೀಡಲಾಗುವುದು, ಮೇಳದವರು ಹೊರಡುವಾಗ ಆ ಮನೆಯ ದನಕರುಗಳಿಗೆ ಒಳ್ಳೆಯದಾಗಲಿ, ಮಳೆ ಬೆಳೆಗಳು ಹುಲುಸಾಗಲಿ ಎಂದು ಹಾರೈಸುವರು. ಗ್ರಾಮೀಣ ಜೀವನ, ಕೃಷಿಯನ್ನು ಅವಲಂಬಿಸಿರುವುದರಿಂದ, ವ್ಯವಸಾಯ ಜಾನುವಾರುಗಳನ್ನು ಆಧರಿಸಿರುವುದರಿಂದ ಹೀಗೆ ಹರಸುವುದು ಸಹಜವಾಗಿದೆ. ಅಂಟಿಗೆ ಪಂಟಿಗೆಯವರು ಜಾತಿ ಮತ ಭೇದವಿಲ್ಲದೆ ಎಲ್ಲ ಸಮುದಾಯದವರ ಮನೆಗಳಿಗೂ ಭೇಟಿ ಕೊಡುತ್ತಾರೆ. ಆಯಾ ಸಮುದಾಯದವರ ವೃತ್ತಿಗೆ ಅನುಗುಣವಾಗಿ ಹಾಡುತ್ತಾರೆ. ಅಷ್ಟೇ ಅಲ್ಲ ದೀಪಾವಳಿಗೆಂದು ಹೊಸದಾಗಿ ಮದುವೆಯಾದ ಮದುಮಕ್ಕಳು ಬಂದಿದ್ದರೆ ಅವರನ್ನು ಛೇಡಿಸುತ್ತ ಹಾಡಿ ವಾತಾವರಣವನ್ನು ಮುದಗೊಳಿಸುವರು.

ಮೂರು ದಿನಗಳ ಕಾಲ ಊರಾಡುತ್ತ ಮನೆ ಮನೆಗೆ ಹೋಗಿ ಜ್ಯೋತಿ ನೀಡಿದ ಅಂಟಿಗೆ ಪಂಟಿಗೆಯವರು ಕಡೆಯಲ್ಲಿ ತಾವು ಹೊರಟ ಸ್ಥಳವನ್ನೇ ಬಂದು ಸೇರುತ್ತಾರೆ. ಅಲ್ಲಿ ಜ್ಯೋತಿಯನ್ನಿಟ್ಟು ನಮಸ್ಕರಿಸುವರು. ಅನಂತರ ಸಂಗ್ರಹನಾದ ಹಣ ದವಸಧಾನ್ಯಗಳಿಂದ ಔತಣ ಏರ್ಪಡಿಸುವರು. ಇದಕ್ಕೆ 'ಅಂಟಿಗೆ–ಪಂಟಿಗೆ ಔಂತ' ಎನ್ನುತ್ತಾರೆ. ಮಾಂಸದ ಅಡುಗೆ ತಯಾರಿಸಿ ಜ್ಯೋತಿಗೆ ಎಡೆಯಿಟ್ಟು ಅನಂತರ ಊರಿನವರೊಂದಿಗೆ ಊಟ ಮಾಡುವರು. ಹೀಗೆ ಅಂಟಿಗೆ ಪಂಟಿಗೆ ಸಂಪ್ರದಾಯ ಗ್ರಾಮೀಣ ಜನರ ಸಹಕಾರ ಮನೋಭಾವಕ್ಕೆ ಸಾಂಘಿಕ ಜೀವನಕ್ಕೆ ಸಾಕ್ಷಿಯಾಗಿದೆ. ಮಲೆನಾಡಿನ ವಿಶಿಷ್ಟ, ಸಂಸ್ಕೃತಿಯ ಪ್ರತೀಕವಾಗಿದೆ. ಈ ಸಂಪ್ರದಾಯಕ್ಕೆ ಸಂಬಂಧಿಸಿದ ಹಾಡುಗಳು ವಿವಿಧ ಭಾವನೆಗಳನ್ನು ಉಕ್ಕಿಸುತ್ತವೆ. ಜೀವನದ ದುಃಖ ದುಮ್ಮಾನಗಳನ್ನು

ತಗ್ಗಿಸಲು ಉತ್ತರದೇವಿಯಂಥ ಕಥನಗೀತೆಗಳನ್ನು ಹಾಡುವುದುಂಟು.ದೀಪಧಾರಿಗಳನ್ನು ತೀರ್ಥಹಳ್ಳಿ ಹಾಗೂ ಚಿಕ್ಕಮಗಳೂರು ಭಾಗಗಳಲ್ಲಿ 'ಅಂಟಿಕೆ–ಪಂಚಿಕೆ' ತಂಡದವರೆಂದು, ಉತ್ತರ ಕನ್ನಡದ ಶಿರಸಿ, ಸಿದ್ದಾಪುರಗಳಲ್ಲಿ 'ಭಿಂಗಿ' ಪದಗಳೆಂದು, ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿ 'ಬಲ್ಲಾಳಿ' ಪದಗಳೆಂದು, ಸಾಗರ – ಹೊಸನಗರದ ಭಾಗಗಳಲ್ಲಿ 'ಹಬ್ಬ ಹಾಡುವುದು' ಅಥವಾ 'ದೀಪ ನೀಡುವುದು' ಎನ್ನುತ್ತಾರೆ. ಇದಲ್ಲದೆ ಈ ಸಂಪ್ರದಾಯಕ್ಕೆ ಅವಂಟಿಗೋ ಪವಂಟಿಗೂ; ಅಡೀ–ಪೀಡೀ; 'ಅಂಟಿ ಸುಂಟಿ', 'ಅವಟಿಗೋ – ಪಾವಟಿಗೂ', ಔಂಟಿಗೇ ಸುಂಟಿಗೋ ಇತ್ಯಾದಿ ಹೆಸರುಗಳಿಂದ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಕರೆಯುತ್ತಾರೆ. ದೀಪಧಾರಿಗಳ ತಂಡದಲ್ಲಿ ಒಕ್ಕಲಿಗರು, ಅಗಸರು, ಕುಂಬಾರರು, ಅಕ್ಕಸಾಲಿಗರು, ವಿಶ್ವ ಕರ್ಮರು. ದೀವರು, ಹಸಲರು, ವೀರ ಶೈವರು, ಅಲ್ಲದೇ ಮಲೆನಾಡಿನ ಆಶಕ್ತ ಇತರ ಜನವರ್ಗದವರು ಸೇರಿರುತ್ತಾರೆ. ದೀಪಧಾರಿಗಳ ತಂಡ ಜಾತ್ಯಾತೀತವಾಗಿ ಇರುತ್ತಾರೆ. ಹೆಂಗಸರಿಗೆ ಹಾಡುಗಳು ರುತ್ತದೆ. ಮೇಳದಲ್ಲಿ ಗಂಡಸರು ಮಾತ್ರ ಕಂಠಪಾಠವಾಗಿದ್ದರೂ ಅವರು ಮೇಳವನ್ನು ಕಟ್ಟುವುದಿಲ್ಲ. ಇದು ಪುರುಷಪ್ರಧಾನ ಸಂಪ್ರದಾಯವಾಗಿದೆ. ಬಲಿಪಾಡ್ಯಮಿಯ ರಾತ್ರಿ ಊರಿನ ತರುಣರು ದೇವಾಲಯದ ಆವರಣದಲ್ಲಿ ಸೇರುತ್ತಾರೆ. ದೇವರಿಗೆ ಹಣ್ಣು ಕಾಯಿಗಳಿಂದ ಪೂಜೆ ಸಲ್ಲಿಸಿ, ನಂದಾದೀಪದಿಂದ ತಮ್ಮ ದೊಡ್ಡ ಹಣತೆ ಹಚ್ಚಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಮುಮ್ಮೇಳದ ಇಬ್ಬರೂ ಜ್ಯೋತಿಪದ ಆರಂಭಿಸುತ್ತಾರೆ.

"ಮಣ್ಣಲ್ಲಿ ಹುಟ್ಟೋಳೆ ಮಣ್ಣಲಿ ಬೆಳೆಯೋಳೆ, ಮಣ್ಣಲ್ಲಿ ಕಣ್ಣ ಬಿಡವೋಳೆ,
ಮಣ್ಣಲ್ಲಿ ಕಣ್ಣ ಬಿಡವೋಳೆ ಜಗಜ್ಯೋತಿ,
ಸತ್ಯಾದಿಂದುರಿಯ ನಮಗಾಗಿ"[5]

ಹಿಮ್ಮೇಳದ ಇಬ್ಬರು ಹೀಗೆಯೆ ಹಾಡುತ್ತಾರೆ. ಜ್ಯೋತಿ ಸತ್ಯದಿಂದ, ಆಯಾದಿಂದ, ಬೆಳಗುವಂತೆ ಮತ್ತು ಪದವನ್ನು ಹೇಳುವ ಶಕ್ತಿಯನ್ನು ಕೊಡುವಂತೆ ಪ್ರಾರ್ಥಿಸಿಕೊಳ್ಳುತ್ತಾರೆ. ದೀಪಧಾರಿಗಳು ದೇವಾಲಯದಿಂದ ದೀಪವನ್ನು ಹಿಡಿದು ಹೊರಡುತ್ತಾರೆ. ಊರವರಿಗೆ ದೀಪಧಾರಿಗಳು ಬರುವ ಸೂಚನೆ ಕೊಡುವ ಉದ್ದೇಶದಿಂದ 'ದೀಪ್ ದೀಪೋಳೆ' ಎಂದು ಒಕ್ಕೊರಲಿನಿಂದ ಕೂಗುತ್ತಾರೆ. ದೀಪಧಾರಿಗಳು ಊರಿನ ದೇವಾಲಯದ ಮುಂದೆ ತಮ್ಮ ಕಲಾ ಪ್ರದರ್ಶನವನ್ನು ನೀಡಿ, ನಂತರ ಪ್ರತಿ ಮನೆಗಳಿಗೂ ಹೋಗುತ್ತಾರೆ. ಮನೆಯ ಅಂಗಳದಲ್ಲಿ ನಿಂತ ದೀಪಧಾರಿಗಳು.

ಬಾಗಿಲು ಬಾಗಿಲು ಚಂದ ಈ ಮನೆಯ ಬಾಗಿಲು ಚಂದ, ಬಾಗಿಲ ಮ್ಯಾಲೇನು ಬರೆದಾರೆ, ಬಾಗಿಲ ಮ್ಯಾಲೇನು ಬರೆದಾರೆ ಸಿರಿಕೈಲಿ, ಕೊಚ್ಚು ಪಾಲುವಾಣದ

ಗಿಳಿವಿಂಡು, ಅಂದುಳ, ಮನೆಗೆ ಚಂದುಳ್ಳ ಕದವು, ಚಂದುಳ್ಳ ಕದಕ ಚಿನ್ನದ ಅಗಣಿಯ, ತೆಗೆ ಸೈ ವಜ್ರದ ಅಗಣೀಯ! ಆ ಮನೆ ದೀಪಧಾರಿಗಳಿಗೆ ಅಂದದ ಅರಮನೆಯಾಗಿ, ಚಿನ್ನದ ಬಾಗಿಲಾಗಿ, ವಜ್ರದ ಅಗಣಿಯಾಗಿ ಹಾಡುಗಳಲ್ಲಿ ವರ್ಣಿತವಾಗುತ್ತವೆ. ಬಾಗಿಲನ್ನು ತೆರೆದು ದೀಪಧಾರಿಗಳನ್ನು ಬರಮಾಡಿಕೊಳ್ಳುತ್ತಾರೆ. ಮನೆಯ ಒಡತಿ ದೀಪಕ್ಕೆ ಎಣ್ಣೆ ಎರೆದು, ದೀಪದಿಂದ ತನ್ನ ಹಣತೆಗೆ ಅಂಟಿಸಿಕೊಂಡು ಒಲೆಯ ಬೆಂಕಿಯಲ್ಲಿ ಅಗ್ನಿ ಗೂಡಿಸುತ್ತಾಳೆ. ಹಣತೆಯನ್ನು ದೇವರ ಮುಂದೆ ಇಟ್ಟು ಕೈ ಮುಗಿಯುತ್ತಾಳೆ. ದೀಪಧಾರಿಗಳು "ರನ್ನಾದಟ್ಟಾಕೆ ಬಣ್ಣದೇಣಿಯಾ ಚಾಚಿ, ಸಾಲೆಣ್ಣೆ ಕೊಡುವ ಬಾಯಿಬಿಚ್ಚಿ, ಸಾಲೆಣ್ಣೆ ಕೊಡವ ಬಾಯಿಬಿಚ್ಚಿ ಎಣ್ಣೆಯ ಬಗಸಿ, ಜ್ಯೋತಮ್ಮ ಗೆಣ್ಣೆ ಎರೆ ಬನ್ನಿ, ಎಣ್ಣೆಯ ನೆರೆದಾರೆ ಪುಣ್ಯಾದ ಫಲ ನಿಮಗೆ, ಮುಂದಣ ದೇವರಿಗೊಂದರಿಕ್ಕಾದ, ಮುಂದಣ ದೇವರಿಗೊಂದರಿಕ್ಕಾದ ಕಾರಣದಿಂದ, ಕಾಮನುಡುಗಾರು ನುಡಿಸ್ಕಾರು, ಕಾಮನುಡುಗಾರು ಏನೆಂದು ನುಡಿಸ್ಕಾರು, ಕಂದಯ್ಯರ ಫಲವೇ ತಮಗಾದು ಕಾರಣದಿಂದ, ಸಾವಿರ ಕಾಲ ಸುಖಿಬಾಳಿ"[6] ಎಂದು ಹಾಡುತ್ತಾರೆ.

ದೀಪಧಾರಿಗಳ ಮೇಳದಲ್ಲಿ ತಂಡದ ನಾಯಕತ್ವವನ್ನು ಊರಿನ ಹಿರಿಯ ಯಜಮಾನರು ವಹಿಸಿಕೊಳ್ಳುತ್ತಾರೆ. ತಂಡದಲ್ಲಿ ಹತ್ತರಿಂದ ಐವತ್ತು ಜನರವರೆಗೂ ಇರುತ್ತಾರೆ. ಹಾಡುಗಾರರು ನಾಲ್ಕು ಮಂದಿ ಇದ್ದು, ಅವರಲ್ಲಿ ಇಬ್ಬರು ಮುಮ್ಮೇಳಧಾರಿಗಳು, ಮತ್ತೆ ಇಬ್ಬರು ಹಿಮ್ಮೇಳಧಾರಿಗಳಿರುತ್ತಾರೆ. ತಂಡದಲ್ಲಿ ದೀಪಧಾರಿಗಳು, ದೀವಟಿಕೆಯವರು, ಸಂಭಾವನೆ ಹೊರುವವರು. ಊರುಗಳ ದಾರಿಬಲ್ಲವರು, ತರುಣರು, ವಯಸ್ಸಾದವರು, ಲೈಟು ಹಿಡಿದವರು ಇನ್ನು ಮುಂತಾದವರಿರುತ್ತಾರೆ. ಪಂಚೆ, ಶರ್ಟ್, ಮೇಲೊಂದು ಕೋಟು, ಟವಲ್, ಇನ್ನು ಕೆಲವರು ಪ್ಯಾಂಟು–ಶರ್ಟ್, ಟವಲ್ ತೊಟ್ಟಿರುತ್ತಾರೆ. ಹಾಡುಗಾರರು ಕೈಯಲ್ಲಿ ದೊಣ್ಣೆ ಹಿಡಿದಿರುತ್ತಾರೆ. ಎರಡು ಮೇಳಗಳು ಎದುರಾಗ ಬಾರದೆಂದು ಕಟ್ಟುಪಾಡಿದೆ. ತಂಡಗಳು ಎದುರಾದಾಗ ಹಾಡುಗಳಿಂದ ಸೋಲಿಸುವ ಸಂಪ್ರದಾಯವಿದೆ.

ಮಲೆನಾಡಿನ ದೀಪಾವಳಿ ಹಬ್ಬದ ರಾತ್ರಿಗಳಲ್ಲಿ ಮಾತ್ರ ತಂಡ ಕಟ್ಟಬೇಕು. ದೇವಾಲಯದಲ್ಲಿ ಹೊತ್ತಿಸಿಕೊಂಡ ದೀಪವನ್ನು ಅಗ್ನಿ ಕೂಡಿಸುವವರೆಗೂ ನಂದಿಸುವಂತಿಲ್ಲ. ಬಾಗಿಲಿಗೆ ಬಂದ ಜ್ಯೋತಿಯನ್ನು ಸ್ವಾಗತಿಸಿ, ಎಣ್ಣೆ ಎರೆಯಬೇಕು. ಜ್ಯೋತಿ ಹಿಡಿದವರು ಕಾಲಿಗೆ ಚಪ್ಪಲಿ ಧರಿಸುವಂತಿಲ್ಲ. ಮಲಮೂತ್ರ ವಿಸರ್ಜನೆ ಮಾಡುವಂತಿಲ್ಲ. ಸೂತಕವಿದ್ದವರು ಮೇಳದಲ್ಲಿ ಭಾಗವಹಿಸುವಂತಿಲ್ಲ. ಸೂತಕದವರ ಮನೆಗೆ ದೀಪ ನೀಡುವಂತಿಲ್ಲ. ಒಮ್ಮೆ ಸೂತಕವಾದರೆ, ಮೂರು ವರ್ಷಗಳವರೆಗೆ ಮೇಳದಲ್ಲಿ ಭಾಗವಹಿಸುವಂತಿಲ್ಲ.

"ಅಂಟಿಕೆ–ಪಂಟಿಕೆ ಔಂಗ್ಲ" ಎಂದು ಕರೆಯುವ ಸಾಮೂಹಿಕ ಔತಣಕೂಟವನ್ನು ಏರ್ಪಡಿಸುತ್ತಾರೆ. ಮೇಳದಲ್ಲಿ ಸಂಗ್ರಹಿಸಿದ ದವಸ–ಧಾನ್ಯ ಹಾಗೂ ಹಣದಿಂದ ಔತಣಕೂಟದ ಖರ್ಚುಗಳನ್ನು ಭರಿಸುತ್ತಾರೆ. ಅಂದು ಊರಿನವರಲ್ಲದೆ ಸುತ್ತಲಿನ ಊರಿನವರನ್ನು ಸ್ವಾಗತಿಸುತ್ತಾರೆ. ಜ್ಯೋತಿ ಕಳುಹಿಸಲು ಒಂದು ನಿಗದಿತ ಸ್ಥಳವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಊರಿನ ಹಲಸಿನ ತೋಪಿನ ದೊಡ್ಡ ಬಯಲೇ ಸಮಾರಂಭದ ಸ್ಥಳವಾಗಿರುತ್ತದೆ. ಹಾಲು ಸುರಿಸುವ ಆಲ, ಹಲಸು ಮರಗಳ ಬುಡದಲ್ಲಿ ಜ್ಯೋತಿಯನ್ನು ಇಟ್ಟು, ಎಡ ಮಾಡಿ, ಪೂಜೆ ಸಲ್ಲಿಸುತ್ತಾರೆ.

ಈ ಸಂದರ್ಭದಲ್ಲಿ ದೀಪ ಹಿಡಿದ ದೀಪಧಾರಿಗಳು ಜ್ಯೋತಿ ಕಳುಹಿಸುವ ಪದಗಳನ್ನು ಹಾಡುತ್ತಾರೆ. "ಒಂದೇ ಬಟ್ಟಲು ಒಂದೇ ಬೆಲ್ಲದಚ್ಚು, ಒಂದೆಲೆ ಹಲಸು ಬಲಬಂದು, ಒಂದೆಲೆ ಹಲಸು ಬಲಬಂದು ಜ್ಯೋತಮ್ಮ ತಾಯಿ, ಒಂದೆ ದೀವಿಗೆಲೆ ಗುಡಿದುಂಬಿ, ಒಂದೆ ದೀವಿಗೆಲೆ ಗುಡಿದುಂಬಿ ಜ್ಯೋತಮ್ಮ ತಾಯಿ, ಇಂದ್ಯೋಗಿ ಮುಂದೆ ಬರಬೇಕು"[7] ಎಂದು ಹಾಡುತ್ತಾರೆ. ಜ್ಯೋತಿಗೆ ಎಡೆ ಸಲ್ಲಿಸಿ, ಪೂಜಿಸಿದ ನಂತರ ಪ್ರಸಾದ ಸ್ವೀಕರಿಸುತ್ತಾರೆ. ಎಲ್ಲರೂ ಸಾಲಾಗಿ ಕುಳಿತು ಸಹಭೋಜನ ಮಾಡುತ್ತಾರೆ. ಅಂದಿನ ಊಟ ಮಾಂಸಹಾರವಾಗಿರುತ್ತದೆ. ಈಚೆಗೆ ಈ ಸಂಪ್ರದಾಯವನ್ನು ಸರಳವಾಗಿ ಮಾಡಿ, ಉಳಿದ ಹಣದಿಂದ ಸಾರ್ವಜನಿಕ ಕೆಲಸಗಳಾದ ಶಾಲೆ, ದೇವಸ್ಥಾನ, ರಸ್ತೆ ಹಾಗೂ ಇತ್ಯಾದಿಗಳ ದುರಸ್ತಿ ಕಾರ್ಯಗಳಿಗೆ ಬಳಸುತ್ತಾರೆ.

ಗೀತ ಸಂಪ್ರದಾಯವು ದೀಪ ಮತ್ತು ಅದಕ್ಕೆ ಸಂಬಂಧಿಸಿದ ನಂಬಿಕೆಯ ಅಂಶ ಎದ್ದು ಕಾಣುತ್ತದೆ. ದೀಪ ಅಂಟಿಸುವ ಕ್ರಿಯೆ ಪ್ರಧಾನವಾಗಿಯೂ, ಸುಗ್ಗಿ ಒಳ್ಳೆಯದನ್ನು ಹೊತ್ತು ತರಲಿ ಎಂಬ ಹಾರೈಕೆ ವ್ಯಕ್ತವಾಗಿದೆ. ಮಲೆನಾಡಿನ ಸಾಂಸ್ಕೃತಿಕ ಕನ್ನಡಿಯಂತಿರುವ ಈ ಸಂಪ್ರದಾಯವು ಅಜ್ಞಾನವನ್ನು, ಕತ್ತಲನ್ನು ಆ ಮೂಲಕ ಸಂಕಷ್ಟಗಳನ್ನು ಕಳೆಯುವ ಮುಖ್ಯ ಆಶಯವನ್ನು ಹೊಂದಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಸುತ್ತಮುತ್ತ ದೀಪಾವಳಿ ಮೂರು ದಿನ ಇರುವಾಗಲೇ ನೀರು ತುಂಬಿಸುವ ಹಬ್ಬ ಮಾಡಿ ಲಕ್ಕಿ ಮತ್ತು ಕ್ಯಾದಗಿಯನ್ನು ಗದ್ದೆ–ತೋಟಗಳಿಗೆ ಹಾಕುವ ಸಂಪ್ರದಾಯವಿದೆ. ಆಗ ಅವರು :

"ಲಕ್ಕಿಯೋ ಲಕ್ಕಿಯೋ....
ಗದ್ದೆಗೆ ಲಕ್ಕಿ
ಗಣ್ಣೆಗೆಲಕ್ಕಿ
ಗೌಡನ ಹೆಂಡ್ತಿ
ಬೊದ್ದೆಗೆ ಲಕ್ಕೆ.....!

ಲಕ್ಕಿಯೋ ಲಕ್ಕಿಯೋ...."[8]

ಎಂದು ಹಾಡುತ್ತಾರೆ. ಅಲ್ಲದೆ ಬಾಳೆಪಟ್ಟೆಯನ್ನು ಕೋಲಿಗೆ ಸಿಕ್ಕಿಸಿ. ಕೋಲಿನ ತುದಿಗೆ ಗುಗ್ಗಳ ಹಚ್ಚಿ, ಚೆಂಡು ಹೂ ಮುಡಿಸಿ ಆ ಕೋಲನ್ನು ಗದ್ದೆಗಳಲ್ಲಿ ನಾಟುತ್ತಾರೆ. ಆಗ "ಆಳುದ್ದ ವೈರಾಗಿ, ತೋಳುದ್ದ ತೆನೆಬಿಟ್ಟು ಒಕ್ಕಲಿಗರ ಮಗ ಎತ್ತು ಮಾರಿ ಎಮ್ಮೆ ತಂದ" ಎಂದು ಹಾಡುತ್ತಾರೆ. "ಮಾಳದಮಾಸೆಗೆ ಮೊಳಕ್ಕೊಂದು ಕದುರು, ದೀವಳಿಗೆಗೆ ದಿನಕೊಂದು ಕದುರು"[9] ಎಂಬ ಮಾತು ಈ ಪ್ರದೇಶದಲ್ಲಿ ಪ್ರಚಲಿತವಿದೆ. ಅಲ್ಲದೆ ತಿಪ್ಪೆಗೆ ಚೆಂಡು ಹೂ ಮುಡಿಸಿ ತಿಪ್ಪೆ ಪೂಜಿಸುವ ಪದ್ಧತಿಯೂ ಇದೆ.

ತಾಳವಾಡಿಯಲ್ಲಿ ದೀಪಾವಳಿಯ ದಿನ ಹೊಲಗಳಿಂದ ಕಾಚಕ್ಕಿಯನ್ನು (ಕಾಸಕ್ಕಿ) ತಂದು ಬೆಂಕಿಯಲ್ಲಿ ಕಾಯಿಸಿ ತೀಡಿ ಅದರ ಜೊತೆಗೆ ಎಳ್ಳನ್ನು ಬೆರಸಿ ಮನೆಗಳಿಗೂ ಕೊಟ್ಟಿಗೆ, ಹಟ್ಟಿಗಳಿಗೂ ಚೆಲ್ಲುವುದುಂಟು. "ಮನೆ ತುಂಬಾ ಧಾನ್ಯ ಬರಲಿ. ಕೊಟ್ಟಿಗೆ ತುಂಬಾ ಮೇವು ಬರಲಿ" ಎಂಬುದನ್ನು ಸಾಂಕೇತಿಕವಾಗಿ ಈ ಪ್ರದೇಶದ ಜನ ಆಚರಿಸಿದರೆ: ಮನೆಯ ಮೇಲೆ ತಂದಿರಿಸಿದ್ದ ಭತ್ತದ ಸೂಡಿಯನ್ನು ಮನೆಯ ಜಯಮಾನ ದೀಪಾವಳಿಯ ದಿನ ಹೊರತೆಗೆದು ಬಡಿದು ಆ ಭತ್ತವನ್ನು ಕಣಜಕ್ಕೆ ಹಾಕುವುದು ಜೊತೆಗೆ ಹೊಸಕ್ಕಿ ಊಟಮಾಡುವ ಸಂಪ್ರದಾಯ ಮಂಗಳೂರಿನ ತುಳು ಮಾತಾಡುವ ಕೆಲವರಲ್ಲಿ ರೂಢಿಯಲ್ಲಿದೆ. ಇದೆಲ್ಲದರ ಸಂಕೇತ ಹುಲುಸಾದ ಬೆಳೆಯನ್ನರಸುವುದು.

ಅಡಿ ಟಿಪ್ಪಣಿ :

1) ಎ. ಮುರೆಗೆಪ್ಪ (ಸಂ.), ದಕ್ಷಿಣ ಭಾರತೀಯ ಜಾನಪದಕೋಶ, ಪು.53
2) ಬಿ.ಎಸ್.. ತಲ್ವಾಡಿ, ಜಾನಪದ ಕಲರವ, ಪು.4
3) ಅದೇ. ಪು.05
4) ಅದೇ. ಪು.06
5) ಅದೇ. ಪು.08
6) ಅದೇ. ಪು.08
7) ಅದೇ. ಪು.09
8) ಅದೇ. ಪು.05
9) ಅದೇ. ಪು.08

ಆಕರ ಗ್ರಂಥಗಳು :

01. ಎ. ಮುರುಗೆಪ್ಪ (ಸಂ.), ದಕ್ಷಿಣ ಭಾರತೀಯ ಜಾನಪದ ಕೋಶ, 2000

02. ಬಿ.ಎಸ್. ತಲ್ವಾಡಿ, ಜಾನಪದ ಕಲರವ, ಜಾನಪದ ಕಲರವ ಪ್ರಕಾಶನ, ಬೆಂಗಳೂರು, 2003

ಪರಮಾರ್ಶನ ಗ್ರಂಥಗಳು :

1. ಎಂ ಚಿದಾನಂದಮೂರ್ತಿ, ಜನ – ಜನಪದ – ಜಾನಪದ, ಕರ್ನಾಟಕ ಬುಕ್ ಹೌಸ್, ಬೆಂಗಳೂರು, 2002.
2. ವಿ.ಎನ್. ಭಟ್, ಭಾರತೀಯ ಹಬ್ಬಗಳ ವೈಶಿಷ್ಟ್ಯ, ವಿಶ್ವನಾಥ ಪ್ರಕಾಶನ ಶಿವಮೊಗ್ಗ, 2002.
3. ಸ.ಚಿ. ರಮೇಶ್, ನಾ ಕಂಡಂತೆ ಮಲೆನಾಡು, 2008.
4. ನಂಪೆ ದೇವರಾಜ, ಆದ್ರೆ ಮಳೇಲಿ ಆದವನೆ ಗಂಡ, ಮಾತುಕತೆ ಪ್ರಕಾಶನ, ತೀರ್ಥಹಳ್ಳಿ, ಶಿವಮೊಗ್ಗ, 2017.
5. ಎ.ವಿ. ನಾವಡ(ಸಂ.), ಕರಾವಳಿ ಜಾನಪದ, ಪೈ ಕಾಲೇಜು ಎಜ್ಯುಕೇಶನ್ ಕ್ಯಾಂಪಸ್, ಉಡುಪಿ, 2007.
6. ಕೆ.ಜಿ. ಗುರುಮೂರ್ತಿ, ಕರ್ನಾಟಕದ ಜಾನಪದ ಹಬ್ಬಗಳು ಮತ್ತು ಅವುಗಳ ಸಾಂಸ್ಕೃತಿಕರಣ, 2008.

***

ಏಕೀಕರಣ ಕರ್ನಾಟಕದ ಭಾಷಿಕ ಚಳವಳಿಗಳು

ಪ್ರೊ. ಹೊನ್ನರಾಜು ಎಸ್. ವಿ.

ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ವಿಭಾಗ,

ಕೆಎನ್‌ವಿವಿಎಸ್ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ,

ಕಿತ್ತೂರು, ಬೆಳಗಾವಿ. ಕರ್ನಾಟಕ.

ಭಾಷೆಯ ವಿಚಾರಕ್ಕೆ ಬಂದರೆ ಅದೊಂದು ಸಾಂಸ್ಕೃತಿಕ ಮೊತ್ತವೇ ಸರಿ. ಅದರ ಆಳ – ಅಗಲಗಳನ್ನು ಅಷ್ಟು ಸುಲಭವಾಗಿ ಹಿಡಿತಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಕನ್ನಡಿಗರ ಸಂದರ್ಭವನ್ನು ತೆಗೆದುಕೊಂಡರೂ ಕನ್ನಡ ಭಾಷೆ ಇತರ ಭಾಷಿಕರು ಅಚ್ಚರಿ ಪಡುವಂತಹ ಸಂಪತ್ತನ್ನೇ ನೀಡಿರುವುದು ಅತಿಶಯೋಕ್ತಿಯಲ್ಲ. ಭಾಷಿಕವಾಗಿ ಕನ್ನಡಿಗರು ಹೆಮ್ಮೆಪಟ್ಟುಕೊಳ್ಳಬೇಕಾದ ಸಾಹಿತ್ಯ, ಚರಿತ್ರೆ, ಸಂಸ್ಕೃತಿ, ವಿಚಾರಗಳು ಅನೇಕ. ಅಂತೆಯೇ ಅದರ ಪ್ರಾಚೀನತೆಯ ನೋಟದಿಂದಲೂ ಹಲವು ಶಾಸ್ತ್ರೀಯತೆಯನ್ನು ಮೀರಿದ ದೇಸೀಯತೆಗಳನ್ನು ಪಡೆದ ಭಾಷೆ ಕನ್ನಡ. ಆ ಮೂಲಕ ತನ್ನ ಜಡತೆಯ ಪೊರೆಯನ್ನು ಕಳಚಿ ಭಾಷಿಕ ಪರಿಚಲನೆಯನ್ನು ಹರಿಸಿದ ಸತ್ವ ಕನ್ನಡದ್ದು. ತಾವು ವಾಸ ಮಾಡುತಿದ್ದ – ಮಾಡಿತ್ತಿರುವ ತಾಣಗಳ ಉಲ್ಲೇಖಗಳಿಂದ ಹಿಡಿದೂ ಚಾರಿತ್ರಿಕವಾದ ಹರಿವಿನಿಂದ ಕನ್ನಡಿಗರು ತಮ್ಮನ್ನು ತಾವು ಗುರ್ತಿಸಿಕೊಳ್ಳುವಂತೆ ಆಗಿದ್ದು ಭಾಷೆಯ ಮೂಲಕವೆ. ಆ ಭಾಷೆಯ ಮೂಲಕ ಕೇವಲ ಸಾಂಸ್ಕೃತಿಕವಾಗಿಯಷ್ಟೇ ಅಲ್ಲದೇ ರಾಜಕಾರಣದ ನೆಲೆಗಳನ್ನು ಸಾಕ್ಷಾತ್ಕರಿಸಿಕೊಂಡ ಕನ್ನಡಿಗರ ಏಳುಬೀಳುಗಳು ಅನೆಕ. ಏಕೀಕರಣ ಸಂದರ್ಭದಲ್ಲಿ ಕನ್ನಡಕ್ಕಾಗಿ ನಡೆದ ಚಳವಳಿಗಳನ್ನು ಈ ಹಿನ್ನೆಲೆಯಲ್ಲಿ ಒಂದು ಕಡೆಗೆ ತಂದು ಪರಶೀಲಿಸುವ ಉದ್ದೇಶ ಈ ಲೇಖನದ್ದು.

ಪ್ರಮುಖ ಪದಗಳು :

ಕನ್ನಡ – ಕನ್ನಡಿಗ –ಕರ್ನಾಟಕ, ಪ್ರಾಚೀನ, ಏಕೀಕರಣ, ಬೌದ್ಧಿಕ, ಭೂಪ್ರದೇಶ, ಸಂವೇದನೆ, ಸಾಂಸ್ಕೃತಿಕ,
ಚಳವಳಿ, ಪ್ರಗತಿಪರ, ಅಧಿವೇಶನ, ಚಲನಚಿತ್ರ, ಸಂಕುಚಿತ, ಪ್ರಾದೇಶಿಕ, ಸಂಘಟನೆ

ಸಂಶೋಧನೆಯ ವ್ಯಾಪ್ತಿ :

ಕನ್ನಡ – ಕನ್ನಡಿಗ–ಕರ್ನಾಟಕ ಈ ಮೂರು ಪರಿಕಲ್ಪನೆಗಳ ದೃಷ್ಠಿಯಿಂದ ಕಳೆದ ಶತಮಾನವನ್ನು ಏಕೀಕರಣಪೂರ್ವ ಹಾಗೂ ಏಕೀಕರಣೋತ್ತರ ಕರ್ನಾಟಕಗಳೆಂದು ಎರಡು ಘಟ್ಟಗಳನ್ನಾಗಿ ವಿಭಾಗಿಸಲಾಗಿದೆ. ಛಿದ್ರಗೊಂಡ ಕನ್ನಡ ಮಾತನಾಡುವ ಭೂಪ್ರದೇಶಗಳು ಹಾಗೂ ಕನ್ನಡ ಭಾಷಿಕರು ಒಂದೇ ಆಡಳಿತ ಪರಿಧಿಗೆ ಬರಲು ಹಾತೊರೆದದ್ದು ಮೊದಲನೆಯ ಘಟ್ಟ. ಇದನ್ನು ಕರ್ನಾಟಕದ ಏಕೀಕರಣ ಪ್ರಕ್ರಿಯೆಗಳಲ್ಲಿ ಸೇರಿಸಬಹುದು. ನಿರ್ಧಿಷ್ಟ ಭೂಪ್ರದೇಶದಲ್ಲಿ ವಾಸಿಸುವ ಜನರು ತಾವು ಮಾತನಾಡುವ ಭಾಷೆಯ ಮುಖೇನ ಒಂದುಗೂಡಲು ಪ್ರಯತ್ನಿಸಿದ ಪ್ರಕ್ರಿಯೆಯೇ ಏಕೀಕರಣ. ಇದು 1956 ರ ನವೆಂಬರ್ 1 ರಂದು ಪರಿಪೂರ್ಣವಾಗುವ ಪ್ರಕ್ರಿಯೆ. ಆದರೆ ಎರಡನೇ ಘಟ್ಟ ಏಕೀಕರಣೋತ್ತರ ಕರ್ನಾಟಕಕೆ ಸಂಬಂಧಿಸಿದ್ದು. ಇದು ಈ ಹೊತ್ತಿನ ಸಂದರ್ಭವನ್ನೂ ಒಳಗೂ ಮಾಡಿಕೊಂಡು ಮುಂದುವರೆಯುತ್ತಿರುವ ಭಾಷಿಕ ಚಳುವಳಿಗಳ ಸ್ವರೂಪದ್ದು.

ವಿವರಣೆ :

ಏಕೀಕರಣೋತ್ತರ ಕರ್ನಾಟಕವನ್ನು ಪ್ರಗತಿಪರವಾಗಿ ರೂಪಿಸಲು ಬೌದ್ಧಿಕ ಹಾಗೂ ಭೌತಿಕ ಈ ಎರಡೂ ನೆಲೆಗಳಲ್ಲೂ ಭಾಷೆಯ ಮೂಲಕವೇ ಪ್ರಯತ್ನಗಳು ನಡೆದಿವೆ. ಬೌದ್ಧಿಕವಾಗಿ ಕರ್ನಾಟಕವನ್ನು ರೂಪಿಸಲು ಛಿದ್ರಗೊಂಡಿದ್ದ ಕನ್ನಡ ಪ್ರದೇಶಗಳಲ್ಲಿನ ಸೃಜನಶೀಲ ಸಾಹಿತ್ಯದ ಸೃಷ್ಟಿ ಪ್ರಧಾನವಾದದ್ದು. ಇದು ಕನ್ನಡದ ಸಂವೇದನೆಯನ್ನು ಕಾಯ್ದುಕೊಂಡು ಬಂದ ಸಾಂಸ್ಕೃತಿಕ ಪ್ರಕ್ರಿಯೆ. ಈ ಪ್ರಕ್ರಿಯೆಯು ಕವಿರಾಜಮಾರ್ಗಕಾರನಿಂದ ಮೊದಲ್ಗೊಂಡು ಬೇಂದ್ರೆ ಕುವೆಂಪು ಅವರ ಸಾಹಿತ್ಯ ಸೃಷ್ಟಿಯವರೆಗೂ ಮುಂದುವರೆಯುವಂಥದ್ದು. ಅಂದರೆ ನಾಡು ನುಡಿ ಕನ್ನಡಿಗರನ್ನು ಕುರಿತಂತೆ ಸಂಸ್ಕೃತ, ಇಂಗ್ಲೀಷ್ ಇನ್ನತರ ಭಾಷೆಗಳನ್ನು ಎದುರುಗೊಳ್ಳುವುದರೊಂದಿಗೆ ಕನ್ನಡದ ಅನನ್ಯತೆಯನ್ನು ಉಳಿಸಿಕೊಳ್ಳಲು ನಡೆಸಿದ ಪ್ರಯತ್ನ. 12ನೇ ಶತಮಾನದ ಎಲ್ಲಾ ವರ್ಗಗಳ ವಚನಕಾರರು ಕನ್ನಡ ಸಂವೇದನೆಯನ್ನು ಮೆರೆದದ್ದು ಮಹತ್ವಪೂರ್ಣವಾದದ್ದು. ಎಲ್ಲಾ ರೀತಿಯ ಸಂವಹನ ಅನುಸಂಧಾನಗಳಿಗೆ ಕನ್ನಡ ಭಾಷೆಯೊಂದನ್ನೇ ಮಾಧ್ಯಮವನ್ನಾಗಿಸಿದ್ದು ವಚನಗಳ ವಚನಕಾರರ ಹೆಗ್ಗಳಿಕೆ. ಈ

ದಿಸೆಯಲ್ಲಿ ವಚನಕಾರರನ್ನು ಮೊದಲ ಭಾಷಿಕ ಹರಿಕಾರರುಎಂದರೆ ತಪ್ಪಾಗಲಾರದು. ನಂತರದ ನವೋದಯ, ಪ್ರಗತಿಶೀಲರ ಸಾಹಿತ್ಯ ಸೃಷ್ಟಿ ಆಧುನಿಕವಾದ ಸ್ವಾತಂತ್ರ್ಯ, ಏಕೀಕರಣ ಪ್ರಕ್ರಿಯೆಗಳಿಗೆ ಪ್ರೇರಣೆಯಾಗಿದ್ದುದು ಗಮನಾರ್ಹ. ಇಂಥ ಪ್ರೇರಣೆ ಪ್ರಯತ್ನಗಳಿಂದ ವಸಾಹತು ಕಾಲದಲ್ಲಿ ತುಂಡಾಗಿದ್ದ ಕನ್ನಡದ ಭೂಪ್ರದೇಶಗಳು ಒಂದುಗೂಡಿದವು. ಹೀಗೆ ಒಂದುಗೂಡಿದ್ದೂ ಸಹ ಕನ್ನಡದ ಚಳುವಳಿಯೇ ಆದರೂ ಭಿನ್ನ ಸ್ವರೂಪದ ಚಳುವಳಿಯ ಪ್ರಕ್ರಿಯೆಗಳು ಕಾಣಿಸಿಕೊಂಡದ್ದು ಮಾತ್ರ ಏಕೀಕರಣೋತ್ತರ ಕರ್ನಾಟಕದಲ್ಲಿಯೇ.

ಸಾಂಸ್ಕೃತಿಕವಾಗಿ ದತ್ತವಾದ ಕನ್ನಡದ ಸಂವೇದನೆಗಳನ್ನು ತನ್ನದಾಗಿಸಿಕೊಂಡಿದ್ದ ರಾಜಕಾರಣವು ಸೋಲನ್ನು ಅನುಭವಿಸಲು ಆರಂಭಿಸಿದ್ದು, ಏಕೀಕರಣದ ಅನಂತರವೇ. ಏಕೆಂದರೆ ಆಡಳಿತದ ದೃಷ್ಟಿಯಿಂದ ಒಂದುಗೂಡಿದ ವಿಭಿನ್ನ ಪ್ರದೇಶಗಳ ಕನ್ನಡಿಗರ ಅಭಿರುಚಿ ಸಂಸ್ಕೃತಿಗಳನ್ನು ಬಗೆಹರಿಸಲು ರಾಜಕಾರಣಿಗಳು ಸೋತರು. ಇದರ ಪರಿಣಾಮದಿಂದಾಗಿಯೇ ಕನ್ನಡ ಚಳುವಳಿ ಭಿನ್ನ ರೀರಿಯಲ್ಲಿ ಕಾಣಿಸಿಕೊಂಡಿದ್ದು. 1960 ರ ದಶಕದಲ್ಲಿ ಕನ್ನಡ–ಕನ್ನಡಿಗ–ಕರ್ನಾಟಕತ್ವದ ಆಶೋತ್ತರಗಳ ಈಡೇರಿಕೆಗಾಗಿ ಕನ್ನಡಿಗರು ಮತ್ತೆ ಸಂಘಟಿತರಾಗುವ ಅನಿವಾರ್ಯತೆ ಹುಟ್ಟಿಕೊಂಡಿತು. ಏಕೀಕೃತ ಕರ್ನಾಟಕವು ಸಮಗ್ರವಾಗಿ ಎಲ್ಲಾ ಕನ್ನಡ ಪ್ರದೇಶಗಳನ್ನು ಒಂದೇ ಆಡಳಿತದ ತೆಕ್ಕೆಗೆ ತೆಗೆದುಕೊಂಡಿರಲಿಲ್ಲ. ಜತ್, ಅಕ್ಕಲಕೋಟೆ, ಕೊಲ್ಹಾಪುರ, ಕಾಸರಗೂಡು, ಆಲೂರು, ಆದವಾನಿ, ರಾಯದುರ್ಗ, ಮಡಕಶಿರ, ಪಾವಗಡ, ಗೂಳ್ಯಂ, ಪೆದಹರಿವಾಣ, ಕೌತಾಳ್, ಬದನೆಹಾಳ್, ಹೊಸೂರು, ನೀಲಗಿರಿ ಮೊದಲಾದವು ಕನ್ನಡಮಯವಾಗಿರಲಿಲ್ಲ. ಬದಲಾಗಿ ತೆಲುಗು ತಮಿಳು, ಮಲೆಯಾಳಂ, ಮರಾಠಿ, ಮೊದಲಾದ ಭಾಷಿಕರೊಂದಿಗೆ ಆಯಾ ರಾಜ್ಯ ಸರ್ಕಾರಗಳ ಒತ್ತಡಗಳಿಗೆ ಮಣಿಯುವಂತೆ ಆಗಿತ್ತು. ಏಕೀಕರಣವು ಸ್ಥಳೀಯ ಗಡಿಭಾಗಗಳ ಕನ್ನಡಿಗರನ್ನು ಭಾಷಾ ಅತ್ಯಾಚಾರಗಳಿಗೆ ಒಳಗಾಗುವಂತೆ ಮಾಡಿತು. ಈ ಕುರುತ ಸಮಸ್ಯೆಗಳು ಕರ್ನಾಟಕ ಸರ್ಕಾರದ ಆಡಳಿತ ನೀರಿಗೆ ವಿರುದ್ಧವಾಗಿ ಪರಿಣಮಿಸಿದುವು. ನಾಡಿನ ರಾಜಧಾನಿಯೂ ಆಡಳಿತ ಯಂತ್ರದ ಕೇಂದ್ರ ತಾಣವೂ ಆಗಿದ್ದ ಬೆಂಗಳೂರು ನಗರ ಕನ್ನಡೇತರ ಪ್ರಾಭಲ್ಯದ ಕೇಂದ್ರವಾಗಿತ್ತು. ಹಳೆಯ ಮೈಸೂರು, ಮುಂಬಯಿ, ಬಾಂಬೆ, ಹೈದರಾಬಾದ್ ಹಾಗೂ ಕೊಡಗು ಪ್ರದೇಶಗಳಲ್ಲಿನ ಕನ್ನಡಿಗರ ಮನೋಚಿಂತನೆಗಳನ್ನು ಅರಿಯುವಲ್ಲಿ ರಾಜಕಾರಣವು ವಿಫಲವಾಯಿತು. ಸಾಂಸ್ಕೃತಿಕವಾಗಿ ಒಪ್ಪುತ್ತಿದ್ದ ಕರ್ನಾಟಕ ಎಂಬ ಹೆಸರಿಗೆ ಬದಲಾಗಿ ವಿಶಾಲ ಮೈಸೂರು ರಾಜ್ಯವೆಂದು ನಾಮಕರಣ ಮಾಡಿದ್ದು (1956) ಕನ್ನಡಿಗರಲ್ಲಿ

ಆಘಾತವನ್ನುಂಟು ಮಾಡಿತು. ಇದಕ್ಕೆ ಮುಂಬಯಿ ಕರ್ನಾಟಕ ಕನ್ನಡಿಗರು ತೀವ್ರವಾಗಿ ಪ್ರತಿಕ್ರಿಯಿಸಿದ್ದೂ ಉಂಟು. ಇಂಥ ಹಲವು ಹತ್ತು ಕಾರಣಗಳು ನಾಡಿನ ಏಕೀಕರಣವನ್ನು ಸಮಗ್ರವಾಗಿ ಸಮಾಧಾನಕರವಾಗಿ ಒಪ್ಪುವಂತೆ ಮಾಡಿರಲಿಲ್ಲರಿದರ ಪರಿಣಾಮವೇ ಬೆಂಗಳೂರಿನ ಪರಿಸರದಲ್ಲಿ ಕನ್ನಡ ಚಳುವಳಿಯು ಸಂಘಟಿತ ರೂಪವನ್ನು ಪಡೆದುಕೊಂಡಿದ್ದು. ನಾಡಿನ ಉಳಿದೆಡೆಗಳಿಗೆ ಅದು ಕ್ರಮೇಣ ಪಸರಿಸಿತು. ಆದರೆ ಬೆಂಗಳೂರು ಕೇಂದ್ರಿತ ಕನ್ನಡ ಚಳುವಳಿಗಳ ಪಾಲು ದೊಡ್ಡದು. ಈ ಹಿನ್ನೆಲೆಯಲ್ಲಿ ಸಂಘಟನೆಗಳನ್ನು ಕಟ್ಟಿಕೊಡು ಮುಂದೆ ಬಂದವರು ಬೆರೆಳೆಣಿಕೆಯಷ್ಟು ಮಾತ್ರ . ಅವರಲ್ಲಿ ಕೋಣಂದೂರು ಲಿಂಗಪ್ಪ, ಅ.ನ ಕೃಷ್ಣರಾವ್, ಮ. ರಾಮಮೂರ್ತಿ, ನಾಡಿಗೇರ ಕೃಷ್ಣರಾವ್, ಮೈ. ಸೂ ನಟರಾಜ, ಕರ್ಲಮಂಗಲ ಶ್ರೀಕಂಠಯ್ಯ, ಬೆ.ನಿ ಈಶ್ವರಪ್ಪ, ತಿ.ತಾ ಶರ್ಮ, ಮೊದಲಾದವರು ಪ್ರಮುಖರು. ಇವರೇ 1960 ರದಶಕದ ಆರಂಭಿಕ ಕನ್ನಡ ಚಳವಳಿಯಲ್ಲಿ ತೊಡಗಿಸಿಕೊಂಡವರು.

ರಾಮ ಮನೋಹರ ಲೋಹಿಯಾ ಅವರ ಭಾಷಿಕ ಸಿದ್ಧಾಂತಗಳಿಂದ ಪ್ರೇರಿತರಾಗಿದ್ದ ಶಾಂತವೇರಿ ಗೋಪಾಲಗೌಡರು ತಮ್ಮದೇ ಆದ ರೀತಿಯಲ್ಲಿ ಕನ್ನಡಕ್ಕಾಗಿ ಚಿಂತನೆ ನಡೆಸಿದ್ದರು. ರಾಜಕಾರಣದಲ್ಲಿ ಇವರು ನಡೆಸಿದ್ದ ಪ್ರಯತ್ನಗಳಂತೆಯೇ ಸಾಹಿತ್ಯಿಕವಾಗಿಯೂ ಕುವೆಂಪು ಮೊದಲಾದವರು ಚಿಂತನೆ ನಡೆಸಿದ್ದರು. ಪ್ರಗತಿಶೀಲರ ವಲಯದಲ್ಲಿ ಅ ನ ಕೃ ಅವರಾಧಿಯಾಗಿ ಅನೇಕರು ಗಮನಾರ್ಹ. ಶಾಂತವೇರಿಯವರ ಶಿಷ್ಯರಾಗಿದ್ದ ಕೋಣಂದೂರು ಲಿಂಗಪ್ಪ ಬೆಂಗಳೂರಿಗೆ ಬಂದಾಗ ತಮಿಳರಿಂದ ಅಪಮಾನಕ್ಕೆ ಒಳಗಾದರು. ಆ ಅಪಮಾನದ ಪರಿಣಾಮವಾಗಿ ಅವರು "ಕರ್ನಾಟಕ ಯುವಜನ ಸಭಾ" ವನ್ನು ಹುಟ್ಟುಹಾಕುವಂತೆ ಮಾಡಿತು. 1957ರ ವೇಳೆಗೆ ಲೋಹಿಯಾ ಕರೆಯನ್ನು ಅನುಸರಿಸಿ "ಆಂಗ್ರೇಜಿ ಹಟಾವೋ ಚಳವಳಿ" ಆರಂಭಗೊಂಡಿತು. ಮೈಸೂರಿನಲ್ಲಿ ಕುವೆಂಪು ಅವರೂ ಸಹ ಈ ಕರೆಗೆ ಸ್ಪಂದಿಸಿದ್ದರು. ಇಂಗ್ಲೀಷ್ ಪ್ರಾಧ್ಯಾಪಕರ ರಾಷ್ಟ್ರೀಯ ಸಭೆಯೊಂದು ಮೈಸೂರಿನಲ್ಲಿ ನಡೆಯಿತು. ಇದಕ್ಕೆ ಪ್ರತಿಕ್ರಿಯಿಸಲು ಕೋಣಂದೂರು ಲಿಂಗಪ್ಪ, ಪೂ ಚಂ ತೇ, ಕೆ. ಹೆಚ್ ಶ್ರೀನಿವಾಸ್, ಕಡಿದಾಳ್ ಶಾಮಣ್ಣ, ಮೊದಲಾದ ವಿದ್ಯಾರ್ಥಿಗಳಿಗೆ ಕುವೆಂಪು ಪ್ರೇರಣೆ ನೀಡಿದ್ದರು. ಈ ಪ್ರತಿಕ್ರಿಯೆಗೆ ಇಂಗ್ಲೀಷ್‌ನಲ್ಲಿಯೇಪ್ರತಿಭಟನಾ ಕರಪತ್ರಗಳನ್ನು ರಚಿಸುವುದು ಅನಿವಾರ್ಯವಾಯಿತು. ಇಂಗ್ಲೀಷಿನ ವಿರುದ್ಧ ಇಂಗ್ಲೀಷ್ ಕರಪತ್ರವೊಂದನ್ನು ಬರೆದುಕೊಟ್ಟವರು ಯು ಆರ್ ಅನಂತಮೂರ್ತಿ ಅವರು.ಇಂಗ್ಲೀಷ್ ಪ್ರಾಧ್ಯಾಪಕರ ಸಭೆಯಲ್ಲಿ ಕನ್ನಡದ ಯುವಕರು ಈ ಕರಪತ್ರಗಳನ್ನು ಹಂಚುವುದರ ಮೂಲಕ ಕನ್ನಡದ ಪ್ರಾಶಸ್ತ್ಯವನ್ನು ಕುರಿತು ಗಮನವನ್ನು ಸೆಳೆದಿದ್ದರು. ಇಂಥ ಚಟುವಟಿಕೆಗಳನ್ನು

ಹುಟ್ಟುಹಾಕಿದ ಮೊಟ್ಟಮೊದಲ ಯುವಕರ ಸಂಘಟನೆಯೇ 'ಕನ್ನಡ ಯುವಜನ ಸಭಾ'. ಇದು ಮೈಸೂರಿನ ಇಂದಿನ ದಾಸ್ ಪ್ರಕಾಶ್ ಹೋಟೆಲ್‌ನ ಬಳಿ ಮೊದಲ ಸಭೆಸೇರಿ ಕನ್ನಡದ ಅಳಿವು ಉಳಿವಿನ ಬಗ್ಗೆ ಚಿಂತನೆ ನಡೆಸಿತ್ತು. ಇದು ಕನ್ನಡ ಚಳವಳಿಗಳ ಚರಿತ್ರೆಯಲ್ಲಿಯೇ ಮೊದಲ ಸಂಘಟನೆಯಾಗಿದೆ. ಮೈಸೂರಿನಲ್ಲಿ ವ್ಯಾಸಂಗ ಮಾಡಿತಿದ್ದ ಲಿಂಗಪ್ಪ ಮೊದಲಾದ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ಕನ್ನಡತನವನ್ನು ಮೂಡಿಸುವುದಕ್ಕೆ 'ಸಭಾ'ದ ವೇದಿಕೆಯನ್ನು ಬಳಸಿಕೊಂಡರು. ಬೆಂಗಳೂರಿನಲ್ಲಿ ಚಳವಳಿಯನ್ನು ಹೂಡುವುದಕ್ಕೆ ಮೊದಲು ನಾಡಿನ ಇತರೆ ಜಿಲ್ಲೆ ತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ 120 ಕ್ಕೂ ಹೆಚ್ಚಿನ ಸಭಾದ ಶಾಖೆಗಳನ್ನು ತೆರೆದು ಸಂಘಟಿಸಿದ್ದು ಗಮನಾರ್ಹ ಸಂಗತಿ. 1959 ರ ವೇಳೆಗೆ ಕನ್ನಡದ ಸ್ಥಿತಿ ಗತಿಗಳ ಸುಧಾರಣೆಗಾಗಿ ಕನ್ನಡಿಗರು ಸಂಘಟಿತರಾಗುವುದು ಅನಿವಾರ್ಯ ಎಂಬ ವಾತಾವರಣವನ್ನು ಮೂಡಿಸಲಾಗಿತ್ತು. ಇದಕ್ಕೆ ಸಾಹಿತಿ ಅ ನ ಕೃ ಅವರ ಪ್ರಯತ್ನ, ಪ್ರವಾಸ ಕಾರ್ಯಕ್ರಮಗಳು ಹೆಚ್ಚಿನ ಹುರುಪನ್ನು ಮೂಡಿಸಿದವು. ಏಕೆಂದರೆ ಅ ನ ಕ್ರ ಅವರನ್ನು ಮುಂದಿನ ಕನ್ನಡ ಸಾಹಿತ್ಯ ಸಮ್ಮೇಳನದ ಅದ್ಯಕ್ಷರೆಂದು ಕನ್ನಡ ಸಾಹಿತ್ಯ ಪರಿಷತ್ತು ಘೋಷಿಸಿತ್ತು. ಇವರು ಸಮ್ಮೇಳನಾಧ್ಯಕ್ಷರ ಭಾಷಣದಲ್ಲಿ ಕನ್ನಡ ಭಂಟರ ಅವಶ್ಯಕಥೆಯನ್ನು ಒತ್ತಿ ಹೇಳಿದ್ದು ಸಭಾದ ಯುವಕರನ್ನು ಪಾಲ್ಗೊಳ್ಳುವಂತೆ ಮಾಡಿತ್ತು. ಸಮ್ಮೇಳನದಲ್ಲಿದ್ದ ಈ ಯುವಕರು ಕನ್ನಡ ಯುವಕರು ಕನ್ನಡ ಯುವಜನ ಸಭೇಯನ್ನು ವರಕವಿ ಬೇಂದ್ರೆ ಅವರಿಂದ ವಿದ್ಯುಕ್ತವಾಗಿ ಉದ್ಘಾಟಿಸಿದ್ದು ದಾಖಲಾರ್ಹ. ಅಲ್ಲದೇ ಲಿಂಗಪ್ಪ ಸಭಾದ ಸಂಚಾಲಕರಾಗಿ ನಾಡಿನ ವಿವಿದ ಕಡೆಗಳಲ್ಲಿ ಅ ನ ಕೃ ಅವರಿಂದ ಭಾಷಣ ಮಾಡಿಸಿ ಜಾಗೃತಿ ಮೂಡಿಸಿದರು. ಮುಂದೆ ಬೆಂಗಳೂರಿನಲ್ಲಿ ಸಭೇ ಸೇರಿ 'ಸಾಹಿತ್ಯ ಕುಟೀರ' ದಡಿಯಲ್ಲಿ ಕನ್ನಡದ ಕೆಲಸಗಳಿಗಾಗಿ ರೂಪು – ರೇಷೆಗಳನ್ನು ಸಿದ್ದಪಡಿಸಲಾಯಿತು. ಇದರಲ್ಲಿ ಬಹುಪಾಲು ಹಿರಿಯ ಸಾಹಿತಿ, ಕಲಾವಿದರು ಭಾಗವಹಿಸಿದ್ದರು. ಸಭಾದವರು ಹಿರಿಯರ ಮಾರ್ಗದರ್ಶನ ಪಡೆದು ಆಲೂರು ವೆಂಕಟರಾಯರ ಕರೆಗೆ ಓಗೊಟ್ಟು ನವೆಂಬರ್ ತಿಂಗಳಲ್ಲಿ ರಾಜ್ಯೋತ್ಸವ ಆಚರಿಸಿದ್ದು ಗಮನಾರ್ಹ. ಅಲ್ಲದೇ ಬೆಂಗಳೂರಿನಲ್ಲಿ ಕನ್ನಡಿಗರನ್ನು ಸಂಘಟಿಸಿ ಪ್ರತಿಕ್ರಯಿಸುವಂತೆ ಮಾಡಲು ಸಭಾದ ಯುವಕರು ಕನ್ನಡ ದಿನವನ್ನು ಆಚರಿಸಲು ಕರೆ ಕೊಟ್ಟರು. ಅದರಂತೆ 23–11–1961 ರಂದು ನಾಡು–ನುಡಿಗಳ ಬಗ್ಗೆ ಎಚ್ಚರಿಸಲಾಯಿತು. ಇದಾದ ನಂತರ ದಾವಣಗೆರೆಯಲ್ಲಿ ಸಭೆ ಕರೆದು ಸಭಾದ ಬೃಹತ್ ಸಮಾವೇಶವೊಂದನ್ನು ನಡೆಸಲು ಸಿದ್ದತೆಗಳನ್ನು ಮಾಡಲಾಯಿತು. ಇದರ ಪರಿಣಾಮವೇ ಬೆಂಗಳೂರಿನಲ್ಲಿ ನಡೆದ ಮೊದಲ ಸಭಾದ ಮೊದಲ ಬೃಹತ್ ಅಧಿವೇಶನ. ಈ ಹಿನ್ನೆಲೆಯಲ್ಲಿ ನಾವು

ಕೆಲವು ಕನ್ನಡಪರ ಚಳುವಳಿಗಳನ್ನು ಗುರ್ತಿಸಬಹುದು. ಅವುಗಳೆಂದರೆ ಕನ್ನಡ ಯುವಜನ ಸಭಾದ ಮೊದಲ ಅಧೀವೇಶನ, ಕನ್ನಡ ಜಾಗೃತಿ ಪರಿಷತ್ ಮತ್ತು ಸಂಯುಕ್ತ ರಂಗ, ಕನ್ನಡ ಚಲನಚಿತ್ರ ಮತ್ತು ಕನ್ನಡ ಚಳವಳಿ, ಮ. ರಾಮಮೂರ್ತಿ ಮತ್ತು ಕನ್ನಡ ಚಳವಳಿ, ಮಹಾಜನ್ ಆಯೋಗ, ವಾಟಾಳ್ ನಾಗರಾಜ್ ಮತ್ತು ಕನ್ನಡ ಚಳವಳಿ, ಗೋಕಾಕ್ ಚಳವಳಿ, ಕನ್ನಡ ದೇಶ ಮತ್ತು ಕರ್ನಾಟಕ ಪ್ರಗತಿರಂಗ, ಸರೋಜಿನಿ ಮಹಿಷಿ ವರದಿ, ಕನ್ನಡ ಶಕ್ತಿ ಕೇಂದ್ರ, ಕನ್ನಡ ಸಂಘರ್ಷ ಸಮಿತಿ, ಕನ್ನಡ ಸೇನೆ, ಕನ್ನಡ ರಕ್ಷಣಾ ವೇದಿಕೆ, ಕಾವೇರಿ ಕನ್ನಡ ಬಳಗ, ಕಟ್ಟೆ ಬಳಗ, ಕನ್ನಡ ರಣಧೀರರ ಪಡೆ, ಪುಲಿಕೇಶಿ ಕನ್ನಡ ಸಂಘ, ಕರ್ನಾಟಕ ಸಂರಕ್ಷಣಾ ವೇದಿಕೆ, ಮೊದಲಾದ ಸಂಘಟನೆಗಳು ತಮ್ಮನ್ನು ತಾವು ತೊಡಗಿಸಿಕೊಂಡಿವೆ.

ಕನ್ನಡ ಚಳವಳಿಗಳು ಮತ್ತು ಕನ್ನಡ ಹೋರಾಟಗಳಾಗಿದ್ದು 1990ರ ದಶಕದಿಂದೀಚೆಗೆ. ಕರ್ನಾಟಕದಲ್ಲೂ ರಾಜಕಾರಣಿಗಳ ಆಸೆ ಆಮಿಷಗಳಿಂದಾಗಿ ಕೋಮುವಾದಿ ಬೀಜಗಳು ಬಿತ್ತನೆ ಆದವು. ಭ್ರಷ್ಟಾಚಾರ ಮನೋಪ್ರವೃತ್ತಿಯ ರಾಜಕಾರಣಿಗಳು ಜನಸಾಮಾನ್ಯರನ್ನು ಶೋಷಿಸಲು ಕನ್ನಡ ಚಳವಳಿಗಳಿಗೆ ಹಿಂಸಾತ್ಮಕ ರೂಪವನ್ನು ಕೊಟ್ಟರು. ಕನ್ನಡಿಗರ ಕ್ಷಣಿಕವಾದ ಭಾಷಿಕ ಭಾವೋದ್ವೇಗಗಳು, ಜಾತಿ, ಧರ್ಮ, ಕೋಮು, ಜನಾಂಗ, ಪ್ರದೇಶ, ನೀರು ಮೊದಲಾದ ಸೂಕ್ಷ್ಮ ಸಂವೇದನೆಗಳಿಂದ ಬಂಡವಾಳವಾಗುವಂತೆ ಆಯಿತು. ಇವುಗಳನ್ನು ಬಳಸಿಕೊಂಡಿದ್ದರಿಂದಲೇ ಉರ್ದು ಗಲಾಟೆ, ಕಾವೇರಿ ಜಲವಿವಾದಗಳು, ಹಿಂಸಾತ್ಮಕವಾದದ್ದು. ಕನ್ನಡದ ಹೆಸರಿನಲ್ಲಿ ಕಿಡಿಗೇಡಿಗಳು ತಮಿಳು, ಮುಸ್ಲೀಂ ಸಹೋದರರ ಜೊತೆಗೆ ಕನ್ನಡಿಗರ ಪ್ರಾಣಗಳನ್ನೂ ತೆರುವಂತೆ ಮಾಡಿದರು. ಇಂಥ ಸನ್ನಿವೇಶಗಳಲ್ಲಿಯೇ ಕನ್ನಡ ಚಳವಳಿಗಳು ಕನ್ನಡ ಹೋರಾಟಗಳು ಎಂಬ ಭಿತ್ತಿಯನ್ನು ಅನಾವರಣಗೊಳಿಸಿದ್ದು. ಕೇಂದ್ರ ಸರ್ಕಾರದ ಸಾಮ್ರಾಜ್ಯಶಾಹೀ ಧೋರಣೆಯಿಂದಾಗಿ ಕರ್ನಾಟಕದಂಥ ರಾಜ್ಯಗಳು ತಮ್ಮ ಸಂಪನ್ಮೂಲಗಳನ್ನು ಬರಿದುಮಾಡಿಕೊಳ್ಳುತ್ತಿವೆ. ಜಪಾನ್ ಕೈಗಾರಿಕಾ ವಸಾಹತು, ಸಿಂಗಾಪುರ್ ಟೌನ್ಶಿಪ್, ಗ್ಯಾಟ್ ಒಪ್ಪಂದಗಳು, ಗಂಗಡಿಕಲ್ಲು ಅದಿರು ಯೋಜನೆ, ಮೊದಲಾದ ರೀತಿಗಳಲ್ಲಿ ಕನ್ನಡಿಗರು ಶೋಷಿತರಾಗುತಿದ್ದುದನ್ನು ಕನ್ನಡ ಚಳವಳಿಗಾರರು ಪ್ರತಿಭಟಿಸಿದ್ದು ಗಮನಾರ್ಹ. ಈ ನಿಟ್ಟಿನಲ್ಲಿ ಕರ್ನಾಟಕ ವಿಮೋಚನಾ ರಂಗ, ಪ್ರಜಾ ತಾಂತ್ರಿಕ ಜನರ ವೇದಿಕೆಗಳಂಥ ಸಂಘಟನೆಗಳ ಹಾಗೂ ಕಾರ್ಯಕರ್ತರ ಪಾತ್ರ ದೊಡ್ಡದು.

ಸಮಾರೋಪ:

ಸಂಕುಚಿತ, ಭಾಷಿಕ ಭಾವೋದ್ವೇಗಗಳಿಂದ, ಅತಿರೇಕದ ಭಾಷಾಭಿಮಾನದಿಂದ

ಕನ್ನಡ ಚಳವಳಿ, ಚಿಂತನೆಗಳು ಸೋತಿವೆ. ಆದ್ದರಿಂದಲೇ ಈ ಹೊತ್ತಿಗೂ ಶಿಕ್ಷಣ ರಂಗದಲ್ಲಿ ಕನ್ನಡ ಮಾಧ್ಯಮವಾಗಲೀ, ಕಾವೇರಿ ಜಲವಿವಾದವಾಗಲೀ, ಸರೋಜಿನಿ ಮಹಿಷಿ ವರದಿಯ ಅನುಷ್ಟಾನವಾಗಲೀ, ಇತ್ಯರ್ಥ ಆಗದೇ ಇರುವುದು. ಇವುಗಳ ಜಾರಿಗಾಗಿ ಸರ್ಕಾರಕ್ಕೆ ಬೇಕಿರುವುದು ಸಮಚಿತ್ತದ ಕನ್ನಡದ ಪ್ರೀತಿ, ಮುಂದಾಲೋಚಿತ ಕಾರ್ಯಕ್ರಮಗಳು. ಆಗ ಮಾತ್ರ ಭಾವಾವೇಶದ ಕರ್ನಾಟಕಕ್ಕಿಂತ ಸ್ವಾಭಿಮನಿ ಹಾಗೂ ಪ್ರಗತಿಪರವಾದ ಕರ್ನಾಟಕವನ್ನು ನೋಡಲು ಸಾದ್ಯ.

ಆಕರ ಗ್ರಂಥಗಳು :

1. ಭಾಷಾ ಚಳವಳಿಗಳು., ಸಿ ಆರ್ ಗೋವಿಂದರಾಜು., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
2. ಕನ್ನಡ ಚಳವಳಿಗಳು., ಸಿ ಆರ್ ಗೋವಿಂದರಾಜು., ಹಂಪಿ ಕನ್ನಡ ವಿಶ್ವ ವಿದ್ಯಾಲಯ ಹಂಪಿ,
3. ಕನ್ನಡ ಸೇನಾನಿ ಮಾ. ರಾಮಮೂರ್ತಿ., ಸಿ ಆರ್ ಗೋವಿಂದರಾಜು., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
4. ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳು., ಜಿ. ಆರ್. ತಿಪ್ಪೇಸ್ವಾಮಿ., ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ., ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತಗಂಗೋತ್ರಿ, ಮೈಸೂರು.
5. ಸಾಹಿತ್ಯ ಭಾರತೀ., ಎನ್ ಅನಂತರಂಗಾಚಾರ್., ಆಡಳಿತಾಧಿಕಾರಿ., ಕನ್ನಡ ಪುಸ್ತಕ ಪ್ರಾಧಿಕಾರ,ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು.
6. ಕನ್ನಡ ಸಾಹಿತ್ಯ ಚರಿತ್ರೆ., ತ ಶು ಶಾಮರಾಯ., ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ., ಗೋಕುಲಂ, 3ನೇ ಹಂತ, ಮೈಸೂರು

***

ಕುವೆಂಪು ಮತ್ತು ಅಧ್ಯಾತ್ಮ

ಶ್ರೀಪಾದ ಟಿ. ಭಟ್
ಸಹಾಯಕ ಪ್ರಾಧ್ಯಾಪಕ
ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾಲಯ, ತುಮಕೂರು

ಕುವೆಂಪು ಮೂಲತಃ ಒಬ್ಬ ಕವಿ, ಶ್ರೇಷ್ಠ ಕವಿ. **"ನಾನೃಷಿಃ ಕುರುತೇ ಕಾವ್ಯಂ"** ಎಂಬ ಮಾತಿದೆ. ಋಷಿ ಎಂಬುದಕ್ಕೆ ದ್ರಷ್ಟಾರ ಎಂಬ ಅರ್ಥವಿದೆ. ಅಧ್ಯಾತ್ಮದ ಒಂದು ಮಜಲನ್ನು ದಾಟದಿದ್ದರೆ ದ್ರಷ್ಟಾರನಾಗುವುದು ಸಾಧ್ಯವಿಲ್ಲ. ಅಧ್ಯಾತ್ಮ ಎಂದರೆ 'Immediate feeling of unity of the self with God' ಎಂಬ ವ್ಯಾಖ್ಯೆಯನ್ನು ನೀಡಲಾಗಿದೆ. ದೇವರದೊಂದಿಗಿನ ಆತ್ಮದ ಐಕ್ಯವೇ ಅಧ್ಯಾತ್ಮ. ಕಾಯಕ, ನಿಸರ್ಗ, ಅಣುಜೀವ ಪ್ರೇಮ, ಹೀಗೆ ಯಾವುದೇ ಶಾಶ್ವತ ಮೌಲ್ಯವೂ ದೇವರಾಗಬಹುದು. ಇವು ವ್ಯಕ್ತಿಯಲ್ಲಿ ಲೀನವಾಗುವ ಬಗ್ಗೆ ಅಧ್ಯಾತ್ಮದ ಹಂತಕ್ಕೆ ಒಯ್ಯುತ್ತದೆ.

ತೀವ್ರ ವಿಚಾರವಾದಿ, ಅಧ್ಯಾತ್ಮವಾದಿ, ಅಧ್ಯಾತ್ಮ ಜೀವಿಯಾದ ಕುವೆಂಪು ಸುಲಭಗ್ರಾಹ್ಯರಲ್ಲ. ಅವರು ವಿಚಾರವಾದಿ ನಿಜ, ಆದರೆ ಕೇವಲ ಭೌತವಾದಿಯಲ್ಲ. ಅಧ್ಯಾತ್ಮವಾದಿ ನಿಜ, ಆದರೆ ಕರ್ಮಠರಲ್ಲ. ಅಧ್ಯಾತ್ಮ ಜೀವಿ ನಿಜ, ಆದರೆ ಸಂನ್ಯಾಸಿಯಲ್ಲ. ನಿರಂಕುಶಮತಿಗಾಗಿ ಅವರು ನೀಡುವ ಕರೆ, ಆತ್ಮಶ್ರೀಗಾಗಿಯೇ ವಿನಾ ಭೌತಿಕ ರುಚಿಗಳ ಆರೈಕೆ, ಪೂರೈಕೆಗಳಿಗಾಗಿ ಅಲ್ಲ.

ಯಾವುದೇ ಅಧ್ಯಾತ್ಮ ತತ್ವದ ಅಂತಿಮ ಬಿಂದು ವ್ಯಕ್ತಿ ನಿಷ್ಠತೆ, ವ್ಯಕ್ತಿ ಉದ್ಧಾರ. ಸಮೂಹವನ್ನು ಇಡಿಯಾಗಿ ಉದ್ಧರಿಸುವ ಆಧ್ಯಾತ್ಮಿಕ ಸೂತ್ರ ಇಲ್ಲವೇ ಇಲ್ಲ. ಭಗವದ್ಗೀತೆಯಲ್ಲಿ ಹೇಳುವ "ಉದ್ಧರೇದಾತ್ಮನಾತ್ಮನಂ" ಎಂಬ ಮಾತು ಅಕ್ಷರಶಃ

ನಿಜ. ವ್ಯಕ್ತಿ ಸ್ವತಃ ಉದ್ಧಾರವಾಗಬೇಕು. ವ್ಯಕ್ತಿ ವ್ಯಕ್ತಿಗಳು ಕೂಡಿ ಒಂದು ಸಮಾಜ. ವ್ಯಕ್ತಿಗಳ ಉದ್ಧಾರವೇ ಸಮಾಜದ ಉದ್ಧಾರ. ಕುವೆಂಪು ಅವರ ಕಾವ್ಯ, ಸಾಹಿತ್ಯ ಸೃಷ್ಟಿಯ ಮುಖ್ಯ ಸೂತ್ರವೂ ವ್ಯಕ್ತಿಯ ಆತ್ಮ ಸ್ವಾತಂತ್ರ್ಯಕ್ಕಾಗಿ ತುಡಿಯುವುದೇ ಆಗಿದೆ. ನಮ್ಮ ಉದ್ಧಾರಕ್ಕಾಗಿ ಯಾರೋ ಒಬ್ಬರು ದುಡಿಯುತ್ತಾರೆ ಎಂದು ಬಯಸುವಂತಿಲ್ಲ. ಎಲ್ಲರೂ ದುಡಿಯುತ್ತಲೇ ಅವರವರ ಹಾದಿಯಲ್ಲಿ ನಡೆದು, ಉದ್ಧಾರ ಕಂಡುಕೊಳ್ಳಬೇಕೆಂಬುದು ಅವರ ಕಾಣ್ಕೆ. ಹಾಗಾಗಿಯೇ ಅವರ ಸಾಹಿತ್ಯ ಸರ್ವಸ್ವದ ಸಾರವೇ ಆಗಿರುವ ಸಪ್ತ ಸೂತ್ರಗಳಲ್ಲಿ, "ಮತ ತೊಲಗಿ ಅಧ್ಯಾತ್ಮ ಮಾತ್ರ ವೈಜ್ಞಾನಿಕ ತತ್ವವಾಗಿ ಮಾನ್ಯತೆ ಪಡೆಯಬೇಕು ಹಾಗೂ ಯಾವ ಒಂದು ಗ್ರಂಥವೂ 'ಏಕೈಕ ಪರಮ ಪೂಜ್ಯ' ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾಗುವ ಎಲ್ಲವನ್ನೂ ಓದಿ ತಿಳಿದು ತನ್ನ 'ದರ್ಶನ'ವನ್ನು ತಾನೇ ಪಡೆಯಬೇಕು" ಎಂದಿದ್ದಾರೆ.

ಅಧ್ಯಾತ್ಮವೆಂದರೆ ವೈಚಾರಿಕತೆಗೆ ವಿರುದ್ಧವಾದುದೆಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಆಧ್ಯಾತ್ಮಿಕತೆಯನ್ನು ವಿರೋಧಿಸುವಿಕೆಯೇ ವಿಚಾರವಾದವೆಂದು ಬಗೆಯಲಾಗುತ್ತದೆ. ಆದರೆ ವಿಚಾರ–ತರ್ಕಗಳಿಗೆ ಮೀರಿದ ನಿತ್ಯ ಸತ್ಯಗಳು ಎದುರಾದಾಗ ಇಂಥ ತಿಳುವಳಿಕೆ ತಬ್ಬಿಬ್ಬಾಗುತ್ತದೆ. ಆದರೆ ಕುವೆಂಪು ಅವರು ವಿಚಾರವಾದಿಗಳು ಹೌದಾದರೂ ಅವರು ಆಧ್ಯಾತ್ಮಿಕ ಶ್ರದ್ಧಾಳು, ಅವರೊಬ್ಬ ಅನುಭಾವಿ. ಆದುದರಿಂದಲೇ ಅವರ ವಿಚಾರಗಳಲ್ಲಿ ಗೊಂದಲವಿಲ್ಲ. ಧರ್ಮ, ಸಂಪ್ರದಾಯ–ವೈಚಾರಿಕತೆಗಳಲ್ಲಿ ಅವರಿಗೆ ಯಾವ ದ್ವಂದ್ವ ನಿಲುವೂ ಗೋಚರಿಸುವುದಿಲ್ಲ. ಪರಂಪರೆಯ ಭವ್ಯತೆ, ಉಜ್ವಲತೆಯನ್ನು ಎತ್ತಿ ಹಿಡಿಯುವ ಅವರು ಅದರ ಮೇಲೆ ಮುಸುಕಿದ ಮೌಢ್ಯದ ಮಂಜನ್ನು ಕರಗಿಸುವ ಪ್ರಭೆಯಾಗಿ ಬೆಳಗುತ್ತಾರೆ. ಕುವೆಂಪು ಅವರು ಭಾರತೀಯ ಸಮಾಜದ ಜಾತಿ ಪದ್ಧತಿ, ವರ್ಣಾಶ್ರಮ ಧರ್ಮವನ್ನು ಉಗ್ರವಾಗಿ ಖಂಡಿಸುವಂತೆ, ಈ ಅರ್ಥಹೀನ ಪೊರೆಗಳ ಆಚೆ ಇರುವ ಶಾಶ್ವತ ಮೌಲ್ಯಗಳನ್ನು ಸ್ವಾನುಭಾವವಾಗಿ ಮಾಡಿಕೊಳ್ಳುತ್ತಾರೆ. ಮತ, ಜಾತಿಗಳಿಂದಲೂ ಧರ್ಮ ಬೇರೆಯಾದುದು. ಅಧ್ಯಾತ್ಮ ಇವೆಲ್ಲವನ್ನು ಮೀರಿದ್ದು ಎಂಬ ಸತ್ಯ ಅವರಿಗೆ ಸ್ಪಷ್ಟವಾಗಿದೆ. ಇದೆಲ್ಲ ಅರ್ಥವಾಗದ ಭೌತ ವಿಚಾರವಾದಿ ಅವರನ್ನು ಅನುಮಾನಿಸಬಹುದು; ಶ್ರದ್ಧಾವಂತ ಅವರನ್ನು ಖಂಡಿಸಬಹುದು; ಇವರಿಬ್ಬರ ನಡುವೆ ಕುವೆಂಪು ಇದ್ದಾರೆ. ಕೆಲವು ಕಾರಣಗಳಿಗಾಗಿ ಕುವೆಂಪು ಅವರಲ್ಲಿ ಕೇವಲ ವಿಚಾರವಾದವನ್ನು ಮಾತ್ರ ಹುಡುಕುವವರು ಅಥವಾ

ಅವರಲ್ಲಿ ಕೇವಲ ಸಂಪ್ರದಾಯ ವಿರೋಧಿತ್ವವಿದೆ ಎಂದು ಭಾವುಕ ದೃಷ್ಟಿಯಲ್ಲಿ ನೋಡುವವರು – ಈ ಎರಡು ಬಗೆಯ ಓದುಗರು ಅವರ ಸಾಹಿತ್ಯಕ್ಕೆ ಅಪಾಯಕಾರಿಗಳು. ಇಂಥವರಿಂದ ಅವರ ಸಾಹಿತ್ಯ ಅಸಡ್ಡೆಗೆ ಒಳಗಾದುದೇ ಹೆಚ್ಚು. ಕುವೆಂಪು ಅವರನ್ನು ಯಾವುದೇ ಪೂರ್ವ ನಿಶ್ಚಿತ ಅಪೇಕ್ಷೆ, ಗ್ರಹಿಕೆಗಳಿಲ್ಲದೇ ಓದಿದರೆ ಅವರ ದರ್ಶನ ಅಪೂರ್ವವೆನಿಸುತ್ತದೆ. ಆರಾಧನೆ ಅಥವಾ ನಿರಾಕರಣೆಗಳಿಗೆ ಹೊರತಾದ ಸ್ಥಿತಿಪ್ರಜ್ಞ, ನಿಷ್ಕಲ್ಮಷ ಓದುಗನೊಡನೆ ಅವರ ಸಾಹಿತ್ಯ, ಸಂವಾದ ನಡೆಸುವ ಪರಿಯೇ ಅನನ್ಯ.

ಕುವೆಂಪು ಅವರನ್ನು ಓದುವ ಮುಂಚೆ ಕೆಲವು ಪೂರ್ವ ತಯಾರಿಗಳು, ಅದರಲ್ಲೂ ಸ್ವಲ್ಪ ತತ್ವಜ್ಞಾನದ ಅರಿವು ಅತ್ಯಗತ್ಯ. ಕುವೆಂಪು ಯಾವುದೇ ತತ್ತ್ವ ಸಿದ್ಧಾಂತಗಳನ್ನು ಹುಟ್ಟಿನಿಂದ ಬಳುವಳಿ ಪಡೆದವರಲ್ಲ. ಅಗಾಧವಾದ ಓದು ಹಾಗೂ ಅನುಭವದ ಮೂಸೆಯಲ್ಲಿ ಅದನ್ನು ಹಿಡಿದು ನೋಡಿದ ಕಾರಣ ಅವರಿಗೆ ಅವರದೇ ಆದ ದರ್ಶನ ದ್ವಾರ ತೆರೆದುಕೊಂಡಿತು. ಸ್ವಯಾರ್ಜಿತ ಓದು ಮತ್ತು ಸ್ವಾನುಭವಗಳ ಸಂಗಮ ಅವರಲ್ಲಿದೆ. ರಾಮಕೃಷ್ಣ ಪರಮಹಂಸರ ಸಿದ್ಧಿ, ಸ್ವಾಮಿ ವಿವೇಕಾನಂದರ ಬುದ್ಧಿ, ಶ್ರೀ ಅರವಿಂದರ ಪೂರ್ಣ ದೃಷ್ಟಿ ಹಾಗೂ ಗಾಂಧೀಜಿಯವರ ಸರ್ವೋದಯ ಸೂತ್ರಗಳನ್ನು ಮೇಳೈಸಿಕೊಂಡ ವಿಶಿಷ್ಟ ಪ್ರತಿಭೆ ಅದು. ಹಾಗಾಗಿ ಕುವೆಂಪು ಅವರನ್ನು ರೊಮ್ಯಾಂಟಿಕ್ ಕವಿ, ನಿಸರ್ಗ ಕವಿ, ತೀವ್ರ ವಿಚಾರವಾದಿ, ವಿಚಾರ ಶೀಲ ಸಂಪ್ರದಾಯವಾದಿ, ವಾಸ್ತವವಾದಿ, ಅಧ್ಯಾತ್ಮವಾದಿ ಎಂದು ಮುಂತಾಗಿ ಪ್ರಪ್ರತ್ಯೇಕವಾಗಿ ಕರೆಯುವಂತಿಲ್ಲ.

ಕುವೆಂಪು ಅವರ ಕವಿತೆಗಳಲ್ಲಿ ಆದರ್ಶೀಕೃತ ಮಾನವನಿದ್ದರೆ, ಕಥೆ ಕಾದಂಬರಿಗಳಲ್ಲಿ ಮಾನವ ಸ್ವಭಾವ – ಅನುಭವಗಳ ನಿಷ್ಠುರ ಚಿತ್ರಣವಿದೆ. ಕುವೆಂಪು ಅವರು ನಿಸರ್ಗದ ಶಿಶು. ಪ್ರಕೃತಿಯ ಮಾಯೆ, ಭವ್ಯತೆ, ರುದ್ರ ರಮಣೀಯತೆ ಅವರನ್ನು ಕಾಡಿದ ಬಗೆ ಹಲವು. ಅವರ ಆಧ್ಯಾತ್ಮಿಕ ನಿಲುವು ನಿಸರ್ಗದಷ್ಟೇ ಸರಳ, ಸಂಕೀರ್ಣ ಮತ್ತು ನಿಚ್ಚಳ, ಸಾಮಾನ್ಯ ತಾತ್ತ್ವಿಕರಿಗೆ ಪ್ರಕರತಿ ಜಡವಾದುದಾಗಿ ಕಂಡರೆ, ಅದು ಕುವೆಂಪು ಅವರಿಗೆ 'ಜಡವೆಂಬುದಲ್ಲ ಚೇತನದ ನಟನೆಯ ಲೀಲೆ'ಯಾಗಿ ಕಾಣುತ್ತದೆ.

ಭಗವದ್ಗೀತೆಯ ಕರ್ಮಯೋಗದ ಸಾರ ಅವರ ಕೃತಿಗಳಲ್ಲಿ ಕಾಣಿಸುತ್ತದೆ. ಜೀವ ಪ್ರೇಮ, ಜೀವ ಗೌರವ ಅಲ್ಲಿ ಢಾಳಾಗಿ ಕಾಣುತ್ತದೆ. ಆದುದರಿಂದಲೇ ಅವರು 'ಜೀವ ರಥೋತ್ಸವವಿದನಣಕಿಸದಿರು ಎಲೈ ಸಂನ್ಯಾಸಿ' ಅನ್ನುತ್ತಾರೆ. ಪ್ರಕೃತಿ – ಪುರುಷರಲ್ಲಿ,

ಜೀವ ಜಗತ್ತಿನ ಆಗುಹೋಗುಗಳಲ್ಲಿ ಕರ್ಮ ವ್ಯಾಪಾರವಿದೆ ಎಂಬುದರ ಅವರ ನಂಬಿಕೆ. ಬೆರಳ್‌ಗೆ ಕೊರಳ್ ನಾಟಕದಲ್ಲಿ 'ಕರ್ಮದ ಪಾಂಗು, ಮರಿಗೆ ಮರಿ, ಮರಿಗೆ ಮರಿ, ಬೆರಳ್‌ಗೆ ಕೊರಳ್' ಅನ್ನುತ್ತಾರೆ. ಏಕಲವ್ಯನ ಬೆರಳು ಕೇಳಬೇಕಾದ ಧರ್ಮಸಂಕಟ ದ್ರೋಣನನ್ನು ಕಾಡುತ್ತದೆ. ಆತ, 'ಕೂಳ್ ಮಿಣಿಯ ಪಿಡದಿರ್ಪುದಾ ಬದಿಯ ಕಯ್ । ನೂಂಕುತಿಹುದನಿಬರಂ ತನ್ನ ಲೀಲಾರ್ಥಂ, ಅಂತಲ್ಲದಿರೆ, ನಮ್ಮ ನೆತ್ತಲಿಂದಲೊ ಕರೆದು ಒಯ್ದು ತಂದೀನ್ನೃಪಾಲರೂಳಿಗಕೆ ತಳ್ಳು ತಿರ್ದುದೆ ಈಶ್ವರೇಚ್ಛಾರೂಪದೆಮ್ಮ ಕರ್ಮ ಪಾಶಂ" ಎಂದು ಹಳಹಳಿಸುತ್ತಾನೆ.

ಜನ್ಮಾಂತರ ಪರಿಕಲ್ಪನೆಯನ್ನು ಕುವೆಂಪು ನಿರಾಕರಿಸುವುದಿಲ್ಲ. ಅವರ 'ಯಾವ ಜನ್ಮದ ಮೈತ್ರಿ' ಸಾಲುಗಳಲ್ಲಿ, ಬೆರಳ್‌ಗೆ ಕೊರಳ್ ನಾಟಕದಲ್ಲಿ ದ್ರೋಣರು ಅರ್ಜುನನ ಹೆಸರಾಸೆಯನ್ನು ಹೆಕ್ಕುತ್ತ, "ಈ ಜನ್ಮದೊಳ್ ಈ ಪೆಸರ್ : ಮರುವುಟ್ಟೊಳಿನ್ನೊಂದು ಪೆಸರ್, ಭರತ ಖಂಡದೊಳಿಂದು ದ್ರೋಣನ್ ! ಬರ್ಪ ಜನ್ಮದೊಳಾವ ದೇಶದೊಳ್ ಅದಾವ ಪೆಸರೊ" ಎಂದು ಹೇಳಿರುವಲ್ಲಿ, ಶ್ರೀ ರಾಮಾಯಣದರ್ಶನಂ ಕಾವ್ಯದಲ್ಲಿ ರಾವಣ–ಕುಂಭಕರ್ಣರು ಈ ಜನ್ಮದಲ್ಲಿ ಗೆಲ್ಲಲಾಗದ ರಾಮನನ್ನು ಲವ–ಕುಶರಾಗಿ ಮುಂದಿನ ಜನ್ಮದಲ್ಲಿ ಗೆಲ್ಲುವುದು, ಸೀತೆಯ ಪ್ರೇಮವನ್ನು ಶಿಶುಗಳಾಗಿ ಪಡೆಯುವುದು ಚಿತ್ರಿತಗೊಂಡಿರುವಲ್ಲಿ ಕುವೆಂಪು ಅವರ ಜನ್ಮಾಂತರ ಪರಿಕಲ್ಪನೆ ಗೋಚರಿಸುತ್ತದೆ.

ಶ್ರೀ ಅರವಿಂದರ 'All life is Yoga' ಎಂಬ ಮಾತು ಕುವೆಂಪು ಅವರಲ್ಲಿ ಅಖಂಡವಾಗಿದೆ. ನಿಷ್ಕಾಮ ಕರ್ಮಗಳೆಲ್ಲವೂ ಯೋಗವೇ ಎಂಬುದು ಅವರ 'ಉಳುವಾ ಯೋಗಿಯ ನೋಡಲ್ಲಿ' ಕವಿತೆಯಲ್ಲಿ ಒಡಮೂಡಿರುವುದನ್ನು ಗುರುತಿಸಬಹುದು. ವ್ಯಕ್ತಿಯ ಯೌಗಿಕ ಸ್ಥಿತಿಯ ಬಗ್ಗೆ 'ವಿಭೂತಿ ಪೂಜೆ'ಯಲ್ಲಿ ಅವರು ವಿವರಿಸಿದ್ದಾರೆ. "ಸಚ್ಚಿದಾನಂದ ಲೀಲಾರ್ಥವಾಗಿ ಮಾಯೆಗವತರಿಸಿದ ಜೀವ, ತನ್ನ ಸ್ವಸ್ಥಾನ ಸಂಸ್ಥಾಪನ ಸಾಧನೆಯಲ್ಲಿ ತೊಡಗುತ್ತದೆ – ಸ್ವಾಭಾವಿಕವಾಗಿ, ಪ್ರಕೃತಿ ಸಿದ್ಧವಾಗಿ. ಆ ಸಾಧನೆ ಬೇರೆ ಬೇರೆಯ ಕೋಶಗಳಲ್ಲಿ ಆಯಾ ಕೋಶಗಳಿಗೆ ಅನುಗುಣವಾದ ರೀತಿಗಳಲ್ಲಿ, ರೂಪಗಳಲ್ಲಿ ಸಾಗುತ್ತದೆ. ಅದು ಅನ್ನಮಯದಲ್ಲಿ ವಿಕಾಸಗೊಳ್ಳುವಾಗ ನಿದ್ರಿತವೆಂಬಂತೆ ಸಾಗುತ್ತದೆ. ಪ್ರಾಣಮಯದಲ್ಲಿ ಸ್ವಪ್ನಮಯವೆಂಬಂತೆ, ಮನೋಮಯದಲ್ಲಿ ಜಾಗೃತವಾಗಿ, ಪ್ರಜ್ಞಾಪೂರ್ವಕವಾಗಿ, ಸ್ವ–ಸ್ವಪ್ರಯತ್ನಶೀಲವಾಗಿ, ತನ್ನರಿವಿಗೆ ತಾನೇ ವಿಷಯವಾಗಿ, ಆರಾಧ್ಯವಾಗಿ, ಆದರ್ಶವಾಗಿ, ಕರೆಯಾಗಿ, ಕೋರಿಕೆಯಾಗಿ, ಪ್ರಿಯವಾಗಿ, ಪೂಜ್ಯವಾಗಿ ಗೋಚರವಾಗುತ್ತದೆ. ಹಾಗೆಯೇ ತಾನಿರುವ ಮಟ್ಟಕ್ಕೆ ಆ ಮೇಲಿರುವ ಮಟ್ಟ ವಿಭೂತಿ ಸ್ಥಾನವಾಗಿ ಪರಿಣಮಿಸುತ್ತದೆ" (ಪುಟ.2). ವ್ಯಕ್ತಿಯು ತನ್ನ ಮುಕ್ತಿಯನ್ನು ತನ್ನ

ಜೀವಿತೋದ್ದೇಶದ ಮೂಲಕವೇ ಸಾಧಿಸಿಕೊಳ್ಳಬೇಕೆಂಬ ಕಾಣ್ಕೆಯನ್ನು ತೋರಿಸುವ ಆಂಜನೇಯನ ಪರ್ವತ ಯಾತ್ರೆಯ ಸಂದರ್ಭದಲ್ಲಿ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದಲ್ಲಿ ಈ ಯೌಗಿಕ ದರ್ಶನವವನ್ನು ಅವರು ಮಾಡಿಸಿದ್ದಾರೆ.

ಕುವೆಂಪು ಅವರ ದಾಂಪತ್ಯ ಗೀತೆಗಳಲ್ಲಿಯೂ ಸಂಕೀರ್ಣವಾದ ಅಧ್ಯಾತ್ಮದ ಎಳೆಯಿದೆ. ವಾಸ್ತವ ಬದುಕಿನ ಚಿತ್ರಣ ನೀಡುವ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಅತೀಂದ್ರಿಯ ಜಗತ್ತಿನ ಹೊಳಹುಗಳಿವೆ. ಗಡ್ಡದಯ್ಯ ಅದರ ಪ್ರತಿನಿಧಿಯಾಗಿದ್ದಾನೆ. ಇಲ್ಲಿನ ಯಾವ ಪಾತ್ರವೂ ತಾನು ವಿಶೇಷವಾದುದಾಗಬೇಕೆಂದು ತುಡಿಯುವುದಿಲ್ಲ. ಇದ್ದುದನ್ನು ಇರುವ ಹಾಗೆ ನೇರವಾಗಿ ಅವು ಅನುಭವಿಸುತ್ತವೆ. ಕುವೆಂಪು ಅವರ ಕಾವ್ಯಧೋರಣೆ ಆಧ್ಯಾತ್ಮಿಕ ನೆಲೆಯುಳ್ಳದ್ದು. ಅವರ ದೃಷ್ಟಿಯಲ್ಲಿ ಆತ್ಮಸಂಸ್ಕಾರ ಹಾಗೂ ಸಾಕ್ಷಾತ್ಕಾರಗಳಿಗಾಗಿ ಕಾವ್ಯ ಕಲೆ ಇದೆ. ಜೀವನದ ಉನ್ನತಿಗೆ ಅದೊಂದು ಸಾಧನ. ಹಾಗಾಗಿಯೇ ಅವರು –

"ನನ್ನ ಕೃತಿ ಕಲೆಯಲ್ಲ
ನಾನು ಕವಿಯಲ್ಲ
ಕಲೆಗಾಗಿ ಕಲೆಯೆಂಬ
ಹೊಳ್ಳು ನೆಲೆಯಿಲ್ಲ
ಸಾಧನೆಯ ಛಾಯೆ ಕಲೆ
ವಿಶ್ವಾತ್ಮವದಕೆ ನೆಲೆ
ನಿನಗದು ಚಮತ್ಕಾರ
ನನಗೊ ಸಾಕ್ಷಾತ್ಕಾರ!" ಎಂದಿದ್ದಾರೆ.

ಕುವೆಂಪು ಕಾವ್ಯದ ಬಹುಭಾಗ ಅಧ್ಯಾತ್ಮದ ಹೊಳಹಿನಿಂದ ತುಂಬಿದೆ. ಅವರ ಕಾವ್ಯದಲ್ಲಿ ಭಕ್ತಿ, ಶ್ರದ್ಧೆ, ಸಮರ್ಪಣೆ, ಶರಣಾಗತಿಗಳ ಭಾವಗಳಿವೆ.

'ತನುವು ನಿನ್ನದು ಮನವು ನಿನ್ನದು
ಎನ್ನ ಜೀವನ ಧನವು ನಿನ್ನದು
ನಾನು ನಿನ್ನವನೆಂಬ ಹೆಮ್ಮೆಯ
ಋಣವು ಮಾತ್ರವೆ ನನ್ನದು ! ಎಂಬ ಸಾಲುಗಳಲ್ಲಿ

ಅಥವಾ,

'ಇದುವರೆಗೆ ನೀನೆನ್ನ ಕೈ ಹಿಡಿದು ನಡೆಸಿರುವೆ
ಇನ್ನಾದರೂ ನನ್ನ ಕೈ ಬಿಡದಿರು

ಅಂದಿನಂತೆಯೆ ಇಂದು ನಾನೊಂದು ಶಿಶು ಎಂದು

ಎಂದಿಗೂ ಕೈ ಬಿಡದೆ ಸಲಹೈ ಗುರೂ ।' ಎಂಬ ಮಾತುಗಳಲ್ಲಿನ ಸಮರ್ಪಣೆ, ಶರಣಾಗತಿಯ ಭಾವಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ವಿಶ್ವ ವ್ಯಾಪಾರದ ಅನಂತತೆಗೆ ಕುವೆಂಪು ಬೆರಗಾಗಿದ್ದಾರೆ. ಜೀವಾತ್ಮ ತನ್ನನ್ನು ಅಳಿಸಿಕೊಂಡು ಪೂರ್ಣವಾಗುವ ಪರಿ 'ಆಕ್ರಮಿಸು' ಕವನದಲ್ಲಿದೆ. 'ಆಕ್ರಮಿಸು ಬಂದೆನ್ನ ಅಲ್ಪತ್ವಮಂ, ಓ ಅನಂತ' ಎಂದು ಆಹ್ವಾನಿಸುತ್ತಾರೆ. 'ಕವಿಶೈಲದಲ್ಲಿ ಸಂಧ್ಯೆ' ಕವಿತೆಯಲ್ಲಿ.

'ಮನವೇ, ಧ್ಯಾನದಿ ಮುಳುಗು ನಿಧಾನದಿ

ನುಂಗಲಿ ನಿನ್ನನು ತಪಃ ಸುಷುಪ್ತಿ

ಅನಂತ ತೃಪ್ತಿ' ಎಂದಿದ್ದಾರೆ. ಜೀವಾತ್ಮದ ಮಹತ್ತು ಎಲ್ಲರಲ್ಲೂ ಒಂದೇ. ವ್ಯಕ್ತಿಗೆ ಕೀಳರಿಮೆ ಸಲ್ಲದು. ಅನಂತತೆಯ ಪ್ರಜ್ಞೆ ಅಲ್ಪವನ್ನೂ ಭವ್ಯವನ್ನಾಗಿ ಮಾಡುತ್ತದೆ. ಈ ಆಶಯ 'ಮಂತ್ರಾಕ್ಷತೆ' ಕವಿತೆಯಲ್ಲಿದೆ.

'ಅಲ್ಪ ನಾನು ಎಂದು ಕುಗ್ಗಿ

ಮುದುಗ ಬೇಡವೊ

ಓ ಅಲ್ಲವೆ,

ಅನಂತದಿಂದ ಗುಣಿಸಿಕೊ

ನೀನ್ ಅನಂತವಾಗುವೆ!' ಎಂಬ ಮಾತನ್ನು ಇಲ್ಲಿ ಲಕ್ಷಿಸಬಹುದು. 'ಜನ್ಮೋತ್ಸವ' ಕವಿತೆಯಲ್ಲಿನ –

ಇಲ್ಲಿ ಬಾ ಸಂಭವಿಸು ಇಂದೆನ್ನ ಹೃದಯದಲಿ

ನಿತ್ಯವೂ ಅವತರಿಪ ಸತ್ಯಾವತಾರ' ಎಂಬ ಸಾಲುಗಳೂ ಇದೇ ಆಶಯವನ್ನು ಹೊಂದಿವೆ. ಪ್ರಕೃತಿ ಒಂದು ವಿಸ್ಮಯ. "ಪ್ರಕೃತಿಯಾರಾಧನೆಯ ಪರಮನಾರಾಧನೆ. ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದ ಸಾಧನೆ" ಎಂಬುದು ಅವರ ನಿಲುವು. ಪ್ರಕೃತಿ ಅಭೇದ್ಯವಾದುದಾದರೂ ಅಲ್ಲಿ ಅಭೇದವಿದೆ. ಹಾಗಾಗಿಯೇ "ಶರತ್ಕಾಲದ ಸೂರ್ಯೋದಯದಲಿ" ಎಂಬ ಕವನದಲ್ಲಿ –

'ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ

ನೀರಿನ ಹನಿಯಲಿ ಬೆಂಕಿಯ ಕಿಡಿಯಲಿ

ನನ್ನಲಿ – ಎಲ್ಲಿಯೂ ಚೈತನ್ಯ ! ಅನ್ನುತ್ತಾರೆ. ಇಲ್ಲಿರುವ ಸಮೀಕರಣ ದೃಷ್ಟಿಯನ್ನು ಗುರುತಿಸಬೇಕು. ಕುವೆಂಪು ಅವರ ಆಧ್ಯಾತ್ಮಿಕ ದೃಷ್ಟಿ ಸಂಬಂಧವಾದ ಒಂದು ಕವನ ಸಂಕಲನ 'ಅಗ್ನಿಹಂಸ'. ಇದನ್ನು ಕುರಿತು "ಅಗ್ನಿಹಂಸ' ಎನ್ನುವುದು

ಕುವೆಂಪು ಅವರ ವ್ಯಕ್ತಿತ್ವದ ಆಧ್ಯಾತ್ಮಿಕ, ಅನುಭಾವಿಕ ಮುಖವನ್ನು ಸಂಕೇತಿಸುವ ಮಾತು. ಹಂಸ ಆತ್ಮದ ಪ್ರತೀಕವೆಂದು ಪ್ರಸಿದ್ಧವೇ; ಅದು ಕುವೆಂಪು ಅವರಲ್ಲಿ ಕವಿತೆಯ ಸಂಸರ್ಗವನ್ನು ಪಡೆದು ಅಗ್ನಿಹಂಸವಾಗಿದೆ" ಎಂದು ಸಿ.ಪಿ.ಕೆ.ಯವರು ಸಮಂಜಸವಾಗಿ ಗುರುತಿಸಿದ್ದಾರೆ.

ಅಧ್ಯಾತ್ಮ ಜೀವಿಯಾದ ಕುವೆಂಪು, ವಾಸ್ತವ ಬದುಕಿನ ಕರ್ತವ್ಯ ಪ್ರಜ್ಞೆಯಿಂದ ಪಲಾಯನ ಮಾಡುವ ಸಂನ್ಯಾಸಿಯಾಗುವುದಿಲ್ಲ. ಯಾವ ಯಾವ ಸಂದರ್ಭಗಳಲ್ಲಿ ಆತ್ಮಘಾತುಕ ಪರಿಸ್ಥಿತಿ ಉಂಟಾಗುತ್ತದೆಯೋ ಅಂಥ ಕಡೆ ಧ್ಯಾನ ತಪಸ್ಸುಗಳ ಭಂಗಿ ಭಂಡತನವಾಗುತ್ತದೆ. ಕರ್ತವ್ಯ ಪಾರಾಯಣವೇ ಆ ಕ್ಷಣದ ತಪಸ್ಸು. ಇದಕ್ಕೊಂದು ಸನ್ನಿವೇಶವನ್ನು ಅವರು 'ಧ್ರಾಂಧ್ರೀಂಧ್ರೂಂ' ಕವಿತೆಯಲ್ಲಿ ನಿದರ್ಶನವಾಗಿ ನೀಡಿದ್ದಾರೆ. ಪರಕೀಯರ ಆಕ್ರಮಣ, ಸನಾತನ ಪರಂಪರೆಯ ಮೇಲೆ ನಡೆಯುತ್ತಿದ್ದಾಗ ಜಪ ಮಾಡುತ್ತ ನಿಂತವರು ಅಸಂಖ್ಯ ಜನ. ದಾಳಿ ಮಾಡಿದವರು ಬೆರಳಣಿಕೆ ಜನ. ಜಪ ಮಾಡುತ್ತಿದ್ದ ಜನರ ನಿಜವಾದ ತಪಸ್ಸು, ಆಗ ಕರ್ತವ್ಯಕ್ಕಾಗಿ ಹೋರಾಡುವುದು ಆಗಬೇಕಾಗಿತ್ತು. ಹೀಗಾಗಲಿಲ್ಲ. ಜಪ ಮಾಡಿದರೂ ಲೂಟಿ ಆಗಿ ಹೋಯಿತೆಂಬುದು ಮೌಢ್ಯದ ಪರಮಾವಧಿ. ಸ್ವಂತಿಕೆ, ಸ್ವಧರ್ಮ, ಸ್ವಾತಂತ್ರ್ಯಗಳಿಗೆ ಧಕ್ಕೆ ಒದಗಿದಾಗ ಕೈಕಟ್ಟಿ ಕೂತು ಧ್ಯಾನ ಮಾಡಬೇಕೆಂದು ಯಾವ ಧರ್ಮವೂ ಬೋಧಿಸಿಲ್ಲ. ಗೀತೆಯಲ್ಲಿ ಶ್ರೀಕೃಷ್ಣ ಎಷ್ಟೇ ಉಪದೇಶ ಮಾಡಿದರೂ ಯುದ್ಧ ಕ್ರಿಯೆಯಿಂದ ಹಿಂದೆ ಸರಿಯುವಂತೆ ಮಾಡುವುದು ಅದರ ಉದ್ದೇಶವಲ್ಲ ಎಂಬುದನ್ನು ಮನಗಾಣಬೇಕು. ಈ ಸತ್ಯವನ್ನು ಕುವೆಂಪು ದರ್ಶಿಸಿದಾರೆ. ಇಂಥ ಸಂದರ್ಭಗಳಲ್ಲಿ ಅವರು ಸನಾತನ ಮೌಢ್ಯಗಳ ಮೇಲೆ ಗದಾಪ್ರಹಾರ ಮಾಡುತ್ತಾರೆ. ಆದರೆ ಅದೇ ಸಂದರ್ಭದಲ್ಲಿ ಶಾಶ್ವತಾಂಶಗಳನ್ನು ಉಳಿಸುವ ಕಾಳಜಿ, ಕಳಕಳಿ, ಅವರ ವಿನೂತನಗೊಳಿಸುವ ಕಲಾಶಕ್ತಿಯಲ್ಲಿ ಅಡಗಿರುತ್ತದೆ. ಮೇಲ್ನೋಟದಲ್ಲಿ ಗೊಡ್ಡು ಸಂಪ್ರದಾಯ, ಮೌಢ್ಯಗಳ ಮೇಲೆ ಕುವೆಂಪು ಅವರು ತೀವ್ರವಾಗಿ ಮಾಡುವ ದಾಳಿಯನ್ನು ಮಾತ್ರ ಗಮನಿಸುವ ವಿಚಾರವಾದಿಗಳಿಗೆ ಆಂತರ್ಯದ ಕಾಳಜಿ ಕಾಣಿಸುವುದಿಲ್ಲ. ತಲೆಮಾರುಗಳಿಂದ ಹರಿದು ಬಂದು ಜಾಡ್ಯಗಳನ್ನೂ 'ಪರಂಪರೆ' ಎಂದು ತಿಳಿದ ತಿಳಿಗೇಡಿ ಕರ್ಮಠರಿಗೆ ಮತ–ಜಾತಿ–ಧರ್ಮಗಳ ಒಳಗಿರುವ ಸಣ್ಣತನವನ್ನು ಅವರು ಖಂಡಿಸುವ ಪರಿ ಅಪಥ್ಯವಾಗುತ್ತದೆ. 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?' ಎಂದು ಅವರು ಕೇಳಿದ ಮಾತುಗಳು, 'ಶಾಸ್ತ್ರವನನೇ ಪ್ರಶ್ನಿಸುತ್ತಾರಲ್ಲ' ಎಂಬ ಕಾರಣಕ್ಕೆ ಕರ್ಮಠರಿಗೆ ಅಹಿತವಾಗುತ್ತದೆ.

'ಪಂಚಮರ ಶಿಶು ಕೆರೆಯಲ್ಲಿ ಮುಳುಗುವಾಗ ಬ್ರಹ್ಮತ್ವನಾಶದ ಭೀತಿಯಲ್ಲಿ ಅದನ್ನು ಬದುಕಿಸಿದಿದ್ದರೆ ಯಾವ ಶಾಸ್ತ್ರ ತಾನೆ ಒಪ್ಪುತ್ತದೆ?' ಎಂಬ ಪ್ರಶ್ನೆಯೂ ನುಂಗಲಾರದ ತುತ್ತಾಗುತ್ತದೆ. ಆದರೆ ಅವರು ಚಿತ್ರಿಸುವ ಕಟುವಾದ, ನಿಷ್ಠುರವಾದ ಸಂಗತಿಗಳ ಹಿಂದಿನ ಆಶಯ, ಕಾಳಜಿಗಳು ಎಂದಿಗೂ ಪ್ರಶ್ನಾತೀತವಾದವು ಹಾಗೂ ನಿಜವಾದ ಅಧ್ಯಾತ್ಮ ತಿಳಿದವರು ನಡೆದುಕೊಳ್ಳಬೇಕಾದ ರೀತಿಯವು ಎಂಬುದನ್ನು ಮನಗಾಣಬೇಕು. ಅಧ್ಯಾತ್ಮವನ್ನು ಜಾತಿ, ಮತ, ಧರ್ಮಗಳ ಬಂಧನದಲ್ಲಿ ಸಾಮಾನ್ಯವಾಗಿ ಕಾಣಲಾಗುತ್ತದೆ. ಇವುಗಳ ಅನುಸರಣೆಯೇ ಅಧ್ಯಾತ್ಮ ಎಂಬ ಭ್ರಮೆಯೂ ಸಾಮಾನ್ಯವಾಗಿದೆ. ಇನ್ನೊಂದು ಜೀವದಲ್ಲಿ ತನ್ನನ್ನು ಕಾಣುವುದು ಅಧ್ಯಾತ್ಮದ ಒಂದು ಸೂತ್ರ. ಇಂದಿನ ದಿನಗಳಲ್ಲಿ ಇನ್ನೊಬ್ಬರ ಬಗ್ಗೆ ಚಿಂತಿಸಲು ಯಾರಿಗೂ ಪುರುಸೋತ್ತಿಲ್ಲ. ಹಾಗಾದರೆ ಮಾಡುತ್ತಿರುವಾದಾದರೂ ಏನು? ತನ್ನ ಜಾತಿ, ಒಳಜಾತಿ, ಪಂಗಡ, ಉಪಪಂಗಡ, ಮತ, ಧರ್ಮ ಯಾವುದು? ಯಾವುದರಲ್ಲಿ ತನ್ನನ್ನು ತಾನು ಗುರುತಿಸಿಕೊಂಡರೆ ಕ್ಷೇಮ ಎಂಬ ಜಿಜ್ಞಾಸೆ ಇದೀಗ ತೀವ್ರವಾಗಿದೆ. ಸಾಮಾಜಿಕ–ಧಾರ್ಮಿಕ ಕಾರಣಗಳ ಸಮಸ್ಯೆಗಳಾಗಿರುವ ಜಾತಿ, ಲಿಂಗ, ಅಸಮಾನತೆ ಮುಂತಾದವುಗಳಿಗೆ ರಾಜಕೀಯ–ಆರ್ಥಿಕ ಹಿನ್ನಲೆಯಲ್ಲಿ ಉತ್ತರ ಹುಡುಕುತ್ತಿರುವುದು ಪ್ರಾಯಃ ಇಂದಿನ ಗೊಂದಲಗಳಿಗೆ ಕಾರಣವಿರಬಹುದು. ಯಾವ ಸಮಸ್ಯೆ ಎಲ್ಲಿಂದ ಹುಟ್ಟುರುತ್ತದೆಯೋ ಅಲ್ಲಿಂದಲೇ ಪರಿಹಾರವನ್ನು ಆರಂಭಿಸಬೇಕು. ಮತ, ಜಾತಿ, ಅಸ್ಪೃಶ್ಯತೆಗಳು ಸಮಾಜ–ಪರಂಪರೆಯಲ್ಲಿವೆ. ಇವುಗಳನ್ನು ಆ ಮೂಲಕವೇ ಪರಿಹರಿಸುವ ಯತ್ನ ಕುವೆಂಪು ಅವರ ಬೆರಳ್‌ಗೆ ಕೊರಳ್‌ನಲ್ಲಿ, ಶಂಬೂಕವಧೆಯಂಥ ಶ್ರೀ ರಾಮಾಯಣ ದರ್ಶನಂ ಕಾವ್ಯದ ಭಾಗಗಳಲ್ಲಿ ಸಮರ್ಥವೂ ಉಚಿತವೂ ಆಗಿ ಮುಡಿದೆ. 'ಶೂದ್ರ ತಪಸ್ವಿ' ಇಂಥ ಸಮನ್ವಯಕ್ಕೆ ಒಂದು ಉತ್ತಮ ನಿದರ್ಶನ.

ಅಧ್ಯಾತ್ಮವು ವಾಸ್ತವವಾಗಿ ಧರ್ಮ, ಜಾತಿ, ಮತ ನಿರಪೇಕ್ಷ. ಹಾಗಾಗಿಯೇ ಅಧ್ಯಾತ್ಮವನ್ನು ಪ್ರತಿಪಾದಿಸುವ ಕುವೆಂಪು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಸುನ್ನಿ, ಷಿಯಾ, ಕ್ಯಾಥೋಲಿಕ್, ಪ್ರಾಟೆಸ್ಟಂಟ್, ಸಿಖ್, ನಿರಂಕಾರಿ ಮುಂತಾದ ವಿಭಜನೆಗಳ ನಿರ್ನಾಮಕ್ಕೆ ಕರೆ ಕೊಡುತ್ತಾರೆ. ಅವರ ದೃಷ್ಟಿಯಲ್ಲಿ ಮತವೆಂದರೆ ಮನುಜ ಮತ, ಪಥವೆಂದರೆ ವಿಶ್ವಪಥ. 'ಮತ' ಪ್ರಜ್ಞೆ ಎಂದಿದ್ದರೂ ಗುಂಪು ಕಟ್ಟಿ ಜಗಳವಾಡುವ ಕೆಲಸ ಮಾಡುತ್ತದೆ. ಅದು ಸಾಮಾಜಿಕ ಮತವಿರಲಿ, ರಾಜಕೀಯ ಮತವಿರಲಿ, ಅಲ್ಲಿ ಜಗಳ ಇದ್ದೇ ಇರುತ್ತದೆ. ವ್ಯಕ್ತಿ ತನ್ನ ದರ್ಶನದಿಂದ ತಾನೇ ಸ್ವಯಂ ಪೂರ್ಣನಾಗಲು ಮತ ವ್ಯವಹಾರ ಅನಗತ್ಯ. ಇದನ್ನು ಅವರು ಸೃಷ್ಟಿಸಿದ್ದಾರೆ,

ಪುಷ್ಟೀಕರಿಸಿದ್ದಾರೆ.

ಮೌಢ್ಯ, ಜಾತೀಯತೆ, ಕಂದಾಚಾರಗಳಿಗೆ ಉಗ್ರ ಆಘಾತ ನೀಡಿದ ಸನಾತನ ಪರಂಪರೆಯ ಮಹಾನ್ ಹರಿಕಾರ ವಿವೇಕಾನಂದರ ಅಧ್ಯಾತ್ಮ ಶುದ್ಧಿ, ಪ್ರಖರತೆ, ಓಜಸ್ಸು ಕುವೆಂಪು ಅವರಲ್ಲಿವೆ. ಸರ್ವಸಮಾನ ದೃಷ್ಟಿಯಲ್ಲಿ ಮುಖ್ಯ ಅಮುಖ್ಯಗಳ ಮಾತು ಅಮುಖ್ಯ. ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಒಂದು ದಿಕ್ಸೂಚೀ ಮಾತಿದೆ – "ಯಾರೂ ಮುಖ್ಯರಲ್ಲ ; ಯಾವುದೂ ಅಮುಖ್ಯವಲ್ಲ!" ನಿಸರ್ಗದಲ್ಲಿ ಯಾವುದೇ ವಸ್ತು ವಿಷಯ ಮಾತ್ರ ಮುಖ್ಯವಲ್ಲ. ಅದೇ ಅನಿವಾರ್ಯವಲ್ಲ. ಆದರೆ, ನಿಸರ್ಗ ವ್ಯವಹಾರಕ್ಕೆ ಸಗಣಿ ಹುಳವೂ ಮುಖ್ಯವಾಗುತ್ತದೆ. ಇದೇ ರೀತಿ 'ಸ್ಮಶಾನ ಕುರುಕ್ಷೇತ್ರಂ' ಕೃತಿಯಲ್ಲಿ ಬರುವ 'ಎಲ್ಲಕ್ಕೂ ಇವೆ ಅರ್ಥ : ಯಾವುದೂ ಅಲ್ಲ ವ್ಯರ್ಥ; ನೀರೆಲ್ಲವೂ ತೀರ್ಥ" ಎಂಬ ಮಾತನ್ನೂ ಲಕ್ಷಿಸಬಹುದು.

ಕುವೆಂಪು ಅವರು ತಮ್ಮ ಸಾಹಿತ್ಯ ಸರ್ವಸ್ವದ ಆಧ್ಯಾತ್ಮಿಕ ಸಾರ ಸಂಗ್ರಹವನ್ನು ವಿಶ್ವಮಾನವ ಸಂದೇಶದ ಸಪ್ತ ಸೂತ್ರಗಳಲ್ಲಿ ಹಾಗೂ 'ಓ ನನ್ನ ಚೇತನ, ಆಗು ನೀ ಅನಿಕೇತನ' ಎಂಬ ಪದ್ಯ ಸಾಲುಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇದು ಶ್ರೀ ಸಾಮಾನ್ಯರಿಗೆ ಅವರು ನೀಡಿರುವ ದ್ರಷ್ಟಾರ ಮಂತ್ರ. ಚಿರಂತನ ಸತ್ಯಗಳನ್ನು, ಶಾಶ್ವತ ಮೌಲ್ಯಗಳನ್ನು ಮಾತ್ರ ಪ್ರತಿಪಾದಿಸುವ, ಕಾಲ ದೇಶಾತೀತವಾಗಿ ಮಾನವನ ಅಂತಃಕರಣವನ್ನು ಕಟ್ಟುವ ಆಧ್ಯಾತ್ಮಿಕ ಶಕ್ತಿ ಇರುವುದರಿಂದಲೇ ಕುವೆಂಪು ಅವರ ಸಾಹಿತ್ಯ ಮನುಷ್ಯರಿಗೆ ಅನಿವಾರ್ಯವಾಗುತ್ತದೆ. ಅವಿನಾಶಿಯಾಗುತ್ತದೆ.

ಒಂದು ಜೀವ ಇನ್ನೊಂದು ಜೀವವನ್ನು ವ್ಯಾವಹಾರಿಕ ದೃಷ್ಟಿಯಲ್ಲಿ ಅಲ್ಲದಿದ್ದರೆ ತಮಗೂ ಅದಕ್ಕೂ ಸಂಬಂಧವೇ ಇಲ್ಲವೆಂಬ ಹಾಗೂ ಕ್ಷುಲ್ಲಕವಾದ ಜಾತಿ, ಮತ, ಭ್ರಷ್ಟತೆಗಳಲ್ಲಿ ಕಳೆದುಹೋಗುತ್ತಿರುವ ಇಂದಿನ ಮಾನವ ಜನಾಂಗಕ್ಕೆ ಕುವೆಂಪು ಅವರು ತೋರಿಸಿದ ಆಧ್ಯಾತ್ಮಿಕ ಮಾರ್ಗ, ಸಮತೋಲಿತ ಬದುಕಿನ ಸ್ಪಷ್ಟ ದೃಷ್ಟಿಗಳು ಅಗತ್ಯವಾಗಿವೆ. ಎಲ್ಲವನ್ನೂ ಅರಗಿಸಿಕೊಂಡು ತಮ್ಮ ದರ್ಶನವನ್ನು ತಾವೇ ಕಂಡುಕೊಳ್ಳುವ ಅವರ ಕಾವ್ಯ–ಬದುಕಿನ ರೀತಿ ಆದರ್ಶವಾಗಬೇಕಿದೆ.

***

ಸರ್ವಜ್ಞನ ಸಮಾಜಮುಖಿ ವಚನಗಳು

ಡಾ. ಚಿಕ್ಕಣ್ಣ. ಬಿ. ಎಸ್.

ಸಹಾಯಕ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗೌರಿಬಿದನೂರು.

chikkannabs@gmail.com

ಕವಿಯು ಸಾಮಾಜಿಕ ಜೀವಿಯಾಗಿ ಸಮಾಜವನ್ನು ಇತರರಂತೆ ಸೂಕ್ಷ್ಮವಾಗಿ ಅನುಭವಿಸುತ್ತಾನೆ. ಸಮಾಜದ ಒಳಿತು–ಕೆಡಕು, ನೋವು–ನಲಿವು, ಸುಖ–ದುಃಖ, ನ್ಯಾಯ–ಅನ್ಯಾಯ, ನಿರಾಸೆಗಳಂತಹ ಅನುಭವಗಳನ್ನು ಕಂಡು, ಅನುಭವಿಸಿ, ತನ್ನದೇ ಆದ ರೀತಿಯಲ್ಲಿ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುತ್ತಾನೆ. ಹೀಗೆ ಸಮಾಜದ ಮುಖವಾಣಿಯಾಗಿ ಜೀವನಾನುಭವಗಳನ್ನು ಕಲಾತ್ಮಕವಾಗಿ ರೂಪಿಸುವಂತಹುದೇ ಸಾಹಿತ್ಯ. ಕವಿಯು ಸಾಮಾಜಿಕ ಸಮಸ್ಯೆಗಳ ತುಡಿತಗಳು, ಓರೆ–ಕೋರೆಗಳು, ಸವಿ–ಸೊಗಸುಗಳು, ಜೀವನ ಮೌಲ್ಯಗಳಿಗೆ ಬೆಳಕಿನಲ್ಲಿ ಕನ್ನಡಿಯನ್ನು ಹಿಡಿಯುವಂತಹ ಸಾಹಿತ್ಯ ಸೃಷ್ಟಿಯ ಕಾರ್ಯವನ್ನು ಮಾಡುವುದು ಕೇವಲ ಜನಜೀವನದ ಪ್ರತಿಬಿಂಬವಾಗಿರದೆ, ಸಾಮಾಜಿಕ ವಿಮರ್ಶೆಯಾಗಿಯೂ, ಹಸನುಪಡಿಸಬೇಕೆಂಬ ಬಂಡಾಯ ಸ್ವರೂಪದ ಪ್ರತಿಕ್ರಿಯೆಯಾಗಿಯೂ ಮೈಪಡೆಯುತ್ತದೆ. ಹಾಗೆಯೇ ಜೀವನ ವಿವೇಕವನ್ನು ಜೀವಬಲವನ್ನಾಗಿಸಿಕೊಂಡು ಸಮಾಜದ ಸಂಸ್ಕಾರಾತ್ಮಕ ಶಕ್ತಿಯಾಗಿಯೂ ಬೆಳೆಯುತ್ತದೆ. ಈ ಹಿನ್ನಲೆಯಲ್ಲಿ ಅವಲೋಕಿಸಿದಾಗ ಸರ್ವಜ್ಞನ ವಚನಗಳಲ್ಲಿ ವ್ಯಕ್ತವಾದ ಸಾಮಾಜಿಕ ವಿಮರ್ಶೆ ಒಂದು ರೀತಿಯಲ್ಲಿ ಪ್ರತಿಭಟನಾತ್ಮಕ ನೆಲೆಯಲ್ಲಿ ವ್ಯಕ್ತವಾಗುತ್ತದೆ. ಕನ್ನಡ ಸಾಹಿತ್ಯವು ಆಯಾ ಕಾಲಘಟ್ಟಕ್ಕನುಗುಣವಾಗಿ ಹಲವು ತಿರುವುಗಳನ್ನು ದಾಟಿ ಬಂದಿದೆ. ಸಾಮಾಜಿಕ ಒತ್ತಡ, ಚಾರಿತ್ರಿಕ ಪರಿಸರ, ಧಾರ್ಮಿಕ ಒತ್ತಾಸೆಗಳು ಪ್ರಮುಖ ಕಾರಣಗಳಾಗಿವೆ. ಮಧ್ಯಕಾಲೀನ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಾಗ ವಚನಕಾರರು

ಮತ್ತು ಕೀರ್ತನಕಾರರ ಕಾಲ ಸಾಮಾಜಿಕ ಆಂದೋಲನವಾಗಿ ರೂಪುಗೊಂಡು ಮಹತ್ವ ಪಡೆದಿರುವುದನ್ನು ಕಾಣುತ್ತೇವೆ. ಈ ಆಂದೋಲನ ಸಾಮಾಜಿಕ ಬದುಕಿನೊಂದಿಗೆ ಬೆಸೆದುಕೊಂಡಿದ್ದರಿಂದ ಸಾಹಿತ್ಯ ಮತ್ತು ಸಾಮಾಜಿಕ ಪಲ್ಲಟಕ್ಕೆ ಕಾರಣವಾಯಿತು. ಆ ಕಾಲಘಟ್ಟಗಳನ್ನು ಬಿಟ್ಟರೆ ಉಳಿದಂತೆ ಕವಿಗಳ ವೈಯಕ್ತಿಕ ಸಾಮರ್ಥ್ಯ ಮತ್ತು ಪರಂಪರೆಯ ಜೊತೆಗಿನ ಅವರ ಸಂಬಂಧವೇ ವಿಜೃಂಭಿಸಿದೆ ಎನ್ನಬಹುದು. ಈ ದೃಷ್ಠಿಯಿಂದ ಕವಿಯೊಬ್ಬ ಸ್ವಪ್ರತಿಭೆಯಿಂದ ಜನಪ್ರಿಯತೆಯ ಉತ್ತುಂಗ ಶಿಖರವೇರಿದವನೆಂದರೆ ತ್ರಿಪದಿ ಚಕ್ರವರ್ತಿ ಸರ್ವಜ್ಞ, ಮಧ್ಯಕಾಲೀನ ದೇಸೀ ಸಂಭ್ರಮದ ಸಾರ್ವಭೌಮನೆಂದು ಕರೆದರೆ ಅತಿಶಯೋಕ್ತಿ ಆಗಲಾರದು. ಸಾಮಾಜಿಕ ಬದಲಾವಣೆಗಾಗಿ ದುಡಿಯದಿದ್ದರೂ ಸಮಾಜದ ಸುಧಾರಣೆಯ ತುಡಿತವಿರುವುದನ್ನು ಅವನ ತ್ರಿಪದಿಗಳು ಪ್ರಸ್ತುತಪಡಿಸುತ್ತವೆ. ಸ್ಥಳೀಯ ಅನುಭವವನ್ನು ಸೂರೆಗೊಂಡು ವಚನಕಾರರು ಮತ್ತು ಕೀರ್ತನಕಾರರ ತರುವಾಯ ಸಾಂಘಿಕ ಬಲವಿಲ್ಲದೆ ಏಕಾಂಗಿಯಾಗಿ ಸಮಾಜದ ಗುಣದೋಷಗಳನ್ನು ಖಂಡಿಸಿದ ಅಪರೂಪದ ಬಂಡಾಯಗಾರನಾಗಿದ್ದಾನೆ.

ಸರ್ವಜ್ಞನು ಇಂದಿನ ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲ್ಲೂಕಿನ ಅಬ್ಬಲೂರಿನವನು. ಕುಂಬಾರ ಮಾಳಿ ಮತ್ತು ಬಸವರಸನ ಮಗನಾಗಿ ಜನಿಸಿ ಬಾಲ್ಯದ ನಂತರ ಮನೆ ತೊರೆಯುತ್ತಾನೆ. ಮುಂದೆ ಹಗಲಿರುಳು ಚಾರಣ ಮಾಡುತ್ತಾ ಊರಿಂದ ಊರಿಗೆ ಬೇಟಿ ನೀಡುತ್ತಾ ಪಡೆದ ಲೋಕಜ್ಞಾನದಿಂದ ಹದವಾದ ಕಾವ್ಯ ಬರೆಯುವುದನ್ನು ಕಲಿತು ತಿರುಗಾಟದ ಕವಿಯಾಗಿ ಪ್ರಸಿದ್ಧಿಯಾಗುತ್ತಾನೆ. ಹೀಗೆ ಜನ ಸಂಪರ್ಕದಿಂದ ಅವರ ಒಡನಾಡಿಯಾಗಿ ಸರ್ವಜ್ಞ ಕಲಿತ ವಿಷಯಗಳು ಒಂದೆರಡಲ್ಲ ಅಪಾರವಾದವು. ಅವನೇ ತನ್ನದೊಂದು ತ್ರಿಪದಿಯಲ್ಲಿ

"ಸರ್ವಜ್ಞನೆಂಬುವನು ಗರ್ವದಿಂದಾದವನೆ?
ಸರ್ವರೊಳಗೊಂದೊಂದು ನುಡಿಗಲಿತು । ವಿದ್ಯೆಯ
ಪರ್ವತವೇ ಆದ ಸರ್ವಜ್ಞ॥ [1]

ಹೀಗೆ ಹೇಳಿಕೊಂಡಿರುವುದನ್ನು ನೋಡಿದರೆ ಈ ಮಾತು ಸತ್ಯವೆನಿಸುತ್ತದೆ. ತನ್ನನ್ನು ತಾನು ಹೀಗೆ ಸಂಬೋಧಿಸಿಕೊಳ್ಳುತ್ತಿರುವ ಬಗ್ಗೆ ಉತ್ತರ ನೀಡಿದ್ದಾನೆ. ಎಲ್ಲವನ್ನೂ ಕಲಿತವನೆಂಬ ಅಹಂಕಾರಿ ನಾನಲ್ಲ, ಈ ಸಮಾಜದೊಳಗಿದ್ದು ಅವರೊಡನೆ ಬದುಕುತ್ತಲೇ, ಹಿರಿ–ಕಿರಿಯರು, ಬಡವ–ಶ್ರೀಮಂತ, ದೀನ–ದಲಿತ, ಮೇಲು–ಕೀಳೆಂಬ ಭೇದವನ್ನು ಮಾಡದೇ ಸಕಲರಿಂದಲೂ ತಿಳಿದುಕೊಂಡು ವಿದ್ಯೆಯನ್ನು ಸಂಪಾದಿಸಿಕೊಂಡ ಮಹತ್ವವನ್ನು ಸಾರುತ್ತದೆ. ಆತ್ಮ ಪ್ರಶಂಸೆಯನ್ನು ಮಾಡಿಕೊಳ್ಳುವಾಗ

ವ್ಯಕ್ತಿನಿರಸನ ಔದಾರ್ಯತೆ ಸರ್ವಜ್ಞನಲ್ಲಿದೆ. ಜ್ಞಾನದ ಮೇಲ್ಚಲನೆಯ ನಡೆಯಲ್ಲಿ ಗರ್ವವೂ ಬೆಳೆಯುವ ಕಾಲಕ್ಕೆ ಸಮಾಜದೊಳಗೆ ಬೆರೆತು ಎಲ್ಲರೊಳೊಂದಾಗಿ ಒಂದೊಂದು ನುಡಿಕಲಿತು ಅನುಭವಸಾರ ವಿದ್ಯೆಯನ್ನು ಸಂಪಾದಿಸುವ ಸಮಾಜಮುಖಿ ಚಿಂತಕನಾಗಿ ಕಾಣುತ್ತಾನೆ. ಇಂತಹ ಸರ್ವಜ್ಞ ಕವಿಯು ಕನ್ನಡದ ಆಶುಕವಿ, ತ್ರಿಪದಿ ಕವಿ, ಚಾರಣ ಕವಿ, ದಾರ್ಶನಿಕ ಕವಿ, ಅನುಭಾವಿ ಕವಿ, ಕನ್ನಡ ವೇಮನ, ಕನ್ನಡದ ತಿರುವಳ್ಳವರ್ ಮುಂತಾದ ಹೆಸರುಗಳಿಂದ ಪ್ರಸಿದ್ಧಿಯಾಗಿದ್ದಾನೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ 'ಆಶುಕವಿ' ಎಂದೇ ಗುರುತಿಸಲ್ಪಡುವ ಸರ್ವಜ್ಞ ಜನತೆಯ ಹಾಡಿನ ಮಟ್ಟಾದ ತ್ರಿಪದಿಯನ್ನು ತನ್ನ ಮಾಧ್ಯಮವಾಗಿಸಿಕೊಂಡನು, ಈತನ ತ್ರಿಪದಿಗಳನ್ನ ವಚನಗಳೆಂದು ಕರೆಯಲಾಗಿದೆ. ಸರ್ವಜ್ಞ ಯಾವ ಮತದವನು, ಯಾವ ಊರು, ತಂದೆ–ತಾಯಿ ಯಾರು, ಇವನ ಗುರು ಯಾರು, ಇವನ ವೃತ್ತಿ ಯಾವುದು, ಹೀಗೆ ಪ್ರಶ್ನಿಸುತ್ತಾ ಹೋದರೆ ನಿರ್ದಿಷ್ಟ ಉತ್ತರ ದೊರೆಯದು, ಏಕೆಂದರೆ ಸರ್ವಜ್ಞ ಲೋಕ ಸಂಚಾರಿ, ಅವನಿಗೆ 'ಊರೆಲ್ಲ ನೆಂಟರು ಕೇರಿಯಲ್ಲವೂ ಬಳಗ' ಅವನು ಕನ್ನಡ ಸಾಹಿತ್ಯದಲ್ಲಿಯೇ ವಿಲಕ್ಷಣ ಸ್ವಭಾವವುಳ್ಳ ಕವಿ. ವಿಕ್ಷಿಪ್ತಚಿತ್ತ, ಅದರೆ ಯಾವುದಕ್ಕೂ ಅಂಟಿ ನಿಲ್ಲದ ವಿರಾಗಿ, 'ಕರದಿಕಪ್ಪರವುಂಟು ಹಿರಿದೊಂದು ನಾಡುಂಟು' ಎಂದು ಹೇಳಿಕೊಳ್ಳುತ್ತಾ, ಸರ್ವಸ್ವತಂತ್ರ ಬದುಕು ಕಟ್ಟಿಕೊಂಡು ಜಂಗಮ ಸ್ವರೂಪಿಯಾಗಿ ಬದುಕಿದವನು. ಸಮಾಜದ ಎಲ್ಲ ಅಂಕು–ಡೊಂಕುಗಳಿಗೆ ನ್ಯಾಯ–ಅನ್ಯಾಯಗಳಿಗೆ ದಿಟ್ಟ ಉತ್ತರ ನೀಡಿ ಇಹಪರ ಮೆಚ್ಚುವಂತ ವೈಚಾರಿಕ ಪ್ರಜ್ಞೆವುಳ್ಳವನು.

ಭಾರತೀಯ ಸಮಾಜದಲ್ಲಿ ಜಾತಿಯ ಭೂತ ಬೇರೂರಿ ಹೆಮ್ಮರವಾಗಿ ಬೆಳೆದು ನಿಂತಿದೆ. ಇದರಿಂದ ಶತ ಶತಮಾನಗಳಿಂದಲೂ ಅಸಮಾನತೆ, ಶೋಷಣೆ, ದಬ್ಬಾಳಿಕೆಗಳೂ ನಿರಂತರವಾಗಿ ಜಾತಿಯ ಕಾರಣಕ್ಕಾಗಿಯೇ ನಡೆದುಕೊಂಡು ಬರುತ್ತಿದೆ. ಈ ಜಾತಿಯ ನಿರ್ಮೂಲನೆಗೆ ಪರ್ಯಾಯವಾಗಿ ಹೊಸ ಧರ್ಮಗಳ ಉದಯ, ಸಮಾಜ ಸುಧಾರಕರ ನಿರಂತರ ಹೋರಾಟ, ಸಾಹಿತ್ಯ ರಚನೆಗಳ ಮೂಲಕ ಸಮ ಸಮಾಜದ ನಿರ್ಮಾಣದ ಕನಸು ಹೊತ್ತು ಹೋರಾಡಿದ ಮಹಾನುಭಾವರನ್ನು ಕೂಡ ಈ ನೆಲ ಜಾತಿಯ ಬಂಧನದಲ್ಲಿ ಬಂಧಿಸಿ, ಅವರನ್ನು ಅವರ ಜಾತಿಯ ಹಿನ್ನಲೆಯ ನೋಟದಲ್ಲೇ ನೋಡುವ ದೃಷ್ಟಿಕೋನವನ್ನು ಬೆಳೆಸಿದೆ.

ಮಧ್ಯಕಾಲೀನ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ತನ್ನ ವೈಚಾರಿಕ ಚಿಂತನೆ ಮತ್ತು ಕ್ರಾಂತಿಕಾರಿ ಮನೋಧೋರಣೆಯಿಂದ ನಾಡಿನ ರಾಜಕೀಯ, ಧಾರ್ಮಿಕ, ಸಾಮಾಜಿಕವಾಗಿ ತಲೆದೋರಿದ ನೈತಿಕ ಶಿಥಿಲತೆಯ ಕಾಲದಲ್ಲಿ ಜನಮನವನ್ನು ಸಂಸ್ಕಾರಗೊಳಿಸುವ ಕಾರ್ಯವನ್ನು ಕೈಗೊಂಡನು. ಜಡ್ಡುಗಟ್ಟಿದ ಸಮಾಜದ ವೈರುದ್ಯಗಳ

ವಿರುದ್ಧ ಬಂಡೆದ್ದ ವೀರಶೈವ ಪರಂಪರೆಯ ಪ್ರೇರಣೆ ಒಂದು ಕಡೆಯಾದರೆ, ಸಮಕಾಲೀನ ಸಮಾಜದ ಸಾಮಾನ್ಯ ವರ್ಗವೆನಿಸಿದ ಶೋಷಿತರ ಕುರಿತ ಅನುಕಂಪ ಮಗದೊಂದು ಕಡೆಗಿದೆ. ಭಾವನಾವಿವಶತೆಯನ್ನು ಮೈಗೂಡಿಸಿಕೊಂಡ ಸರ್ವಜ್ಞನ ವೈಚಾರಿಕ ಪ್ರಜ್ಞೆಯ ಹಲವು ವಚನಗಳಲ್ಲಿ ಪ್ರತಿಭಟನಾ ಸ್ವರೂಪವನ್ನು ಕಾಣುತ್ತೇವೆ. ಲೋಕವ್ಯಾಪಾರದ ಪ್ರತಿಯೊಂದು ವಿಚಾರವನ್ನೂ ಸೂಕ್ಷ್ಮವಾಗಿ ಗಮನಿಸಿ ತನ್ನ ನಿರ್ಣಯ ಪ್ರಕಟಪಡಿಸಿದ್ದಾನೆ. ಅವನ ವಿಮರ್ಶೆಗೆ ಒಳಗಾಗದ ವಿಚಾರಗಳು ಇಲ್ಲ. ಜಾತಿ, ಮತ, ಭಕ್ತಿ, ಸರಳತೆ, ಧಾರ್ಮಿಕ ವಿಚಾರಗಳು, ಸಾಮಾಜಿಕ ಆಚರಣೆಗಳು, ಮೌಢ್ಯ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾನೆ. ಅಸ್ಪೃಶ್ಯತೆ, ಜಾತಿಪದ್ಧತಿ, ಸನಾತನ ನಂಬಿಕೆಗಳ ವಿರುದ್ಧ ನಿರ್ಭಯವಾಗಿ ಮಾತನಾಡುವ ಇವನಲ್ಲಿ ಬಂಡಾಯ ಸಂವೇದನೆಯ ಆಶಯಗಳು ಢಾಳಾಗಿ ಕಂಡುಬರುತ್ತವೆ. ತನ್ನ ಕಾಲಘಟ್ಟಕ್ಕಿಂತ ಹಿಂದಿನಿಂದಲೂ ನೆಲೆಯೂರಿರುವ ಅಸಮಾನತೆ, ಶೋಷಣೆ, ಮೂಢನಂಬಿಕೆಗೆ ಕಾರಣವಾಗಿದ್ದ ಅನೇಕ ವಿಚಾರಗಳ ಖಂಡನೆಯನ್ನು ಇವನ ವಚನಗಳಲ್ಲಿ ಗುರುತಿಸಬಹುದಾಗಿದೆ. ಜಾತಿ, ಕುಲ, ಮತ, ಧಾರ್ಮಿಕ ವಿಚಾರಗಳು ಅತಿ ಹೆಚ್ಚು ಚರ್ಚೆಗಳಾಗುತ್ತವೆ. ಜಾತಿವ್ಯವಸ್ಥೆಯನ್ನು ರೂಢಿಗೆ ತಂದು ಅಸಮಾನತೆಗೆ ಕಾರಣವಾಗಿದ್ದವರಿಗೆ ಹರಿತ ಮಾತಿನಿಂದ ಪ್ರಶ್ನಿಸುತ್ತಾನೆ.

ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ
ಜಾತಿ ವಿಜಾತಿ ಎನಬೇಡ
ದೇವನೊಲಿದಾತನೇ ಜಾತ ಸರ್ವಜ್ಞ॥ [2]

ಇಲ್ಲಿ ಸರ್ವಜ್ಞ ಮಾನವ ಕುಲಕ್ಕೆ ಶ್ರೇಷ್ಟ ಜಾತಿ, ಕನಿಷ್ಟ ಜಾತಿ ಎಂಬುದು ಇಲ್ಲವೆಂದು ಹೇಳುತ್ತಾ ಬೆಳಕನ್ನು ನೀಡುವ ಕ್ರಿಯೆಯಲ್ಲಿ ಜ್ಯೋತಿಯು ಹೇಗೆ ಉದಾತ್ತತೆ ಮತ್ತು ವಿಶ್ವಧರ್ಮ ತತ್ವಗಳನ್ನು ಅನುಸರಿಸುತ್ತದೆಯೋ ಹಾಗೆ ಮಾನವರ ಬದುಕು ಇರಬೇಕು ಎಂಬುದನ್ನು ತೋರಿಸುವುದರ ಮೂಲಕ ವಿಶ್ವಮಾನವ ತತ್ವವನ್ನು ಪ್ರತಿಮಾತ್ಮಕವಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಜಾತಿ ವಿಜಾತಿಯನ್ನುವುದು ಮಾನವ ಕುಲದ ಅಜ್ಞಾನಕ್ಕೆ ಸಾಕ್ಷಿಯಾಗಿದೆ. ದೇವರು ಎಂಬುದು ಯಾವ ಜಾತಿ ಧರ್ಮದವರಿಗಾದರೂ ಒಲಿಯುತ್ತಾನೆ ಎಂದು ಹೇಳುವುದರ ಮೂಲಕ ದೇವರಲ್ಲಿ ಮಾನವರನ್ನು ನೋಡುವ ದೃಷ್ಟಿಕೋನಗಳಲ್ಲಿ ಭೇದ ಭಾವಗಳಿಲ್ಲ. ಆದರೆ ಮನುಷ್ಯರೆಂದುಕೊಂಡವರು ಇನ್ನೊಬ್ಬ ಮನುಷ್ಯನನ್ನು ನೋಡುವಾಗ ಏಕೆ ಅವನು ಮೇಲುಜಾತಿ, ಇವನು ಕೆಳಜಾತಿ ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕೆಂದು ತಾರ್ಕಿಕವಾಗಿ ಉತ್ತರಿಸಿದ್ದಾನೆ. ಜಾತಿಭೇದ ಮತ್ತು ಅಸ್ಪೃಶ್ಯತೆಯ ಬಗ್ಗೆ ತೀಕ್ಷ್ಣವಾದ

ಮಾತುಗಳನ್ನಾಡಿದ್ದಾನೆ. ಜಾತಿ ಸಮಸ್ಯೆ ದೇಶಕ್ಕೆ ಶಾಪವಾಗಿದೆ. ಜಾತಿ ಸಮಸ್ಯೆಯಿಂದಾಗಿ ಅನೇಕರು ಅವಮಾನವನ್ನುಂಡವರಿದ್ದಾರೆ. ಅಂತಹ ಪರಂಪರಾಗತ ನಂಬಿಕೆಗಳ ವಿರುದ್ಧ ಬಂಡಾಯ ಹೂಡುತ್ತಾನೆ. ಜಾತಿ ಹೀನನ ಮನೆಯ ಜ್ಯೋತಿಯು ಹೀನವಾದುದೆ? ಎಂದು ಪ್ರಶ್ನಿಸುತ್ತಾನೆ. ಸೃಷ್ಠಿಯಲ್ಲಿ ಎಲ್ಲರೂ ಒಂದೇ ಹಾಗಿದ್ದಾಗ ಆಜಾತಿ ಈಜಾತಿ ಎಂಬ ಭೇದವಿರಬಾರದು. ಯಾರಿಗೆ ದೇವರು ಒಲಿಯುತ್ತಾನೋ ಅವನದೇ ಶ್ರೇಷ್ಠಜಾತಿ ಎಂದಿರುವುದು ಜಾತಿಯ ಬಗ್ಗೆ ಕೀಳಾಗಿ ತಿಳಿದುಕೊಂಡವರಿಗೆ ಸಮಾನತೆ ಮತ್ತು ಮಾನವೀಯ ಎಚ್ಚರಿಕೆಯು ಅರ್ಥಗರ್ಭಿತವಾಗಿದೆ. ಅಸ್ಪೃಶ್ಯತೆಯ ಕೊಳೆಯ ತೊಳೆದು ಆತ್ಮಜ್ಞಾನವನ್ನು ಪಡೆಯುವಂತಿದೆ.

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ
ನಡುವೆ ಎತ್ತಣದು ಸರ್ವಜ್ಞ॥ [3]
ಮುಟ್ಟಾದ ಹೊಲೆಯೊಳಗೆ ಹುಟ್ಟುವುದು ಜಗವೆಲ್ಲ
ಮುಟ್ಟಬೇಡೆಂದು ತೊಲಗುವ ಹಾರುವನು
ಹುಟ್ಟಿರುವುದೆಲ್ಲಿ ಸರ್ವಜ್ಞ॥ [4]

ಸೃಷ್ಠಿಯಲ್ಲಿ ಸಹಜ ಜೈವಿಕ ಕ್ರಿಯೆಗಳು ಆಗುತ್ತವೆ. ಹಸಿವು ನಿದ್ರೆ ತೃಷೆ ಮೈಥುನ ಇವೆಲ್ಲವೂ ಎಲ್ಲ ಮನುಷ್ಯರಿಗೂ ಒಂದೇ. ಪ್ರಾಣಿ ಪಕ್ಷಿಗಳಲ್ಲಿಯೂ ಇದು ಸಹಜವಾದುದು. ಹೀಗಿರುವಾಗ ಪ್ರಾಣಿ ಪಕ್ಷಿಗಳಲ್ಲಿಲ್ಲದ ಉಚ್ಚ ನೀಚ, ತರತಮ ಭಾವವೇಕೆ? ಮನುಷ್ಯ ಬುದ್ಧಿವಂತನಾಗಿದ್ದು ಅನೀತಿಯನ್ನು ಅನುಸರಿಸುವುದು ಅಕ್ಷಮ್ಯ ಎನ್ನುತ್ತಾನೆ. ಅಲ್ಲದೆ ಜೀವಿಗಳ ಜನನಕ್ಕೆ ನಿಸರ್ಗ ಕ್ರಿಯೆಯಾದ ಮುಟ್ಟು ಮುಖ್ಯವಾದುದು. ಆ ಮುಟ್ಟಿನಿಂದಲೇ ಪ್ರತಿಯೊಂದು ಜೀವಿಯ ಜನನವಾಗುವುದು. ಆದರೆ ಮನುಷ್ಯ ಮನುಷ್ಯರಲ್ಲಿ ಶ್ರೇಷ್ಠ ಕನಿಷ್ಟ ಎಂದು ವಿಂಗಡಿಸಿರುವುದಲ್ಲದೆ, ಅಸ್ಪೃಶ್ಯರು ಹತ್ತಿರ ಬಂದರೆ ಹಾರವರು ಓಡುತ್ತಾರೆ. ಹೀಗೆ ಓಡುವ ಹಾರವರೂ ಮುಟ್ಟಿನಿಂದಲ್ಲವೇ ಹುಟ್ಟಿರುವುದು ಎನ್ನುವ ಸರ್ವಜ್ಞ ಪುರೋಹಿತಶಾಹಿಯ ವಿರುದ್ಧ ಕಿಡಿಕಾರುವನು. ಅಸ್ಪೃಶ್ಯರ ನೆರಳು ತಮ್ಮ ಮೇಲೆ ಬೀಳಬಾರದು ಎಂಬ ಕರ್ಮಟರ ಒಡನಾಟದಿಂದ ಅಂತರ ಕಾಯ್ದು ಕೊಳ್ಳುತ್ತಾನೆ. ಸಮಾಜದ ಮೇಲುಕೀಳಿನ ಶ್ರೇಣಿಯನ್ನು ಕಟುವಾಗಿ ಟೀಕಿಸಿ 'ಹಾರುವರೆಂಬುವರು ಹಾರುವರು ನರಕಕ್ಕೆ' ಎಂದು ಪುರೋಹಿತ ಶಾಹಿಯನ್ನು ನಿಂದಿಸುವನು. ಲಿಂಗಭೇದ ಗುಣವನ್ನು ಕುರಿತು ಸರ್ವಜ್ಞ ತನ್ನ ಇನ್ನೊಂದು ತ್ರಿಪದಿಯಲ್ಲಿ

"ಹೆಣ್ಣಿಂದಲೇ ಇಹವು ಹೆಣ್ಣಿನಿಂದಲೇ ಹರವು
ಹೆಣ್ಣಿನಿಂದಲೇ ಸಕಲ ಸಂಪದವು ಹೆಣ್ಣೊಲ್ಲ

ದಣ್ಣಗಳು ಯಾರು ಸರ್ವಜ್ಞ"5

ಅನಾದಿ ಕಾಲದಿಂದಲು ಹೆಣ್ಣನ್ನು ಕೀಳಾಗಿ ಕಂಡಿರುವ ದೇಶ ನಮ್ಮದು. ಪುರುಷ ಮೊದಲು ಆನಂತರ ಮಹಿಳೆ ಎಂಬ ಉದಾಸೀನ ಭಾವವನ್ನು ತಾಳಿಕೊಂಡು ಬರಲಾಗುತ್ತಿದೆ. ಹೆಣ್ಣು ಮಾಯೆ, ಪಾಪದ ಪಿಂಡ, ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ನಿಕೃಷ್ಟವಾಗಿ ಕಂಡ ಸಮಾಜದ ವಿರುದ್ಧ ಬಂಡೆದಿದ್ದಾನೆ. ಪುರುಷನಾದವನು ಇಹದಲ್ಲಿ ಸುಖವಾಗಿ ಇರಬೇಕಾದರೆ, ಪರದಲ್ಲಿ ಸದ್ಗತಿ ಹೊಂದಬೇಕಾದರೆ ಹೆಣ್ಣಿನಿಂದ ಮಾತ್ರ ಸಾಧ್ಯ. ಗಂಡು ಶ್ರೇಷ್ಠ ಹೆಣ್ಣು ಕನಿಷ್ಟ ಎನ್ನುವ ಹುಲು ಮಾನವರಿಗೆ ಹೆಣ್ಣಿನ ಶ್ರೇಷ್ಟತೆಯನ್ನು ಇಂತಹ ವಚನಗಳಲ್ಲಿ ಬಣ್ಣಿಸುತ್ತಾನೆ. ಬದುಕಿನಲ್ಲಿ ಏನಾದರೂ ಸಿರಿ ಸಂಪತ್ತು, ಭೋಗ ಭಾಗ್ಯಗಳು, ಪದವಿ ಸಂಪದವಿಗಳು ದೊರೆತಿದ್ದರೆ ಅದು ಹೆಣ್ಣಿನ ಫಲದಿಂದ ಎಂದು ಹೇಳುತ್ತಾ ಹೆಣ್ಣನ್ನು ಗೌರವಿಸುವ ಮನೋಭಾವ, ಮೌಲ್ಯವನ್ನು ಸಾಮಾಜಿಕ ಜೀವನದಲ್ಲಿ ನಿರ್ಮಾಣ ಮಾಡುವ ಬಗೆಯಲ್ಲಿ ಸಾರ್ವಜನಿಕವಾಗಿ ಕವಿ ಮಾತನಾಡುವುದನ್ನು ಕಾಣುತ್ತೇವೆ. ಹೆಣ್ಣು ಇಂದಿಗೂ ಶೋಷಿಸಲ್ಪಡುತ್ತಿದ್ದಾಳೆ ಬಸವಣ್ಣ, ಸರ್ವಜ್ಞ ಮುಂತಾದವರು ಹೆಣ್ಣಿನ ಮಹತ್ವವನ್ನು ಕುರಿತು ಆಡಿರುವ ಮಾತುಗಳು ಮಹಿಳೆಯರಿಗೆ ಆತ್ಮಸ್ಥೈರ್ಯವನ್ನು ತುಂಬುತ್ತದೆ. ಹೀಗೆ ಸಮಾಜದ ಒಟ್ಟು ಓರೆಕೋರೆಗಳನ್ನು ತಿದ್ದುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾನೆ. ಜಾತಿ, ಕುಲ, ಮತ, ಧರ್ಮ, ಆಚಾರ, ವಿಚಾರ, ಶಾಸ್ತ್ರ ಸಂಪ್ರದಾಯ, ಹೀಗೆ ಒಂದನ್ನೂ ಬಿಡದೆ ಪ್ರತಿಕ್ರಿಯಿಸುವ ಈತನ ತ್ರಿಪದಿಗಳಲ್ಲಿ ಬಂಡಾಯದ ಆಶಯಗಳನ್ನು ನಿಸ್ಸಂದೇಹವಾಗಿ ಗುರುತಿಸಬಹುದು.

ಹುಟ್ಟಿದ ಕಾರಣಕ್ಕಾಗಿ ಮೇಲು ಕೀಳುಗಳನ್ನು ಎಣಿಸುವ ಹೊಲೆ ವಂಚನೆಗೆ ನಮ್ಮ ದೇಶದ ಸಾವಿರಾರು ವರ್ಷಗಳ ಚರಿತ್ರೆಯಿದೆ. ಈಗಲೂ ಸಾಮಾಜಿಕವಾದ ಅಂತಸ್ತು ಹಳ್ಳಿಗಳೇ ಹೆಚ್ಚಾಗಿರುವ ಭಾರತದಲ್ಲಿ ಜಾತಿಪದ್ದತಿಯನ್ನು ಅನುಸರಿಸಿದೆ. ಹಣಕಾಸಿನ ಪರಿಸ್ಥಿತಿಯೂ ಕೂಡಾ ಬಹುಪಾಲು ಈ ಕ್ರಮದೊಡನೆ ಹೆಣೆದುಕೊಂಡಿರುವುದನ್ನು ನಾವು ಮರೆಯುವಂತಿಲ್ಲ. ಹೊಲೆಯ, ಮಾದಿಗ, ಅಗಸ, ಹಜಾಮ ಮುಂತಾದ ಜಾತಿಗಳಲ್ಲಿ ಹುಟ್ಟಿದ ಕಾರಣಕ್ಕಾಗಿಯೇ ಸಾಮಾಜಿಕವೂ ಆರ್ಥಿಕವೂ ಆದ ಕೊರತೆ ಸಂಕಟಗಳನ್ನು ನಿತ್ಯ ಇವರೆಲ್ಲ ಅನುಭವಿಸುತ್ತಿದ್ದಾರೆ. ಇಂತಹ ಅನಿಷ್ಟಗಳನ್ನು ಕಂಡಾಗ ಸರ್ವಜ್ಞನ ಬಾಣಗಳು ನೇರವಾಗಿಯೇ ಗುರಿ ಮುಟ್ಟುತ್ತವೆ. "ಎಲುಬು–ಕರಳು–ನರತೊಗಲು ಬಲಿದಚರ್ಮದ ಹೊದಿಕೆ ಜಲ–ರಕ್ತ ಮಾಂಸ–ಕ್ರಿಮಿಯಿರ್ಪದೇಹಕ್ಕೆ ಕುಲವಾವುದಯ್ಯ ಸರ್ವಜ್ಞ"ಎಂದು ಪ್ರಶ್ನಿಸುತ್ತಾನೆ. ಆತನಿಗೆ ಜಾತಿ ಭೇದವೇನೂ ಇಲ್ಲ."ಎಲುವಿಲ್ಲ ನಾಲಗೆಗೆ, ಬಲವಿಲ್ಲ ಬಡವಂಗೆ

ತೊಲೆಗಂಬವಿಲ್ಲ ಗಗನಕ್ಕೆ ದೇವರಲಿ ಕುಲಭೇದವಿಲ್ಲ ಸರ್ವಜ್ಞ" ಆದ್ದರಿಂದ ಕುಲ ಮುಖ್ಯವಲ್ಲ. ಜಾತಿ ನಿರ್ಧಾರವಾಗುವುದು ಹುಟ್ಟಿನಿಂದಲ್ಲ ಆಚಾರದಿಂದ ಎಂದು ಸ್ಪಷ್ಟಪಡಿಸಿದ್ದಾನೆ.

ಅಸ್ಪೃಷ್ಯ ಸಮುದಾಯವನ್ನು ಊರಿಂದ ಹೊರಗಿಡುವ, ಸಾಮಾಜಿಕ ಶೋಷಣೆಗೆ ಗುರಿಮಾಡಿರುವ ಸಾಮಾಜಿಕ ವ್ಯವಸ್ಥೆಯನ್ನು ರೂಢಿಸಿರುವ, ಮನುಷ್ಯ-ಮನುಷ್ಯರ ನಡುವೆ ಮೇಲು-ಕೀಳು ಕಲ್ಪಿಸುವ, ಕುಲ-ಭೇದವನ್ನು ಮಾಡುವವರು ಹೊಲೆಯರೆ ಹೊರತು ಜಾತಿಯಿಂದ ಗುರ್ತಿಸಿಕೊಂಡವರಲ್ಲ. ಶೂದ್ರರೆಂದು ಹೀನವಾಗಿ ಅವಿಚಾರ-ಅವಿವೇಕತನ ಮಾಡುವುದು ಮಾನವ ಜನಾಂಗಕ್ಕೆ ಮಾಡಿದ ಮಹಾ ಅಪಚಾರವೆಂಬುದು ಸರ್ವಜ್ಞನ ದೃಢವಾದ ನಿಲುವಾಗಿದೆ.

ಹೊಲಗೇರಿಯಲಿಹುಟ್ಟು । ಎಲುವಿನ ಗೃಹವಾಸ ।
ಸಲೆ ಧರ್ಮಿ ದಾನಿಯನಿಸದೆ ಹಾರುವನು ।
ಕುಲಕೆ ಹೋರಿಹನು ಸರ್ವಜ್ಞ। [6]

ಹೊಲೆಯು-ಮಾದಿಗರಾದ ಹರಿಜನರು ವಾಸಿಸುವ ಕೇರಿಯು ಹೊಲೆಗೇರಿಯಲ್ಲ; ಎಲ್ಲರೂ ಹುಟ್ಟುವ, ಎಲುಬಿನ ಗೃಹವಾದ ತಾಯಿಯ ಗರ್ಭವೇ ಹೊಲೆಗೇರಿ. ಆದರೆ ಇದರ ವಸ್ತು ಸ್ಥಿತಿಯನ್ನು ಅರಿಯದೆ ಮನುಷ್ಯ-ಮನುಷ್ಯರಲ್ಲಿ ಭೇದ ಮಾಡುವುದು, ಕಲು ಧರ್ಮವನ್ನು ಕಲ್ಪಿಸಿ, ತಾನೇ ಉತ್ತಮ ಕುಲದವನೆಂದು ಸಾಧಿಸುವುದು ಸಹ್ಯವಲ್ಲವೆಂಬುದು ಸರ್ವಜ್ಞನ ಅಭಿಮತ.

ಕೊಂದು ತಿನುವವಹೊಲೆಯ । ನೆಂದುನೀನೆನಬೇಡ ।
ನೊಂದ ಜೀವವನು ತಾನರಿವ ಹಾರುವನು ।
ಕೊಂದಾದ ಹೊಲೆಯ ಸರ್ವಜ್ಞ॥ [7]

ಉತ್ತಮ ಕುಲದವರೆಂದು ಬೀಗುತ್ತಾ ಅನ್ಯರ ಒಡವೆ-ಸಂಪತ್ತನ್ನು ದೋಚುವಂತ ದುರ್ಗಣದವರನ್ನು ಹೊಲೆಯರೆಂದು, ಪ್ರಾಣಿಗಳನ್ನು ಕೊಂದು ತಿನ್ನುವ ಮಾಂಸಹಾರಿಗಳು ಹೊಲೆಯರಲ್ಲ; ಪ್ರಾಣಿಗಳಲ್ಲಿ ಭೂತದಯವಿರಬೇಕೆಂದು ಇತರರಿಗೆ ಬೋಧಿಸಿ, ಪ್ರಾಣಿಗಳನ್ನು ಕೊಲ್ಲಲು ಪ್ರೇರೇಪಿಸುವವ, ನೊಂದ ಜೀವಿಗಳಾದ ಶೂದ್ರವರ್ಗದ ಶೋಷಣೆ ಮಾಡುವವರು ಹೊಲೆಯರು ಎನ್ನುತ್ತಾನೆ. ಆದ್ದರಿಂದ ಹುಟ್ಟಿನ ಮೇಲೆ ಉತ್ತಮರೆಂದು ಹೊಗಳಿಕೊಳ್ಳುವುದನ್ನು ನಿಲ್ಲಿಸಿ, ಮಾನವೀಯ ಸದ್ಗುಣಗಳನ್ನು ರೂಢಿಸಿಕೊಳ್ಳ ಬೇಕೆಂಬುದು ಸರ್ವಜ್ಞನ ಆಶಯವಾಗಿದೆ.

ಸರ್ವಜ್ಞ ಎಷ್ಟು ಸ್ವಾಭಿಮಾನಿಯಾಗಿದ್ದನೋ ಹಾಗೆಯೇ ಸತ್ಯವನ್ನು ಪ್ರಖರವಾಗಿ ಹೊರ ಹಾಕುವನು. ಆತನಿಗೆ ಯಾರ ಹಂಗಿಲ್ಲದೆ ಹೆದರಿಕೆಯಿಲ್ಲದೆ ನಿರ್ಭೀತನಾಗಿ

ಹೇಳಬೇಕಾದುದನ್ನು ಸಂದರ್ಭೋಚಿತವಾಗಿ ಹೇಳಿದ್ದಾನೆ. ಹಾರವರ ಡಂಭಾಚಾರವನ್ನಂತೂ ಕಟುವಾಗಿ ವಿಡಂಭಿಸುತ್ತಾನೆ. 'ಹಿರಿದು ಪಾಪವನ್ನು ಮಾಡಿ ಮಿಂದು ಶುದ್ಧಿಯಾಗಲೆಂದು ಗಂಗೆಗೆ ಓಡುತ್ತಾರೆ. ಹರಿವ ನೀರಲ್ಲಿ ಕರಗಿ ತೊಳೆದು ಹೋಗುವುದಕ್ಕೆ ಆ ಪಾಪ ಮೈಗೆ ಮೆತ್ತಿಕೊಂಡ ಎರೆಮಣ್ಣೇ? ಎಂದು ಪ್ರಶ್ನಿಸುತ್ತಾನೆ. ವಿಪ್ರರ ಡಂಭಾಚಾರವಲ್ಲದೆ ಹೀನ ಯತಿಗಳ ಡಂಭಾಚಾರವೂ ಅವನ ವಿಡಂಬನೆಗೆ ಸಿಕ್ಕಿಕೊಂಡಿದೆ. 'ಸರ್ಪ ಪೊರೆ ಬಿಟ್ಟರೆ ಅದರ ವಿಷ ಹೋಗುತ್ತದೆಯೇ? ಹಾಗೆಯೇ ಪರತತ್ತ್ವ ಬೋಧೆಯರಿಯದ ಗುರುಗಳು ಸಿರಿಯ ತೊರೆದರೆ ಏನು ಪ್ರಯೋಜನ? ಇದು ನಮ್ಮ ಆಚಾರವೆಂದು ಕೂದಲು ಕಿತ್ತುಕೊಂಡು ಕಮಂಡಲು ಹಿಡಿದು ಸತ್ತ ನವಿಲಿನ ಗರಿಯ ಕುಂಚವನ್ನು ಹಿಡಿದು ಓಡಾಡುವುದೇತರ ಶುದ್ಧಾಚಾರ ಎನ್ನುತ್ತಾನೆ. ವೈದಿಕ ಆಚರಣೆಯ ಯಜ್ಞಯಾಗಾದಿ ಪಶುಬಲಿಯನ್ನು ವಿರೋಧಿಸಿದ್ದಾನೆ. ಜೀವದಯೆಯನ್ನು ಜೀವನದ ಮೌಲ್ಯವೆಂದು ನಂಬಿದ ಕಾರಣಕ್ಕಾಗಿ ಸರ್ವಜ್ಞನು ಅಹಿಂಸೆಯನ್ನು ಆದರ್ಶವನ್ನಾಗಿಸಿಕೊಂಡ ಜೈನ ಧರ್ಮವನ್ನು ಪ್ರಶಂಸಿಸುತ್ತಾನೆ. ತಾನು ವೀರಶೈವನಾಗಿದ್ದು ಶಿವನನ್ನು ಪರಮ ದೈವವಾಗಿ ನಂಬಿದ್ದರೂ ಜೈನಧರ್ಮವನ್ನು ಕೊಂಡಾಡಿದ ಪರಧರ್ಮ ಸಹಿಷ್ಣುತೆಯನ್ನು ಅವನಲ್ಲಿ ಕಾಣುತ್ತೇವೆ. ಸ್ವಂತ ಅಥವಾ ಪರಮತೀಯ ಆಚಾರ–ವಿಚಾರಗಳಲ್ಲಿ ಇರುವಂತಹ ತಪ್ಪು ತಡೆಗಳನ್ನು, ಅವಿಚಾರ–ಆಡಂಬರಗಳನ್ನು ನ್ಯಾಯ ನಿಷ್ಠೂರ ನಿರ್ದಾಕ್ಷಿಣ್ಯ ಭಾವದಿಂದ ಖಂಡಿಸಿದ್ದಾನೆ, ವಿಂಡಂಬಿಸಿದ್ದಾನೆ. ಹೀಗೆ ವಿವಿಧ ಮತ ದರ್ಮದವರ ಡಂಭಾಚಾರ ದುರಾಚಾರಗಳನ್ನು ಖಂಡಿಸಿರುವ ಸರ್ವಜ್ಞ ಜನಸಾಮಾನ್ಯರ ಡಂಭಾಚಾರ ದುರಾಚಾರಗಳನ್ನೂ ಅಲಕ್ಷಿಸಿಲ್ಲ. ಅವುಗಳನ್ನು ಸಹಾ ಕಟುವಾಗಿ ಟೀಕಿಸಿದ್ದಾನೆ.

ಸರ್ವಜ್ಞನು ಸುಸ್ಥಿರ ರಾಜ್ಯದ ಬಗ್ಗೆ ಹಲವು ವಿಚಾರಗಳನ್ನು ತಿಳಿಸಿದ್ದಾನೆ. ರಾಜ್ಯದ ಆಳ್ವಿಕೆ ಮಾಡುವ ರಾಜನ ಬಗ್ಗೆ ಭಕ್ತಿಯಿದೆ ಹಾಗೇ ವಿಡಂಬನೆಯೂ ಇದೆ. ಜೊತೆಗೆ ಪ್ರಭುತ್ವವನ್ನು ವಿರೋಧ ಮಾಡಿಕೊಂಡರೆ ಆಗುವ ಅಪಾಯದ ಬಗ್ಗೆಯು ಜಾಗೂರಕನಾಗಿ ಮಾತನಾಡುತ್ತಾನೆ. ಹಲವು ವಚನಗಳಲ್ಲಿ ರಾಜ ಪ್ರತ್ಯಕ್ಷದೇವತಾ ಎಂದೂ ರಾಜನಿಗೆ ವಿಧೇಯನಾಗಿರಬೇಕಾದ ಪ್ರಜೆಯ ಬಗ್ಗೆಯೂ ಪ್ರಸ್ತಾಪಿಸುತ್ತಾನೆ. ರಾಜನಿಗೆ ಇರಬೇಕಾದ ವಿಶಿಷ್ಟ ಗುಣಗಳನ್ನು, ರಾಜ ಕಲಿಯೂ, ರಾಜ್ಯ ನಡೆಸುವ ಧೀರತ್ವವೂ ಕೂಡ ಇರಬೇಕೆಂಬುದನ್ನು ತಿಳಿಸುವ ಎಚ್ಚರಿಕೆಯೂ ಕೂಡ ಇದೆ.

ಹಾಡಬಲ್ಲವನೋದು ಕೂಡಿತಪ್ಪದ ನಂಟು
ಬೇಡಿತ್ತನೀವ, ದೊರೆ ಸೇವೆಇವು ಮುನ್ನ
ಮಾಡಿದ ಸುಕೃತವು ಸರ್ವಜ್ಞ ॥ [8]

ನಿಜವಾದ ದೊರೆ ಎನಿಸಿಕೊಳ್ಳಬೇಕಾದರೆ ಪ್ರಜೆ ಕೇಳಿದ್ದನ್ನು ನೀಡುವ ಪ್ರಜಾ ಹಿತಾಕಾಂಕ್ಷಿ ದೊರೆಯ ಅವಶ್ಯಕತೆಯ ಇದೆ. ಅಂತಹ ದೊರೆಯ ಸೇವೆಯು ಅಲ್ಲಿಯ ಜನರು ಮಾಡಿದಂತಹ ಸುಕೃತಫಲ. ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದ ಆಡಳಿತದಲ್ಲಿ ಜನತೆ ಇಂದಿಗೂ ಇಂತಹ ನಿರೀಕ್ಷೆಯಲ್ಲೇ ಇದ್ದಾರೆ. ಪ್ರಭುತ್ವದ ವಿರೋಧವನ್ನು ಕಟ್ಟಿಕೊಳ್ಳದ ಸರ್ವಜ್ಞ ನಯವಾಗಿಯೆ ತೀಕ್ಷ್ಣವಾದ ತಿಳುವಳಿಕೆ ನೀಡುತ್ತಾನೆ. ಮತ್ತೊಂದು ವಚನ 'ಕರಪಾಪಭೀತ ಹೊರೆವಗುಣಿಯ ನೃಪಗೆ ಸ್ಥಿರವಿಹುದು ರಾಜ್ಯ ಸರ್ವಜ್ಞ' ಎಂಬಲ್ಲಿ ನಿಜವಾದ ರಾಜ ಗುಣಸಂಪನ್ನನಾಗಿರಬೇಕು, ಅನಗತ್ಯವಾದ ತೆರಿಗೆಯನ್ನು ಪ್ರಜೆಗಳ ಮೇಲೆ ಹೇರುವ ಭೀತಿಯನ್ನು ಉಂಟುಮಾಡದೆ ಜನಾನುರಾಗಿಯಾಗಿ ನಡೆದುಕೊಳ್ಳಬೇಕಾದ ಆಡಳಿತದ ಬಗ್ಗೆ ಹೇಳುತ್ತಾನೆ.

ಸರ್ವಜ್ಞ ಕವಿಯು ಕಾವ್ಯಗಳನ್ನು ಬರೆಯುವಾಗ ಇಂತಹದೇ ವಸ್ತುವೆಂದು ಯಾವುದನ್ನು ಸ್ವಂತಕ್ಕಾಗಿ ಆಯ್ಕೆ ಮಾಡಿಕೊಂಡು ಬರೆದಿಲ್ಲ. ತನ್ನ ಬದುಕಿನಲ್ಲಿ ಸಾಂದರ್ಭಿಕವಾಗಿ ಅಂತಹ ವಸ್ತುವನ್ನು ಕುರಿತು ಮಾತನಾಡುವುದಕ್ಕೆ ಅವಕಾಶ ದೊರೆತಾಗಲೆಲ್ಲ ಅದಕ್ಕೆ ಪ್ರತಿಕ್ರಿಯೆಯಾಗಿ ಈ ವಚನಗಳನ್ನು ಬರೆದಿದ್ದಾನೆ. ಲೋಕ ಜೀವನದ ರೀತಿ–ನೀತಿ, ಧರ್ಮ–ಅಧರ್ಮ, ಸಂಸ್ಕೃತಿ, ವಿಕೃತಿ, ಜಾತಿ, ಪರಂಪರೆ ಮೊದಲಾದ ವಿಷಯಗಳಲ್ಲಿ ತನಗೆ ಪ್ರಶ್ನೆಗಳು ಎದುರಾದಾಗ ಅದಕ್ಕೆ ಮಾರ್ಮಿಕವಾಗಿ ಉತ್ತರಿಸಿದ್ದಾನೆ, ಪ್ರತಿಕ್ರಿಯೆಸಿದ್ದಾನೆ. ಈ ಕಾರಣದಿಂದಾಗಿ ಸರ್ವಜ್ಞನ ವಚನಗಳು ತನ್ನದೇ ಮಹತ್ವ ಪಡೆದಿವೆ. ಧರ್ಮ, ಭಕ್ತಿ, ಗುರುಲಿಂಗ, ಜಂಗಮ, ಭಕ್ತ, ಭಗವಂತ ಎಂಬ ಧಾರ್ಮಿಕ, ಆಧ್ಯಾತ್ಮಿಕ ವಿಷಯಗಳು ಸೇರಿದಂತೆ ಬಂಧು–ಬಳಗ, ಗಂಡ–ಹೆಂಡತಿ, ಗುರು–ಶಿಷ್ಯ, ವಿದ್ಯೆ–ಬುದ್ಧಿ, ಕಷ್ಟ–ಸುಖ, ಬಡತನ–ಸಿರಿತನ, ಸಜ್ಜನ–ದುರ್ಜನ, ನಡೆ–ನುಡಿ, ಜಾತಿ– ವಿಜಾತಿ, ದಾನ–ಧರ್ಮ ಮುಂತಾದ ವಿಷಯಗಳ ಕುರಿತಂತೆ ಆಳವಾಗಿ ಚಿಂತನೆ ಮಾಡಿದ್ದಾನೆ. ವಸ್ತು ವೈವಿಧ್ಯತೆ ಕುರಿತು ಕಾವ್ಯ ರಚನೆಯಲ್ಲಿ ಸರ್ವಜ್ಞ ಅನುಸರಿಸಿದ ಈ ತಂತ್ರವನ್ನು ಜನ ಸಾಮಾನ್ಯರು, ಶಿಷ್ಟರೆಂದು ಕರೆಸಿಕೊಂಡ ಪಂಡಿತ ಪಾಮರರಿಂದಲೂ ಜನಪ್ರಿಯತೆ ಪಡೆಯಲು ಸಾಧ್ಯವಾಗಿದೆ.

ಸರ್ವಜ್ಞನು ಮಾನವ ಧರ್ಮಿ, ನೊಂದವರನ್ನು ಕಂಡಾಗ ಆತನ ಮನಸ್ಸು ಕರಗುತ್ತದೆ. ಹೃದಯ ಮಿಡಿಯುತ್ತದೆ. ಹಾಗೆಯೇ ಅನ್ಯಾಯವನ್ನು ಕಂಡಾಗ ಅಬ್ಬರಿಸುತ್ತಾನೆ. ಹರಿತವಾದ ಮಾತುಗಳಿಂದ ಜನರಿಗೆ ಅಪ್ಪಳಿಸುತ್ತಾನೆ. ಮಸೆದ ಇಬ್ಬಾಯ್ ಖಡ್ಗವನ್ನು ಝಳಪಿಸಿದಂತೆ ತೀಕ್ಷ್ಣವಾದ ಮಾತುಗಳು ಧಾರಾಳವಾಗಿ ಹರಿದು ಬರುತ್ತವೆ. ಆದರೂ ಆ ನುಡಿಯಲ್ಲಿ ಸಮಾಜದ ನೈತಿಕಮಟ್ಟ ಸುಧಾರಣೆ ಆಗಬೇಕೆಂಬ ಕಳಕಳಿಯಿದೆ. ಜನಪದರಿಂದ ಪಡೆದ ಪ್ರೇರಣೆ ದೊಡ್ಡದು. ರಾಜಸ್ಥಾನದ ಪಂಡಿತ ಕವಿಗಳ ಮಾರ್ಗ

ಈತನದಲ್ಲ. ಜಾನಪದದ ಅಂತಃಸತ್ವವನ್ನು ದಟ್ಟವಾಗಿ ಮೈಗೂಡಿಸಿಕೊಂಡಿದ್ದ ಸರ್ವಜ್ಞ ಸಮಾಜದಲ್ಲಿ ಮೂಢತನವನ್ನು ತೊಡೆದುಹಾಕಿ ಸರಿದಾರಿಗೆ ಜನತೆಯನ್ನು ಸಿದ್ಧಗೊಳಿಸುವ ನೇರ ಹಾಗೂ ವಿಭಿನ್ನ ಮಾರ್ಗವನ್ನು ಕಂಡುಕೊಂಡ. ಈ ದಾರಿಯಲ್ಲಿ ತನಗಿದ್ದ ಪರಿಮಿತಿಗಳ ನಡುವೆ ಒಬ್ಬಂಟಿಯಾದ ಈತ ಮಹತ್ವವಾದುದನ್ನೇ ಸಾಧಿಸಿದ. ನಿಜವಾದ ಅರ್ಥದಲ್ಲಿ ಜನತೆಯ ಕವಿಯಾದನು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವ್ಯವಸ್ಥೆಯನ್ನು ಪ್ರತಿರೋಧಿಸಿದ, ವೈಚಾರಿಕತೆಯನ್ನು ಭಿತ್ತಿಬೆಳೆದ ಸಾಹಿತ್ಯ ಪರಂಪರೆಯಿದೆ. ಪಂಪನಿಂದ ಆರಂಭವಾಗಿ ವಚನಕಾರರಿಂದ ಬೆಳೆದು ಸರ್ವಜ್ಞನಾದಿಯಾಗಿ ಇಂದಿನ ದಲಿತ ಬಂಡಾಯ ಸಾಹಿತ್ಯದವರೆಗೆ ಹೊಸ ಆಯಾಮ ಪಡೆದುಕೊಂಡಿದೆ. 'ಅರಿವಂಪೊಸಯಿಸುವುದೆ ಧರ್ಮಮಂ – ಅದಂತಡೆವುದೇ ಅಧರ್ಮಂ' ಎಂದು ಪಂಪ ಹತ್ತನೆ ಶತಮಾನದಲ್ಲೆ ವಿಚಾರವಾದದ ಬಗ್ಗೆ ಮಾತನಾಡಿದ್ದಾನೆ. ವಿಚಾರ ಎಲ್ಲಿಂದಲೋ ಹುಡುಕಿ ಎರವಲು ತರುವಂಥದ್ದಲ್ಲ. ಇಲ್ಲಿನ ಸಮಸ್ಯೆಗಳಿಗೆ ನಾವೇ ಪರಿಹಾರ ಹುಡಕಬೇಕಾದ್ದು. ಎಲ್ಲವನ್ನೂ ಪಕ್ಷಪಾತವಿಲ್ಲದೆ ತೂಗಿ ನೋಡುವವನಿಗೆ ಜೀವನದಲ್ಲಿ ಹೇಗೆ ಸಾಗಬೇಕೆಂದು ಅರಿವಾಗುತ್ತದೆ. ಸರ್ವಜ್ಞನು ಕೂಡ ಈ ಮಾರ್ಗದಲ್ಲಿ ಮುನ್ನಡೆದವನು. ಸಮಾಜದ ಯಾವ ಮೂಲಾಜಿಗೂ ಒಳಗಾದವನಲ್ಲ, ತಾನು ಸರಿಯಾಗಿದ್ದು ನಾನು ಹೇಳುತ್ತಿರುವುದು ಸಮಾಜಕ್ಕೆ, ಪ್ರೀತಿಸುವ, ಬೈದು ಹೇಳುವ ನೈತಿಕ ಹಕ್ಕು ನನಗಿದೆ ಎನ್ನುವ ತುಂಬು ಮನಸ್ಸಿನ ವೈಚಾರಿಕ ಪ್ರಜ್ಞೆವುಳ್ಳವನು.

ಸರ್ವಜ್ಞ ಜನತೆಯ ಕವಿ ಅವನ ಯಾವೊಂದು ತ್ರಿಪದಿಯನ್ನು ಒರೆಹಚ್ಚಿದರೂ ಅಲ್ಲಿ ಮಾನವೀಯ ಮೌಲ್ಯ ಸಮಾಜ ಸುಧಾರಣೆ ಮಾತುಗಳೇ ಎದ್ದು ಕಾಣುತ್ತವೆ. ಯಾವುದೇ ರಾಗ–ದ್ವೇಷಗಳಿಂದ ಕೂಡಿರದೆ ಅತ್ಯಂತ ಸರಳ ಸುಂದರ ಶೈಲಿಯಲ್ಲಿ ಅನುಭವದ ಆಧಾರದ ಮೇಲೆ ಕಂಡದ್ದನ್ನು ಕಂಡ ಹಾಗೆಯೇ ಹೇಳುತ್ತಾ ಬಂದವನು. ಪರರ ನೋವುಗಳಿಗೆ ಮಿಡಿಯುವ, ಬೇರೆಯವರಿಗೆ ತೊಂದರೆಗಳನ್ನು ಕೊಡದಿರುವ, ಪ್ರತಿಯೊಬ್ಬರ ಬದುಕನ್ನು ಸರಿಸಮಾನವಾಗಿ ಕಂಡು, ಸಕಲರ ಒಳಿತನ್ನು ಬಯಸಿ, ಅಸಮಾನತೆಯ ಎಲ್ಲ ನೆಲೆಗಳನ್ನು ವಿರೋಧಿಸುವ ಗುಣವನ್ನು ಜೀವಪರ ಎಂದು ಕರೆಯಬಹುದು. ಹಾಗೆಯೇ ಅಸಮಾನ ಸಮಾಜಕ್ಕೆ ಪೂರಕವಾಗಿ ಸರಕು ಸಾಮಗ್ರಿಗಳನ್ನು ಒದಗಿಸುವ ಚಿಂತನೆಗೆ ಜೀವವಿರೋದಿ ನೆಲೆ ಎಂಧು ಗ್ರಹಿಸಬಹುದು. ಈ ಹಿನ್ನೆಲೆಯಲ್ಲಿ ಸರ್ವಜ್ಞನ ವಚನಗಳು ಸ್ವಸ್ಥ ಸಮಾಜದ ಮುಂಚಲನೆಗೆ ಮಾದರಿಗಳಾಗಿವೆ.

ಅಡಿಟಿಪ್ಪಣಿಗಳು :

1. ಉತ್ತಂಗಿ ಚೆನ್ನಪ್ಪ : ಸರ್ವಜ್ಞನ ವಚನಗಳು, ಬಾಸೆಲ್ ಮಿಷನ್, ಧಾರವಾಡ, 1924, ವ.ಸಂ.–1235
2. ಎಂ. ಮರಿಯಪ್ಪಭಟ್ಟ. (ಸಂ) ಸರ್ವಜ್ಞನ ವಚನ ಸಂಗ್ರಹ. ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು., 1996. ವಚನ ಸಂಖ್ಯೆ.874.
3. ಅದೇ ವ.ಸಂ.–895
4. ಅದೇ ವ.ಸಂ.–946
5. ಅದೇ ವ.ಸಂ.–1013
6. ಅದೇ ವ.ಸಂ.–1015
7. ಅದೇ ವ.ಸಂ.–1025
8. ಅದೇ ವ.ಸಂ.–1224

ಪರಾಮರ್ಶನ

1. ಸಿ.ಬಿ.ಹೊನ್ನುಸಿದ್ಧಾರ್ಥ:(ಸಂ) ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ.(ಪರಿಷ್ಕೃತ ಆವೃತ್ತಿ) ಸಂ–5, ಭಾಗ–2 ಕನ್ನಡ ಅಧ್ಯಯನಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ. 2014
2. ರಾಗೌ: ಪ್ರಾಚೀನ ಕಾವ್ಯ ಚಿಂತನ. ಕನ್ನಡ ಪುಸ್ತಕ ಪ್ರಾಧಿಕಾರ. ಬೆಂಗಳೂರು. 2015

***

PEER - REVIEWED JOURNAL
ISSN: 2320-9941

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

ಸಂಪುಟ - 09, ಸಂಚಿಕೆ- 03

VOLUME: 09, ISSUE: 03

PRATHISPANDA

An Exchange of Creative Impulse

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

HTTPS://PRATHISPANDHA.WORDPRESS.COM/